
ಧರ್ಮಶಾಸ್ತ್ರ ದರ್ಪಣ

(ಪಂಚಾಂಗ ಕೈಪಿಡಿ)



ಪ್ರಕಾಶಕರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ

ಶ್ರೀರಾಘವೇಂದ್ರಸ್ವಾಮಿಗಳವರ ಮಠ

ಮಂತ್ರಾಲಯ

ಧರ್ಮಶಾಸ್ತ್ರದರ್ಪಣ

ಶ್ರೀ ಮೂಲರಾಮೋ ವಿಜಯತೇ

ಶ್ರೀ ಗುರುರಾಜೋ ವಿಜಯತೇ

ಧರ್ಮಶಾಸ್ತ್ರದರ್ಪಣ

(ಪಂಚಾಂಗ ಕೈಪಿಡಿ)

ಪ್ರಕಾಶಕರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ

ಶ್ರೀರಾಘವೇಂದ್ರಸ್ವಾಮಿಗಳವರ ಮಠ

ಮಂತ್ರಾಲಯ

ಪುಸ್ತಕದ ಹೆಸರು : ಧರ್ಮಶಾಸ್ತ್ರದರ್ಪಣ
Dharma Shastra Darpana

ಪ್ರಕಾಶಕರು : ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಪುಟಗಳು : xvi + 150

ಪ್ರಧಾನ ಸಂಪಾದಕರು : ರಾಜಾ. ಎಸ್. ರಾಜಗೋಪಾಲಾಚಾರ್ಯ

ಪ್ರಥಮ ಮುದ್ರಣ : 2004

ಪ್ರತಿಗಳು : 25000 ಪ್ರತಿಗಳು

ಹಕ್ಕು : ಪ್ರಕಾಶಕರದು

ಬೆಲೆ :

ಅಕ್ಷರ ಜೋಡಣೆ : ಶ್ರೀಗುರುಸಾರ್ವಭೌಮ ವಿದ್ಯುನ್ಮಾನ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು

ಮುಖಪುಟ ವಿನ್ಯಾಸ : ರಾಜಾ. ಸೂರೀಂದ್ರಾಚಾರ್ಯ

ಮುದ್ರಕರು : ಸತ್ಯಶ್ರೀ ಪ್ರಿಂಟರ್ಸ್
ನಂ. 164, 5ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು – 18

ಗ್ರಂಥ ಸಮರ್ಪಣೆ

ಶ್ರೀಹಂಸನಾಮಕ ಪರಮಾತ್ಮ

ಪ್ರವರ್ತಿತವಾದ ಪರಂಪರೆಯಲ್ಲಿ ಬಂದಿರುವ

ಸರ್ವಜ್ಞರಾದ ಶ್ರೀಪಾವನ ಪವನಾಂಶಸಂಭೂತರಾದ

ಜಗದ್ಗುರು ಶ್ರೀಮಧ್ವಾಚಾರ್ಯರ

ಮೂಲಮಹಾಸಂಸ್ಥಾನಾಧೀಶ್ವರರಾದ ವೇದಾಂತ ಸಾಮ್ರಾಜ್ಯ

ದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾದ

ಶ್ರೀಮದ್ರಾಘವೇಂದ್ರಗುರುಸಾರ್ವಭೌಮರ

ಚರಣಾರವಿಂದಗಳಲ್ಲಿ ಈ ಗ್ರಂಥವನ್ನು

ಭಕ್ತಿಶ್ರದ್ಧಾದರಪೂರ್ವಕವಾಗಿ

ಸಮರ್ಪಿಸಲಾಗಿದೆ.

ಪ್ರಕಾಶಕರ ನುಡಿ

ಶ್ರೀಹಂಸನಾಮಕ ಪರಮಾತ್ಮನ ಸಾಕ್ಷಾತ್ಪರಂಪರೆಯಲ್ಲಿ ಬಂದಿರುವ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನಾಧೀಶ್ವರ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪರಂಪರೆಯಲ್ಲಿ ಬಂದಿರುವ ಶ್ರೀಸುಶೀಲೇಂದ್ರತೀರ್ಥ ಶ್ರೀಪಾದಂಗಳವರ ಕಾಲದಲ್ಲಿ ಹೊಸರೂಪ ಪಡೆದು ಶ್ರೀಮಠದ ಪಂಚಾಂಗ ಪ್ರಾರಂಭವಾಯಿತು. ನಂತರ ಶ್ರೀಸುಯಮೀಂದ್ರತೀರ್ಥರ ಕಾಲದಲ್ಲಿ ವಿಶೇಷವಾಗಿ ರೂಪುಗೊಂಡು ಶಿಷ್ಯರಿಗೂ ಭಕ್ತರಿಗೂ ಉಚಿತವಾಗಿ ಕೊಡುವ ವ್ಯವಸ್ಥೆಯಾಯಿತು. ಮಂತ್ರಾಲಯದ ಮಹಾಶಿಲ್ಪಿಗಳಾದ ಶ್ರೀಸುಜಯೀಂದ್ರತೀರ್ಥರ ಕಾಲದಲ್ಲಿ ಇನ್ನೂ ಹೆಚ್ಚು ಧರ್ಮಶಾಸ್ತ್ರ ವಿಷಯಗಳು, ಇತರ ನಿರ್ಣಯಗಳನ್ನು ಕೃಷ್ಣಾಚಾರ್ಯರ ಸ್ಮೃತಿ ಮುಕ್ತಾವಲಿಯ ಪ್ರಮಾಣಗಳ ಅನುಸಾರವಾಗಿ ಅನೇಕ ವಿಷಯಗಳನ್ನು ಸೇರಿಸಿ ಸುಮಾರು 80-120 ಪುಟಗಳ ಪಂಚಾಂಗವನ್ನು ಹೊರತರಲಾಗಿತ್ತು. ಪ್ರತಿವರ್ಷ ಆ ಎಲ್ಲ ವಿಷಯಗಳು ಪುನರಾವರ್ತನೆಯಾಗಿ ಹೊರೆಯಾಗಿತ್ತು. ಪ್ರಸ್ತುತ ಪೀಠಾಧಿಪತಿಗಳಾದ ಶ್ರೀಸುಶಮೀಂದ್ರ ತೀರ್ಥರು ವಿಶೇಷ ವಿಚಾರಗಳನ್ನು ಪಂಚಾಂಗದಿಂದ ಹೊರತುಪಡಿಸಿ, ಪುಸ್ತಕರೂಪದಲ್ಲಿ ತರುವಂತೆ 3 ವರ್ಷಗಳ ಹಿಂದೆಯೇ ಶ್ರೀಮಠದ ವಿದ್ವಾಂಸರೂ ಶ್ರೀಪಾದಪುತ್ರರು ಆದ ರಾಜಾ. ಎಸ್. ಗುರುರಾಜಾಚಾರ್ಯರಿಗೆ ಆಜ್ಞಾಪಿಸಿದ್ದರು. ರಾಜಾ. ಗುರುರಾಜಾಚಾರ್ಯರು ಮಠದ ಪಂಚಾಂಗ ಕರ್ತೃಗಳನ್ನು, ವಿದ್ವಾಂಸರನ್ನು, ಸೇರಿಸಿ, ಕೈಪಿಡಿಯಲ್ಲಿ ಸೇರಿಸುವ ವಿಷಯಗಳನ್ನು ನಿರ್ಧರಿಸುವಂತೆ ಕಮಿಟಿಯನ್ನು ಶ್ರೀಗಳವರ ಆಜ್ಞಾಮೇರೆಗೆ ರಚಿಸಿದರ ಫಲವೇ ಈ ನಿಮ್ಮ ಕೈಯಲ್ಲಿರುವ ಕೈಪಿಡಿ. ಇದರಲ್ಲಿ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ. ಗ್ರಂಥ ವಿಸ್ತರಣಾ ಭಯದಿಂದ ಕೆಲವನ್ನು ಕೈಬಿಡಲಾಗಿದೆ. ಇನ್ನು ಮುಂದೆ ಪಂಚಾಂಗದಲ್ಲಿ ಚೈತ್ರಮಾಸದಿಂದ ಫಾಲ್ಗುಣ ಮಾಸದವರೆಗೆ, ಪಂಚಾಂಗ, ಮುಹೂರ್ತಗಳು, ನಕ್ಷತ್ರ, ಗೋಚಾರಫಲ, ಗ್ರಹಣ ವಿಚಾರ, ರಾಜಾದಿ ನಾಯಕರುಗಳನ್ನು ಮಾತ್ರ ಕೊಡಲಾಗುವುದು ಮತ್ತು ಪ್ರತಿವರ್ಷ ಈ ಕೈಪಿಡಿಯನ್ನು ಪಂಚಾಂಗದೊಂದಿಗೆ ಕೊಡುವ ಯೋಜನೆ ಇರುವುದಿಲ್ಲ. ಇದನ್ನು 5 ವರ್ಷಗಳವರೆವಿಗೆ ಮತ್ತೆ ಮುದ್ರಿಸಲಾಗುವುದಿಲ್ಲ.

ಈ ಪುಸ್ತಕವನ್ನು ಹೊರತರಲು ಶ್ರಮಪಟ್ಟ ರಾಜಾ. ಲಕ್ಷ್ಮೀನಾರಾಯಣಾಚಾರ್ಯ, ಜ್ಯೋತಿಷ್ಯ ವಿದ್ವಾನ್ ವಾದಿರಾಜಾಚಾರ್ಯ ಅಲ್ಲಿಪುರ, ವೆಂಕಟರಾಘವೇಂದ್ರಾಚಾರ್ಯ, ಕುರುಡಿ ಸುಶೀಲೇಂದ್ರಾಚಾರ್ಯ, ಕಡಪ ರಾಘವೇಂದ್ರಾಚಾರ್ಯ,

ಅಕ್ಕಿ ರಾಘವೇಂದ್ರಾಚಾರ್ಯ, ಪುರಾಣಿಕ ಸುಬ್ರಹ್ಮಣ್ಯಾಚಾರ್ಯ, ಎಸ್. ಉಡುಪಿ ಕೃಷ್ಣಾಚಾರ್ಯ, ವಿಜಯವಿಠ್ಠಲಾಚಾರ್ಯ, ರಾಜಾ ಸೂರೀಂದ್ರಾಚಾರ್ಯ ಹಾಗೂ ರಘುನಂದನ ಶರ್ಮ ಹಾಗೂ ಪರೋಕ್ಷವಾಗಿ ಮತ್ತು ಅಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಶ್ರೀರಾಘವೇಂದ್ರಗುರುಸಾರ್ವಭೌಮರು ಮಂಗಳವನ್ನು ಉಂಟುಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ದಿನಾಂಕ 26-1-2004
ಶ್ರೀಸುಜಯೀಂದ್ರತೀರ್ಥರ
ಮಹಾಸಮಾರಾಧನೆ
ಮಂತ್ರಾಲಯ

ಇತಿ
ಸಜ್ಜನವಿಧೇಯ
ರಾಜಾ. ಎಸ್. ರಾಜಗೋಪಾಲಾಚಾರ್ಯ
ಸರ್ವಾಧಿಕಾರಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ

ಪರಿವಿಡಿ



ಶ್ರೀಮೂಲರಾಮದೇವರು

ಪಂಚಾಂಗ : ಪೂರ್ವ ಪೀಠಿಕೆ

ಅಂತರಿಕ್ಷದಲ್ಲಿ ರಾತ್ರಿಯಾದೊಡನೆ ಮಿನುಗುವ ಕೋಟ್ಯಾನುಕೋಟಿ ಆಕಾಶಕಾಯಗಳು ನಿರಂತರವಾಗಿ ಚಲನೆಯುಳ್ಳವು. ಈ ಚಲನೆಯ ಪಥ ಹಾಗು ಅವಧಿಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ, ಅದರ ಆಧಾರದ ಮೇಲೆ ಜನಜೀವನದ ದೈನಿಕಜೀವನದ ನಡುವಳಿಕೆಗಳನ್ನು ವಿಶ್ಲೇಷಣ ಮಾಡುವ ಸಂಕೀರ್ಣವಾದ ಸ್ವಾರಸ್ಯಕರ ವಿಷಯವೇ ಜ್ಯೋತಿ: ಶಾಸ್ತ್ರ. ಪ್ರತ್ಯಕ್ಷಂ ಜ್ಯೌತಿಷಂ ಶಾಸ್ತ್ರಂ ಎನ್ನುತ್ತಾರೆ. ಪ್ರತ್ಯಕ್ಷವಾಗಿ ಕಾಣುವ ವಿಷಯಗಳ ಅಧ್ಯಯನವೆಂದು ಇದಕ್ಕೆ ಹೆಸರು. ಆಕಾಶಕಾಯಗಳು ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣುವ ವಸ್ತುಗಳೇ ಆದ್ದರಿಂದ ಅವುಗಳ ಅಧ್ಯಯನ ಅತ್ಯಂತ ವಿಶ್ವಾಸಾರ್ಹ. ಉದಾಹರಣೆಗೆ ಮುಂದೆ ಹಲವಾರು ವರ್ಷಗಳ ಮುಂದೆ ನಡೆಯಬಹುದಾದ ಗ್ರಹಣಾದಿಗಳ ವಿಷಯಗಳನ್ನು ಸಾಕಷ್ಟು ಮುಂಚೆಯೇ ಜ್ಯೋತಿಷಿಗಳು ವಿವರಿಸುತ್ತಾರೆ. ಅದೇ ರೀತಿಯಾಗಿ ಗ್ರಹಣಾದಿಗಳು ಸಂಭವಿಸುವುದೂ ಸಹ ವೇದ್ಯವೇ.

ಇತಿಹಾಸ ಮತ್ತು ಪುರಾಣಾದಿಗಳನ್ನು ಗಮನಿಸಿದಾಗ ಜ್ಯೋತಿಃ ಶಾಸ್ತ್ರದ ಪ್ರಥಮವಾಗಿ ವಿವರಿಸಿದವರು ಶ್ರೀವರಾಹದೇವರು ಎನ್ನುವುದು ತಿಳಿದು ಬರುತ್ತದೆ. ವರಾಹಮಿಹಿರಾಚಾರ್ಯರೇ ಮೊದಲಾದ ಹಲವಾರು ಪ್ರತಿಭಾಶಾಲಿಗಳು ಸುಲಭವಾಗಿ ವಿವರಿಸಿದ್ದಾರೆ. ಮುಂದೆ ಇನ್ನೂ ಕೆಲವರು ಇನ್ನಷ್ಟು ಸುಲಭ ರೀತಿಯಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೋ ಸರಿ ಆದರೆ ಈ ಭರದಲ್ಲಿ ಮೂಲಪಾಠದ ಹಲವಾರು ಭಾಗಗಳು ಕಾಣೆಯಾಗಿ ಹೊಸ ರೂಪವೇ ಈ ಶಾಸ್ತ್ರಕ್ಕೆ ಬಂದಿತು. ಅದೇನೇ ಇದ್ದರೂ ಎಲ್ಲ ಪಾಠಗಳ ಒಕ್ಕೊರಲಿನ ಅಭಿಪ್ರಾಯವಿಷ್ಟೇ: ನಿರ್ದಿಷ್ಟ ಆಕಾಶಕಾಯಗಳ ಚಲನೆಯ ಲೆಕ್ಕಾಚಾರಗಳನ್ನು ಕ್ರೋಢೀಕರಿಸಿ, ಜನನ–ಮರಣ, ಹಬ್ಬ–ಹರಿದಿನಗಳು ಸೇರಿದಂತೆ ಮಹತ್ವದ ಘಟನೆಗಳನ್ನು ನೆನಪಿರಿಸಿಕೊಳ್ಳಲು, ತಿಥಿ, ವಾರ, ನಕ್ಷತ್ರ, ಯೋಗ ಹಾಗು ಕರಣ ಎಂಬ ಐದು ಅಂಶಗಳ ಸಹಾಯದಿಂದ ವ್ಯವಸ್ಥಿತವಾಗಿ ತಯಾರಿಸಿದ ಕೈಪಿಡಿಯನ್ನೇ ಪಂಚಾಂಗವೆನ್ನುತ್ತಾರೆ.

ಭಿನ್ನ ರೀತಿಯ ಪ್ರದೇಶಗಳಲ್ಲಿ ಭಿನ್ನರೀತಿಯ ಮಾನದಂಡದ ಪಂಚಾಂಗಗಳಿವೆ. ದಕ್ಷಿಣಭಾರತೀಯರಾದ ನಾವು ಶಾಲಿವಾಹನನೆಂಬ ಚಕ್ರವರ್ತಿಯ ಹೆಸರಿನ ಶಕೆಯಿಂದ ಕಾಲಗಣನೆ ಮಾಡುತ್ತೇವೆ. ಈ ಪದ್ಧತಿಯಲ್ಲಿ ಚೈತ್ರ ಶುದ್ಧ ಪ್ರತಿಪದೆಯು ಸಂವತ್ಸರದ ಆರಂಭದ ದಿನ ಯುಗಾದಿಯೆಂದು ಈ ದಿನವನ್ನೇ ಕರೆಯುವುದು. ವಿಕ್ರಮಾದಿತ್ಯನೆಂಬ ಚಕ್ರವರ್ತಿಯ ಹೆಸರಿನಿಂದ ಪ್ರವರ್ತಿತವಾದದ್ದು ವಿಕ್ರಮಶಕೆ;

ಉತ್ತರಭಾರತದಲ್ಲಿ ಪ್ರಚಲಿತ. ಕಾರ್ತಿಕ ಶುಕ್ಲ ಪ್ರತಿಪತ್ (ದೀಪಾವಳಿ) ಈ ಪದ್ಧತಿಯಲ್ಲಿ ಪ್ರಾರಂಭದ ದಿನ.

ಪಂಚ ಅಂಗಗಳು ಯಾವುವು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ತಿಥಿ : ಭೂಮಿಯನ್ನು ಸುತ್ತಲು ಚಂದ್ರನು ಒಂದು ದಿನದಲ್ಲಿ ತೆಗೆದುಕೊಳ್ಳುವ ಅವಧಿ. ಸುಮಾರು 12–15 ಅಂಶಗಳಷ್ಟು ದೂರವನ್ನು ಚಂದ್ರನು ಪ್ರತಿನಿತ್ಯ ಕ್ರಮಿಸುತ್ತಾನೆ. ಈ ಸಮಯದಲ್ಲಿ ಭೂಮಿಯ ಮೇಲೆ ಚಂದ್ರನು ವಿವಿಧ ರೀತಿಯ ಪರಿಣಾಮಗಳನ್ನು ಬೀರುತ್ತಾನೆ. ಇದು ವೈಜ್ಞಾನಿಕವಾಗಿಯೂ ದೃಢಪಟ್ಟ ವಿಚಾರ. ಈ ಚಲನೆಯನ್ನು ಆಧರಿಸಿ ತಜ್ಞರು ಶುಭಾಶುಭ ಹಾಗು ರಿಕ್ತ ತಿಥಿ ಎಂಬ ನಿರ್ಣಯಗಳನ್ನು ಮಾಡುತ್ತಾರೆ. ಹದಿನೈದು ತಿಥಿಗಳು 2 ಆವರ್ತನೆಯ ಮೂಲಕ ಬರುವುದನ್ನು ಕೃಷ್ಣಪಕ್ಷ ಹಾಗು ಶುಕ್ಲಪಕ್ಷ ಎನ್ನುತ್ತಾರೆ.

ವಾರ : ಭೂಮಿಯು ಸ್ವತಃ ತನ್ನ ಅಕ್ಷದ ಸುತ್ತ ಭ್ರಮಿಸುವ ಅವಧಿ 24 ಗಂಟೆಗಳು. ಹಗಲು ಮತ್ತು ರಾತ್ರಿ ಎಂದು ವಿಂಗಡಿಸಿದ ಈ ಅವಧಿಯನ್ನು ಒಂದು ದಿನ ಎನ್ನುತ್ತಾರೆ. ಈ ಭ್ರಮಣವು 7 ದಿನಗಳಿಗೊಮ್ಮೆ ಪುನರಾವರ್ತನೆಯಾಗುತ್ತದೆ. ಸೂರ್ಯನೂ ಸೇರಿದಂತೆ ಏಳು ಗ್ರಹಗಳು ಒಂದೊಂದು ದಿನವನ್ನು ಪ್ರತಿನಿಧಿಸುತ್ತವೆ. (ಜ್ಯೋತಿಃ ಶಾಸ್ತ್ರವು ಸೂರ್ಯನನ್ನು ಸಹ ಗ್ರಹವೆಂದೇ ಪರಿಗಣಿಸುತ್ತದೆ)

ನಕ್ಷತ್ರ : ಸೌರಮಂಡಲದಲ್ಲಿ ಸೂರ್ಯನ ಸುತ್ತಮುತ್ತ ಇರುವ ತೇಜೋಮಯವಾದ 27 ನಕ್ಷತ್ರಗಳು ಸಹ ಸೂರ್ಯನಂತೆ ತನ್ನದೇ ಆದ ಕ್ರಮದಲ್ಲಿ ಉದಯಿಸುವುದು ಅಥವಾ ಅಸ್ತಮಿಸುವುದು ಇತ್ಯಾದಿ ನಿಯಮಗಳಿಗೆ ಬದ್ಧವಾಗಿರುತ್ತದೆ. ಸೂರ್ಯೋದಯಾಸ್ತದಂತೆಯೇ ಗಮನಿಸಿ ಪ್ರತಿಯೊಂದು ನಕ್ಷತ್ರದ ಉದಯಾಸ್ತಗಳನ್ನು ಸಹ ನಿರ್ಣಯಿಸಲಾಗುವುದು. ಇದರಲ್ಲಿಯೂ ಕೆಲವು ಅವಾಂತರಗಳಿವೆ. ಅವುಗಳು ಜಾತಕ ಮತ್ತು ಮುಹೂರ್ತಾದಿಗಳನ್ನು ನಿರ್ಣಯಿಸುವಾಗ ಉಪಯುಕ್ತವಾಗಬಲ್ಲವು.

ಯೋಗ : ಸೂರ್ಯ ಹಾಗು ಚಂದ್ರರು ಭ್ರಮಣ ಮಾಡುತ್ತಿರುವಾಗ ಅನುಕ್ರಮವಾಗಿ 13 ಮತ್ತು 20 ಅಂಶಗಳ* ಅಂತರಕ್ಕೆ ಬರುವುದನ್ನು ಯೋಗ ಎನ್ನುತ್ತಾರೆ. ಇವರಿಬ್ಬರ ವೇಗವನ್ನು ಗಮನಿಸಿ ಲೆಕ್ಕಾಚಾರಗಳನ್ನು ಮಾಡಿ ಯೋಗವನ್ನು ನಿರ್ಧರಿಸುತ್ತಾರೆ. ಒಟ್ಟು 27 ಯೋಗಗಳಿವೆ. ಈ ಯೋಗಗಳು ಗ್ರಹಣದ ನಿರ್ಣಯದಲ್ಲಿ ಅತ್ಯಂತ ಸಹಕಾರಿ.

ಕರಣ : ದಿನದ ಅರ್ಧಭಾಗದಲ್ಲಿ ಸೂರ್ಯ ಮತ್ತು ಚಂದ್ರರ ನಡುವಿನ ದೂರದ ಪ್ರಮಾಣವನ್ನು ಕರಣವೆನ್ನುತ್ತಾರೆ. ಕರ್ಣವೆಂದು ಹೇಳುವುದೂ ವಾಡಿಕೆಯಲ್ಲಿದೆ. ಕರಣಗಳ ಸಂಖ್ಯೆ ಒಟ್ಟು ಹನ್ನೊಂದು.

*ಅಂಶ = Degree

ಸೂರ್ಯಸಿದ್ಧಾಂತ ಪಂಚಾಂಗವೆಂದರೇನು ?

ನಾವು ಮಾಡುತ್ತಿರುವ ಎಲ್ಲಾ ಕರ್ಮಗಳಿಗೂ ಕಾಲವು ಪ್ರಧಾನಾಂಗವೆನಿಸುತ್ತದೆ. ವಿಹಿತಕಾಲದಲ್ಲಿ ಮಾಡುವ ಕರ್ಮವು ಶುಭಫಲವನ್ನೂ ನಿಷಿದ್ಧಕಾಲದಲ್ಲಿ ಮಾಡುವ ಕರ್ಮವು ಅನಿಷ್ಟಫಲವನ್ನೂ ಕೊಡುತ್ತದೆ. ಆದ್ದರಿಂದ ವಿಹಿತಕಾಲದಲ್ಲಿಯೇ ಶಾಸ್ತ್ರೋಕ್ತಕರ್ಮಗಳನ್ನು ಮಾಡಬೇಕು.

ಈ ಕಾಲವು 1) ವಾರ 2) ತಿಥಿ 3) ನಕ್ಷತ್ರ 4) ಯೋಗ 5) ಕರಣ ಎಂಬ ಐದು ಅಂಗಗಳಿಂದ ಯುಕ್ತವಾಗಿದೆ. ವರ್ಷಾರಂಭ ದಿನದಿಂದ ಆರಂಭಿಸಿ ವರ್ಷಾಂತ್ಯದವರೆಗಿನ ಎಲ್ಲಾ ದಿನಗಳಿಗೆ ಸಂಬಂಧಿಸಿದ ವಾರ ಮುಂತಾದ (ಪಂಚ) ಐದು ಅಂಗಗಳನ್ನು ತಿಳಿಸುವ ಪುಸ್ತಕವೇ ಪಂಚಾಂಗವೆನಿಸುತ್ತದೆ.

ಸೂರ್ಯಸಿದ್ಧಾಂತ ಮತ್ತು ದೃಗ್ಗಣಿತ ಪಂಚಾಂಗಗಳು

ಸೂರ್ಯದೇವನಿಂದ ಉಪದಿಷ್ಟವಾದ ಸಿದ್ಧಾಂತವು ಸೂರ್ಯಸಿದ್ಧಾಂತ ವೆನಿಸುತ್ತದೆ. ಸೂರ್ಯಸಿದ್ಧಾಂತ ಮುಂತಾದ ಗ್ರಂಥಗಳಲ್ಲಿ ಹೇಳಿದ ರೀತಿಯಿಂದ ಗ್ರಹಗಳನ್ನು ಗ್ರಹ ಹಾದಿಗಳಲ್ಲಿ ಪ್ರತ್ಯಕ್ಷದಿಂದ ನೋಡುತ್ತಿರಬೇಕು.

ಪ್ರತ್ಯಕ್ಷದಿಂದ ನೋಡಿದಾಗ ಸಿದ್ಧವಾದ ಗ್ರಹಗಳು ಗಣಿತದಿಂದಲೂ ಬರುವಂತೆ ಗ್ರಂಥಗಳನ್ನು ಬರೆಯುತ್ತಾರೆ. ಇದು ದೃಗ್ಗಣಿತಪದ್ಧತಿಯೆನಿಸುತ್ತದೆ.

ಸ್ನಾನ ದಾನ ಜಪ ತರ್ಪಣ ಮುಂತಾದ ಕಾರ್ಯಗಳು ಮುಂದಿನ ಜನ್ಮಗಳಲ್ಲಿ ಫಲವನ್ನು ಕೊಡುತ್ತವೆ. ಈಗ ಅವುಗಳ ಫಲವು ತಿಳಿಯುವುದಿಲ್ಲ. ಆದ್ದರಿಂದ ಈ ಕರ್ಮಗಳು ಅದೃಷ್ಟಫಲಕ-ಕರ್ಮಗಳೆನಿಸುತ್ತವೆ. ಧರ್ಮಶಾಸ್ತ್ರದಲ್ಲಿ ಹೇಳಿರುವ ಈ ವಿಧವಾದ ಎಲ್ಲಾ ಕರ್ಮಗಳನ್ನೂ ಸೂರ್ಯಸಿದ್ಧಾಂತ ಪಂಚಾಂಗದಲ್ಲಿರುವ ತಿಥಿ ಮುಂತಾದ ಐದು ಅಂಗಗಳನ್ನು ತಿಳಿದು ಮಾಡಬೇಕು.

ಜಾತಕ ಪ್ರಶ್ನೆ ಮುಹೂರ್ತ ಮುಂತಾದವುಗಳು ತತ್ಕಾಲದಲ್ಲಿಯೇ ಫಲವನ್ನು ಕೊಡುತ್ತವೆ. ಅವುಗಳ ಫಲಕ್ಕಾಗಿ ಮುಂದಿನ ಜನ್ಮಗಳವರೆಗೆ ಕಾಯಬೇಕಾಗಿಲ್ಲ. ಆದ್ದರಿಂದ ಅವುಗಳು ದೃಷ್ಟಫಲಕಗಳೆನಿಸುತ್ತವೆ. ಇವುಗಳಿಗಾಗಿ ದೃಗ್ಗಣಿತ ಪಂಚಾಂಗವನ್ನು ನೋಡಬೇಕು.

ಸಂವತ್ಸರಗಳು - 60

1. ಪ್ರಭವ 2. ವಿಭವ 3. ಶುಕ್ಲ
4. ಪ್ರಮೋದ 5. ಪ್ರಜಾಪತಿಃ 6. ಆಂಗೀರಸ
7. ಶ್ರೀಮುಖ 8. ಭಾವ 9. ಯುವ
10. ಧಾತು 11. ಈಶ್ವರ 12. ಬಹುಧಾನ್ಯ
13. ಪ್ರಮಾಥೀ 14. ವಿಕ್ರಮ 15. ವಿಷು
16. ಚಿತ್ರಭಾನು 17. ಸ್ವಭಾನು 18. ತಾರಣ
19. ಪಾರ್ಥಿವ 20. ವ್ಯಯ 21. ಸರ್ವಜಿತ್
22. ಸರ್ವಧಾರೀ 23. ವಿರೋಧೀ 24. ವಿಕೃತಿ
25. ಖರ 26. ನಂದನ 27. ವಿಜಯ
28. ಜಯ 29. ಮನ್ಮಥ 30. ದುರ್ಮುಖಿ
31. ಹೇವಿಳಂಬೀ 32. ವಿಳಂಬೀ 33. ವಿಕಾರೀ
34. ಶಾರ್ವರೀ 35. ಪ್ಲವ 36. ಶುಭಕೃತ್
37. ಶೋಭನಕೃತ್ 38. ಕ್ರೋದಿ 39. ವಿಶ್ವಾವಸು
40. ಪರಾಭವ 41. ಪ್ಲವಂಗ 42. ಕೀಲಕ
43. ಸೌಮ್ಯ 44. ಸಾಧಾರಣ 45. ವಿರೋಧಿಕೃತ್
46. ಪರೀಧಾವೀ 47. ಪ್ರಮಾದೀ 48. ಆನಂದ
49. ರಾಕ್ಷಸ 50. ನಳ 51. ಪಿಂಗಳ
52. ಕಾಳಯುಕ್ತಾಕ್ಷೀ 53. ಸಿದ್ಧಾರ್ಥೀ 54. ರೌದ್ರೀ
55. ದುರ್ಮತೀ 56. ದುಂದುಬಿ 57. ರುಧಿರೋದ್ಗಾರೀ
58. ರಕ್ತಾಕ್ಷೀ 59. ಕ್ರೋಧನ 60. ಅಕ್ಷಯ

ಅಯನ - 2

1. ಉತ್ತರಾಯಣ 2. ದಕ್ಷಿಣಾಯನ

ಋತುಗಳು-6

ಚಾಂದ್ರಮಾಸ-12		ಸೌರಮಾಸ-12
ಚೈತ್ರ, ವೈಶಾಖ	ವಸಂತಋತು	ಮೇಷ, ವೃಷಭ
ಜ್ಯೇಷ್ಠ, ಆಷಾಢ	ಗ್ರೀಷ್ಮಋತು	ಮಿಥುನ, ಕಟಕ
ಶ್ರಾವಣ, ಭಾದ್ರಪದ	ವರ್ಷಋತು	ಸಿಂಹ, ಕನ್ಯಾ
ಆಶ್ವಯುಜ, ಕಾರ್ತೀಕ	ಶರದೃತು	ತುಲಾ, ವೃಶ್ಚಿಕ
ಮಾರ್ಗಶಿರ, ಪುಷ್ಯ	ಹೇಮಂತಋತು	ಧನುಸ್ಸು, ಮಕರ
ಮಾಘ, ಫಾಲ್ಗುಣ	ಶಿಶಿರಋತು	ಕುಂಭ, ಮೀನ

ಪಕ್ಷಗಳು - 2

1. ಶುಕ್ಲ 2. ಕೃಷ್ಣಪಕ್ಷ

ತಿಥಿಗಳು - 15

1. ಪ್ರತಿಪತ್	2. ದ್ವಿತೀಯಾ
3. ತೃತೀಯಾ	4. ಚತುರ್ಥೀ
5. ಪಂಚಮೀ	6. ಷಷ್ಠೀ
7. ಸಪ್ತಮೀ	8. ಅಷ್ಟಮೀ
9. ನವಮೀ	10. ದಶಮೀ
11. ಏಕಾದಶೀ	12. ದ್ವಾದಶೀ
13. ತ್ರಯೋದಶೀ	14. ಚತುರ್ದಶೀ
15. ಪೂರ್ಣಿಮಾ	16. ಅಮಾವಾಸ್ಯೆ

ನಕ್ಷತ್ರಗಳು - 27

1. ಅಶ್ವಿನೀ	2. ಭರಣೀ	3. ಕೃತ್ತಿಕಾ
4. ರೋಹಿಣೀ	5. ಮೃಗಶಿರಾ	6. ಆರ್ದ್ರಾ
7. ಪುನರ್ವಸು	8. ಪುಷ್ಯಾ	9. ಆಶ್ಲೇಷಾ
10. ಮಖಾ	11. ಪೂರ್ವಫಲ್ಗುನಿ	12. ಉತ್ತರಫಲ್ಗುನೀ
13. ಹಸ್ತಾ	14. ಚಿತ್ರಾ	15. ಸ್ವಾತೀ
16. ವಿಶಾಖಾ	17. ಅನೂರಾಧಾ	18. ಜ್ಯೇಷ್ಠಾ
19. ಮೂಲಾ	20. ಪೂರ್ವಾಷಾಢಾ	21. ಉತ್ತರಾಷಾಢಾ
22. ಶ್ರವಣಾ	23. ಧನಿಷ್ಠಾ	24. ಶತಭಿಷಾ
25. ಪೂರ್ವಾಭಾದ್ರಾ	26. ಉತ್ತರಾಭಾದ್ರಾ	27. ರೇವತೀ

ಯೋಗಗಳು–27

1. ವಿಷ್ಕಂಭ	2. ಪ್ರೀತಿ	3. ಆಯುಷ್ಮಾನ್
4. ಸೌಭಾಗ್ಯ	5. ಶೋಭನ	6. ಅತಿಗಂಡ
7. ಸುಕರ್ಮಾ	8. ಧೃತಿ	9. ಶೂಲ
10. ಗಂಡ	11. ವೃದ್ಧಿ	12. ಧ್ರುವಾ
13. ವ್ಯಾಘಾತಾ	14. ಹರ್ಷಣ	15. ವಜ್ರ
16. ಸಿದ್ಧಿ	17. ವ್ಯತೀಪಾತ	18. ವರಿಯಾನ್
19. ಪರಿಘಾ	20. ಶಿವಾ	21. ಸಿದ್ಧ
22. ಸಾಧ್ಯ	23. ಶುಭ	24. ಶುಕ್ಲ
25. ಬ್ರಹ್ಮಾ	26. ಐಂದ್ರ	27. ವೈಧೃತಿ

ಕರಣಗಳು–11

1. ಬವ 2. ಬಾಲವ 3. ಕೌಲವ
4. ತೈತಿಲ 5. ಗರಜ 6. ವಣಿಕ್
7. ಭದ್ರ 8. ಶಕುನಿ 9. ಚತುಷ್ಪಾತ್
10. ನಾಗವಾನ್ 11. ಕಿಂಸ್ತುಘ್ನ

ಗ್ರಹಗಳಿಗೆ ಉಚ್ಚ, ನೀಚ, ಸ್ವಕ್ಷೇತ್ರ

ಗ್ರಹ	ಉಚ್ಚ	ನೀಚ	ಸ್ವಕ್ಷೇತ್ರ	ಮೂಲತ್ರಿಕೋನ
ರವಿ	ಮೇಷ	ತುಲಾ	ಸಿಂಹ	ಸಿಂಹ
ಚಂದ್ರ	ವೃಷಭ	ವೃಶ್ಚಿಕ	ಕರ್ಕ	ವೃಷಭ
ಕುಜ	ಮಕರ	ಕರ್ಕ	ಮೇಷ–ವೃಶ್ಚಿಕ	ಮೇಷ
ಬುಧ	ಕನ್ಯಾ	ಮೀನ	ಮಿಥುನ–ಕನ್ಯಾ	ಕನ್ಯಾ
ಗುರು	ಕರ್ಕ	ಮಕರ	ಧನು–ಮೀನ	ಧನು
ಶುಕ್ರ	ಮೀನ	ಕನ್ಯಾ	ವೃಷಭ–ತುಲಾ	ತುಲಾ
ಶನಿ	ತುಲಾ	ಮೇಷ	ಮಕರ–ಕುಂಭ	ಕುಂಭ

ತಾರಾಬಲ–ಜನ್ಮನಕ್ಷತ್ರ ಮೊದಲು ಇಷ್ಟ ಕಾಲದ ನಕ್ಷತ್ರದವರೆಗೆ (ಎರಡೂ ಸೇರಿ) ಲೆಕ್ಕಮಾಡಿ ಒಂಭತ್ತರಿಂದ ಭಾಗಿಸಿ ಬಂದ ಶೇಷವು 1. ಆದರೆ ಜನ್ಮತಾರೆ 2. ಸಂಪತ್ತಾರೆ 3. ವಿಪತ್ತಾರೆ 4. ಕ್ಷೇಮತಾರೆ 5. ಪ್ರತ್ಯಕ್‌ತಾರೆ 6. ಸಾಧನತಾರೆ 7. ವಧತಾರೆ 8. ಮಿತ್ರತಾರೆ 9. ಅಥವಾ ಸೊನ್ನೆ ಬಂದರೆ ಪರಮ ಮೈತ್ರತಾರೆ. 2,4,6,8,9 ಈ ತಾರೆಗಳು ಒಳ್ಳೆಯವು.

ಸೂಚನೆ:– ಮೊದಲನೆ ನವಕದಲ್ಲಿ ಜನ್ಮತಾರ
ಎರಡನೇ ನವಕದಲ್ಲಿ ವಿಪತ್ತಾರೆ
ಮೂರನೇ ನವಕದಲ್ಲಿ ಪ್ರತ್ಯಕ್ ನಿಷಿದ್ಧವು.

ತಾರಾಶಾಂತಿ–ಅನಿವಾರ್ಯಪಕ್ಷದಲ್ಲಿ ಜನ್ಮ ತಾರೆಗೆ 7 ಘಳಿಗೆ ವರ್ಜ್ಯ ಶಾಕ (ತರ್ಕಾರಿ). 3ನೇ ತಾರೆಗೆ 3 ಘಳಿಗೆ ವರ್ಜ್ಯ ಬೆಲ್ಲ. 5ನೇ ತಾರೆಗೆ 8 ಘಳಿಗೆ ವರ್ಜ್ಯ ಉಪ್ಪು. 7ನೇ ತಾರೆಗೆ ಎಳ್ಳು ಚಿನ್ನ ವಸ್ತ್ರ ಮೊದಲಾದವು. ಇವುಗಳನ್ನು ದಾನ ಮಾಡಿದರೆ ತಾರಾ ದೋಷವು ಪರಿಹಾರವಾಗುತ್ತದೆ.

ಚಂದ್ರಬಲ–ಜನ್ಮರಾಶಿಯಿಂದ ಇಷ್ಟಕಾಲದಲ್ಲಿ ಚಂದ್ರನಿರುವ ರಾಶಿಯವರೆಗೂ (ಎರಡೂ ಸೇರಿ) ಲೆಕ್ಕ ಮಾಡಿ ಬಂದ ಮೊತ್ತವು 1. ದೇಹಸೌಖ್ಯ 2. ಕಲಹ 3. ದ್ರವ್ಯಲಾಭ 4. ರೋಗಭಯ 5. ಕಾರ್ಯವಿಕಲ್ಪ 6. ಶತ್ರುನಾಶ 7. ಸೌಖ್ಯವೃದ್ಧಿ 8. ಆರೋಗ್ಯವೃದ್ಧಿ 9. ಕಾರ್ಯತಾಮಸ 10. ಉದ್ಯೋಗವೃದ್ಧಿ 11. ಇಷ್ಟಾರ್ಥಸಿದ್ಧಿ

12. ಧನವ್ಯಯ ಶುಕ್ಲಪಕ್ಷದಲ್ಲಿ 2, 5, 6, 9 ಇವುಗಳೂ ಕೃಷ್ಣಪಕ್ಷದಲ್ಲಿ 4, 8, 12 ಇವುಗಳೂ ಉತ್ತಮವೆಂದು ಕೆಲವರ ಮತ.

ಚಂದ್ರಶಾಂತಿ–ಅನಿರ್ವಾಹ ಪಕ್ಷದಲ್ಲಿ ಚಂದ್ರಪ್ರೀತ್ಯರ್ಥವಾಗಿ ಚಂದ್ರಗ್ರಹಪೂಜೆ, ಚಂದ್ರಮಂತ್ರಜಪ, ಅಕ್ಕಿದಾನ ಇವನ್ನು ಮಾಡಿದರೆ ದೋಷವು ಪರಿಹಾರವಾಗುತ್ತದೆ.

ಶುಕ್ಲಪಕ್ಷದಲ್ಲಿ ತಾರಾಬಲವನ್ನೂ ಕೃಷ್ಣಪಕ್ಷದಲ್ಲಿ ಚಂದ್ರಬಲವನ್ನೂ ಮುಖ್ಯವಾಗಿ ಗಮನಿಸಬೇಕು.

ಗುರುಬಲ

ಜನ್ಮರಾಶಿಯಿಂದ 2–5–7–9–11 ಈ ರಾಶಿಯಲ್ಲಿ ಗುರು ಬಲವಿರುತ್ತದೆ. ಸ್ವಕ್ಷೇತ್ರ–ಉಚ್ಚ–ಮಿತ್ರಕ್ಷೇತ್ರಗಳಲ್ಲಿದ್ದಾಗ (ಧನುಸ್ಸು–ಮೀನ–ಕರ್ಕ–ಸಿಂಹ–ವೃಶ್ಚಿಕ–ಮೇಷ) ಮೇಲಿನರಾಶಿಗಳಲ್ಲಿಲ್ಲದಿದ್ದರೂ ಗುರುಬಲವಿರುತ್ತದೆ. ಆಗ ಶುಭಕಾರ್ಯ ಮಾಡಬಹುದು. 1–4–6–10 ಈ ಸ್ಥಾನಗಳಲ್ಲಿ ಗುರುಬಂದಾಗ ಗುರುಬಲ ಸಂಪಾದನೆಗಾಗಿ ಎರಡುಬಾರಿ ಪೂಜೆ ಮಾಡಿದರೆ ಸಾಕು. 8–12 ರಾಶಿಗಳಲ್ಲಿ ಗುರು ಬಂದಾಗ ಮೂರುಬಾರಿ ಪೂಜೆ ಮಾಡಿದರೆ ಗುರುಬಲವುಂಟಾಗುತ್ತದೆ. ಈ ನಿಯಮ 8 ರಿಂದ 12 ವರ್ಷದೊಳಗೆ ಉಪನಯನ ಮಾಡುವವರಿಗೆ ಮಾತ್ರ. ನಂತರ ಉಪನಯನ ಮತ್ತು ವೃಷಲೀ ವಿವಾಹಗಳಿಗೆ ಇದರ ಅವಶ್ಯಕತೆಯಿಲ್ಲ.

ಪಂಚಕ ನೋಡುವ ಕ್ರಮ

ಇಷ್ಟಕಾಲಕ್ಕೆ ಪ್ರತಿಪದಾದಿ (ಶುಕ್ಲಪಕ್ಷದ ಪಾಡ್ಯ ಮೊದಲು) ತಿಥಿಗಳನ್ನೂ ಮೇಷಾದಿ ಲಗ್ನಗಳನ್ನೂ ಕೂಡಿಸಿ ಬಂದ ಮೊತ್ತವನ್ನು ಒಂಭತ್ತರಿಂದ ಭಾಗಿಸಲು ಶೇಷವು 1 ಬಂದರೆ ಮೃತ್ಯು, 2 ಅಗ್ನಿ, 4 ರಾಜ, 6 ಚೋರ, 8 ರೋಗಪಂಚಕ ಇವು ಅಶುಭಗಳು. ಚೋರ ರೋಗಪಂಚಕಗಳನ್ನು ರಾತ್ರಿಯಲ್ಲೂ, ರಾಜ ಅಗ್ನಿ ಪಂಚಕಗಳನ್ನು ಹಗಲಿನಲ್ಲೂ, ಮೃತ್ಯುಪಂಚಕವನ್ನು ಹಗಲು ರಾತ್ರಿಗಳಲ್ಲೂ ಬಿಟ್ಟುಬಿಡಬೇಕು. ಲಗ್ನವು ಬಲಿಷ್ಠವಾಗಿದ್ದರೆ ಪಂಚಕ ದೋಷವಿಲ್ಲ. ಲಗ್ನವು ಬಲಿಷ್ಠವಾಗಿದ್ದರೆ ಪಂಚಕದ ಅವಶ್ಯಕತೆ ಇಲ್ಲವೆಂದು ಅಭಿಜ್ಞರ ಮತ.

ಪಂಚಕ ಶಾಂತಿ–ಅನಿರ್ವಾಹಪಕ್ಷದಲ್ಲಿ ಮೃತ್ಯುಪಂಚಕಕ್ಕೆ ದೀಪ, ಅಗ್ನಿಪಂಚಕಕ್ಕೆ ತೈಲ, ರಾಜಪಂಚಕಕ್ಕೆ ಜಂಬೀರ (ನಿಂಬೇ ಹಣ್ಣು), ಚೋರಪಂಚಕಕ್ಕೆ ಲೋಹ, ರೋಗಪಂಚಕಕ್ಕೆ ಧಾನ್ಯ, ಇವುಗಳನ್ನು ದಾನ ಮಾಡಿದರೆ ದೋಷವು ಪರಿಹಾರವಾಗುತ್ತದೆ.

ವಿವಾಹ ಉಪನಯನ ವ್ರತಚತುಷ್ಟಯ ಚೌಲಗಳಿಗೆ ಆಯಾ ತಿಂಗಳುಗಳ ಆರಂಭದಿಂದಲೂ, ಯಾತ್ರೆ ಗೃಹಪ್ರವೇಶ ರಾಜದರ್ಶನಗಳಿಗೆ ಆಯಾ ಪಕ್ಷಗಳ ಆರಂಭದಿಂದಲೂ ತಿಥಿಯನ್ನು ಲೆಕ್ಕಮಾಡಬೇಕು.

ಲಗ್ನತ್ಯಾಜ್ಯಕಾಲ–ಮೇಷ ವೃಷಭ ಕನ್ಯಾ ಧನುರ್ಲಗ್ನಗಳ ಆದಿಭಾಗದಲ್ಲೂ ಕಟಕ ವೃಶ್ಚಿಕ ಮಕರ ಮೀನಲಗ್ನಗಳ ಅಂತ್ಯಭಾಗದಲ್ಲೂ ಮಿಥುನ ಸಿಂಹ ತುಲಾ ಕುಂಭಲಗ್ನಗಳ ಮಧ್ಯಭಾಗದಲ್ಲೂ ಅರ್ಧ ಘಳಿಗೆಯ ಕಾಲ ತ್ಯಾಜ್ಯವು. ಈ ಕಾಲವನ್ನು ಬಿಟ್ಟು ಶುಭಕಾರ್ಯವನ್ನು ಮಾಡಬೇಕು.

ಋತುಕಾಲ–ಸೋಮ ಬುಧ ಗುರು ಶುಕ್ರ ವಾರಗಳೂ; ದ್ವಿತೀಯಾ ತೃತೀಯಾ ಪಂಚಮೀ ದಶಮೀ ಏಕಾದಶೀ ತ್ರಯೋದಶೀ ತಿಥಿಗಳೂ; ಅಶ್ವಿನೀ ರೋಹಿಣೀ ಮೃಗಶಿರಾ ಪುಷ್ಯಾ ಉತ್ತರಾ ಹಸ್ತಾ ಚಿತ್ತಾ ಸ್ವಾತೀ ವಿಶಾಖಾ ಅನೂರಾಧಾ ಮೂಲಾ ಉತ್ತರಾಷಾಢಾ ಶ್ರವಣಾ ಧನಿಷ್ಠಾ ಶತಭಿಷಾ ಉತ್ತರಾಭಾದ್ರಾ ರೇವತೀ ಈ ನಕ್ಷತ್ರಗಳೂ; ವೃಷಭ ಮಿಥುನ ಕಟಕ ಕನ್ಯಾ ತುಲಾ ಧನುಸ್ಸು ಮೀನ ಲಗ್ನಗಳೂ; ಪ್ರಾತಃ ಕಾಲವೂ ಪೂರ್ವಾಹ್ನವೂ ಮಧ್ಯಾಹ್ನಕಾಲವೂ ಪೂರ್ವರಾತ್ರಿಯೂ ಪ್ರಥಮರಜೋದರ್ಶನಕ್ಕೆ ಶುಭಕಾಲಗಳು. ಮೇಲೆ ತಿಳಿಸಿದ ತಿಥಿ ವಾರಾದಿಗಳಲ್ಲದ ದಿನಗಳಲ್ಲಿ ಪ್ರಥಮ ರಜೋದರ್ಶನವಾದ ಭುವನೇಶ್ವರಿ ಶಾಂತಿ ಮಾಡಿಸಬೇಕು.

ಆಯುಷ್ಕರ್ಮ–ದ್ವಿತೀಯಾ ತೃತೀಯಾ ಪಂಚಮೀ ಸಪ್ತಮೀ ದಶಮೀ ತ್ರಯೋದಶೀ ತಿಥಿಗಳೂ ಸೋಮ ಬುಧ ಗಳೂ ಅಶ್ವಿನೀ ಮೃಗಶಿರಾ ಪುನರ್ವಸು ಪುಷ್ಯಾ ಹಸ್ತಾ ಚಿತ್ರಾ ಸ್ವಾತೀ ಜ್ಯೇಷ್ಠಾ ಶ್ರವಣಾ ಧನಿಷ್ಠಾ ಶತಭಿಷಾ ರೇವತೀ ನಕ್ಷತ್ರಗಳೂ ಪೂರ್ವಾಹ್ನವೂ ಶುಭಲಗ್ನವೂ ಶ್ರೇಷ್ಠವಾದವು. ಶುಭ ಕಾಲದಲ್ಲಿ ಶಾಸ್ತ್ರೋಕ್ತರೀತ್ಯಾ ಕ್ಷೌರ ಮಾಡಿಸಿಕೊಳ್ಳುವುದರಿಂದ ಆಯುಷ್ಯಾಭಿವೃದ್ಧಿಯೂ ಅಶುಭಕಾಲದಲ್ಲಿ ಮಾಡಿಸಿಕೊಳ್ಳುವುದರಿಂದ ತನಗೂ ತನ್ನ ಕುಟುಂಬಕ್ಕೆ ಸೇರಿದವರಿಗೂ ಆಯುಃಕ್ಷೀಣವೂ ಉಂಟಾಗುವುದರಿಂದ ಈ ಕರ್ಮಕ್ಕೆ ಆಯುಷ್ಕರ್ಮವೆಂದು ಹೆಸರು. ಫಲವು ಅದೃಷ್ಟ ಫಲವಾದುದರಿಂದ ಹಿಂದೂಶಾಸ್ತ್ರಕ್ಕೆ ಕಟ್ಟುಪಡುವವರೆಲ್ಲರೂ ಇದಕ್ಕೆ ಮುಖ್ಯವಾಗಿ ಗಮನವನ್ನು ಕೊಡಬೇಕು. ಅಣ್ಣತಮ್ಮಂದಿರೂ ತಂದೆಮಕ್ಕಳೂ ಒಂದೇ ದಿವಸ ಮಾಡಿಸಿಕೊಳ್ಳಬಾರದು. ಅನಿವಾರ್ಯವಾಗಿಯೂ ಶಾಸ್ತ್ರೋಕ್ತ ಕರ್ಮಾಂಗವಾಗಿಯೂ ಅಶುಭಕಾಲದಲ್ಲಿ ಮಾಡಿಸಿಕೊಳ್ಳಬೇಕಾದ ಸಂಭವವುಂಟಾದರೆ ಪುನಃ ಶೀಘ್ರದಲ್ಲೇ ಉತ್ತಮದಿನದಲ್ಲಿ ಮಾಡಿಸಿಕೊಳ್ಳುವುದರಿಂದ ಹಿಂದಿನ ದೋಷವು ಪರಿಹಾರವಾಗುವುದೆಂಬುದು ಶಾಸ್ತ್ರಸಮ್ಮತವು. ಮಾಧ್ವರಿಗೆ ದಶಮೀ ನಿಷೇಧ.

ಧನಿಷ್ಠಾಪಂಚಕ–ಧನಿಷ್ಠಾ ಶತಭಿಷಾ ಪೂರ್ವಾಭಾದ್ರಾ ಉತ್ತರಾಭಾದ್ರಾ ರೇವತೀ ಇವು ಧನಿಷ್ಠಾಪಂಚಕ ನಕ್ಷತ್ರಗಳು. ಇವುಗಳಲ್ಲಿ ಮರಣವಾದರೆ ಮೃತಿಸ್ಥಳವನ್ನು 5 ತಿಂಗಳ ಕಾಲ ಬಿಡಬೇಕು.

ತ್ರಿಪಾದಿನಕ್ಷತ್ರಗಳು

ಕೃತ್ತಿಕಾ, ಪುನ, ಉತ್ತರಾ, ವಿಶಾ, ಉ.ಷಾ., ಪೂ.ಭಾ., ಇವುಗಳಲ್ಲಿ ಪೂ.ಭಾ. ಹೊರತು ಬಾಕಿ ನಕ್ಷತ್ರಗಳಲ್ಲಿ ಮರಣವಾದರೆ ಮೃತಸ್ಥಳವನ್ನು 3 ತಿಂಗಳು ಬಿಡಬೇಕು.

ಹಲ್ಲಿ ಬಿದ್ದ ಶಕುನ

ತಲೆ–ಲಕ್ಷ್ಮೀಪ್ರದಂ	ಮುಖ–ಬಂಧುದರ್ಶನಂ
ಹುಬ್ಬುಮಧ್ಯ–ರಾಜಾನುಗ್ರಹಃ	ಮೇಲ್ತುಟಿ–ಧನವ್ಯಯಃ
ಕೆಳತುಟಿ–ಧನಲಾಭಃ	ಮೂಗು–ವ್ಯಾಧಿಭಯಂ
ಬಲಕಿವಿ–ದೀರ್ಘಾಯುಃ	ಎಡಕಿವಿ–ವಾಣಿಜ್ಯಲಾಭಃ
ಕಣ್ಣುಗಳು–ಕಾರಾಗೃಹಪ್ರಾಪ್ತಿಃ	ಕೆನ್ನೆ–ರಾಜದಂಡಃ
ಬಾಯಿ–ಭಯಂ	ಕಂಠ–ಶತ್ರುನಾಶಃ
ಬಲಭುಜ–ಆರೋಗ್ಯಂ	ಎಡಬುಜ–ಸ್ತ್ರೀಭೋಗಃ
ಎಡಮಣಿಕಟ್ಟು–ಯಶಃ	ಬಲಮಣಿಕಟ್ಟು–ವ್ಯಥಾ
ಮೊಲೆ–ದೋಷಃ	ಹೊಟ್ಟೆ–ಧಾನ್ಯಲಾಭಃ
ಎದೆಹೊಕ್ಕಳು–ಚಂದನಲಾಭಃ	ಪಕ್ಕೆ–ಬಹುಲಾಭಃ
ತೊಡೆ–ಪಿತ್ರರಿಷ್ಟಂ	ಮೊಣಕಾಲು–ಸುಖಂ
ಪಾದಗಳು–ಪ್ರಯಾಣಂ	ಉಗುರು–ಧನವ್ಯಯಃ
ಕೂದಲಕೊನೆ–ಮೃತ್ಯುಭಯಂ	ಹಿಂದೆ–ಸೌಖ್ಯಂ

ಸ್ತ್ರೀಯರಿಗೆ ಎಡಭಾಗ, ಪುರುಷರಿಗೆ ಬಲಭಾಗದಲ್ಲಿ ಹಲ್ಲಿ ಬಿದ್ದರೆ ಶುಭ.

ಅಂಗಾರಕ ದೋಷ ವಿಚಾರ

ವಿವಾಹವನ್ನು ಮಾಡುವುದಕ್ಕೆ ಮೊದಲು ವಧೂ–ವರರ ಜಾತಕಗಳಲ್ಲಿ ಕುಜದೋಷವನ್ನು ಮುಖ್ಯವಾಗಿ ಗಮನಿಸಬೇಕು. ಜನ್ಮಲಗ್ನದಿಂದಲೂ, ಚಂದ್ರಲಗ್ನ (ಜನ್ಮರಾಶಿ)ದಿಂದಲೂ, ಶುಕ್ರನಿರುವ ರಾಶಿಯಿಂದಲೂ, ಕುಜದೋಷವನ್ನು ನೋಡಬೇಕು. ಕುಜದೋಷವು ಸ್ತ್ರೀಗಿಂತ ಪುರುಷನಿಗೆ ಸ್ವಲ್ಪ ಹೆಚ್ಚಾಗಿದ್ದರೂ ಬಾಧಕವಿಲ್ಲ. ಸ್ತ್ರೀಗೆ ಹೆಚ್ಚಾಗಿರಕೂಡದು.

ಕುಜದೋಷವು ಶುಕ್ರನಿಗಿಂತ ಎರಡರಷ್ಟು ಚಂದ್ರನಿಂದ, ಚಂದ್ರನಿಗಿಂತ ಲಗ್ನದಿಂದ ಕುಜದೋಷವು ಎರಡರಷ್ಟು ಬಲವುಳ್ಳದ್ದು.

ಲಗ್ನದಿಂದ ಚಂದ್ರನಿಂದ ಮತ್ತು ಶುಕ್ರನಿಂದ 1–2–4–5–7–8–12 ಈ ಸ್ಥಾನಗಳಲ್ಲಿ ಕುಜನಿದ್ದರೆ ಕುಜದೋಷವುಂಟು. ಪುರುಷನಿಗೆ 2–7–8 ಮತ್ತು ಸ್ತ್ರೀಗೆ 4–8–12 ಈ ಸ್ಥಾನದಲ್ಲಿ ಕುಜನಿದ್ದರೆ ದೋಷ ಹೆಚ್ಚು.

ಚಂದ್ರನ ಮತ್ತು ರವಿಯ ಕ್ಷೇತ್ರಗಳಾದ ಕಟಕ ಮತ್ತು ಸಿಂಹಲಗ್ನದಲ್ಲಿ ಹುಟ್ಟಿದ ಸ್ತ್ರೀಪುರುಷರಿಗೆ ಕುಜನು ದೋಷಕಾರಿಯಾಗುವುದಿಲ್ಲ.

ಕುಜದೋಷವನ್ನು ನೋಡುವಾಗ ಕುಜನಿಗೆ ಬಲವೆಷ್ಟು ದೋಷವೆಷ್ಟು ಎಂಬುದನ್ನು ಚೆನ್ನಾಗಿ ತಿಳಿದು ಹೇಳಬೇಕು. ಅಂದರೆ ಕಾಲಬಲ, ದಿಗ್ಬಲ, ನೈಸರ್ಗಿಕ

ಬಲ, ದೃಷ್ಟಿ ಬಲ, ಸ್ಥಾನ ಬಲಗಳನ್ನು ನೋಡಬೇಕು ಮತ್ತು ಇವುಗಳಲ್ಲಿ ಸ್ಥಾನಬಲವೇ ಪ್ರಬಲವು.

ರವ್ಯಾದಿ ಸಮಸ್ತ ಗ್ರಹಗಳೂ ಉಚ್ಚರಾಗಿದ್ದರೆ ಪೂರ್ಣ ಬಲವುಳ್ಳವರೂ, ಶುಭಫಲಪ್ರದರೂ, ಮೂಲತ್ರಿಕೋಣದಲ್ಲಿದ್ದರೆ ಮುಕ್ಕಾಲು ಬಲದಿಂದ ಮುಕ್ಕಾಲು ಶುಭಫಲರೂ, ಸ್ವಕ್ಷೇತ್ರದಲ್ಲಿದ್ದರೆ ಅರ್ಧಬಲದಿಂದ ಅರ್ಧಶುಭಫಲರು, ಮಿತ್ರಕ್ಷೇತ್ರದಲ್ಲಿದ್ದರೆ ಕಾಲುಬಲದಿಂದ ಕಾಲುಭಾಗ ಶುಭಫಲಪ್ರದರೂ, ಅಧಿಮಿತ್ರ ಕ್ಷೇತ್ರದಲ್ಲಿದ್ದರೆ (ನೈಸರ್ಗಿಕ ಮಿತ್ರ + ತಾತ್ಕಾಲಿಕ ಮಿತ್ರ) 3/8 ಬಲದಿಂದ 3/8 ಶುಭಫಲಪ್ರದರು.

ಕುಜನು (ನೀಚಕ್ಷೇತ್ರ, ಶತ್ರುಕ್ಷೇತ್ರ) ಬಲಹೀನನಾಗಿದ್ದು ರವಿ, ಶನಿಗಳು ಬಲಿಷ್ಠರಾಗಿ ದೋಷಿಗಳಾದ್ದರೆ ರವಿ ಶನಿಗಳ ದೋಷವು ಪ್ರಬಲವಾಗುವುದರಿಂದ ಕುಜದೋಷವನ್ನು ನೋಡುವಾಗ ಎಲ್ಲಾ ಪಾಪಗ್ರಹಗಳ ದೋಷವನ್ನು ನೋಡಿ ಸಮದೋಷವುಳ್ಳ ಸ್ತ್ರೀಪುರುಷರಿಗೆ ವಿವಾಹ ನಡೆಸಬೇಕು. ವಧೂವರರ ಜಾತಕಗಳಲ್ಲಿ ಒಂದಕ್ಕೆ ಕುಜದೋಷವಿದ್ದು, ಮತ್ತೊಂದಕ್ಕೆ ಇಲ್ಲದಿದ್ದರೆ ಹಾಗಿಲ್ಲದಿರುವ ಜಾತಕದಲ್ಲಿ ದ್ವಿತೀಯ, ಚತುರ್ಥ, ಪಂಚಮ, ಸಪ್ತಮ, ಅಷ್ಟಮ ಸ್ಥಾನಗಳಿಗೂ, ಆ ಭಾವಗಳಿಗೂ ಇತರ ಗ್ರಹಗಳದೋಷವಿದೆಯೇ ಎಂಬುದನ್ನು ನೋಡಬೇಕು. ಒಂದು ಜಾತಕಕ್ಕೆ ಯಾವ ಗ್ರಹದೋಷವೂ ಇಲ್ಲದ ಪಕ್ಷ ವಿವಾಹವನ್ನು ಮಾಡಕೂಡದು. ಇತರ ಗ್ರಹಗಳಿಂದ ದೋಷವಿರುವ ಪಕ್ಷ ವಿವಾಹವನ್ನು ಮಾಡಬಹುದು.

ಕುಜದೋಷ ಪರಿಹಾರ: ಈ ಕೆಳಕಂಡ ಸಂದರ್ಭಗಳಲ್ಲಿ ಕುಜದೋಷವಿದ್ದಾಗ್ಯೂ ಪರಿಹಾರವಾಗುವುದು.

ಕುಜನು ದುಷ್ಟಸ್ಥಾನದಲ್ಲಿದ್ದರೂ ಭಾವಸಂಧಿಯಲ್ಲಿದ್ದರೆ ದೋಷಪ್ರದನಲ್ಲ.

ಕುಜನು ಸ್ವಕ್ಷೇತ್ರ, ಉಚ್ಚಕ್ಷೇತ್ರ, ಮಿತ್ರಕ್ಷೇತ್ರ ಸ್ಥಿತಿಯುಳ್ಳವನಾಗಿದ್ದರೆ ಮತ್ತು ಶುಭ ಗ್ರಹ ಸಂಬಂಧ (ಚಂದ್ರ, ಬುಧ, ಗುರು) ಶುಭಗ್ರಹ ದೃಷ್ಟಿ (ಚಂದ್ರ, ಬುಧ, ಗುರು) ಮಿತ್ರಾಂಶ ಸ್ಥಿತಿಯೂ ಉಳ್ಳವನಾದರೆ ದೋಷಕಾರಿಯಲ್ಲ.

ಮಿಥುನ, ಕನ್ಯಾ ಲಗ್ನಗಳಲ್ಲಿ ಹುಟ್ಟಿದವರಿಗೆ ಕುಜನು ದ್ವಿತೀಯಾ (2) ದಲ್ಲಿದ್ದರೂ ದೋಷವಿಲ್ಲ.

ಮೇಷ, ವೃಶ್ಚಿಕ ಲಗ್ನಗಳಲ್ಲಿ ಹುಟ್ಟಿದವರಿಗೆ ಕುಜನು ಚತುರ್ಥ (4) ದಲ್ಲಿದ್ದರೂ ದೋಷವಿಲ್ಲ.

ಮಕರ, ಕಟಕ ಲಗ್ನಗಳಲ್ಲಿ ಹುಟ್ಟಿದವರಿಗೆ ಕುಜನು ಸಪ್ತಮ(7)ದಲ್ಲಿದ್ದರೂ ದೋಷವಿಲ್ಲ.

ಧನುರ್ಮೀನ ಲಗ್ನಗಳಲ್ಲಿ ಹುಟ್ಟಿದವರಿಗೆ ಕುಜನು ಅಷ್ಟಮ(8)ದಲ್ಲಿದ್ದರೂ ದೋಷವಿಲ್ಲ.

ವೃಷಭ, ತುಲಾ ಲಗ್ನಗಳಲ್ಲಿ ಹುಟ್ಟಿದವರಿಗೆ ಕುಜನು ದ್ವಾದಶ(12)ದಲ್ಲಿದ್ದರೂ ದೋಷವಿಲ್ಲ.

ಕುಂಭ, ಸಿಂಹ ರಾಶಿಗಳಲ್ಲಿ ಹುಟ್ಟಿದವರಿಗೆ ಕುಜದೋಷವಿಲ್ಲ.

ಬಲಿಷ್ಠರಾದ ಗುರು, ಶುಕ್ರರು ಲಗ್ನದಲ್ಲಿದ್ದರೆ ಅಥವಾ ಸಪ್ತಮದಲ್ಲಿದ್ದರೆ ಕುಜದೋಷ ಪರಿಹಾರವಾಗುತ್ತದೆ.

ಕುಜನು ಸಪ್ತಮದಲ್ಲಿದ್ದು, ಕುಜನನ್ನು ಚಂದ್ರ, ಬುಧ, ಗುರುಗಳು ನೋಡಿದರೆ ಅಥವಾ ಕುಜನು ಚಂದ್ರ, ಬುಧ, ಗುರು ಯುತಿಯಲ್ಲಿದ್ದರೆ ದೋಷವು ಪರಿಹಾರವಾಗುವುದು.

ಶನಿಯು ಲಗ್ನದಿಂದ 1, 4, 7, 8, 12ರಲ್ಲಿದ್ದರೆ ಕುಜದೋಷವಿಲ್ಲ.

ವಿವಾಹೋಪಯುಕ್ತವಾದ ಅಷ್ಟಕೂಟಗಳು

ಗ್ರಹಮೈತ್ರ, ರಾಶಿ, ದಿನ, ನಾಡೀ, ಗಣ, ಇವುಗಳನ್ನು ಎಲ್ಲಾ ವರ್ಣದವರೂ ಅವಶ್ಯವಾಗಿ ನೋಡಬೇಕು.

ಬ್ರಾಹ್ಮಣರಿಗೆ ಗ್ರಹಮೈತ್ರ, ಕ್ಷತ್ರಿಯರಿಗೆ ಗಣ, ವೈಶ್ಯರಿಗೆ ರಾಶಿ, ಶೂದ್ರರಿಗೆ ಯೋನಿಕೂಟ ಇವುಗಳು ಮುಖ್ಯವಾಗಿ ಗಮನಿಸಲ್ಪಡಬೇಕು.

ಕೂಟಗಳನ್ನು ನೋಡಬೇಕಾದರೆ ವಧೂವರರಿಬ್ಬರಿಗೂ ಜನ್ಮನಕ್ಷತ್ರ ಗಳಿರಬೇಕು ಅಥವಾ ಇಬ್ಬರಿಗೂ ನಾಮನಕ್ಷತ್ರದಿಂದ ನೋಡಬೇಕು. ವರನ ಜನ್ಮನಕ್ಷತ್ರಕ್ಕೂ ಕನ್ಯೆಯ ನಾಮನಕ್ಷತ್ರಕ್ಕೂ ನೊಡಬಹುದು ಕನ್ಯೆಯ ಜನ್ಮನಕ್ಷತ್ರಕ್ಕೂ, ವರನ ನಾಮನಕ್ಷತ್ರಕ್ಕೂ ನೋಡಕೂಡದು.

ದಿನಕೂಟ–ಕನ್ಯೆಯ ನಕ್ಷತ್ರ ಮೊದಲು ವರನ ನಕ್ಷತ್ರದವರೆಗೆ (ಎರಡೂ ಸೇರಿ) ಒಂಭತ್ತೊಂಭತ್ತಾಗಿ ಎಣಿಸುವಾಗ ಪುರುಷನ ನಕ್ಷತ್ರವು 2,4,6,8,9 ಆದರೆ ಉತ್ತಮ. (ಗುಣ 3). ಹಾಗೆ ಎಣಿಸಿದಾಗ 1,3,5,7 ಬರುವದು ಅನಿಷ್ಟ

ಸೂಚನೆ:– ವರನ ನಕ್ಷತ್ರದಿಂದ ಎಣಿಸುವುದೂ ಕೆಲವರಲ್ಲಿ ರೂಢಿಯಿದೆ. ಆಗ ಒಬ್ಬರ ನಕ್ಷತ್ರದಿಂದ ಎಣಿಸುವಾಗ ಶುಭವು ಇನ್ನೊಬ್ಬರ ನಕ್ಷತ್ರದಿಂದ ಎಣಿಸುವಾಗ ಅಶುಭವು ಆಗಿದ್ದರೆ ಮಧ್ಯಮ.

ಗಣಕೂಟ

ದೇವಗಣ	ಮನುಷ್ಯಗಣ	ರಾಕ್ಷಸಗಣ
ಅಶ್ವಿನೀ	ಭರಣೀ	ಕೃತ್ತಿಕಾ
ಮೃಗಶಿರಾ	ರೋಹಿಣಿ	ಆಶ್ಲೇಷಾ
ಪುನರ್ವಸು	ಆದ್ರಾ	ಮಖಾ
ಪುಷ್ಯಾ	ಪೂರ್ವಫಲ್ಗುನೀ	ಚಿತ್ರಾ
ಹಸ್ತಾ	ಉತ್ತರಾ	ವಿಶಾಖಾ
ಸ್ವಾತೀ	ಪೂರ್ವಾಷಾಢಾ	ಜ್ಯೇಷ್ಠಾ
ಅನೂರಾಧಾ	ಉತ್ತರಾಷಾಢಾ	ಮೂಲಾ
ಶ್ರವಣಾ	ಪೂರ್ವಾಭಾದ್ರಾ	ಧನಿಷ್ಠಾ
ರೇವತೀ	ಉತ್ತರಾಭಾದ್ರಾ	ಶತಭಿಷಾ

ವಧೂವರರ ನಕ್ಷತ್ರಗಳು ಒಂದೇ ಗಣವಾಗಿದ್ದರೆ ಉತ್ತಮ (ಗು. 6) ದೇವ ಮನುಷ್ಯಗಣವಾದರೆ ಮಧ್ಯಮ (ಗು. 5) ದೇವ ರಾಕ್ಷಸ ಗಣವಾದರೆ ಅಧಮ. (ಗು. 1) ಮನುಷ್ಯ ರಾಕ್ಷಸ ಗಣವಾದರೆ ಮೃತ್ಯು. (ಗು. 0)

ಸೂಚನೆ–ಸ್ತ್ರೀ ರಾಕ್ಷಸಗಣವಾದರೆ ಪುರುಷ ರಾಕ್ಷಸ ಗಣವೇ ಆಗಬೇಕು. (ಗುಣ 6.)

ಸೂಚನೆ–ರಾಶಿ, ಗ್ರಹಮೈತ್ರ ಇವೆರಡೂ ಇದ್ದರೆ ಸ್ತ್ರೀ ದೀರ್ಘಕೂಟವಿಲ್ಲ ದಿದ್ದರೂ ಬಾಧಕವಿಲ್ಲ.

ಯೋನಿಕೂಟ

ಪುಂ.	ಸ್ತ್ರೀ		ಪುಂ.	ಸ್ತ್ರೀ	
ಅಶ್ವಿನೀ	ಶತ	ಕುದುರೆ	ಸ್ವಾತೀ	ಹಸ್ತಾ	ಎಮ್ಮೆ
ಭರಣೀ	ರೇವತೀ	ಆನೆ	ವಿಶಾಖಾ	ಚಿತ್ತಾ	ಹುಲಿ
ಕೃತ್ತಿಕಾ	ಪುಷ್ಯಾ	ಆಡು	ಜ್ಯೇಷ್ಠಾ	ಅನೂ	ಜಿಂಕೆ
ರೋಹಿಣೀ	ಮೃಗ	ಹಾವು	ಉತ್ತರಾ	ಉ.ಭಾ.	ಹಸು
ಮೂಲಾ	ಆದ್ರಾ	ನಾಯಿ	ಅಭಿಜಿತ್	ಉ.ಷಾ.	ಬಭ್ರು
ಮಖಾ	ಪುಬ್ಬಾ	ಇಲಿ	ಪೂ.ಷಾ.	ಶ್ರವಣಾ	ಕಪಿ
ಆಶ್ಲೇಷಾ	ಪುನ	ಬೆಕ್ಕು	ಪೂ.ಭಾದಾ	ಧನಿಷ್ಠಾ	ಸಿಂಹ

ಇಲ್ಲಿ ಹೇಳಲ್ಪಟ್ಟ ಎರಡೆರಡು ನಕ್ಷತ್ರಗಳಲ್ಲಿ ಮೊದಲನೆಯದು ಪುರುಷನ ನಕ್ಷತ್ರವಾಗಿದ್ದರೆ ಉತ್ತಮ ಸ್ತ್ರೀ ಪುರುಷರು ಒಂದೇ ಪ್ರಾಣಿಯಾಗಿದ್ದರೂ ಉತ್ತಮ (ಗು. 4) ಬೇರೆ ಪ್ರಾಣಿಯಾಗಿದ್ದು ವೈರವಿಲ್ಲದಿದ್ದರೆ ಮಧ್ಯಮ (ಗು.2) ವೈರ ಯೋನಿ ಎಂದಿಗೂ ಆಗದು.

ವೈರಪ್ರಾಣಿಗಳು

ಗೋವು–ಹುಲಿ, ಆನೆ, ಸಿಂಹ, ಕುದುರೆ–ಎಮ್ಮೆ, ನಾಯಿ–ಜಿಂಕೆ, ಮುಂಗುಸಿ–ಹಾವು, ಕೋತಿ–ಮೇಕೆ, ಬೆಕ್ಕು–ಇಲಿ. ಇವುಗಳಿಗೆ ಗುಣ (0)

ರಾಶಿಕೂಟ

ಸ್ತ್ರೀರಾಶಿಯಿಂದ ಪುರುಷರಾಶಿಯು 2, 9, 6, ಆದರೆ ಅಶುಭವು. ಸ್ತ್ರೀಪುರುಷರ ರಾಶಿಗಳು ಒಂದೇ ಆಗಿದ್ದರೂ ಅಥವಾ ಪರಸ್ಪರ ಮೂರು ನಾಲ್ಕು ಏಳನೇ ರಾಶಿಗಳಾದರೂ ಉತ್ತಮವು. ಸ್ತ್ರೀ ಪುರುಷರ ರಾಶಿಗಳ ಅಧಿಪತಿಯು ಒಬ್ಬನೇ ಆದರೂ ಅಥವಾ ರಾಶ್ಯಧಿಪತಿಗಳಿಗೆ ಪರಸ್ಪರ ಮಿತ್ರತ್ವವಿದ್ದರೂ ಶುಭವು. ಸ್ತ್ರೀರಾಶಿಯಿಂದ ಪುರುಷರಾಶಿಯು 5ನೆಯದಾಗಿದ್ದರೂ ಶುಭವೆಂದು ಕೆಲವರ ಮತ. (ಗುಣ 7.)

ರಾಶಿಗಳು – ಅಧಿಪತಿಗಳು

1	ಸಿಂಹ	–	ಸೂರ್ಯ
2	ಕಟಕ	–	ಚಂದ್ರ
3	ಮೇಷ–ವೃಶ್ಚಿಕ	–	ಕುಜ
4	ಮಿಥುನ–ಕನ್ಯೆಗಳಿಗೆ	–	ಬುಧ
5	ಧನುರ್ಮೀನಗಳಿಗೆ	–	ಗುರು
6	ವೃಷಭ–ತುಲೆಗಳಿಗೆ	–	ಶುಕ್ರ
7	ಮಕರ–ಕುಂಭಗಳಿಗೆ	–	ಶನಿ

ವಶ್ಯಕೂಟ

ಮೇಷ	:	ಚತುಷ್ಪಾದ
ವೃಷಭ	:	ಚತುಷ್ಪಾದ
ಮಿಥುನ	:	ಮಾನವ
ಕಟಕ	:	ಜಲಚರ
ಸಿಂಹ	:	ವನಚರ
ಕನ್ಯಾ	:	ಮಾನವ
ತುಲಾ	:	ಮಾನವ
ವೃಶ್ಚಿಕ	:	ಕೀಟಕ
ಧನುಸ್ಸು	:	ಮಾನವ
ಮಕರ	:	ಜಲಚರ
ಕುಂಭ	:	ಮಾನವ
ಮೀನ	:	ಜಲಚರ

ಮಾನವರಾಶಿಗೆ ಎಲ್ಲಾ ಚತುಷ್ಪದಗಳೂ ಜಲಚರಗಳೂ ವಶ್ಯಗಳಾಗಿವೆ. ಆದರೆ ವನಚರವಾದ ಸಿಂಹ ಮಾತ್ರ ವಶ್ಯವಲ್ಲ. ಸಿಂಹಕ್ಕೆ ಎಲ್ಲ ರಾಶಿಗಳೂ ವಶಭಕ್ಷಗಳು. ಆದರೆ ವೃಶ್ಚಿಕ ಮಾತ್ರ ಸಿಂಹಕ್ಕೆ ವಶವಲ್ಲ. ಹೀಗೆ ಲೋಕರೂಢಿಯಂತೆ ವಶ್ಯಕೂಟಕ್ಕೆ ಗುಣಗಳನ್ನು ನೋಡಿಕೊಳ್ಳಬೇಕು. ವಶ್ಯಕೂಟದ ಕೋಷ್ಟಕದಲ್ಲಿ ಕಾಟ ಕೋನರೀತಿಯಿಂದ ನೋಡಿಕೊಳ್ಳಬೇಕು. ಇದಕ್ಕೆ ಎರಡು ಗುಣ.

ಗ್ರಹಮೈತ್ರಕೂಟ

ವಧೂವರರ ಜನ್ಮಗಳಿಂದ; ಈ ಗ್ರಹಮೈತ್ರಕೂಟವನ್ನು ನೋಡುವ ವಾಡಿಕೆಯುಂಟು.

ಗ್ರಹ	ಮಿತ್ರ	ಸಮ	ಶತ್ರು
ರವಿ	ಚಂ, ಕು, ಗು	ಬು	ಶನಿ, ಶುಕ್ರ
ಚಂದ್ರ	ರವಿ, ಬು	ಕು,ಗು,ಶು,ಶ	....
ಕುಜ	ಗು, ಚಂ, ರ	ಶು,ಶ	ಬುಧ
ಬುಧ	ರವಿ, ಶುಕ್ರ	ಕು,ಗು,ಶ	ಚಂದ್ರ
ಗುರು	ರ, ಚಂ, ಕು	ಶ	ಬು, ಶುಕ್ರ
ಶುಕ್ರ	ಬು, ಶ	ಶು,ಗು	ರ, ಚಂ
ಶನಿ	ಬು, ಶು	ಗು	ರ, ಚಂ, ಕು

ಸ್ತ್ರೀ ಪುರುಷರ ರಾಶ್ಯಧಿಪತಿಗಳು ಪರಸ್ಪರ ಮಿತ್ರರಾಗಿದ್ದರೆ ಉತ್ತಮ (ಗು. 5) ಒಬ್ಬನು ಮಿತ್ರ ಇನ್ನೊಬ್ಬನು ಸಮವಾಗಿದ್ದರೆ ಮಧ್ಯಮ (ಗುಣ 4) ಇಬ್ಬರೂ ಸಮರಾದರೆ (ಗು. 2) ಒಬ್ಬನು ಸಮ ಇನ್ನೊಬ್ಬನು ಶತ್ರುವಾದರೆ (ಗುಣ 1) ಅನ್ಯೋನ್ಯ ಶತ್ರುಗಳಾದರೆ ಗುಣಶೂನ್ಯ. ಏಕಾಧಿಪತ್ಯವಾದರೆ (ಗು. 6)

ವರ್ಣಕೂಟ

ಬ್ರಾಹ್ಮಣ	ಕ್ಷತ್ರಿಯ	ವೈಶ್ಯ	ಶೂದ್ರ
ಕಟಕ	ಸಿಂಹ	ವೃಷಭ	ತುಲಾ
ವೃಶ್ಚಿಕ	ಮೇಷ	ಕನ್ಯಾ	ಮಿಥುನ
ಮೀನ	ಧನುಸ್ಸು	ಮಕರ	ಕುಂಭ

ಕನ್ಯೆಯ ರಾಶಿಗಿಂತ ಪುರುಷನ ರಾಶಿಯು ಉತ್ತಮವರ್ಣವಾಗಿದ್ದರೆ ಶುಭವು. (ಗುಣ 1)

ನಾಡೀಕೂಟ

ಆದಿ	ಮಧ್ಯ	ಅಂತ್ಯ
ಅಶ್ವಿನೀ	ಭರಣೀ	ಕೃತ್ತಿಕಾ
ಆರ್ದ್ರಾ	ಮೃಗಶಿರಾ	ರೋಹಿಣೀ
ಪುನರ್ವಸು	ಪುಷ್ಯಾ	ಆಶ್ಲೇಷಾ
ಉತ್ತರಾ	ಪೂರ್ವಫಲ್ಗುನೀ	ಮಖಾ
ಹಸ್ತಾ	ಚಿತ್ರಾ	ಸ್ವಾತೀ
ಜ್ಯೇಷ್ಠಾ	ಅನೂರಾಧಾ	ವಿಶಾಖಾ
ಮೂಲಾ	ಪೂರ್ವಾಷಾಢಾ	ಉತ್ತರಾಷಾಢಾ
ಶತಭಿಷಾ	ಧನಿಷ್ಠಾ	ಶ್ರವಣಾ
ಪೂರ್ವಾಭಾದ್ರಾ	ಉತ್ತರಾಭಾದ್ರಾ	ರೇವತೀ

ದಂಪತಿಗಳ ನಕ್ಷತ್ರಗಳು ಒಂದೇ ನಾಡಿಯಲ್ಲಿರಕೂಡದು. ಒಂದೇ ನಾಡಿಯಾದರೂ ಒಂದೇ ರಾಶಿಯಾಗಿ ಬೇರೆ ನಕ್ಷತ್ರವಾಗಿದ್ದರೂ ಅಥವಾ ಒಂದೇ ನಕ್ಷತ್ರವಾಗಿ ಭಿನ್ನರಾಶಿಯಾಗಿದ್ದರೂ ನಕ್ಷತ್ರ ಒಂದೇ ಇದ್ದು ಚರಣಭೇದವಾದರೂ ನಾಡೀ ದೋಷವಿಲ್ಲ. ವಿವಾಹವು ಶುಭವು. (ಗುಣ 8)

1. ವರ್ಣಗುಣಚಕ್ರ

		ವರನ ಗುಣ			
		ವಿ.	ಕ್ಷ.	ವೈ.	ಶೂದ್ರ
ವಧುವಿನ	ವಿಪ್ರ	1	0	0	0
ವರ್ಣ	ಕ್ಷತ್ರಿಯ	1	1	0	0
ಗುಣ	ವೈಶ್ಯ	1	1	1	0
	ಶೂದ್ರ	1	1	1	1

2. ವಶ್ಯಗುಣಚಕ್ರ

ಕರ್ಕ, ಮೀನ, ಮಕರ (ಜಲಚರ), ಸಿಂಹ (ವನಚರ), ವೃಶ್ಚಿಕ (ಕಟಕ), ಮಿಥುನ, ಧನು, ಕುಂಭ, ಕನ್ಯಾ, ತುಲಾ (ಮಾನವ), ಮೇಷ, ವೃಶಭ (ಚತುಷ್ಪಾದ)

ವರ		ಚ.	ಮಾ.	ಜ.	ವ.	ಕೀ.
	ಚ.	2	1/2	1	0	2
	ಮಾ.	1/2	2	0	0	0
ವಧು	ಜ.	1	0	2	2	2
	ವ.	0	0	2	2	0
	ಕೀ.	2	0	2	0	2

3. ತಾರಾಗುಣಚಕ್ರ

ಕನ್ಯಾ	1	2	3	4	5	6	7	8	0
1	3	3	1 1/2	3	1 1/2	3	1 1/2	3	3
2	3	3	1 1/2	3	1 1/2	3	1 1/2	3	3
3	1 1/2	1 1/2	0	1 1/2	0	1 1/2	0	1 1/2	1 1/2
4	3	3	1 1/2	3	1 1/2	3	1 1/2	3	3
5	1 1/2	1 1/2	0	1 1/2	0	1 1/2	0	1 1/2	1 1/2
6	3	3	1 1/2	3	1 1/2	3	1 1/2	3	3
7	1 1/2	1 1/2	0	1 1/2	0	1 1/2	0	1 1/2	1 1/2
8	3	3	1 1/2	3	1 1/2	3	1 1/2	3	3
9	3	3	1 1/2	3	1 1/2	3	1 1/2	3	3

ಸೂಚನೆ:–ವಧೂವರರ ನಕ್ಷತ್ರಗಳು ಪರಸ್ಪರ ನಕ್ಷತ್ರಗಳಿಂದ ಪರಸ್ಪರ ನಕ್ಷತ್ರಗಳವರೆಗೆ ಎಣಿಸಿ 9 ರಿಂದ ಭಾಗಿಸಬೇಕು. 3/5/7 ಶೇಷ ಉಳಿದರೆ ತಾರಾ ಅಶುಭ, ಅನ್ಯ ಶುಭ. ಇದರಮೇಲಿಂದ ಗುಣ ನೋಡಬೇಕು.

4. ಯೋನಿಗುಣಚಕ್ರ

ವಧು ವರ

ಯೋನಿ	ಅ	ಗಜ	ಮೇಷ	ಸರ್ಪ	ಶ್ವಾ	ಮಾ	ಮೂಷ	ಗೌ	ಮ	ವ್ಯಾ	ಮೃಗ	ವಾ	ಮು	ಸಿಂ
ಅಶ್ವ	4	2	2	3	2	2	2	1	0	1	3	3	2	1
ಗಜ	2	4	3	2	2	2	2	2	3	1	2	3	2	0
ಮೇಷ	2	3	4	2	1	2	1	3	3	1	2	0	3	1
ಸರ್ಪ	3	3	2	4	2	1	1	1	1	2	2	2	0	2
ಶ್ವಾನ	2	2	1	2	4	2	1	2	2	1	0	2	1	1
ಮಾರ್ಜಾರ	2	2	2	1	2	4	0	2	2	1	0	2	1	1
ಮೂಷಕ	2	2	1	1	1	0	4	2	2	2	2	2	1	2
ಗೌ	1	2	3	1	2	2	2	4	3	0	3	2	2	1
ಮಹಿಷಿ	0	3	3	1	2	2	2	3	4	1	2	2	2	1
ವ್ಯಾಘ್ರ	1	1	1	2	1	1	2	0	1	4	1	1	2	1
ಮೃಗ	3	2	2	2	0	3	2	3	2	1	4	2	2	1
ವಾನರ	3	3	0	2	2	3	2	2	2	1	2	4	3	2
ಸಿಂಹ	1	0	1	2	1	1	2	1	1	1	1	2	2	4

5. ಗ್ರಹಮೈತ್ರೀಗುಣ ಕೋಷ್ಟಕ

ವಧು ವರರಾಶಿ

ರಾಶಿ	ಮೇ	ವೃ	ಮಿ	ಕರ್ಕ	ಸಿಂ	ಕಂ	ತು	ವೃ	ಧ	ಮ	ಕುಂ	ಮೀ
ಮೇ	5	3	1/2	4	5	1/2	3	5	5	1/2	1/2	5
ವೃ	3	5	5	1/2	0	5	5	3	1/2	5	5	1/2
ಮಿ	1/2	5	5	1	4	5	5	1/2	1/2	4	4	1/2
ಕರ್ಕ	4	1/2	1	5	5	1	1/2	4	4	1/2	1/2	4
ಸಿಂ	5	0	4	5	5	4	0	5	5	0	0	5
ತು	3	5	5	1/2	0	5	5	3	1/2	5	5	1/2
ವೃ	5	3	1/2	4	5	1/2	3	5	5	1/2	1/2	5
ಧ	5	1/2	1/2	4	5	1/2	1/2	5	5	3	3	5
ಮ	1/2	5	4	1/2	0	4	5	1/2	3	5	5	3
ಕುಂ	1/2	5	4	1/2	0	4	5	1/2	3	5	5	3
ಮೀ	5	1/2	1/2	4	5	1/2	1/2	5	5	3	3	5

ಜನ್ಮರಾಶಿ ಮೇಲಿಂದ ಒಮ್ಮೆಲೇ ಗುಣಗಳು ತಿಳಿಯುವ ಹಾಗೆ ಸುಲಭವಾದ ಕೋಷ್ಟಕ ಮಗ್ಗಲಲ್ಲಿ ಕೊಟ್ಟಿದೆ. ಗ್ರಹಶೀಲ ಚಕ್ರದಲ್ಲಿ ಎಲ್ಲ ಗ್ರಹಗಳ ಮಿತ್ರ-ಸಮ-ಶತ್ರು ಗ್ರಹ ಕೊಟ್ಟಿರುವದು.

ಪುನ ಉಫ ವಿಶಾ ಉ.ಷಾ ಇವುಗಳಲ್ಲೊಂದಾದರೆ ಶುಭ ಎಂದು ಒಂದು ವಚನವಿದೆ. ಪೂರ್ವಾಭಾದ್ರಾ ಸ್ವಾತೀ ಹಸ್ತಾ ಆಶ್ಲೇ ಶ್ರವಣಾ ಪುಷ್ಯಾ ಜ್ಯೇಷ್ಠಾ ಈ ನಕ್ಷತ್ರಗಳಲ್ಲೊಂದು ವಧೂವರರ ಏಕ ನಕ್ಷತ್ರವಾಗಿದ್ದರೂ ದೋಷವಿಲ್ಲ. ವಿವಾಹವನ್ನು ನಡೆಸಬಹುದು ಎಂದು ಒಂದು ವಚನವಿದೆ.

6. ಗಣಗುಣಾನುಚಕ್ರ

ವರ	ದೇವ	ಮನುಷ್ಯ	ರಾಕ್ಷಸ
ದೇವ	6	5	1
ಮನುಷ್ಯ	6	6	0
ರಾಕ್ಷಸ	1	0	6

7. ರಾಶಿಕೂಟಗುಣಚಕ್ರ

		ಮೇ	ವೃ	ಮಿ	ಕರ್	ಸಿ	ಕಂ	ತು	ವೃ	ಧ	ಮ	ಕುಂ	ಮೀ
	ಮೇ	7	0	7	7	0	0	7	0	0	7	7	0
	ವೃ	0	7	0	7	7	7	0	0	0	0	7	7
	ಮಿ	7	0	7	0	7	7	0	0	7	0	0	7
	ಕರ್	7	7	0	7	0	7	7	0	0	7	0	0
ಕ	ಸಿಂ	0	7	7	0	7	0	7	7	0	0	7	0
ನ್ಯಾ	ತು	7	0	0	7	7	0	7	0	7	7	0	0
	ವೃ	0	7	0	0	7	7	0	7	0	7	7	0
	ಧ	0	0	7	0	0	7	7	0	7	0	7	7
	ಮ	7	0	0	7	0	0	7	7	0	7	0	7
	ಕುಂ	7	7	0	0	7	0	0	7	7	0	7	0
	ಮೀ	0	7	7	0	0	7	0	0	7	7	0	7

ಸದಸತ್ಕೂಟೋಷ್ಟಕಾನಿ

ಅಥ ಪ್ರೀತಿಷಡಷ್ಟಕಂ

ಸಿಂ.	ತು.	ಕುಂ.	ಮಿ.	ಮೇ.	ಧ.
5	7	11	3	1	9
ಮೀ.	ವೃ.	ಕಂ.	ಮ.	ವೃ.	ಕರ್.
12	2	6	10	8	4

ಅಥ ಮೃತ್ಯುಷಡಷ್ಟಕಂ

ಮೇ.	ತು.	ಮಿ.	ಮ.	ಕುಂ.	ಧ.
1	7	3	10	11	9
ಕಂ.	ಮೀ.	ವೃ.	ಸಿಂ.	ಕರ್.	ವೃ.
6	12	8	5	4	2

ಅಥ ಶುಭದ್ವಿರ್ದ್ವಾದಶಕಂ

ಮೀ.	ಕರ್.	ಸಿಂ.	ಮ.	ತು.	ಧ.
12	4	5	10	7	9
ಮೇ.	ಸಿಂ.	ಕಂ.	ಕುಂ.	ಕಂ.	ವೃ.
1	5	6	11	6	8

ಅಥ ಅಶುಭದ್ವಿರ್ದ್ವಾದಶಕಂ

ವೃ.	ಕುಂ.	ಮೇ.	ಮಿ.	ತು.	ಧ.
2	11	1	3	7	9
ಮಿ.	ಮೀ.	ವೃ.	ಕರ್.	ವೃ.	ಮ.
3	12	2	4	8	10

ಅಥ ಶುಭನವಪಂಚಮಂ

ಮೇ.	ವೃ.	ಮಿ.	ಸಿಂ.	ತು.	ವೃ.
1	2	3	5	7	8
ಸಿಂ.	ಕಂ.	ತು.	ಧ.	ಕುಂ.	ಮೀ.
5	6	7	9	11	12

ಅಥ ನೇಷ್ಟನವಪಂಚಮಂ

ಧ.	ಮ.	ಕರ್.	ಕಂ.	ಕುಂ.	ಮೀ.
9	10	4	6	11	12
ಮೇ.	ವೃ.	ವೃ.	ಮ.	ಮಿ.	ಕರ್.
1	2	8	10	3	4

8. ನಾಡೀಗುಣಚಕ್ರ

ವರ	ಆ.	ಮ.	ಅಂ.
ಆದ್ಯ	0	8	8
ಮಧ್ಯ	8	0	8
ಅಂತ್ಯ	8	8	0

1. ನೃದೂರ ದೋಷ– ವರ ನಕ್ಷತ್ರದಿಂದ ವಧು ನಕ್ಷತ್ರ ದೂರವಿರುವದು.
2. ಸ್ತ್ರೀದೂರತ್ವ ಶುಭ– ವಧು ನಕ್ಷತ್ರದಿಂದ ವರ ನಕ್ಷತ್ರ ದೂರ.
3. ವರ ನಕ್ಷತ್ರದಿಂದ ವಧು ನಕ್ಷತ್ರ ಬೇರೆ ಇದ್ದಾಗ ಧನ ಹಾಗು ಕಲ್ಯಾಣಪ್ರದವಾಗುವದು.
4. ವಧು ರಾಕ್ಷಸ ಗಣದ ಮತ್ತು ವರ ಮನುಷ್ಯಗಣವಿದ್ದು ಜರ (ವಶ್ಯ ತಾರಾ, ಯೋನಿ, ಗ್ರಹಮೈತ್ರೀ, ಕೂಟ, ನಾಡೀ) ಇವುಗಳು ಶುಭವಿದ್ದಾಗ ವಿವಾಹ ಕಲ್ಯಾಣಪ್ರದವಾಗುತ್ತದೆ.
5. ಒಂದೇ ರಾಶಿ ಭಿನ್ನ ನಕ್ಷತ್ರ, ಒಂದೇ ನಕ್ಷತ್ರವಿದ್ದು ಚರಣ ಭಿನ್ನವಿದ್ದಾಗ 36 ಗುಣವೆಂದು ತಿಳಿಯಬೇಕು.

ವಿವರಣೆ

18 ಕ್ಕಿಂತಲೂ ಕಡಿಮೆ ಗುಣಗಳು ಆಗುತ್ತಿದ್ದಾಗ ಅಥವಾ ಇಬ್ಬರದೂ ನಕ್ಷತ್ರ ಚರಣ ಒಂದೇ ಇದ್ದಾಗ ವಿವಾಹ ಮಾಡಬಾರದು. 36 ಗುಣ ಇದ್ದಾಗ ವರ್ಣದಿಂದ ನಾಡೀಪರ್ಯಂತದ ದೋಷವನ್ನು ಒಪ್ಪಬಾರದು.

ಸ್ತ್ರೀ ಪೂರ್ವನಕ್ಷತ್ರ ವಿಚಾರ

ರೋಹಿಣೀ ಹಸ್ತಾ ವಿಶಾಖಾ ಅನೂರಾಧಾ ಮೂಲಾ ಅಶ್ವಿನೀ ಮೃಗಶಿರಾ ಶತಭಿಷಾ ಪೂರ್ವಾಷಾಢಾ ಕೃತ್ತಿಕಾ ಪುನರ್ವಸು ಇವುಗಳಲ್ಲೊಂದು ವರನ ನಕ್ಷತ್ರವಾಗಿದ್ದರೆ ವಧುವಿನ ನಕ್ಷತ್ರವು ಅದರ ಮೊದಲನೆ ನಕ್ಷತ್ರವಾಗಿದ್ದರೂ ದೋಷವಿಲ್ಲ. ವಿವಾಹವನ್ನು ಮಾಡಬಹುದು.

ಅಶ್ವಿನೀ ಕೃತ್ತಿಕಾ ಮೃಗ ಮಖಾ ಹಸ್ತಾ ಸ್ವಾತೀ ಪೂಷಾ ಶತಭಿಷಾ ಇವುಗಳಲ್ಲಿ ಕನ್ಯೆಯದು ಪೂರ್ವಪಾದವಾಗಿಯೂ, ವರನದು ಅದರ ಮುಂದಿನ ಪಾದವಾಗಿಯೂ ಇದ್ದರೂ ವಧೂವರರ ರಾಶಿಗಳು ಒಂದೇ ಆದ ಪಕ್ಷದಲ್ಲಿ ದೋಷವಿಲ್ಲ, ವಿವಾಹವನ್ನು ಮಾಡಬಹುದು.

ಭೂಮಿಯಲ್ಲಿ ಬೀಜ ಬಿತ್ತುವುದಕ್ಕೆ

ಪಂಚಮೀ ಸಪ್ತಮೀ ತ್ರಯೋದಶೀ ಈ ತಿಥಿಗಳೂ, ಸೋಮ ಬುಧ ಗುರು ಶುಕ್ರವಾರಗಳೂ, ರೋಹಿಣೀ ಪುಷ್ಯಾ ಆಶ್ಲೇ ಮಖಾ ಉತ್ತರಾ ಹಸ್ತಾ ಸ್ವಾತೀ ಅನೂರಾಧಾ ಮೂಲಾ ಉತ್ತರಾಷಾಢಾ, ಶ್ರವಣಾ, ಶತಭಿಷಾ, ಉತ್ತರಾಭಾದ್ರಾ ರೇವತೀ ಈ ನಕ್ಷತ್ರಗಳೂ ಪ್ರಶಸ್ತಗಳು. ಆಶ್ವಿನೀ ಪುನರ್ವಸು ಮೃಗಶಿರಾ ಜ್ಯೇಷ್ಠಾ ಈ ನಕ್ಷತ್ರಗಳು ಮಧ್ಯಮ.

ವಿಶೇಷ ವಿಷಯ

1) ಭಾನುವಾರ ಸಿಂಹ ಲಗ್ನದಲ್ಲಿ ಸಕಲ ಬೀಜಗಳನ್ನೂ ಬಿತ್ತಬಹುದು. 2) ಸೋಮವಾರ ಮಿಥುನ ಲಗ್ನದಲ್ಲಿ ತೊಳಕೆಯನ್ನು ಬಿತ್ತಬೇಕು. 3) ಮಂಗಳವಾರ ಮೇಷ ವೃಶ್ಚಿಕಗಳಲ್ಲಿ ಹಾರಕವನ್ನು 4) ಬುಧವಾರ ಮಿಥುನ ಲಗ್ನದಲ್ಲಿ ಅಡಿಕೆ ಸಸಿಯನ್ನೂ 5) ಗುರುವಾರ ಧನುರ್ಮೀನ ಲಗ್ನಗಳಲ್ಲಿ ಫಲವೃಕ್ಷಗಳ ತೋಪನ್ನೂ 6) ಶುಕ್ರವಾರ ವೃಷಭ ತುಲಾ ಲಗ್ನಗಳಲ್ಲಿ ಹೂವಿನ ಗಿಡಗಳನ್ನೂ 7) ಶನಿವಾರ ಮಕರ ಕುಂಭ ಲಗ್ನಗಳಲ್ಲಿ ಎಳ್ಳು, ರಾಗಿ ಮುಂತಾದ ಕರಿಯ ಧಾನ್ಯಗಳನ್ನೂ ಬಿತ್ತಬೇಕು.

ಶಿಶು ಜನನ ನಕ್ಷತ್ರ ಪಾದ ದೋಷಗಳು

ನಕ್ಷತ್ರ	1ನೇ ಪಾದ	2ನೇ ಪಾದ	3ನೇ ಪಾದ	4ನೇ ಪಾದ
ಅಶ್ವಿನಿ	ಮಗು ಮತ್ತು ತಂದೆಗೆ	ದೋಷವಿಲ್ಲ	ದೋಷವಿಲ್ಲ	ಸಾಮಾನ್ಯದೋಷ
ಭರಣಿ	ಸಾಮಾನ್ಯ ದೋಷ	ದೋಷವಿಲ್ಲ	ಗಂಡಾದರೆ-ತಂದೆಗೆ ಹೆಣ್ಣಾದರೆ-ತಾಯಿಗೆ	ಮಗುವಿಗೆ
ಕೃತ್ತಿಕ	ಒಳ್ಳೇದು	ಒಳ್ಳೇದು	ಗಂಡು-ತಂದೆಗೆ ಹೆಣ್ಣು ತಾಯಿಗೆ	ತಾಯಿಗೆ
ರೋಹಿಣಿ	ಸೋದರಮಾವ ತಾಯಿಗೆ	ಸೋದರಮಾವ ತಾಯಿಗೆ	ಸೋದರಮಾವ ತಂದೆಗೆ	ಸೋದರಮಾವ ತಾಯಿಗೆ
ಮೃಗಶಿರ	ಒಳ್ಳೇದು	ಒಳ್ಳೇದು	ಒಳ್ಳೇದು	ಒಳ್ಳೇದು
ಆರಿದ್ರ	ಒಳ್ಳೇದು	ಒಳ್ಳೇದು	ಒಳ್ಳೇದು	ತಾಯಿಗೆ ದೋಷ
ಪುನರ್ವಸು	ಒಳ್ಳೇದು	ಒಳ್ಳೇದು	ಒಳ್ಳೇದು	ಒಳ್ಳೇದು
ಪುಷ್ಯಮಿ	ಸಾಮಾನ್ಯದೋಷ	ಹಗಲು ತಂದೆಗೆ ರಾತ್ರಿ ತಾಯಿಗೆ	ಹಗಲು ತಂದೆಗೆ ರಾತ್ರಿ ತಾಯಿಗೆ	ಸಾಮಾನ್ಯ
ಆಶ್ಲೇಷ	ದೋಷವಿಲ್ಲ	ಮಗುವಿಗೂ ಧನಕ್ಕೂ	ತಾಯಿಗೆ	ತಂದೆಗೆ
ಮಖ	ಮಗುವಿಗೂ ತಂದೆಗೂ	ಗಂಡು ತಂದೆ ಹೆಣ್ಣು ತಾಯಿ	ಗಂಡು ತಂದೆ ಹೆಣ್ಣು ತಾಯಿ	ಒಳ್ಳೇದು
ಪುಬ್ಬ	ಒಳ್ಳೇದು	ಒಳ್ಳೇದು	ಒಳ್ಳೇದು	ತಾಯಿಗೆ
ಉತ್ತರ	ಗಂಡು ತಂದೆಗೆ ಹೆಣ್ಣು ತಾಯಿಗೆ	ಒಳ್ಳೇದು	ಒಳ್ಳೇದು	ಗಂಡು ತಂದೆಗೆ ಹೆಣ್ಣು ತಾಯಿಗೆ
ಹಸ್ತ	ಒಳ್ಳೇದು	ಒಳ್ಳೇದು	ಗಂಡು ತಂದೆಗೆ ಹೆಣ್ಣು ತಾಯಿಗೆ	ಒಳ್ಳೇದು

ನಕ್ಷತ್ರ	1ನೇ ಪಾದ	2ನೇ ಪಾದ	3ನೇ ಪಾದ	4ನೇ ಪಾದ
ಚಿತ್ತ	ಗಂಡು–ತಂದೆಗೆ ಹೆಣ್ಣು–ತಾಯಿಗೆ	ತಂದೆಗೆ	ತಂದೆಗೆ	ಸಾಮಾನ್ಯದೋಷ
ಸ್ವಾತಿ	ಒಳ್ಳೇದು	ಒಳ್ಳೇದು	ಒಳ್ಳೇದು	ಒಳ್ಳೇದು
ವಿಶಾಖ	ಗಂಡು–ಭಾವಮೈದ ಹೆಣ್ಣು–ನಾದಿನಿ	ಗಂಡು–ಭಾವಮೈದ ಹೆಣ್ಣು–ನಾದಿನಿ	ಗಂಡು–ಭಾವಮೈದ ಹೆಣ್ಣು–ನಾದಿನಿ	ಗಂಡು–ತಾಯಿ ಮತ್ತು ಭಾವಮೈದ ಹೆಣ್ಣು–ನಾದಿನಿ
ಅನೂರಾಧ	ಒಳ್ಳೇದು	ಒಳ್ಳೇದು	ಒಳ್ಳೇದು	ಒಳ್ಳೇದು
ಜ್ಯೇಷ್ಠ	ಸೌಖ್ಯಹಾನಿ ತಾಯಿಗೆ	ಸೋದರರಿಗೆ ಸೋದರಮಾವನಿಗೆ	ಮಗುವಿಗೆ ತಾಯಿಗೆ ಮತ್ತು ದೊಡ್ಡಪ್ಪನಿಗೆ	ಮಗು–ತಂದೆಗೆ ಮತ್ತು ಅಣ್ಣನಿಗೆ
ಮೂಲ	ತಂದೆಗೆ	ತಾಯಿಗೆ	ಧನಕ್ಕೆ	ಒಳ್ಳೇದು
ಪೂ.ಷಾಢ	ಒಳ್ಳೇದು	ಒಳ್ಳೇದು	ಗಂಡು–ತದೆಗೆ ಹೆಣ್ಣು–ತಾಯಿಗೆ	ಒಳ್ಳೇದು
ಉ.ಷಾಢ	ಒಳ್ಳೇದು	ಒಳ್ಳೇದು	ಒಳ್ಳೇದು	ಒಳ್ಳೇದು
ಶ್ರವಣ	ಒಳ್ಳೇದು	ಒಳ್ಳೇದು	ಒಳ್ಳೇದು	ಒಳ್ಳೇದು
ಧನಿಷ್ಠ	ಒಳ್ಳೇದು	ಒಳ್ಳೇದು	ಒಳ್ಳೇದು	ಒಳ್ಳೇದು
ಶತಭಿಷ	ಒಳ್ಳೇದು	ಒಳ್ಳೇದು	ಒಳ್ಳೇದು	ಒಳ್ಳೇದು
ಪೂ.ಭಾದ್ರ	ಒಳ್ಳೇದು	ಒಳ್ಳೇದು	ಒಳ್ಳೇದು	ಮಗುವಿಗೆ
ಉ.ಭಾದ್ರ	ಒಳ್ಳೇದು	ಒಳ್ಳೇದು	ಒಳ್ಳೇದು	ಒಳ್ಳೇದು

ಮೂಲಾ ನಕ್ಷತ್ರ ಜನನವಿಚಾರ

ಅಭುಕ್ತಮೂಲವಾಹ ವೃದ್ಧವಸಿಷ್ಠಃ–1) ಜ್ಯೇಷ್ಠಾಂತೇ ಘಟಿಕಾ ಚೈಕಾ ಮೂಲಾದೌ ಘಟಿಕಾ ದ್ವಯಂ । 2) ಅಭುಕ್ತಮೂಲಮಿತ್ಯಾಹುರ್ಜಾತಂ ತತ್ರ ವಿಸರ್ಜಯೇತ್ ॥

ಬೃಹಸ್ಪತಿಸ್ತು

ಜೇಷ್ಠಾಂತೇ ಘಟಿಕಾರ್ಧಂತು ಮೂಲಾದೌ ಘಟಿಕಾರ್ಧಕವ್। ತಯೋರಂತರ್ಗತಾ ನಾಡೀ ಅಭುಕ್ತಂ ಮೂಲಮುಚ್ಯತೇ ॥

ಬೃಹನ್ನಾರದಸ್ತು

1) ಅಭುಕ್ತಮೂಲಗಂಡಾಂತಂ ಘಟಿಕಾನಾಂ ಚತುಷ್ಟಯಂ ।
2) ತತ್ರೈಂದ್ರಾಂತ್ಯಂ ಘಟೀದ್ವಂದ್ವಂ ಮೂಲಾದ್ಯದ್ವಯಮೇವ ಚ ॥

1) ಅಭುಕ್ತಮೂಲಸಂಭವಂ ಪರಿತ್ಯಚೇತ್ತು ಬಾಲಕಂ ।
2) ಸಮಾಷ್ಟಕಂ ಪಿತಾಽಥವಾ ನ ತನ್ಮುಖಂ ವಿಲೋಕಯೇತ್ ॥

1) ತದಾದ್ಯಪಾದಕೇ ಪಿತಾ ವಿಪದ್ಯತೇ ಜನನ್ಯಥ ।
2) ತೃತೀಯಕೇ ಧನಕ್ಷಯಂ ಚತುರ್ಥಕಃ ಶುಭಾವಹಃ ॥

ಜಂಯಾರ್ಣವೇ

1) ಮೂಲಂ ಸ್ತಂಭತ್ತ್ವ ಚಶ್ಶಾಖಾ ಪತ್ರಂ ಪುಷ್ಪಂ ಫಲಂ ಶಿಖಾ ।
2) ವೇದಾಶ್ಚ ಮುನಯಶ್ಚೈವ ದಿಶಶ್ಚ ವಸವಸ್ತಥಾ ॥

1) ನವ ಬಾಣಾ ರಸಾ ರುದ್ರಾ ಮೂಲಭೇದಾಃ ಪ್ರಕೀರ್ತಿತಾಃ ॥
2) ಮೂಲೇ ಮೂಲ ವಿನಾಶಯ ಸ್ತಂಭೇ ಹಾನಿರ್ಧನಕ್ಷಯಃ ।

1) ತ್ವಚಿ ಭ್ರಾತೃವಿನಾಶಶ್ಚ ಶಾಖಾ ಮಾತೃವಿನಾಶಕೃತ್ ॥
2) ಪತ್ರೇ ಸಪರಿವಾರಸ್ಯ ಪುಷ್ಪೇ ಷು ನೃಪವಲ್ಲಭಃ ।

1) ಫಲೇಷು ಲಭತೇ ರಾಜ್ಯಂ ಶಿಖಾಯಾಮಲ್ಪ ಜೀವಿತಂ ॥

ತಾತ್ಪರ್ಯ

ಅಭುಕ್ತಮೂಲದಲ್ಲಿ ಜನಿಸಿದ ಶಿಶುವನ್ನು ತ್ಯಜಿಸತಕ್ಕದ್ದು. ಅಥವಾ 8 ವರ್ಷದವರೆಗೆ ತಂದೆಯು ಶಿಶುವಿನ ಮುಖವನ್ನು ನೋಡುವುದು ಒಳಿತಲ್ಲ. ಮೂಲದ ಆದಿಪಾದವಾದರೆ ತಂದೆಗೂ 2ನೇ ಪಾದವಾದರೆ ತಾಯಿಗೂ 3ನೇ ಪಾದವಾದರೆ ದ್ರವ್ಯಾದಿಗಳಿಗೂ ಅನಿಷ್ಟ. 4ನೇ ಪಾದ ಶುಭ. ಮೂಲಾನಕ್ಷತ್ರದ

ಆದ್ಯಂತ 60 ಘಟೀ ಆದರೆ ಮೊದಲಿನ 4 ಘಟೀ ಮೂಲಾನಕ್ಷತ್ರವೃಕ್ಷದ ಬೇರು. ಇದರಲ್ಲಿ ಜನಿಸಿದರೆ ಮೂಲವಿನಾಶ, ಹೀಗೆಯೇ ಮುಂದಿನ 6 ಘಟೀಸ್ತಂಭ ಧನಕ್ಷಯ, ಅಲ್ಲಿಂದ 10 ಘಟೀ ತೊಗಟೆ= ಭ್ರಾತೃಹಾನಿ. ಅನಂತರದ 8 ಘಟೀ ಕೊಂಬೆಗಳು ಮಾತೃಹಾನಿ. ಮುಂದಿನ 9 ಘಟೀ ಎಲೆಗಳು=ಪರಿವಾರದ ಜನರಿಗೆ ತೊಂದರೆ, ಆ ಮೇಲಿನ 5 ಘಟೀ ಹೂ, ರಾಜಪ್ರೀತಿ, ಅನಂತರದ 6 ಘಟೀ ಹಣ್ಣು, ರಾಜ್ಯಪ್ರಾಪ್ತಿ. ಕೊನೆಯ 11 ಘಟೀ ಶಾಖೆ ಅಲ್ಪಜೀವಿತ. ಈ ರೀತಿ ಫಲಗಳುಂಟಾಗುತ್ತವೆ. ಆದ್ಯಂತಕ್ಕೆ ಅನುಸರಿಸಿ ಘಟೀ ವಿಘಟಿಗಳನ್ನು ತ್ರೈರಾಶಿಕಾನುಸಾರ ನೋಡಿಕೊಳ್ಳತಕ್ಕದ್ದು. ಮುಖ್ಯವಾಗಿ ಮೂಲಾನಕ್ಷತ್ರ ಜನನವಾದರೆ ಶಾಂತಿಕ್ರಿಯೆ ಉತ್ತಮ.

ಇನ್ನೂ ಮೂಲಾನಕ್ಷತ್ರದ ವಾಸಸ್ಥಾನ–ವೃಷಭ ವೃಶ್ಚಿಕ ಸಿಂಹ ಕುಂಭ ಈ ನಾಲ್ಕು ತಿಂಗಳು ಸ್ವರ್ಗ. ಮಿಥುನ ತುಲಾ ಕನ್ಯಾ ಮೀನ ಈ ನಾಲ್ಕು ತಿಂಗಳು ಪಾತಾಳ. ಮೇಷ ಧನು ಕರ್ಕ ಮಕರ ಈ ನಾಲ್ಕು ತಿಂಗಳು ಮರ್ತ್ಯ. (ಭೂ) ಮರ್ತ್ಯಲೋಕದ ಮೂಲವಾಸ ದುಷ್ಫಲಪ್ರದವಾದುದು.

ಗ್ರಾಮ ಸಾಲಾವಳಿ

ಯಾವ ಗ್ರಾಮದಲ್ಲಿ ತಾನು ವಾಸಮಾಡಲು ಅಭಿಪ್ರಾಯವೋ ಆ ಗ್ರಾಮದ ನಾಮನಕ್ಷತ್ರ ಮೊದಲುಗೊಂಡು ವಾಸಮಾಡುವವರ ನಾಮನಕ್ಷತ್ರದವರೆಗೆ (ಎರಡೂ ಸೇರಿ) ಲೆಕ್ಕಿಸಲು ನರಾಕಾರವಾದ ಗ್ರಾಮಚಕ್ರವು ಈ ಕೆಳಗೆ ತಿಳಿಸಿರುವ ರೀತಿ ಫಲಪ್ರದವಾಗಿರುತ್ತದೆ. ಮೊದಲಿನ 5 ನಕ್ಷತ್ರ ಶಿರಸ್ಸಿನಲ್ಲಿ ಇದ್ದು ಅರ್ಥಲಾಭವನ್ನೂ ಅನಂತರ 3 ನಕ್ಷತ್ರಗಳು ಮುಖದಲ್ಲಿದ್ದು ದ್ರವ್ಯಹಾನಿಯನ್ನೂ, ಅನಂತರ 5 ನಕ್ಷತ್ರಗಳು ಹೃದಯದಲ್ಲಿದ್ದು ಧನಧಾನ್ಯಾಭಿವೃದ್ಧಿಯನ್ನೂ ಆ ಮೇಲಿನ 6 ನಕ್ಷತ್ರಗಳು ಎರಡು ಕಾಲುಗಳಲ್ಲಿದ್ದು ದಾರಿದ್ರ್ಯವನ್ನೂ, ಮುಂದಿನ 1 ನಕ್ಷತ್ರವು ಬೆನ್ನಿನಲ್ಲಿದ್ದು ಪ್ರಾಣ ಸಂದೇಹವನ್ನೂ ಮುಂದಿನ 4 ನಕ್ಷತ್ರಗಳು ಹೊಕ್ಕಳಿನಲ್ಲಿದ್ದು ಸಂಪದಭಿವೃದ್ಧಿಯನ್ನೂ ಅಲ್ಲಿಂದ ಮುಂದಿನ 2 ನಕ್ಷತ್ರಗಳು ಗುಹ್ಯಸ್ಥಳದಲ್ಲಿದ್ದು ಕಲಹವನ್ನೂ ಆ ಮೇಲಿನ 2 ನಕ್ಷತ್ರಗಳು ಬಲ ಮತ್ತು ಎಡಗೈಗಳಲ್ಲಿದ್ದು ಒಂದು ಒಳ್ಳೆಯ ಫಲವನ್ನೂ ಮತ್ತೊಂದು ಕೆಟ್ಟಫಲವನ್ನೂ ಉಂಟುಮಾಡುವುದಾಗಿರುತ್ತದೆ. ಲೆಕ್ಕಮಾಡುವಾಗ "ಅಭಿಜಿತ್" ನಕ್ಷತ್ರವನ್ನೂ ಸೇರಿಸಿಕೊಳ್ಳತಕ್ಕದ್ದು.

ಜನ್ಮಸ್ಥಳಕ್ಕೂ ಪಿತೃಪಿತಾಮಹಾದಿಗಳು ವಾಸಿಸುತ್ತಿದ್ದ ಸ್ಥಳಕ್ಕೂ ಗ್ರಾಮ ಸಾಲಾವಳಿ ನೋಡಬೇಕಾದ ಅಗತ್ಯವಿರುವುದಿಲ್ಲ.

ಸ್ತ್ರೀ ಜನ್ಮನಕ್ಷತ್ರ ದೋಷ ವಿಚಾರ

ಮೂಲಾನಕ್ಷತ್ರದಲ್ಲಿ ಹುಟ್ಟಿದ ಸ್ತ್ರೀಯು ಮಾವನಿಗೂ, ಆಶ್ಲೇಷಾ ನಕ್ಷತ್ರದವಳು ಅತ್ತೆಗೂ ದೋಷ ಎಂದು ಸಾಮಾನ್ಯವಾಗಿ ಹೇಳಿದೆ. ಆದರೂ ಮೂಲಾನಕ್ಷತ್ರ 1,2,3 ಪಾದಗಳಲ್ಲಿ ಹುಟ್ಟಿದರೆ ಮಾವನಿಗೂ, ಆಶ್ಲೇಷಾ 2.3.4 ಪಾದದಲ್ಲಿ ಹುಟ್ಟಿದರೆ ಅತ್ತೆಗೂ, ವಿಶಾಖಾನಕ್ಷತ್ರ 4ನೇ ಪಾದದಲ್ಲಿ ಹುಟ್ಟಿದವಳು ಮೈದುನನಿಗೂ,

ಜ್ಯೇಷ್ಠಾನಕ್ಷತ್ರ 4ನೇ ಪಾದದವಳು ಗಂಡನ ಅಣ್ಣನಿಗೂ, ದುಷ್ಫಲಪ್ರದಳಾಗುತ್ತಾಳೆ. ಮೇಲೆ ಹೇಳಿದ ನಕ್ಷತ್ರದೋಷವು ಸ್ತ್ರೀಯರಿಗೇ ಹೊರತು ಪುರುಷರಿಗೆ ಅಲ್ಲ. ಜನ್ಮಜಾತಕದಲ್ಲಿ ಶುಭಗ್ರಹಯೋಗವಿದ್ದರೆ ಈ ದೋಷಗಳಿಗೆ ಪ್ರಾಬಲ್ಯವಿರುವುದಿಲ್ಲ. ಮೇಲೆ ಹೇಳಿದ ನಕ್ಷತ್ರಗಳಿಂದ ಯಾವ ಭಾವಕ್ಕೆ ದೋಷವು ಉಕ್ತವಾಗಿದೆಯೋ ಆ ಭಾವಗಳ ಅಧಿಪತಿಗಳು 9ನೇ ಮನೆಯಲ್ಲಾಗಲೀ ಅಥವಾ ಶುಭಸ್ಥಾನದಲ್ಲಾಗಲೀ ಇದ್ದರೆ, ಶುಭಗ್ರಹಗಳಿಂದ ನೋಡಲ್ಪಟ್ಟಿದ್ದರೆ, ಬಲಶಾಲಿಗಳಾಗಿದ್ದರೆ, ಆ ಭಾವವಾಗಲೀ, ಚಂದ್ರನಾಗಲೀ ಭಾವಾಧಿಪನಾಗಲಿ ಬಲಿಷ್ಠನಾಗಿದ್ದರೆ, ಆ ಭಾವಗಳಿಗೆ ಹೇಳಿರುವ ಎಲ್ಲಾ ದೋಷಗಳೂ ನಾಶವಾಗುವವು ಎಂದೂ ಹೇಳಿದೆ.

ಪಾಲುಗಾರಿಕೆ ಮತ್ತು ಸ್ವಾಮಿ-ಸೇವಕ ಸಾಲಾವಳಿ

ಅ ಅಕ್ಷರದಿಂದ ಔ ಅಕ್ಷರದವರೆಗೆ ಅವರ್ಗವೆನಿಸುತ್ತದೆ. ಕ, ಖ, ಗ, ಘ, ಙ = ಕವರ್ಗ. ಚ, ಛ, ಜ, ಝ, ಞ = ಚವರ್ಗ. ಟ, ಠ, ಡ, ಢ, ಣ=ಟವರ್ಗ. ತ, ಥ, ದ, ಧ, ನ = ತವರ್ಗ. ಪ, ಫ, ಬ, ಭ, ಮ=ಪವರ್ಗ.

ಈ ಅಕ್ಷರಗಳು ಸಾಧ್ಯಸಾಧಕರಿಗೆ ವೈರಿವರ್ಗವಾಗಿರಬಾರದು. ತನ್ನ ವರ್ಗದಿಂದ ಕ್ರಮವಾಗಿ ಐದನೇ ವರ್ಗ ಶತ್ರುರಾಶಿ.

ಜಿಂಕೆ ಶ	ಗರುಡ ಅ	ಬೆಕ್ಕು ಕ
ಆನೆ ಯ		ಸಿಂಹ ಚ
ಇಲಿ ಪ	ಹಾವು ತ	ನಾಯಿ ಟ

ಉದಾ: ವಿಶ್ವನಾಥ ಈ ಹೆಸರು "ಯ" ವರ್ಗ. ಚಂದ್ರಶೇಖರ ಇದು "ಚ" ವರ್ಗ. ಇವುಗಳಿಗೆ ಆನೆ, ಸಿಂಹ ವರ್ಗವಾಗಿರುವುದರಿಂದ ಸಾಲಾವಳಿ ಇಲ್ಲ.

ಯಾತ್ರಾಪ್ರಕರಣ

ಮಂಗಳವಾರ ಪೂರ್ವ ದಿಕ್ಕಿಗೂ, ಸೋಮ ಶನಿವಾರಗಳಲ್ಲಿ ದಕ್ಷಿಣ ದಿಕ್ಕಿಗೂ ಬುಧ ಗುರುವಾರಗಳಲ್ಲಿ ಪಶ್ಚಿಮ ದಿಕ್ಕಿಗೂ ಪ್ರಯಾಣವು ಶುಭಕರವಾಗುತ್ತದೆ.

ಸೋಮ, ಬುಧ, ಗುರು, ಶುಕ್ರವಾರಗಳಿಗೂ, ದ್ವಿತೀಯಾ, ತೃತೀಯಾ, ಪಂಚಮೀ, ಸಪ್ತಮೀ, ದಶಮೀ, ದ್ವಾದಶೀ, ತ್ರಯೋದಶೀ, ತಿಥಿಗಳೂ, ಅಶ್ವಿನೀ, ಮೃಗಶಿರಾ, ಪುನರ್ವಸು, ಪುಷ್ಯಾ, ಹಸ್ತಾ, ಅನೂರಾಧಾ, ಮೂಲಾ, ಶ್ರವಣಾ,ಧನಿಷ್ಠಾ, ರೇವತೀ, ಈ ನಕ್ಷತ್ರಗಳೂ, ವೃಷಭ, ಮಿಥುನ, ಕಟಕ, ಸಿಂಹ, ತುಲಾ, ಧನುಸ್ಸು, ಮಕರ, ಮೀನಲಗ್ನಗಳೂ ಶುಭಕರಗಳು. ಪ್ರಯಾಣದಲ್ಲಿ ಮುಖ್ಯವಾಗಿ ಪಂಚಕ ಯೋಗಿನೀ ವಾರಶೂಲೆ ಇವುಗಳನ್ನು ಗಮನಿಸಬೇಕು.

ಯೋಗಿನೀ ದಿಕ್ಶೂಲೆಗಳಿರುವ ದಿಕ್ಕಿಗೆ ಪ್ರಯಾಣ ಮಾಡಕೂಡದು. ಸೋಮ ಶನಿವಾರಗಳಲ್ಲಿ 8 ಘಳಿಗೆಗಳ ಮೇಲೂ ಮಂಗಳ ಬುಧವಾರಗಳಲ್ಲಿ 12 ಘಳಿಗೆಗಳ ಮೇಲೂ ಭಾನು ಶುಕ್ರವಾರಗಳಲ್ಲಿ 15 ಘಳಿಗೆಗಳ ಮೇಲೂ ಗುರುವಾರ 22 ಘಳಿಗೆಗಳ ಮೇಲೂ ವಾರಶೂಲೆಯ ದೋಷವಿಲ್ಲ.

ನವಮೀ ದಿವಸ ಪ್ರಯಾಣ ಹೊರಡುವುದೂ, ಹೊರಟ ಒಂಭತ್ತನೇ ದಿವಸ ಒಂದು ಸ್ಥಳಕ್ಕೆ ಹೋಗಿ ಸೇರುವುದೂ, ಸೇರಿದ ಒಂಭತ್ತನೇ ದಿನ ಪುನಃ ಪ್ರಯಾಣ ಹೊರಡುವುದೂ, ಊರಿನಿಂದ ಹೊರಟ ಒಂಭತ್ತನೆದಿನ ಪುನಃ ಬಂದು ಸೇರುವುದೂ ಕೂಡದು.

ಪ್ರಯಾಣಕ್ಕೆ ಸನ್ಮುಖ ಚಂದ್ರವಿಚಾರ

ಚಂದ್ರನು ಮೇಷ ಸಿಂಹ ಧನೂರಾಶಿಗಳಲ್ಲಿರುವಾಗ ಪೂರ್ವದಿಕ್ಕಿನಲ್ಲೂ, ವೃಷಭ ಕನ್ಯಾ ಮಕರಗಳಲ್ಲಿರುವಾಗ ದಕ್ಷಿಣ ದಿಕ್ಕಿನಲ್ಲೂ, ಮಿಥುನ ತುಲಾ ಕುಂಭರಾಶಿಗಳಲ್ಲಿರುವಾಗ ಪಶ್ಚಿಮದಿಕ್ಕಿನಲ್ಲೂ, ಕಟಕ ವೃಶ್ಚಿಕ ಮೀನರಾಶಿಗಳಗಳಲ್ಲಿರುವಾಗ ಉತ್ತರ ದಿಕ್ಕಿನಲ್ಲೂ ಇರುತ್ತಾನೆಂದು ತಿಳಿಯಬೇಕು.

ಪ್ರಯಾಣ ಮಾಡತಕ್ಕವರಿಗೆ ಚಂದ್ರನು ಎದುರಿಗೆ ಇದ್ದರೆ ಧನಲಾಭ ಮತ್ತು ಸೌಖ್ಯ, ಬಲಭಾಗದಲಿದ್ದರೆ ಧನಲಾಭ, ಎಡ ಭಾಗದಲ್ಲಿದ್ದರೆ ಧನನಾಶ, ಹಿಂಭಾಗದಲ್ಲಿದ್ದರೆ ಸದಾ ದುಃಖ ಈ ರೀತಿ ಫಲವನ್ನು ತಿಳಿಯಬೇಕು.

ಶಾಂತಿ

ಪೂರ್ವದಿಕ್ಕಿಗೆ ಪ್ರಯಾಣ ಹೊರಡುವಾಗ ಮೊಸರನ್ನೂ, ದಕ್ಷಿಣದಿಕ್ಕಿಗೆ ಹೊರಡುವಾಗ ಎಣ್ಣೆಯನ್ನೂ, ಪಶ್ಚಿಮದಿಕ್ಕಿಗೆ ಹೊರಡುವಾಗ ಬೆಲ್ಲವನ್ನೂ, ಉತ್ತರ ದಿಕ್ಕಿಗೆ ಹೊರಡುವಾಗ ಹಾಲನ್ನೂ ಸ್ವೀಕರಿಸಿ ಹೊರಟರೆ ವಾರಶೂಲೆಯ ದೋಷವಿಲ್ಲ.

ಯೋಗಿನಿ

ದಿಕ್ಕು	ಶುಕ್ಲತಿಥಿ	ಕೃಷ್ಣತಿಥಿ
ಪೂರ್ವ	ಪ್ರತಿ–ಏಕಾದಶೀ	ಷಷ್ಠೀ
ಆಗ್ನೇಯ	ತೃತೀ–ತ್ರಯೋ	ಅಷ್ಟಮೀ
ದಕ್ಷಿಣ	ಪಂಚ–ಪೂರ್ಣಿ	ದಶಮೀ
ನೈಋತ್ಯ	ಚೌತಿ – ಚತುರ್ದ	ನವಮೀ
ಪಶ್ಚಿಮ	ಷಷ್ಠೀ	ಪ್ರತಿ–ಏಕಾ
ವಾಯುವ್ಯ	ಸಪ್ತಮೀ	ದ್ವಿತೀ–ದ್ವಾದ
ಉತ್ತರ	ದ್ವಿತೀ–ದ್ವಾದಶೀ	ಸಪ್ತಮೀ
ಈಶಾನ್ಯ	ಅಷ್ಟಮೀ	ತೃತೀ–ತ್ರಯೋ
ಆಕಾಶ	ನವಮೀ	ಚೌ–ಚತುರ್ದ
ಭೂಮಿ	ದಶಮೀ	ಪಂಚ–ಅಮಾ

ದಿಕ್ಶೂಲೆ

ದಿಕ್ಕು		ವಾರ
ಪೂರ್ವ	ಪ್ರ–ನವಮೀ	ಸೋಮ–ಶನಿ
ಆಗ್ನೇಯ	ತೃ–ಚತುರ್ಥೀ	ಗುರು–ಶನಿ
ದಕ್ಷಿಣ	ಪಂ–ತ್ರಯೋದಶೀ	ಗುರುವಾರ
ನೈಋತ್ಯ	ಚೌ–ದ್ವಾದಶೀ	ಸೋಮ–ಶುಕ್ರ
ಪಶ್ಚಿಮ	ಷ. ಚತುರ್ಥೀ	ಆದಿ–ಮಂಗಳ
ಉತ್ತರ	ದ್ವಿ. ದಶಮೀ	ಮಂಗಳ–ಬುಧ
ಈಶಾನ್ಯ	ಅಷ್ಟ–ಅಮಾವಾಸ್ಯೆ	ಬುಧವಾರ

ಉಡುದಶಾಭುಕ್ತಿ ವಿಚಾರ

ಕೃತ್ತಿಕಾ–	ಉತ್ತರಾ–	ಉ.ಷಾ.–	ರವಿದಶೆ–	6
ರೋಹಿಣೀ–	ಹಸ್ತಾ–	ಶ್ರವಣಾ–	ಚಂದ್ರ–	10
ಮೃಗಶಿರಾ–	ಚಿತ್ತಾ–	ಧನಿಷ್ಠಾ–	ಕುಜ–	7
ಆರ್ದ್ರಾ–	ಸ್ವಾತೀ–	ಶತಭಿಷಾ–	ರಾಹು–	18
ಪುನ–	ವಿಶಾಖಾ–	ಪೂ.ಭಾ.–	ಗುರು–	16
ಪುಷ್ಯಾ–	ಅನೂರಾಧಾ–	ಉ.ಭಾ.–	ಶನಿ–	19
ಆಶ್ಲೇಷಾ–	ಜ್ಯೇಷ್ಠಾ–	ರೇವತೀ–	ಬುಧ–	17
ಮಖಾ–	ಮೂಲಾ–	ಅಶ್ವಿನೀ–	ಕೇತು–	7
ಪೂ.ಫ.–	ಪೂ.ಷಾ.–	ಭರಣೀ–	ಶುಕ್ರ–	20
			ಮೊತ್ತ–	120

ಶುಕ್ರದಶೆಯಾದನಂತರ ರವಿದಶೆಯೂ ಅನಂತರ ಚಂದ್ರದಶೆ ಮೊದಲಾದುವೂ ನಡೆಯುತ್ತವೆ.

ಭುಕ್ತಿವಿಚಾರ

ಪ್ರತಿಯೊಂದು ಗ್ರಹದ ದಶೆಯಲ್ಲೂ ಅದೇ ಗ್ರಹದ ಭುಕ್ತಿಯು ಪ್ರಾರಂಭವಾಗಿ ಕ್ರಮವಾಗಿ ಒಂಭತ್ತು ಗ್ರಹಗಳೂ ಮುಗಿದ ಮೇಲೆ ಮುಂದಿನ ಗ್ರಹದ ದಶೆಯೂ ಅದರ ಭುಕ್ತಿಗಳೂ ಕ್ರಮವಾಗಿ ನಡೆಯುತ್ತವೆ.

ಜನ್ಮನಕ್ಷತ್ರದಲ್ಲಿ ಜನನ ಕಾಲಕ್ಕೆ ಎಷ್ಟು ಘಳಿಗೆಗಳು ಕಳೆದು ಎಷ್ಟು ಘಳಿಗೆಗಳು ಬಾಕಿ ಇದೆ ಎಂಬುದನ್ನು ತಿಳಿದುಕೊಂಡು ಜನ್ಮಕಾಲದ ಗ್ರಹದಶೆಯಲ್ಲಿ ಯಾವ ಭುಕ್ತಿಯು ನಡೆಯುತ್ತಿದೆ ಎಂಬುದನ್ನು ತ್ರೈರಾಶಿಕ ರೀತ್ಯಾ ಗುಣಿಸಿ ತಿಳಿದುಕೊಳ್ಳಬೇಕು.

ಭುಕ್ತಿ ಕೋಷ್ಟಕ

ರವಿದಶೆ 6 ವರ್ಷ				ಚಂದ್ರದಶೆ 10 ವರ್ಷ			
ಭುಕ್ತಿ	ವರ್ಷ	ತಿ.	ದಿ.	ಭುಕ್ತಿ	ವರ್ಷ	ತಿ.	ದಿ.
ರ	0	3	18	ಚಂ	0	10	00
ಚಂ	0	6	00	ಕು	0	7	00
ಕು	0	4	6	ರಾ	1	6	00
ರಾ	0	10	24	ಗು	1	4	00
ಗು	0	9	18	ಶ	1	7	00
ಶ	0	11	12	ಬು	1	5	00
ಬು	0	10	6	ಕೇ	0	7	00
ಕೇ	0	4	6	ಶು	1	8	00
ಶು	1	00	00	ರ	0	6	00

ಕುಜದಶೆ 7 ವರ್ಷ				ರಾಹುದಶೆ 18 ವರ್ಷ			
ಭುಕ್ತಿ	ವರ್ಷ	ತಿ.	ದಿ.	ಭುಕ್ತಿ	ವರ್ಷ	ತಿ.	ದಿ.
ಕುಜ	0	4	27	ರಾ	2	8	12
ರಾ	1	00	18	ಗು	2	4	24
ಗು	0	11	6	ಶ	2	10	6
ಶ	1	1	9	ಬು	2	6	18
ಬು	0	11	27	ಕೇ	1	00	18
ಕೇ	0	4	27	ಶು	3	00	00
ಶು	1	2	00	ರ	0	10	24
ರ	0	4	6	ಚಂ	1	6	00
ಚಂ	0	7	00	ಕು	1	00	18

ಗುರುದಶೆ 16 ವರ್ಷ				ಶನಿದಶೆ 19 ವರ್ಷ			
ಭುಕ್ತಿ	ವರ್ಷ	ತಿ.	ದಿ.	ಭುಕ್ತಿ	ವರ್ಷ	ತಿ.	ದಿ.
ಗು	2	1	18	ಶ	3	00	3
ಶ	2	6	12	ಬು	2	8	9
ಬು	2	3	6	ಕೇ	1	1	9
ಕೇ	0	11	6	ಶು	3	2	00
ಶು	2	8	00	ರ	0	11	12
ರ	0	9	18	ಚಂ	1	7	00
ಚಂ	1	4	00	ಕು	1	1	9
ಕು	0	11	6	ರಾ	2	10	6
ರಾ	2	4	24	ಗು	2	6	12

ಬುಧದಶೆ 17 ವರ್ಷ				ಕೇತುದಶೆ 7 ವರ್ಷ			
ಭುಕ್ತಿ	ವರ್ಷ	ತಿ.	ದಿ.	ಭುಕ್ತಿ	ವರ್ಷ	ತಿ.	ದಿ
ಬು	2	4	27	ಕೇ	0	4	27
ಕೇ	0	11	27	ಶು	1	2	00
ಶು	2	10	00	ರ	0	4	6
ರ	0	10	6	ಚಂ	0	7	00
ಚಂ	1	5	00	ಕು	0	4	27
ಕು	0	11	27	ರಾ	1	00	18
ರಾ	2	6	18	ಗು	0	11	6
ಗು	2	3	6	ಶ	1	1	9
ಶ	2	8	9	ಬು	0	11	27

ಶುಕ್ರದಶೆ 20 ವರ್ಷ

ಭುಕ್ತಿ	ವರ್ಷ	ತಿ.	ದಿ.
ಶು	3	4	00
ರ	1	00	00
ಚಂ	1	8	00
ಕು	1	2	00

ಭುಕ್ತಿ	ವರ್ಷ	ತಿ.	ದಿ.
ರಾ	3	00	00
ಗು	2	8	00
ಶ	3	2	00
ಬು	2	10	00
ಕೇ	1	2	00

ಹೆಸರಿನ ಮೊದಲನೇ ಅಕ್ಷರದಿಂದ ನಕ್ಷತ್ರವನ್ನೂ ಪಾದವನ್ನೂ ತಿಳಿಯುವ ಕ್ರಮ

ನಕ್ಷತ್ರ	1 ಪಾದ	2 ಪಾದ	3 ಪಾದ	4 ಪಾದ
ಅಶ್ವಿನೀ	ಚು	ಚೆ	ಚೊ	ಲ
ಭರಣೀ	ಲಿ	ಲು	ಲೆ	ಲೊ
ಕೃತ್ತಿಕಾ	ಅ	ಇ	ಉ	ಎ
ರೋಹಿಣೀ	ಒ	ವ	ವಿ	ವು
ಮೃಗಶಿರಾ	ವೆ	ವೊ	ಕ	ಕಿ
ಆರ್ದ್ರಾ	ಕು	ಘ	ಙ	ಛ
ಪುನರ್ವಸು	ಕೆ	ಕೊ	ಹ	ಹಿ
ಪುಷ್ಯಾ	ಹು	ಹೆ	ಹೊ	ಡ
ಆಶ್ಲೇಷಾ	ಡಿ	ಡು	ಡೆ	ಡೊ
ಮಘಾ	ಮ	ಮಿ	ಮು	ಮೆ
ಪೂ.ಫಲ್ಗುನೀ	ಮೊ	ಟ	ಟಿ	ಟು
ಉತ್ತರಾ	ಟೆ	ಟೊ	ಪ	ಪಿ
ಹಸ್ತಾ	ಪು	ಷ	ಣ	ಠ
ಚಿತ್ರಾ	ಪೆ	ಪೊ	ರ	ರಿ
ಸ್ವಾತೀ	ರು	ರೆ	ರೊ	ತ
ವಿಶಾಖಾ	ತಿ	ತು	ತೆ	ತೊ
ಅನೂರಾಧಾ	ನ	ನಿ	ನು	ನೆ
ಜ್ಯೇಷ್ಠಾ	ನೊ	ಯ	ಯಿ	ಯು
ಮೂಲಾ	ಯೆ	ಯೊ	ಭ	ಭಿ
ಪೂ.ಷಾ.	ಭು	ಧ	ಫ	ಢ
ಉ.ಷಾ.	ಭೆ	ಭೊ	ಜ	ಜಿ
ಅಭಿಜಿತ್	ಜು	ಜೆ	ಜೊ	ಖ
ಶ್ರವಣಾ	ಖಿ	ಖು	ಖೆ	ಖೊ
ಧನಿಷ್ಠಾ	ಗ	ಗಿ	ಗು	ಗೆ
ಶತಭಿಷಾ	ಗೊ	ಸ	ಸಿ	ಸು
ಪೂ.ಭಾ.	ಸೆ	ಸೊ	ದ	ದಿ
ಉ.ಭಾ.	ದು	ಝು	ಞ	ಥ
ರೇವತೀ	ದೆ	ದೊ	ಚ	ಚಿ

ಉದಾ–ಕೃಷ್ಣಮೃಗ	3ನೇ ಪಾ.	ಹೃಷ್ಣ– ಪುನ	3ನೇ ಪಾದ
ಶ್ರೀಧರ–ಶತ	3ನೇ "	ಕ್ಷೇತ್ರಪಾಲ–ಹಸ್ತ	2ನೇ "
ಜ್ಞಾನಿ–ಉ.ಭಾ.	3ನೇ "	ದ್ರೌಪದಿ–ರೇ	2ನೇ "
ಭೈರವ–ಉ.ಷಾ	1ನೇ "	ಚೌಡೇಶ್ವರಿ–ಅಶ್ವಿ	3ನೇ "
ಪ್ರದ್ಯುಮ್ನ–ಉತ್ತ	3ನೇ "	ಗೌರಿ–ಶತಭಿಷೆ	1ನೇ "

ಸಂಯುಕ್ತಾಕ್ಷರದಲ್ಲಿಪ್ರಥಮೋಚ್ಚರಿತವರ್ಣವೇ ಗ್ರಾಹ್ಯ

ಸಂಯುಕ್ತನಾಮಗಳಲ್ಲಿ ಕೊನೆಯನಾಮದ ಆದ್ಯಕ್ಷರಗ್ರಾಹ್ಯ ಉದಾ–ವೆಂಕಟರಾಘು ಇಲ್ಲಿ ವೆಂಕಟ ನಾಮ ಬಿಟ್ಟು ರಾಘು ಎಂಬ ನಾಮದ ಆದ್ಯಕ್ಷರವಾದ ರಾ ಅಕ್ಷರಕ್ಕೆ ಚಿತ್ರಾ 3ನೇ ಪಾದವೆಂದು ತಿಳಿಯಬೇಕು. ಇದರಂತೆ ರಾಮಕೃಷ್ಣ ಭೀಮಾಶಂಕರ ಮುಂತಾದವುಗಳಲ್ಲಿ ಗಮನಿಸಬೇಕು.

ನಕ್ಷತ್ರಗಳಿಗೆ ರಾಶಿಗಳು

ಅಶ್ವಿನೀ 4	ಭರಣೀ 4	ಕೃತ್ತಿಕಾ 1	–	ಮೇಷ
ಕೃತ್ತಿಕಾ 3	ರೋಹಿಣಿ 4	ಮೃಗಶಿರಾ 2	–	ವೃಷಭ
ಮೃಗಶಿರಾ 2	ಆರ್ದ್ರಾ 4	ಪುನರ್ವಸು 3	–	ಮಿಥುನ
ಪುನರ್ವಸು 1	ಪುಷ್ಯಾ 4	ಆಶ್ಲೇಷಾ 4	–	ಕರ್ಕ
ಮಘಾ 4	ಪೂ.ಫ 4	ಉತ್ತರಾ 1	–	ಸಿಂಹ
ಉತ್ತರಾ 3	ಹಸ್ತಾ 4	ಚಿತ್ತಾ 2	–	ಕನ್ಯಾ
ಚಿತ್ತಾ 2	ಸ್ವಾತೀ 4	ವಿಶಾಖಾ 3	–	ತುಲಾ
ವಿಶಾಖಾ 1	ಅನೂರಾಧಾ 4	ಜ್ಯೇಷ್ಠಾ 4	–	ವೃಶ್ಚಿಕ
ಮೂಲಾ 4	ಪೂ.ಷಾ. 4	ಉ.ಷಾ 1	–	ಧನು
ಉ.ಷಾ 3	ಶ್ರವಣಾ 4	ಧನಿಷ್ಠಾ 2	–	ಮಕರ
ಧನಿಷ್ಠಾ 2	ಶತಭಿಷಾ 4	ಪೂ.ಭಾ 3	–	ಕುಂಭ
ಪೂ.ಭಾ 1	ಉ.ಭಾ 4	ರೇವತೀ 4	–	ಮೀನ

ಗೋಚಾರಫಲ

ಸ್ಥಾನ	ರವಿ	ಚಂದ್ರ	ಕು ಶ ರಾ ಕೇ
ಜನ್ಮರಾಶಿ	ವ್ಯಾಧಿ	ದೇಹಸೌಖ್ಯ	ಬುದ್ಧಿಕ್ಲೇಶ
2	ವ್ಯಾಕುಲ	ಧನಹಾನಿ	ವ್ಯಾಧಿ ಶತ್ರುಭಯ
3	ಶುಭ	ದ್ರವ್ಯಲಾಭ	ದ್ರವ್ಯಲಾಭ
4	ಶತ್ರುಭಯ	ರೋಗಭಯ	ವಿರೋಧ
5	ರೋಗ	ಕಾರ್ಯವಿಕಲ್ಪ	ಕಷ್ಟಪ್ರಾಪ್ತಿ
6	ದ್ರವ್ಯಲಾಭ	ಸಂತೋಷ	ಲಕ್ಷ್ಮೀಕರ
7	ಸ್ಥಾನಲಾಭ	ಸೌಖ್ಯವೃದ್ಧಿ	ಭಯ ಕಲಹ
8	ಶರೀರಪೀಡೆ	ರೋಗವೃದ್ಧಿ	ಮೃತ್ಯುಭಯ
9	ಭಯ	ಕಾರ್ಯತಾಮಸ	ಕಾರ್ಯನಷ್ಟ
10	ಧನಲಾಭ	ಸ್ಥಾನಸೌಖ್ಯ	ಭಯ, ದ್ರವ್ಯನಷ್ಟ
11	ಶುಭವೃದಿ	ಇಷ್ಟಾರ್ಥ ಸಿದ್ಧಿ	ದ್ರವ್ಯಲಾಭ
12	ಧನವ್ಯಯ	ಧನವ್ಯಯ	ಶತ್ರುಭಯ
ಸ್ಥಾನ	ಬುಧ	ಗುರು	ಶುಕ್ರ
ಜನ್ಮರಾಶಿ	ಪ್ರಯಾಣ	ಮನೋವ್ಯಥೆ	ಸೌಖ್ಯ
2	ಶುಭ	ದ್ರವ್ಯಲಾಭ	ಲಕ್ಷ್ಮೀಕರ
3	ಬುದ್ಧಿಕ್ಲೇಶ	ವ್ಯಾಧಿ	ಸೌಖ್ಯವೃದ್ಧಿ
4	ಜ್ಞಾನವೃದ್ಧಿ	ಸ್ನೇಹನಾಶ	ಬಂಧುಸೌಖ್ಯ
5	ಅಪಕೀರ್ತಿ	ದ್ರವ್ಯಲಾಭ	ದ್ರವ್ಯಲಾಭ
6	ದ್ರವ್ಯಲಾಭ	ರೋಗಭಯ	ಸ್ಥಾನನಾಶ
7	ಶೋಕ	ಸ್ತ್ರೀಸೌಖ್ಯ	ವ್ಯಾಧಿ
8	ಅನುಕೂಲ	ವ್ಯಾಕುಲ	ಪ್ರಿಯವಾರ್ತೆ
9	ನಷ್ಟ	ಸಂಪತ್ತು	ದ್ರವ್ಯಲಾಭ
10	ಲಕ್ಷ್ಮೀಕರತ್ವ	ಸ್ಥಾನನಾಶ	ಧನನಾಶ
11	ಸಂತೋಷ	ಧನಲಾಭ	ಸುಖಭೋಜನ
12	ನಷ್ಟ	ದ್ರವ್ಯಲಾಭ	ಶುಭಲಾಭ

ಗ್ರಹ	ವಿಶೇಷಫಲ	ಸಾಧಾರಣಫಲ
ರವಿ	ಮೊದಲ 5 ದಿನಗಳು	1. ತಿಂಗಳು
ಚಂದ್ರ	ಕೊನೆಯ 3 ಘಳಿಗೆ	$2^{1}/_{4}$ ದಿನಗಳು
ಕುಜ	ಮೊದಲ 8 ದಿನ	45 ದಿನಗಳು
ಬುಧ	ಸರ್ವದಾ ಫಲ	1 ತಿಂಗಳು
ಗುರು	ಮಧ್ಯ 2 ತಿಂಗಳು	12 ತಿಂಗಳು
ಶುಕ್ರ	ಮಧ್ಯ 7 ದಿನಗಳು	1 ತಿಂಗಳು
ಶನಿ	ಕೊನೆಯ 6 ತಿಂಗಳು	30 ತಿಂಗಳು
ರಾಹು ಕೇತು	ಕೊನೆಯ 3 ತಿಂಗಳು	18 ತಿಂಗಳು

ಗೋಚಾರವನ್ನು ತಿಳಿಯುವ ಕ್ರಮ

ಮೇಷಜನ್ಮರಾಶಿಯಿಂದ ರವಿ, ಚಂದ್ರ, ಕುಜ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು ಇವರು ತತ್ಕಾಲದಲ್ಲಿ ಎಷ್ಟನೆ ಸ್ಥಾನದಲ್ಲಿರುವರೆಂದು ತಿಳಿದು ಅದರ ಮುಂದೆ ಹೇಳಿದ ಫಲವು ಆ ಗ್ರಹಗಳ ಫಲವೆಂದು ತಿಳಿಯಬೇಕು

ಜನ್ಮನಕ್ಷತ್ರ, ನಾಮನಕ್ಷತ್ರಗಳ ವಿಚಾರ

1) ಕುರ್ಯಾತ್ ಷೋಡಶಕರ್ಮಾಣಿ ಜನ್ಮರಾಶೌ ಬಲಾನ್ವಿತೇ ।

2) ಸರ್ವಾಣ್ಯನ್ಯಾನಿ ಕರ್ಮಾಣಿ ನಾಮರಾಶೌ ಬಲಾನ್ವಿತೇ ॥

ಷೋಡಶ ಕರ್ಮಗಳನ್ನು ಜನ್ಮರಾಶಿಯಿಂದ ಬಲಗಳನ್ನು ನೋಡಿ ಮಾಡತಕ್ಕದ್ದು. ಇತರ ಕರ್ಮಗಳನ್ನು ನಾಮರಾಶಿಗಳಿಂದ ಬಲಗಳನ್ನು ನೋಡಿ ಮಾಡತಕ್ಕದ್ದು. ದೇಶ ಗ್ರಾಮ ಗೃಹ ಜ್ವರ ವ್ಯವಹಾರ ದ್ಯೂತ ದಾನ ಮಂತ್ರ ಸೇವಾ ಕಾಕಿಣಿಕಾ ವರ್ಗ ಯುದ್ಧ ಪುನರ್ವಿವಾಹ ಇತ್ಯಾದಿಗಳಿಗೆ ನಾಮನಕ್ಷತ್ರದಿಂದ ಬಲಾಬಲವನ್ನು ತಿಳಿಯತಕ್ಕದ್ದು.

ಶಂಕುಸ್ಥಾಪನಾದಿ 21 ಮುಹೂರ್ತಗಳಿಗೆ ಶ್ರೇಷ್ಠವಾದ ತಿಥ್ಯಾದಿ ವಿಚಾರಗಳನ್ನು ತಿಳಿಸುವ ಪದಕ						
ಮುಹೂರ್ತಗಳು	ತಿಥಿ	ವಾರ	ನಕ್ಷತ್ರ	ಲಗ್ನ	ಸ್ಥಾನಶುದ್ಧಿ	ವಿಶೇಷಾಂಕ
1. ಶಂಕುಸ್ಥಾಪನೆ	3,5,7,–10 13,15	ಬು,ಗು,ಶು,	ಮೃಗ,ಹಸ್ತ,ರೇವ,ರೋಹಿ,ಅನೂ,ಉ.ಫ.,ಪುಷ್ಯ ಶ್ರವಣ,ಪುನ,ಧನಿ,ಶತ,ಅಶ್ವಿ	ಮೇಷ, ವೃಷ, ಕರ್ಕ ಸಿಂಹ, ಧನು, ಕುಂಭ	ಚತುರ್ಥಶುದ್ಧಿ	--
2. ಗೃಹಪ್ರವೇಶ	2,3,5,7 10,13,15	ಸೋ.,ಬು ಗು,ಶು	ಮೃಗ,ಪುನ,ಪುಷ್ಯ,ಹಸ್ತ,ರೋಹಿ,ಅನೂ,ಉ.ಫ ಶ್ರವಣ,ಧನಿ,ಶತ,ಅಶ್ವಿ,ಸ್ವಾತಿ, ರೇವತಿ	ವೃಷ, ಸಿಂಹ, ವೃಶ್ಚಿಕ ಕುಂಭ	ದ್ವಾದಶಶುದ್ಧಿ	ರಾತ್ರಿಪ್ರಶಸ್ತ
3. ನಿಷೇಕ	2,3,5,– 7,10	ಸೋ.,ಬು. ಗು,ಶು	ಅಶ್ವಿ,ರೋಹಿ, ಉ.ಫ., ಹಸ್ತ,ಸ್ವಾತೀ, ಅನೂ, ಮೂಲ ಉ.ಷಾ., ಶ್ರವಣ,ಶತ,ಉ.ಭಾ. ರೇವತಿ	ವೃಷ, ಸಿಂಹ, ವೃಶ್ಚಿಕ ಕುಂಭ	ಲಗ್ನಶುದ್ಧಿ	ಮಾಘಾದಿಪಂಚಕ ಶುಭ
4. ಗರ್ಭಾಧಾನ	2,3,5,– 7,10	ಸೋ.,ಬು ಗು,ಶು	ರೋಹಿ,ಉ.ಫ., ಹಸ್ತ, ಸ್ವಾತಿ, ಅನೂ, ಉ.ಷಾ ಶ್ರವಣ, ಶತ, ಉ.ಭಾ.	ಮೀನ,ವೃಷ,ಮಿಥು,ಸಿಂಹ ಕರ್ಕ,ಕುಂಭ,ಕನ್ಯಾ,ತುಲಾ,ಧನು	ಲಗ್ನಶುದ್ಧಿ	ಪಂಚಪರ್ವ ದಿನಗಳು ತ್ಯಾಜ್ಯ
5. ಪುಂಸವನ	2,3,5,7 10,13,15	ಆದಿ,ಮಂ ಗು	ಹಸ್ತ,ಚಿತ್ತಾ,ಸ್ವಾತಿ,ರೋಹಿ,ಶ್ರವ,ಧನಿ,ಶತ, ಪುಷ್ಯ ಉ.ಫ.,ಉ.ಷಾ.,ಉ.ಭಾ.,ರೇವ,ಅನೂ,ಪುನ ಮೂಲ,ಅಶ್ವಿ,ಮೃಗ	ಮೀನ, ಮೇಷ, ಧನು	ನವಮಶುದ್ಧಿ	3ನೇ ತಿಂಗಳು ಗ್ರಾಹ್ಯ
6. ಸೀಮಂತ	2,3,5,7, 10,13,15	ಆದಿ, ಮಂ ಗು	ಪುಂಸವನಕ್ಕೆ ಹೇಳಿದ ನಕ್ಷತ್ರಗಳೇ	ಮೇಷ, ಧನು, ಮೀನ	ನವಮಶುದ್ಧಿ	4–6–8 ತಿಂಗಳು ಶುಭ
7. ನಾಮಕರಣ	2,3,5,7 10,13,15	ಸೋ.,ಬು ಗು,ಶು	ಅನೂ,ಪುನ,ಮಘಾ,ಉ.ಫ.,ಸ್ವಾತಿ,ಧನಿ,ಶ್ರವಣ ರೋಹಿ, ಅಶ್ವಿ,ಮೃಗ, ರೇವತಿ, ಹಸ್ತ, ಪುಷ್ಯ	ವೃಷ, ಸಿಂಹ, ವೃಶ್ಚಿಕ ಕುಂಭ	ಅಷ್ಟಮಶುದ್ಧಿ	1,3,5 ತಿಂಗಳು ಶುಭ

ಶಂಕುಸ್ಥಾಪನಾದಿ 21 ಮುಹೂರ್ತಗಳಿಗೆ ಶ್ರೇಷ್ಠವಾದ ತಿಥ್ಯಾದಿ ವಿಚಾರಗಳನ್ನು ತಿಳಿಸುವ ಪದಕ

ಮುಹೂರ್ತಗಳು	ತಿಥಿ	ವಾರ	ನಕ್ಷತ್ರ	ಲಗ್ನ	ಸ್ಥಾನಶುದ್ಧಿ	ವಿಶೇಷಾಂಕ
8.ಡೋಲಾರೋಪಣ	2,3,5,7 10,13	ಸೋ.,ಬು ಗು,ಶು	ರೋಹಿ,ಮೂಲ,ಉ.ಫ.,ಸ್ವಾತಿ,ಧನಿ,ಶ್ರವಣ ಚಿತ್ರಾ,ಅಶ್ವಿ, ಮೃಗ, ಅನೂ	ವೃಷ, ಕರ್ಕ, ಮಿಥು, ಕನ್ಯಾ, ತುಲಾ, ಧನು, ಮೀನ	ಅಷ್ಟಮಶುದ್ಧಿ	ಪುಂ0,6,8,10 ಸ್ತ್ರೀ 5,7,9 ಮಾಸಗಳು
9.ಅನ್ನಪ್ರಾಶನ	2,3,5,7 10,13	ಸೋ.,ಬು ಗು,ಶು	ಅಶ್ವಿ,ರೋಹಿ,ಮೃಗ,ಪುನ,ಪುಷ್ಯ, ಉ.ಫ., ಹಸ್ತ ಚಿತ್ರಾ,ಸ್ವಾತಿ,ಅನೂ,ಶ್ರವಣ ಉ.ಷಾ.ಧನಿ, ಶತ,ಉಭಾ, ರೇವತಿ	ವೃಷ, ಮಿಥ, ಕರ್ಕ ಕನ್ಯಾ, ಧನು, ಮೀನ	ದಶಮಶುದ್ಧಿ	1,6 ಮಾಸಗಳು ಶುಭ
10. ಕರ್ಣವೇಧ	2,3,5,7 10	ಸೋ.,ಬು. ಗು.ಶು	ಆರ್ದ್ರಾ,ಮೃಗ,ರೇವ,ಪುನ,ಹಸ್ತ,ಚಿತ್ರಾ,ಉ.ಫ. ಶ್ರವಣ, ಧನಿ, ಪುಷ್ಯ, ಉ.ಷಾ.ಉ.ಭಾ	ವೃಷ, ಮಿಥು, ಕರ್ಕ ಕನ್ಯಾ, ಧನು, ಮೀನ	ಅಷ್ಟಮಶುದ್ಧಿ	ಉತ್ತರಾಯಣ, ಬೆಸಮಾ ಮತ್ತು ಬೆಸ ಸಂವತ್ಸರ
11. ಕೇಶಖಂಡನ	2,3,6,7 10,13	ಸೋ.,ಬು ಗು,ಶು	ಅಶ್ವಿ,ಮೃಗ, ಪುನ,ಪುಷ್ಯ, ಹಸ್ತ, ಚಿತ್ರಾ, ಸ್ವಾತಿ ಶ್ರವಣ, ಧನಿ, ಶತ, ರೇವತಿ	ವೃಷ, ಮಿಥು, ಕರ್ಕ ಕನ್ಯಾ, ತುಲಾ, ಧನು, ಮೀನ	ಅಷ್ಟಮಶುದ್ಧಿ	ಪೂರ್ವಯಾಮ
12. ಅಕ್ಷರಾಭ್ಯಾಸ	2,3,5,7 10,13	ಸೋ.,ಬು ಗು,ಶು	ಅನೂ,ರೇವ,ಹಸ್ತ,ಚಿತ್ತ,ಸ್ವಾತಿ,ಅಶ್ವಿ,ಪುನ ಪುಷ್ಯ, ಶ್ರವಣ	ವೃಷ, ಕರ್ಕ, ಸಿಂಹ ಧನು, ಕುಂಭ, ತುಲಾ, ಮಕರ,ವೃಶ್ಚಿಕ	ಅಷ್ಟಮಶುದ್ಧಿ	ಉತ್ತರಾಯಣ 5ನೇ ವರ್ಷ
13. ವಿದ್ಯಾಭ್ಯಾಸ	2,3,5,7 10,13	ಸೋ.,ಬು ಗು,ಶು,ಆದಿ	ಅಶ್ವಿ,ಹಸ್ತ,ಚಿತ್ತಾ,ಸ್ವಾತಿ, ಮೃಗ,ಪುನ, ಪುಷ್ಯಾ, ಮೂಲಾ, ಪೂ.ಫ. ಪೂ.ಷಾ, ಪೂ.ಭಾ.	ಮೇಷಕರ್ಕ, ತುಲಾ, ಮಕರ	---	ಅನಧ್ಯಯನ ತಿಥಿಗಳು ಅಶುಭ
14. ಉಪನಯನ	2,3,5,7 10,13	ಬು,ಗು,ಶು	ಅನೂ,ರೇವ,ಅಶ್ವಿ,ಮೃಗ,ಸ್ವಾತೀ,ರೋಹಿ, ಉ.ಫ ಉ,ಷಾ,ಉ.ಭಾ., ಪುನ, ಪುಷ್ಯ, ಶ್ರವಣ,ಧನಿ, ಶತ ಹಸ್ತ, ಚಿತ್ತಾ	ಮೇಷ, ವೃಷ, ಮಿಥು, ಕರ್ಕ ಸಿಂಹ, ಕುಂಭ, ಮೀನ	ಅಷ್ಟಮಶುದ್ಧಿ	ಶುಕ್ಲಪಕ್ಷ

ಶಂಕುಸ್ಥಾಪನಾದಿ 21 ಮೂಹೂರ್ತಗಳಿಗೆ ಶ್ರೇಷ್ಟವಾದ ತಿಥ್ಯಾದಿ ವಿಚಾರಗಳನ್ನು ತಿಳಿಸುವ ಪದಕ

ಮೂಹೂರ್ತಗಳು	ತಿಥಿ	ವಾರ	ನಕ್ಷತ್ರ	ಲಗ್ನ	ಅಷ್ಟಮಶುದ್ಧಿ	ವಿಶೇಷಾಂಕ
15. ವಿವಾಹ	2,3,5,7 10,13,15	ಸೋ,ಬು ಗು,ಶು	ಘೂಲ,ಅನೂ,ಮೃಗ,ರೋಹಿ,ಹಸ್ತಾ,ಸ್ವಾತಿ,ರೇವ, ಮಖಾ,ಉ.ಫ., ಉ.ಷಾ, ಉ.ಭಾ	ವೃಷ, ಮಿಥು, ಕರ್ಕ, ಕನ್ಯಾ ತುಲಾ, ಧನು, ಮೀನ	ಸಪ್ತಮಶುದ್ಧಿ	ಏಕವಿಂಶತಿದೋಷ ರಹಿತ, ಮಾಘಾದಿ ಪಂಚಕ
16. ವಧೂಪ್ರವೇಶ	2,3,5,7 10,13	ಸೋ,ಬು ಗು,ಶು	ಮೃಗ,ಧನಿ,ಉ.ಷಾ.ಉ.ಭಾ.,ಪುನ,ಪುಷ್ಯ,ರೊಹಿ, ಅನೂಅಶ್ವಿ, ಹಸ್ತ, ಚಿತ್ರಾ, ಸ್ವಾತಿ, ಶ್ರವಣ, ಶತ	ವೃಷ, ಮಿಥ, ಕರ್ಕ, ಕನ್ಯಾ ತುಲಾ, ಧನು, ಮೀನ	ದ್ವಾದಶಶುದ್ಧಿ	ಹಗಲು ಶುಭ
17. ಕಂಚುಕಧಾರಣ	2,3,5,7 10,13,15	ಬು,ಗು,ಶು	ಅಶ್ವಿ,ಚಿತ್ರಾ,ರೇವ,ಪುಷ್ಯ,ಅನೂ,ಉ.ಫ,ಉ.ಷಾ ಉ.ಭಾ., ಹಸ್ತ, ಸ್ವಾತಿ	ವೃಷ, ಮಿಥು, ಕರ್ಕ,ಕನ್ಯಾ ತುಲಾ,ಧನು,ಮೀನ	---	ಪೂರ್ವಾಹ್ಣದಲ್ಲಿ ಶುಭ
18. ನವಪಸ್ತ್ರಧಾರಣ	2,3,6,7 10,13,15	ಬು,ಗು,ಶು	ಹಸ್ತ,ಉ.ಫ., ಉ.ಷಾ,ಉ.ಭಾ., ಸ್ವಾತಿ, ಪುನ, ಪುಷ್ಯ ಅನೂ, ಚಿತ್ತಾರೋಹಿ, ಶತ, ರೇವತಿ	ವೃಷ, ಮಿಥು, ಕರ್ಕ, ಕನ್ಯಾ ತುಲಾ, ಮಕರ, ಕುಂಭ	ತೃತೀಯಶುದ್ಧಿ	
19. ಯಾತ್ರಾ	2,3,5,7 10,13	ಸೋ,ಬು ಗು,ಶು	ಮೃಗ,ಅಶ್ವಿ, ಪುಷ್ಯ, ಪುನ, ಹಸ್ತ, ಅನೂ, ಶ್ರವಣ ಮೂಲ, ಧನಿ, ರೇವ, ಉ.ಫ., ಉ.ಷಾ., ಉ.ಭಾ.	ಮೇಷ, ವೃಷ, ಕರ್ಕ, ತುಲಾ ಧನು, ಮಕರ, ಮೀನ	ಅಷ್ಟಮಶುದ್ಧಿ	ಶುಕ್ಲಪಕ್ಷ
20. ಕೂಪಾರಂಭ	2,3,5,7 10,13,15	ಸೋ,ಬು ಗು,ಶು	ಅನೂ, ಉ.ಫ., ಉ.ಷಾ., ಶತ, ಹಸ್ತ, ಮಖಾ ಶ್ರವಣ ರೋಹಿ, ಪುಷ್ಯ, ಉ.ಭಾ.	ಮಿಥು, ಮಕರ, ಕರ್ಕ, ವೃಶ್ಚಿಕ	---	ಆಗ್ನೇಯ ದಕ್ಷಿಣ ನೈಋತ್ಯ ವಾಯುವ್ಯ, ಗೃಹ ಮಧ್ಯಗಳಲ್ಲಿ ಉತ್ತಮವಲ್ಲ
21. ಬೀಜಾವಾಪನ	2,3,5,7 10,13,15	ಆದಿ, ಸೋ ಬು,ಗು,ಶು	ಅಶ್ವಿ, ಹಸ್ತ, ಪುಷ್ಯ, ಚಿತ್ತಾ, ರೇವ, ಮೃಗ, ಅನೂ ರೋಹಿ, ಸ್ವಾತಿ, ಮೂಲ, ಮಖಾ, ಶ್ರವಣ, ಧನಿ ಉ.ಫ., ಉ.ಷಾ.ಉ.ಭಾ	ವೃಷ, ಮಿಥು, ಕರ್ಕ, ಕನ್ಯಾ ವೃಶ್ಚಿ, ಧನು, ಮೀನ	ಸಪ್ತಮಶುದ್ಧಿ	ಪಂಚಪರ್ವ ರಿಕ್ತತಿಥಿ ಪ್ರದೋಷಗಳು ಅಶುಭ.

ಪ್ರಯಾಣಕ್ಕೆ ಅನುಕೂಲವಾದ ಆನಂದಾದಿ ಯೋಗಗಳು							
ವಾರಗಳ ಕೆಳಗಡೆ ಕೊಟ್ಟಿರುವ 28 ನಕ್ಷತ್ರಗಳಿಗೂ ಬಲಗಡೆ 28 ಯೋಗಗಳು ಕಾಣಿಸಿದೆ ।							
ಆಯಾ ವಾರಗಳಲ್ಲಿ ಆ ನಕ್ಷತ್ರಗಳು ಬಂದರೆ ಯೋಗಗಳ ಪಕ್ಕದಲ್ಲಿರುವ ಫಲವನ್ನು ತಿಳಿಯಬೇಕು.							
ಭಾನುವಾರ	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ	ಯೋಗ ಮತ್ತು ಫಲ
ಅಶ್ವಿನೀ	ಮೃಗ	ಆಶ್ಲೇ	ಹಸ್ತಾ	ಅನೂ	ಉಷಾ	ಶತ	ಆನಂದ. ಕಾರ್ಯಸಿದ್ಧಿ
ಭರಣಿ	ಆದ್ರಾ	ಮಘಾ	ಚಿತ್ತಾ	ಜ್ಯೇ	ಅಭಿ	ಪೂಭಾ	ಕಾಲದಂಡ. ಮೃತ್ಯು
ಕೃತ್ತಿಕಾ	ಪುನ	ಪುಬ್ಬಾ	ಸ್ವಾತೀ	ಮೂಲಾ	ಶ್ರವಣಾ	ಉಭಾ	ಧೂಮ್ರ.ಅಶುಭ
ರೋಹಿಣೀ	ಪುಷ್ಯಾ	ಉತ್ತರಾ	ವಿಶಾ	ಪೂಷಾ	ಧನಿ	ರೇವ	ಪ್ರಜಾಪತಿ . ಸೌಭಾಗ್ಯ
ಮೃಗಶಿರಾ	ಆಶ್ಲೇ	ಹಸ್ತಾ	ಅನೂ	ಉಷಾ	ಶತ	ಅಶ್ವಿ	ಸೌಮ್ಯ . ಸೌಖ್ಯ
ಆದ್ರಾ	ಮಘಾ	ಚಿತ್ತಾ	ಜ್ಯೇ	ಅಭಿ	ಪೂಭಾ	ಭರ	ಧ್ವಾಂಕ್ಷ-ಧನವ್ಯಯ
ಪುನರ್ವಸು	ಪುಬ್ಬಾ	ಸ್ವಾತೀ	ಮೂಲಾ	ಶ್ರವ	ಉಭಾ	ಕೃತ್ತಿ	ಧ್ವಜ-ಶುಭ
ಪುಷ್ಯಾ	ಉತ್ತರಾ	ವಿಶಾ	ಪೂಷಾ	ಧನಿ	ರೇವ	ರೋಹಿ	ಶ್ರೀವತ್ಸ-ಸಂಪತ್ತಿ
ಆಶ್ಲೇಷಾ	ಹಸ್ತಾ	ಅನೂ	ಉಷಾ	ಶತ	ಅಶ್ವಿ	ಮೃಗ	ವಜ್ರ – ಕ್ಷಯ
ಮಘಾ	ಚಿತ್ತಾ	ಜ್ಯೇ	ಅಭಿ	ಅಶ್ವಿ	ಭರ	ಆದ್ರಾ	ಮುದ್ಗರ – ಸಂಪತ್ತಿನಾಶ
ಪುಬ್ಬಾ	ಸ್ವಾತೀ	ಮೂಲಾ	ಶ್ರವಣಾ	ಭರ	ಕೃತ್ತಿ	ಪುನ	ಛತ್ರ – ರಾಜಸನ್ಮಾನ
ಉತ್ತರಾ	ವಿಶಾ	ಪೂಷಾ	ಧನಿ	ಕೃತ್ತಿ	ರೋಹಿ	ಪುಷ್ಯಾ	ಮಿತ್ರ – ದೇಹಪುಷ್ಟಿ
ಹಸ್ತಾ	ಅನೂ	ಉಷಾ	ಶತಭಿ	ರೋಹಿ	ಮೃಗ	ಆಶ್ಲೇ	ಮಾನಸ – ಸಂತುಷ್ಟಿ
ಚಿತ್ತಾ	ಜ್ಯೇ	ಅಭಿ	ಪೂಭಾ	ಮೃಗ	ಆದ್ರಾ	ಮಘಾ	ಪದ್ಮ-ಧನಪ್ರಾಪ್ತಿ

ಪ್ರಯಾಣಕ್ಕೆ ಅನುಕೂಲವಾದ ಆನಂದಾದಿ ಯೋಗಗಳು							
ವಾರಗಳ ಕೆಳಗಡೆ ಕೊಟ್ಟಿರುವ 28 ನಕ್ಷತ್ರಗಳಿಗೂ ಬಲಗಡೆ 28 ಯೋಗಗಳು ಕಾಣಿಸಿದೆ ।							
ಆಯಾ ವಾರಗಳಲ್ಲಿ ಆ ನಕ್ಷತ್ರಗಳು ಬಂದರೆ ಯೋಗಗಳ ಪಕ್ಕದಲ್ಲಿರುವ ಫಲವನ್ನು ತಿಳಿಯಬೇಕು.							
ಭಾನುವಾರ	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ	ಯೋಗ ಮತ್ತು ಫಲ
ಸ್ವಾತೀ	ಮೂಲಾ	ಶ್ರವಣಾ	ಉಭಾ	ಕೃತ್ತಿ	ಪುನ	ಪುಬ್ಬಾ	ಲಂಭಕ–ಧನಹಾನಿ
ವಿಶಾಖಾ	ಪೂಷಾ	ಧನಿ	ರೇವ	ರೋಹಿ	ಪುಷ್ಯಾ	ಉತ್ತರಾ	ಉತ್ಪಾತ–ಪ್ರಾಣನಾಶ
ಅನೂರಾಧಾ	ಉಷಾ	ಶತ	ಅಶ್ವಿ	ಮೃಗ	ಆಶ್ಲೇ	ಹಸ್ತಾ	ಮೃತ್ಯು–ಮರಣ
ಜ್ಯೇಷ್ಠಾ	ಅಭಿ	ಪೂಭಾ	ಭರ	ಆದ್ರಾ	ಮಖೆ	ಚಿತ್ತಾ	ಕಾಣ–ಕ್ಲೇಶ
ಮೂಲಾ	ಶ್ರವಣಾ	ಉಭಾ	ಕೃತ್ತಿ	ಪುನ	ಪುಬ್ಬೆ	ಸ್ವಾತೀ	ಸಿದ್ಧಿ–ಕಾರ್ಯಸಿದ್ಧಿ
ಪೂ.ಷಾ	ಧನಿ	ರೇವ	ರೋಹಿ	ಪುಷ್ಯಾ	ಉತ್ತರೆ	ವಿಶಾ	ಶುಭ–ಕಲ್ಯಾಣ
ಉ.ಷಾ	ಶತ	ಅಶ್ವಿ	ಮೃಗ	ಆಶ್ಲೇ	ಹಸ್ತ	ಅನೂ	ಅಮೃತ–ಮಂಗಳ
ಅಭಿಜಿತ್	ಪೂಭಾ	ಭರ	ಆದ್ರಾ	ಮಖಾ	ಚಿತ್ತ	ಜ್ಯೇ	ಮುಸಲ–ಧನವ್ಯಯ
ಶ್ರವಣಾ	ಉಭಾ	ಕೃತ್ತಿ	ಪುನ	ಪುಬ್ಬಾ	ಸ್ವಾತಿ	ಮೂಲಾ	ಗದಾ–ಭಯ
ಧನಿಷ್ಠಾ	ರೇವ	ರೋ	ಪುಷ್ಯಾ	ಉತ್ತರಾ	ವಿಶಾ	ಪೂಷಾ	ಮಾತಂಗ–ಕುಲವೃದ್ಧಿ
ಶತಭಿಷಾ	ಅಶ್ವಿ	ಮೃಗ	ಆಶ್ಲೇ	ಹಸ್ತಾ	ಅನೂ	ಉಷಾ	ರಾಕ್ಷಸ–ಮಹಾಕಷ್ಟ
ಪೂಭಾ	ಭರ	ಆದ್ರಾ	ಮಖಾ	ಚಿತ್ತಾ	ಜ್ಯೇ	ಅಭಿ	ಚರ–ಕಾರ್ಯನಾಶ
ಉಭಾ	ಕೃತ್ತಿ	ಪುನ	ಪುಬ್ಬಾ	ಸ್ವಾತೀ	ಮೂಲ	ಶ್ರವಣಾ	ಸ್ಥಿರ–ಕಾರ್ಯಲಾಭ
ರೇವತೀ	ರೋ	ಪುಷ್ಯಾ	ಉತ್ತರಾ	ವಿಶಾ	ಪೂಷಾ	ಧನಿ	ವರ್ಧಮಾನ–ಸಮೃದ್ಧಿ

ಬಾಲಾರಿಷ್ಟದೋಷ

ಜನ್ಮಲಗ್ನದಿಂದ 8ರಲ್ಲಿ ಚಂದ್ರ, 7ರಲ್ಲಿ ಕುಜ 9ರಲ್ಲಿ ರಾಹು ಲಗ್ನದಲ್ಲಿ ಶನಿ 3ರಲ್ಲಿ ಗುರು 5ರಲ್ಲಿ ಸೂರ್ಯ 6ರಲ್ಲಿ ಶುಕ್ರ 7ರಲ್ಲಿ ಬುಧ 2ರಲ್ಲಿ ಕೇತು ಈ ಸ್ಥಾನಗಳಲ್ಲಿದ್ದರೆ ಬಾಲಾರಿಷ್ಟದೋಷವಾಗುವದು ಅಥವಾ ಜನ್ಮಲಗ್ನದಿಂದ 1,5,6,7,8,12 ಈ ಸ್ಥಾನಗಳಲ್ಲಿ ಪಾಪಗ್ರಹಗಳಿದ್ದರೂ, ಅಥವಾ ಅವರ ದೃಷ್ಟಿ ಇದ್ದರೂ ಬಾಲಾರಿಷ್ಟವಾಗುವದು. ಕ್ಷೀಣಚಂದ್ರನು 1,8,12 ರಲ್ಲಿದ್ದರೂ ಬಾಲಾರಿಷ್ಟವು.

ಈ ದೋಷಕ್ಕೆ ಭಂಗ ಗ್ರಹಗಳು ದುರ್ಬಲವಾಗಿದ್ದರೆ ಬಾಲಾರಿಷ್ಟ ವಾಗುವುದಿಲ್ಲ, ಅಥವಾ ಕೇಂದ್ರ 1,4,7,10 ಈ ಸ್ಥಾನಗಳಲ್ಲಿ ಶುಭಗ್ರಹಗಳಿದ್ದರೆ ಬಾಲಾರಿಷ್ಟವು ಆಗುವುದಿಲ್ಲ.

ಜನನಕಾಲದಲ್ಲಿ ಗ್ರಹಬಲ

ಜನ್ಮಲಗ್ನದಿಂದ ಕೇಂದ್ರಸ್ಥಾನದಲ್ಲಿ ಶುಭಗ್ರಹಗಳು ಉಚ್ಚ ಸ್ವಕ್ಷೇತ್ರ ಮಿತ್ರಕ್ಷೇತ್ರಗಳಲ್ಲಿದ್ದರೆ ಶುಭಫಲ ಕೊಡುವರು. ಲಗ್ನದಿಂದ 1,5,9,10 ಈ ಸ್ಥಾನಗಳಲ್ಲಿ ರವಿ ಶನಿ ಕುಜನಿದ್ದರೆ ತಂದೆಗೆ ಕಷ್ಟವನ್ನು ಕೊಡುವರು. 2,7 ಮಾರಕ ಸ್ಥಾನಗಳು 3,8 ಆಯುಷ್ಯ ಸ್ಥಾನಗಳು. ಆಯುಷ್ಕಾರಕನು ಶನಿಯು 5, 6,8,11 ಈ ಸ್ಥಾನಗಳಲ್ಲಿದ್ದರೆ ಪೂರ್ಣ ಆಯುಷ್ಯವುಳ್ಳವನಾಗುತ್ತಾನೆ.

ಜನ್ಮನಕ್ಷತ್ರಯುತ ವಾರಫಲ

1) ರವಿವಾರ ಆಲಸ್ಯ
2) ಸೊಮವಾರ ಸುಖಭೋಜನ
3) ಮಂಗಳವಾರ ಭ್ರಮಣ
4) ಬುಧವಾರ ವಿದ್ಯಾಭಿವೃದ್ಧಿ
5) ಗುರುವಾರ ಭೋಗ
6) ಶುಕ್ರವಾರ ಧನಲಾಭ
7) ಶನಿವಾರ ರೋಗ

ನಕ್ಷತ್ರಗಳಲ್ಲಿ ರೋಗ ಪ್ರಾರಂಭವಾದರೆ ಎಷ್ಟುದಿನ ಕಾಡುವುದು ಅದಕ್ಕೆ ಶಾಂತಿ ಪಾದಗಳು

ನಕ್ಷತ್ರ	1	2	3	4	ಶಾಂತಿ
ಅಶ್ವಿನಿ	9	–11	–27	–20	ಅನ್ನ
ಭರಣಿ	11	–41	–7	–16	ಶ್ವೇತವಸ್ತ್ರ
ಕೃತ್ತಿಕಾ	9	22	–6	–7	ಹೇಮ
ರೋಹಿಣಿ	3	–9	–18	–30	ದುಗ್ಧ
ಮೃಗಶಿರ	30	–17	–21	–20	ಕ್ಷೀರಶರ್ಕರಾ
ಆರ್ದ್ರಾ	0	–15	–22	–1	ಕೃಷ್ಣಗೋದಾನ
ಪುನರ್ವಸು	7	–14	–7	–21	ಮಾಂಸ ಎಳ್ಳು
ಪುಷ್ಯ	7	–7	30	–31	ರಕ್ತವಸ್ತ್ರ
ಆಶ್ಲೇಷ	0–	ಅಸಾಧ್ಯ	–0	–ಅಸಾಧ್ಯ	ತಿಲಧೇನು
ಮಘ	20	–7	–46	–18	ಬೆಲ್ಲ ತುಪ್ಪ
ಪೂಫ	0	–12	–12	–30	ಅಶ್ವ
ಉಫ	7	–14	–7	–28	ಮುಕ್ತಾಫಲ
ಹಸ್ತ	15	–40	–12	–13	ಅನ್ನದಾನ
ಚಿತ್ತಾ	12	–0	–9	–16	ಹವಳ ರಕ್ತವಸ್ತ್ರ
ಸ್ವಾತಿ	0	–16	–22	–ಅಸಾಧ್ಯ	ಕೆಂಪುಗೋದಾನ
ವಿಶಾಖ	15	–40	–12	–13	ತಾಮ್ರಪಾತ್ರೆ
ಅನೂರಾಧ	ಅಸಾಧ್ಯ	–7	–22	–60	ಕಾರ್ಪಸಶ್ವೇತವಸ್ತ್ರ
ಜೇಷ್ಠ	0	–45	–12	–5	ಉಪಾಯನದಾನ
ಮೂಲ	15	–5	–15	–5	ಲೋಹ
ಪೂಷಾ	0	–45	–15	–6	ಕಂಬಲ
ಉಷಾ	20	–15	–22	–28	ಮಹಿಷ
ಶ್ರವಣ	11	–12	–20	–28	ಗ್ರಹಶಾಂತಿ
ಧನಿಷ್ಠ	25	–20	–60	–11	ಶಂಕರಪೂಜಾ
ಶತಭಿಷ	7	–11	–ಅಸಾಧ್ಯ	–40	ಬ್ರಾಹ್ಮಣಭೋಜನ
ಪೂಭಾ	0	–39	–0	–11	ಕೃಷ್ಣಅಜ
ಉಭಾ	11	–15	–30	–30	ಕಸ್ತೂರಿ ಕಂಚು
ರೇವತಿ	17	–6	–60	–0	ಕೃಷ್ಣಾಶ್ವ ಗೋದಾನ

ಮೃತಸಂಸ್ಕಾರ ಕಾಲವು

ರೋ, ಧ, ಶ, ಪೂ.ಭಾ, ಉ.ಭಾ, ರೇ, ಕೃ, ಮೃ, ಪುನ, ಉ.ಫ,ಚಿ,ಸ್ವಾ, ವಿ, ಉ–ಷಾ, ಮಘಾ ಈ ನಕ್ಷತ್ರಗಳಲ್ಲಿ 1, 2, 6, 7, 11, 12, 13, 14 ಈ ತಿಥಿಗಳಲ್ಲಿ ಶುಕ್ರ ಕುಜ ರವಿ ಈ ವಾರಗಳಲ್ಲಿ ಪ್ರೇತಕರ್ಮ ಮರಣ ಸಪಿಂಡೀಕರಣ ತ್ರೈಪಕ್ಷಿಕ ಊನಮಾಸಿಕ ಇವುಗಳು ಜರುಗಿದಲ್ಲಿ 1 2 ಮಾಸದೊಳಗೆ ವಂಶವು ನಾಶವಾಗುವುದು.

ಸ್ಮೃ.ಮು. ಶ್ರಾದ್ಧ ಪ್ರ. 187

ತ್ರಿಪುಷ್ಕರ, ದ್ವಿಪುಷ್ಕ ಯೋಗಗಳು

ತ್ರಿಪುಷ್ಕರಯಾಗದಲ್ಲಿ ಒಂದು ವಸ್ತು ನಷ್ಟವಾದರೆ ಮೂರರಷ್ಟು ನಷ್ಟವು ಲಾಭವಾದರೆ 3ರಷ್ಟು ಲಾಭ. ದ್ವಿಪುಷ್ಕರ ಯೋಗದಲ್ಲಿ ಒಂದು ವಸ್ತು ನಷ್ಟವಾದರೆ ಎರಡರಷ್ಟು ನಷ್ಟವೂ ಲಾಭವಾದರೆ 2 ರಷ್ಟು ಲಾಭ.

ವೃಷ್ಟಿ ವಿಚಾರ

ಈ ಚಕ್ರದಲ್ಲಿದ್ದ ನಕ್ಷತ್ರಗಳಲ್ಲಿ ಗ್ರಹಗಳು ಯಾರು ನೀರ ಜಲಾ ಅಮೃತ ನಾಡಿಯಲ್ಲಿರುವರೋ ಅವರು ವೃಷ್ಟಿಯನ್ನುಂಟುಮಾಡುವರು. ತದ್ಭಿನ್ನ ನಾಡಿಯಲ್ಲಿದ್ದವರು ಕೆಳಕಂಡ ಫಲವನ್ನು (ಅಂದರೆ ವೃಷ್ಟಿಸೂಚನೆ ತಾಪ ಘಾಳಿ ಬೀಸುವುದು ಮೇಘ ಕೂಡ ಇಲ್ಲದಿರುವಿಕೆ) ಉಂಟುಮಾಡುವರು. ರವ್ಯಾದಿ ಗ್ರಹಗಳನ್ನು ಈ ರೀತಿ ವಿಚಾರಮಾಡಿ ನೀರಾದಿ ಜಲನಾಡಿಗಳಲ್ಲಿ ಗ್ರಹಗಳು ಬಂದಾಗ ಮಾತ್ರ ಖಂಡಿತ ವೃಷ್ಟಿಯನ್ನು ಹೇಳಬೇಕು. ಗುರು ಶುಕ್ರ ಚಂದ್ರರು ವಿಶೇಷ ವೃಷ್ಟಿಕಾರಕರು. ಬುಧ ಶನಿಗಳು ಘಾಳಿಯನ್ನುಂಟು ಮಾಡುವರು. ರವಿ ಕುಜರು ತಾಪದಾಯಕರು. ಹೀಗೆ ಸ್ವಭಾವವಿರುವುದರಿಂದ ಅವರುಗಳು ತತ್ತನ್ನಾಡಿಗಳಲ್ಲಿ ಬಂದಾಗ ತತ್ತತ್ಕಾರ್ಯಗಳನ್ನು ಮಾಡುವರು. 7 ಗ್ರಹಗಳಲ್ಲಿ 3 ಜನರು ಇತರೇ ನಾಡಿಯಲ್ಲಿ 3 ಜನರು ನೀರಾದಿ ನಾಡಿಯಲ್ಲಿದ್ದು ಚಂದ್ರನು ನಿರಾದಿನಾಡಿಯಲ್ಲಿ ಬಂದರೆ ವೃಷ್ಟಿ ಹೇಳಬೇಕು. ಗುರು ಶುಕ್ರ ಚಂದ್ರರು ನೀರಾದಿನಾಡಿನಲ್ಲಿದ್ದಾಗ ವಿಶೇಷ ವೃಷ್ಟಿಯಾಗುವುದು.

ಸೂರ್ಯನಿದ್ದ ನಕ್ಷತ್ರಯೋಗಕ್ಕೆ ಚಂದ್ರಾದಿಗ್ರಹಗಳ ನಕ್ಷತ್ರಯೋಗ ನೋಡಿ ಈ ಕೆಳಗಿನ ವೃಷ್ಟಿ ನೋಡುವ –

ನಾಡಿಗಳು	ಚಂಡ	ವಾತ	ದಹನ	ಸೌಮ್ಯ	ನೀರ	ಜಲ	ಅಮೃತ
ನ	ಕೃತ್ತಿ	ರೋ	ಮೃಗ	ಆರ್ದ್ರಾ	ಪುನ	ಪುಷ್ಯಾ	ಆಶ್ಲೇ
ಕ್ಷ	ವಿಶಾ	ಸ್ವಾತೀ	ಚಿತ್ರಾ	ಹಸ್ತಾ	ಉ.ಫ	ಪೂ.ಫ	ಮಘಾ
ತ್ರ	ಅನೂ	ಜ್ಯೇ	ಮೂಲಾ	ಪೂ.ಷಾ	ಉ.ಷಾ	ಅಭಿ	ಶ್ರವ
ಗ ಳು	ಭರಣೀ	ಅಶ್ವಿ	ರೇವ	ಉ.ಭಾ	ಪೂ.ಭಾ	ಶತ	ಧನಿ

1) ಸೂರ್ಯೇ ಸೂರ್ಯೇ ಭವೇದ್ವಾಯುಃ ಚಂದ್ರೇ ಚಂದ್ರೇ ನ ವರ್ಷತಿ ।
2) ಸೂರ್ಯೇ ಚಂದ್ರೇ ಭವೇದ್ಯೋಗಃ ತದಾ ವರ್ಷತಿ ವಾಸವಃ ॥

1) ವಾಯುರ್ನಪುಂಸಕೇ ಭೇ ಚ ಸ್ತ್ರೀಣಾಂ ಭೇ ಚಾಭ್ರದರ್ಶನಮ್ ।
2) ಸ್ತ್ರೀಣಾಂ ಪುರುಷಸಂಯೋಗೇ ವೃಷ್ಟಿರ್ಭವತಿ ನಿಶ್ಚಯಃ ॥

ಮಳೆಯ ವಿಚಾರ

ಮಹಾನಕ್ಷತ್ರಮಾರಭ್ಯ ನಿತ್ಯರ್ಕ್ಷಂ ಗಣ್ಯತೇ ಯದಾ ।
ನವಭಿಸ್ತು ಹರೇದ್ಭಾಗಂ ಶೇಷಂ ವಾಹನಮುಚ್ಯತೇ ॥

1) ಸೂರ್ಯನು ವಾಸಿಸುವ ನಕ್ಷತ್ರವು ಮಹಾನಕ್ಷತ್ರವೆನಿಸುತ್ತದೆ. ಚಂದ್ರನು ವಾಸಿಸುವ ನಕ್ಷತ್ರವು ನಿತ್ಯನಕ್ಷತ್ರವೆನಿಸುತ್ತದೆ. ಇಷ್ಟದಿನದಲ್ಲಿ ಮಹಾನಕ್ಷತ್ರದಿಂದ ನಿತ್ಯನಕ್ಷತ್ರದವರೆಗೆ ಲೆಕ್ಕಮಾಡಬೇಕು. ಬಂದ ಸಂಖ್ಯೆಯನ್ನು ಒಂಭತ್ತರಿಂದ ಭಾಗಿಸಿ ಬಂದ ಲಬ್ಧಿಯನ್ನು ಬಿಡಬೇಕು. ಶೇಷಸಂಖ್ಯೆಗೆ ಕ್ರಮವಾಗಿ ಕೆಳಗಿನ ವಾಹನಗಳನ್ನು ತಿಳಿಯಬೇಕು. ಈ ವಾಹನದಲ್ಲಿ ಅಂದು ಸೂರ್ಯನು ಸವಾರಿಮಾಡುತ್ತಿರುವುದಾಗಿ ಅಭಿಪ್ರಾಯ.

ಆಖುಮಂಡೂಕಜಂಬೂಕಮೇಷಾ ಮಾಯೂರಕಸ್ತಥಾ ।
ಮಹಿಷೀ ಖರಹಸ್ತ್ಯಶ್ವಾ ಇತ್ಯೇತೇ ವಾಹಾನಾಃ ಸ್ಮೃತಾಃ ॥

1. ಇಲಿ 2. ಕಪ್ಪೆ 3. ನರಿ 4. ಕುರಿ 5. ನವಿಲು 6. ಎಮ್ಮೆ 7. ಕತ್ತೆ 8. ಆನೆ 9. ಕುದುರೆ ಇವುಗಳು ಒಂಭತ್ತು ವಾಹನಗಳು.

ಇವುಗಳು ಮೊದಲನೆಯ ಮೂರು ವಾಹನಗಳಲ್ಲಿ ಸೂರ್ಯನು ಕುಳಿತಿದ್ದರೆ ಮಳೆಯು ಏರ್ಪಡುತ್ತದೆ. ಮಧ್ಯದ ಮೂರು ವಾಹನಗಳಲ್ಲಿದ್ದರೆ ಮಳೆಯು ಸಂದಿಗ್ಧವಾಗಿರುತ್ತದೆ. ಕೊನೆಯ ಮೂರು ವಾಹನಗಳಲ್ಲಿದ್ದರೆ ಮಳೆಯು ಬರುವುದಿಲ್ಲ. ಇದು ಮೊದಲನೆಯ ಪ್ರಕಾರ

ಆರ್ದ್ರಾದಿದಶಕಂ ಸ್ತ್ರೀಣಾಂ ವಿಶಾಖಾದಿ ನಪುಂಸಕಮ್ ।
ಮೂಲಾಚ್ಚತುರ್ದಶರ್ಕ್ಷಾಣಿ ಪುಂಸಾಂ ಭಾನಿ ಭವಂತಿ ಹಿ ॥
ವಾಯುರ್ನಪುಂಸಕೇ ಭೇ ಚ ಸ್ತ್ರೀಣಾಂ ಭೇ ಚಾಭ್ರದಶನಮ್ ।
ಸ್ತ್ರೀಣಾಂ ಪುರುಷಸಂಯೋಗೇ ವೃಷ್ಟಿರ್ಭವತಿ ನಿಶ್ಚಿತಮ್ ॥

2) ಆರ್ದ್ರಾನಕ್ಷತ್ರದಿಂದ ಆರಂಭಿಸಿ ಸ್ವಾತೀನಕ್ಷತ್ರದ ವರೆಗೆ 10 ನಕ್ಷತ್ರಗಳು ಸ್ತ್ರೀನಕ್ಷತ್ರಗಳೆನಿಸುತ್ತವೆ. ವಿಶಾಖಾನಕ್ಷತ್ರದಿಂದ ಜ್ಯೇಷ್ಠಾ ನಕ್ಷತ್ರದವರೆಗಿನ ಮೂರು ನಕ್ಷತ್ರಗಳು ನಪುಂಸಕ ನಕ್ಷತ್ರಗಳೆನಿಸುತ್ತವೆ. ಮೂಲಾನಕ್ಷತ್ರದಿಂದ ಮೃಗಶಿರಾನಕ್ಷತ್ರದವರೆಗಿನ ಹದಿನಾಲ್ಕು ನಕ್ಷತ್ರಗಳು ಪುರುಷನಕ್ಷತ್ರಗಳೆನಿಸುತ್ತವೆ. ಸೂರ್ಯ ಮತ್ತು ಚಂದ್ರ ಇವರಿಬ್ಬರೂ ನಪುಂಸಕನಕ್ಷತ್ರದಲ್ಲಿದ್ದರೆ ಬರೇ ಗಾಳಿಯು ಬರುತ್ತದೆ. ಮಳೆ ಬರುವುದಿಲ್ಲ. ಇಬ್ಬರೂ ಸ್ತ್ರೀನಕ್ಷತ್ರದಲ್ಲಿದ್ದರೂ ಒಬ್ಬನು ಸ್ತ್ರೀನಕ್ಷತ್ರ ಇನ್ನೊಬ್ಬನು ನಪುಂಸಕ ನಕ್ಷತ್ರದಲ್ಲಿದ್ದರೂ ಬರೇ ಮೇಘ

ದರ್ಶನವಾಗುತ್ತದೆ. ಇಬ್ಬರಲ್ಲಿ ಒಬ್ಬನು ಸ್ತ್ರೀನಕ್ಷತ್ರದಲ್ಲಿಯೂ ಇನ್ನೊಬ್ಬನು ಪುರುಷನಕ್ಷತ್ರದಲ್ಲಿಯೂ ಇದ್ದರೆ ನಿಶ್ಚಯವಾಗಿಯೂ ಮಳೆಯು ಬರುತ್ತದೆ. ಇಬ್ಬರೂ ಪುರುಷನಕ್ಷತ್ರಗಳಲ್ಲಿದ್ದರೂ ಮಳೆಯು ಬರುವುದಿಲ್ಲ. ಇದು ಎರಡನೆಯ ಪ್ರಕಾರ.

3) ರೋಹಿಣೀ ಮೃಗಶಿರಾ ಪೂರ್ವಫಲ್ಗುನೀ ಹಸ್ತಾ ಚಿತ್ರಾ ಸ್ವಾತೀ ವಿಶಾಖಾ ಅನೂರಾಧಾ ಜ್ಯೇಷ್ಠ ಮೂಲಾ ಶತಭಿಷಾ, ಪೂರ್ವಾಭಾದ್ರಾ ಎಂಬ ಹನ್ನೆರಡು ನಕ್ಷತ್ರಗಳು ಸೂರ್ಯನಕ್ಷತ್ರಗಳೆನಿಸುತ್ತವೆ. ಉಳಿದ 15 ನಕ್ಷತ್ರಗಳು ಚಂದ್ರನಕ್ಷತ್ರಗಳೆನಿಸುತ್ತವೆ. ಸೂರ್ಯನೇ ಮೊದಲಾದ ಏಳು ಗ್ರಹಗಳಲ್ಲಿ ಒಬ್ಬನು ಚಂದ್ರನಕ್ಷತ್ರದಲ್ಲಿಯೂ ಇನ್ನೊಬ್ಬನು ಸೂರ್ಯನಕ್ಷತ್ರದಲ್ಲಿಯೂ ಇದ್ದಾಗ ಮಳೆಯು ಬರುತ್ತದೆ. ಇಬ್ಬರೂ ಸೂರ್ಯನಕ್ಷತ್ರದಲ್ಲಿದ್ದಾಗ ಬರೇ ಗಾಳಿಯು ಬರುತ್ತದೆ. ಇಬ್ಬರೂ ಚಂದ್ರನಕ್ಷತ್ರದಲ್ಲಿರುವಾಗ, ಮೇಘದರ್ಶನ ಮಾತ್ರ ಏರ್ಪಡುತ್ತದೆ. ಇದು ಮೂರನೆಯ ಪ್ರಕಾರ.

4) ಹಿಂದೆ ಹೇಳಿದ ಸ್ತ್ರೀನಕ್ಷತ್ರ ಒಂದರಲ್ಲಿ ಚಂದ್ರನೂ ಸೂರ್ಯನು ಪುರುಷನಕ್ಷತ್ರ ಒಂದರಲ್ಲಿ ಇದ್ದರೆ ಮಳೆಯು ಬರುತ್ತದೆ. ಇಬ್ಬರೂ ಪುರುಷನಕ್ಷತ್ರದಲ್ಲಿ ವಾಸಿಸುತ್ತಿದ್ದರೆ ಮಳೆಯು ಬರುವುದಿಲ್ಲ. ಇಬ್ಬರೂ ಸ್ತ್ರೀನಕ್ಷತ್ರದಲ್ಲಿದ್ದರೆ ಮೇಘದರ್ಶನ ಮಾತ್ರ ಏರ್ಪಡುತ್ತದೆ. ಇಬ್ಬರೂ ನಪುಂಸನಕ್ಷತ್ರದಲ್ಲಿದ್ದರೂ ಒಬ್ಬನು ನಪುಂಸಕನಕ್ಷತ್ರದಲ್ಲಿದ್ದು ಇನ್ನೊಬ್ಬನು ಉಳಿದ ನಕ್ಷತ್ರದಲ್ಲಿದ್ದರೂ ಬರೇ ಗಾಳಿಯು ಬೀಸುತ್ತದೆ. ಇದು ನಾಲ್ಕನೆಯ ಪ್ರಕಾರ.

ಮೇಲ್ಕಂಡ ನಾಲ್ಕು ಪ್ರಕಾರಗಳಿಂದಲೂ ಮಳೆಯ ಯೋಗವು ಕಂಡುಬಂದರೆ ಪೂರ್ಣವೃಷ್ಟಿಯೋಗವೆಂದು ತಿಳಿಯಬೇಕು. ಮೂರು ಪ್ರಕಾರಗಳಿಂದ ಕಂಡುಬಂದರೆ ಮುಕ್ಕಾಲುವೃಷ್ಟಿಯೋಗವೆಂದೂ ಎರಡು ಪ್ರಕಾರಗಳಿಂದ ಕಂಡುಬಂದರೆ ಅರ್ಧ ವೃಷ್ಟಿಯೋಗವೆಂದೂ ಒಂದೇ ಪ್ರಕಾರದಿಂದ ಕಂಡು ಬಂದರೆ ಪಾದವೃಷ್ಟಿ ಯೋಗವೆಂದೂ ತಿಳಿಯಬೇಕು.

ರವ್ಯಾದಿಗ್ರಹಗಳ ಪಾದಪ್ರವೇಶ ಮತ್ತು ಫಲ

ರವ್ಯಾದಿಗ್ರಹಗಳು ರಾಶಿ ಬದಲಾಗುವ ಕಾಲದಲ್ಲಿ ಆಯಾ ಗ್ರಹಗಳು ಯಾವ ರಾಶಿಯಲ್ಲಿ ಇರುವವೋ ಆ ರಾಶಿಯನ್ನು ತನ್ನ ಜನ್ಮರಾಶಿಯಿಂದ ಗಣನಮಾಡಿ ಹನ್ನೆರಡರಿಂದ ಭಾಗಿಸಿ ಬಂದ ಶೇಷದಿಂದ ಈ ಫಲವನ್ನು ತಿಳಿಯಬೇಕು.

ಸ್ಥಾನಗಳು	ಪಾದ	ಫಲ	ವಿಶೇಷ ಫಲ
1,5,9	ಸುವರ್ಣ	ಚಿಂತಾ	ಗುರುವಿಗೆ ಶುಭ
2,6,10	ರೌಪ್ಯ	ಧನಲಾಭ	ಎಲ್ಲ ಗ್ರಹಗಳಿಗೆ ಶುಭ
3,7,11	ತಾಮ್ರ	ಲಕ್ಷ್ಮೀ ಪ್ರಾಪ್ತಿ	ಎಲ್ಲ ಗ್ರಹಗಳಿಗೆ ಶುಭ
4,8,12	ಲೋಹ	ಕಷ್ಟ	ಶನಿ ರಾಹು ಕೇತುಗಳಿಗೆ ಶುಭ

ಈ ಪಾದ ಪ್ರವೇಶವು ವಧೂವರರ ಸಾಲಾವಳಿಗಳಲ್ಲಿಯೂ ಪರಸ್ಪರ ವಿಚಾರ ಮಾಡಬೇಕು. ಯಾರಿಂದ ಯಾರಿಗೆ ಯಾವ ಫಲವೋ ಅದನ್ನು ಮೇಲಿನಂತೆ ತಿಳಿಯಬೇಕು.

ನಿಷ್ಕ್ರಮಣಕ್ಕೆ

ಉ.ಫ ಉಷಾ ಉಭಾ ರೇವತೀ ರೋಹಿಣೀ ಅಶ್ವಿನೀ ಹಸ್ತಾ ಪುಷ್ಯಾ ಅನೂ, ಮೃಗಶಿರಾ ಚಿತ್ರಾ ಪುನರ್ವಸು ಸ್ವಾತೀ ಶುಭ.

ಲಗ್ನವಾದ ಮೇಲೆ ಮೊದಲು ವರ್ಷದಲ್ಲಿ ಗೃಹಪ್ರವೇಶಕ್ಕೆ ದೋಷ

ಲಗ್ನವಾದ ಮೇಲೆ ಮೊದಲು ಆಷಾಢ ಮಾಸದಲ್ಲಿ–ವಧು ಗಂಡನ ಮನೆಯಲ್ಲಿದ್ದರೆ ಅತ್ತೆಗೆ ದೋಷ. ಕ್ಷಯಮಾಸದಲ್ಲಿದ್ದರೆ ತನಗೆ ದೋಷ. ಜ್ಯೇಷ್ಠಮಾಸದಲ್ಲಿದ್ದರೆ ಭಾವನಿಗೆ ದೋಷ. ಪುಷ್ಯಮಾಸದಲ್ಲಿದ್ದರೆ ಮಾವನಿಗೆ ದೋಷ. ಅಧಿಕಮಾಸದಲ್ಲಿದ್ದರೆ ಪತಿಗೆ ದೋಷ. ಚೈತ್ರಮಾಸದಲ್ಲಿ ತಂದೆಯ ಮನೆಯಲ್ಲಿದ್ದರೆ ತಂದೆಗೆ ದೋಷ. ಇವರು ಇಲ್ಲದಿದ್ದರೆ ಭಯವಿಲ್ಲ.

ಕ್ರಯ–ವಿಕ್ರಯಕ್ಕೆ

ರೇವತೀ ಭರಣೀ ಅಶ್ವಿನೀ ಶ್ರವಣಾ ಚಿತ್ರಾ ವಿಶಾಖಾ ಪೂರ್ವಾ ಉತ್ತರಾತ್ರಯ ಕೃತ್ತಿಕಾ ಆಶ್ಲೇಷಾ ಶುಭ.

ಗೃಹನಿರ್ಮಾಣಕ್ಕೆ

ರೋಹಿಣೀ, ಅಶ್ವಿನೀ ಉ.ಫ ಉ.ಷಾ ಉ.ಭಾ ರೇವತೀ ಮೂಲಾ ಚಿತ್ರಾ ಶತತಾರಾ ಸ್ವಾತೀ ಧನಿಷ್ಠಾ ಪುಷ್ಯಾ ಶುಭ.

ನೇಗಿಲು ಹೊಡೆಯುವುದಕ್ಕೆ (ಕೃಷ್ಯಾರಂಭಕ್ಕೆ)

ಮೂಲಾ, ಉತ್ತರಾತ್ರಯ, ಹಸ್ತಾ, ಮೃಗಶಿರಾ, ರೋಹಿಣೀ, ಮಘಾ, ಸ್ವಾತೀ, ಅನೂರಾಧಾ, ರೇವತೀ, ವಿಶಾಖಾ, ಅಶ್ವಿನೀ, ಪುಷ್ಯಾ, ಚಿತ್ರಾ ಈ ನಕ್ಷತ್ರಗಳಲ್ಲಿಯೂ, ರವಿ ಚಂದ್ರ ಮಂಗಳ ಈ ವಾರಗಳಲ್ಲಿಯೂ, 1, 3, 5, 7, 10, 11,13 ತಿಥಿಗಳಲ್ಲಿಯೂ ನೇಗಿಲನ್ನು ಪೂಜೆ ಮಾಡಿ ಉತ್ತರಾಭಿಮುಖವಾಗಿ ಹೊಡೆಯಲಿಕ್ಕೆ ಪ್ರಾರಂಭಿಸಬೇಕು.

ಹಲಚಕ್ರ

ಮಳೆಯ ನಕ್ಷತ್ರದಿಂದ ಕ್ರಮವಾಗಿ 3 ನಕ್ಷತ್ರ ಅಶುಭ 3 ನಕ್ಷತ್ರ ಶುಭ, 3 ನಕ್ಷತ್ರ ಅಶುಭ, 5 ನಕ್ಷತ್ರ ಶುಭ, 3 ನಕ್ಷತ್ರ ಅಶುಭ, 5 ನಕ್ಷತ್ರ ಶುಭ, 3 ನಕ್ಷತ್ರ ಅಶುಭ, 3 ನಕ್ಷತ್ರ ಶುಭ, ಇವುಗಳನ್ನು ತಿಳಿದು ಹೊಲದ ಕೆಲಸವನ್ನು ಪ್ರಾರಂಭಿಸಬೇಕು.

ಬೆಳೆ ಕೊಯ್ಯಲಿಕ್ಕೆ

ಮೂ, ಜ್ಯೇ, ಆದ್ರಾ, ಪೂ.ಭಾ, ಹಸ್ತಾ ಕೃತ್ತಿಕಾ ಧನಿಷ್ಠಾ, ಮೃಗ, ಶ್ರವಣಾ, ಸ್ವಾತೀ ಪುನರ್ವಸು ಉ.ಷಾ ಉ.ಭಾ ಈ ನಕ್ಷತ್ರಗಳಲ್ಲಿ ಶುಭ.

ಕಣ ಮಾಡುವುದಕ್ಕೆ

ಶ್ರವ, ಪೂ.ಭಾ., ಉ.ಭಾ., ಜ್ಯೇಷ್ಠಾ, ರೋಹಿ, ಮೂಲಾ, ಅನೂ, ರೇವ, ಶುಭ.

ಮೇಟಿ ನಿಲ್ಲಿಸುವುದಕ್ಕೆ

ವಿಶಾಖಾ ಪೂ.ಭಾ ಮೂಲಾ ಉತ್ತರಾ ಉ–ಷಾ ಉ.ಭಾ ಶುಭ.

ರಾಶಿ ತುಂಬುವುದಕ್ಕೆ ರಾಹು

1) ರವಿವಾರ ಗುರುವಾರ ಪೂರ್ವಕ್ಕೆ; 2) ಸೋಮವಾರ; ಶುಕ್ರವಾರ ದಕ್ಷಿಣಕ್ಕೆ 3) ಮಂಗಳವಾರ ಪಶ್ಚಿಮಕ್ಕೆ 4) ಬುಧವಾರ ಶನಿವಾರ ಉತ್ತರಕ್ಕೆ ಹೀಗೆ ರಾಹು ಇರುತ್ತಾನೆ. ಸಮ್ಮುಖ ಬಲಕ್ಕೆ ಬಿಟ್ಟು, ಹಿಂಭಾಗದಲ್ಲಿ ಎಡದಲ್ಲಿ ಮಾಡಿಕೊಂಡು, ರಾಶಿಯನ್ನು ಬಲಕ್ಕೆ ಮಾಡಿಕೊಂಡು ತುಂಬಬೇಕು.

ಆಯುಸಾಧನ

ಅಗಲವನ್ನು ಉದ್ದಳತೆಯಿಂದ ಗುಣಿಸಿದ್ದು ಕ್ಷೇತ್ರ ಫಲ ಅದನ್ನು 9ರಿಂದ ಗುಣಿ 8 ರಿಂದ ಭಾಗಿಸಿ ನಿಂತ ಶೇಷವು ಕ್ರಮವಾಗಿ 1. ಧ್ವಜ 2. ಧೂಮ 3. ಸಿಂಹ 4. ನಾಯಿ 5. ಎತ್ತು 6. ಕತ್ತೆ 7. ಆನೆ 8. ಒಂಟೆ ಹೀಗೆ 8 ಆಯಗಳು. ಇವುಗಳಲ್ಲಿ 4 ವಿಷಮಾಯಗಳು ಶುಭ 4 ಸಮಾಯಗಳು ಅಶುಭ.

ಅಗ್ನಿಚಕ್ರ ನೋಡುವ ಕ್ರಮ

ತಿಥಿ ವಾರ ಸಂಖ್ಯೆಯನ್ನು ಕೂಡಿಸಿ, ಒಂದನ್ನು ಸೇರಿಸಿ 4 ರಿಂದ ಭಾಗಿಸಿ ನಿಂತ ಶೇಷವು ಶೂನ್ಯ ಮತ್ತು 3 ಸಂಖ್ಯೆ ಉಳಿದರೆ ಅಗ್ನಿ ಭೂಮಿಯಲ್ಲಿ ಇರುವುದು. 1 ಉಳಿದರೆ ಸ್ವರ್ಗದಲ್ಲಿ 2 ಉಳಿದರೆ ಪಾತಾಳದಲ್ಲಿ ಇರುವುದು. ಆವಾಗ ಶಾಂತಿಯನ್ನು ಮಾಡಕೂಡದು. ಭೂಮಿಯಲ್ಲಿ ಅಗ್ನಿ ಇರುವಾಗ್ಗೆ ಮಾಡಬೇಕು. –ವಾಸ್ತುಶಾಂತಿಗೆ ಅಗ್ನಿನೋಡುವ ಸಂಪ್ರದಾಯವಿಲ್ಲ.

ದೇವತಾ ಪ್ರತಿಷ್ಠೆಗೆ

ಹ, ಚಿ, ಸ್ವಾ,ಅನೂ, ಜ್ಯೇ, ಮೂ, ಶ್ರ ,ಧ ,ಶ ,ರೇ, ಅಶ್ವಿ, ಪುನ, ಪುಷ್ಯಾ, ಉ.ಫ, ಉಷಾ, ಉಭಾ, ಮೃಗ, ಈ ನಕ್ಷತ್ರಗಳು. ಚೈತ್ರ ವೈಶಾಖ ಜ್ಯೇಷ್ಠ ಮಾಘ ಫಾಲ್ಗುಣ ಮಾಸಗಳಲ್ಲಿ ದೇವತಾಪ್ರತಿಷ್ಠಾಪನಕ್ಕೆ ನಿಷೇಧವಿಲ್ಲ. 1, 2, 3 ,5, 6, 7, 9, 10 ತಿಥಿಗಳು, ರವಿ ಬುಧ ಗುರು ಶುಕ್ರ ಚಂದ್ರವಾರಗಳು ಉತ್ತಮ.

ಪ್ರಶ್ನವಿಭಾಗ

1) ಇಚ್ಛಿತ ಕಾರ್ಯಸಿದ್ಧಿಯ ಪ್ರಶ್ನೆ

ಪ್ರಶ್ನೆ ಕಾಲದ ಲಗ್ನದಿಂದ ತ್ರಿಕೋಣದಲ್ಲಿ ಅಂದರೆ 5, 9 ಸ್ಥಾನಗಳಲ್ಲಾಗಲಿ ಅಥವಾ ಕೇಂದ್ರಸ್ಥಾನಗಳಾದ 1, 4 ,7 ,10 ಇವುಗಳಲ್ಲಾಗಲಿ ಗುರು ಶುಕ್ರ ಬುಧ ಚಂದ್ರ ಈ ನಾಲ್ಕು ಗ್ರಹಗಳಲ್ಲಿ ಯಾವುದೇ ಗ್ರಹವು ಇದ್ದರೂ ಇಚ್ಛಿತ ಕಾರ್ಯವು ಮನಸ್ಸಿನಂತೆ ಆಗುವುದೆಂದು ಹೇಳಬೇಕು.

2) ನಷ್ಟವಸ್ತು ಪ್ರಶ್ನೆ

ಕಳಕೊಂಡ ವಸ್ತುವಿನ ಬಗ್ಗೆ ಪ್ರಶ್ನೆ ಕೇಳಿದೊಡನೆ ಆ ಕಾಲದಲ್ಲಿ ಕರ್ಕ ವೃಶ್ಚಿಕ ಲಗ್ನವಿದ್ದರೆ ಹೋದ ವಸ್ತು ಮನೆಯಲ್ಲಿಯೇ ಇರುವುದು. ಮಕರ ಮೀನ ಇವುಗಳ ಪೈಕಿ ಒಂದು ಲಗ್ನವಾದರೆ ಮನೆಯಲ್ಲಿಯೇ ಸಂದಿಗೊಂದಿ ಗುದ್ದುಗಳನ್ನು ನೋಡಬೇಕು. ಹುಡುಕಿದರೆ ಆ ವಸ್ತುವು ಹೋದ ಸ್ಥಳದಲ್ಲಿಯೇ ಸಿಗುವುದು. ಉಳಿದಲಗ್ನವಾದರೆ ಹೊರಗೆ ಹೋಗಿರುವುದು ಸಿಗುವುದು ಕಠಿಣ.

ನಷ್ಟವಸ್ತು ಪ್ರಶ್ನೆ

ಪ್ರಶ್ನೆ ಕಾಲದ ತಿಥಿ ನಕ್ಷತ್ರ ಪ್ರಹರ ಇವುಗಳ ಸಂಖ್ಯೆಯನ್ನು ಒಟ್ಟುಗೂಡಿ 8 ರಿಂದ ಗುಣಿಸಿ 7 ರಿಂದ ಭಾಗಿಸಬೇಕು, ಶೇಷವು 1 ಉಳಿದರೆ ನಷ್ಟವಸ್ತುವು ಭೂಮಿಯಲ್ಲಿ ಹುಗಿದಿರುವದೆಂದು ತಿಳಿಯಬೇಕು. 2 ಉಳಿದರೆ ಭಾಂಡೆಯಲ್ಲಿ 3 ಉಳಿದರೆ ನೀರಿನಲ್ಲಿ. 4 ಉಳಿದರೆ ಆಕಾಶದಲ್ಲಿ. 5 ಉಳಿದರೆ ಹೊಟ್ಟಿನಲ್ಲಿ. 6 ಉಳಿದರೆ ಶೆಗಣಿಯಲ್ಲಿ. 7 ಉಳಿದರೆ ಬೂದಿಯಲ್ಲಿ ಇದೆ ಎಂದು ಹೇಳಬೇಕು.

3) ಪಶುಗಳು ತಪ್ಪಿಸಿಕೊಂಡಿದ್ದರೆ

ಸೂರ್ಯನಕ್ಷತ್ರದಿಂದ ಚಂದ್ರನಕ್ಷತ್ರವು 9 ರವರೆಗೆ ಇದ್ದರೆ ಪಶು ಅಡವಿಯಲ್ಲಿ ಮೇಯುತ್ತದೆ. 10 ರಿಂದ 15ರ ವರೆಗೆ ಆದರೆ ಮಾರ್ಗದಲ್ಲಿದೆ. 16 ರಿಂದ 22ರ ವರೆಗೆ ಇದ್ದರೆ ತೀವ್ರವಾಗಿ ಮನೆಗೆ ಬರುತ್ತದೆ. 23 ರಿಂದ 25ರ ವರೆಗೆ ಬಂದರೆ ಸಿಗುವುದು ಕಠಿಣ. 26 ರಿಂದ 27ರ ವರೆಗೆ ಇದ್ದರೆ ಪಶುವು ಸಂಕಟದಲ್ಲಿದೆಯೆಂದು ತಿಳಿದು ಕೊಳ್ಳಬೇಕು.

4) ಹೋದ ವಸ್ತುವು ಸಿಗುವುದಕ್ಕೆ ಮಂತ್ರವು

ಕಾರ್ತವೀರ್ಯಾರ್ಜುನೋ ನಾಮ ರಾಜಾ ಬಾಹುಸಹಸ್ರವಾನ್ ।
ತಸ್ಯ ಸ್ಮರಣಮಾತ್ರೇಣ ಗತಂ ನಷ್ಟಂ ಚ ಲಭ್ಯತೇ ।

ಕಳಕೊಂಡ ಮನುಷ್ಯನು ಸ್ನಾನ ಮಾಡಿ ನಿರ್ಮಲಚಿತ್ತನಾಗಿ ಮೇಲೆ ಹೇಳಿದ ಮಂತ್ರವನ್ನು 108 ಬಾರಿ ಪಠನ ಮಾಡಬೇಕು.

5) ರೋಗಪ್ರಶ್ನೆಯ ವಿಚಾರ

ಪ್ರಶ್ನೆ ಮಾಡಿದ ಕಾಲದ ಮೇಲಿಂದ ಪ್ರಶ್ನಲಗ್ನವೇ ವೈದ್ಯಸ್ಥಾನವೆಂತಲೂ ಚತುರ್ಥವು ರೋಗಿಸ್ಥಾನವೆಂತಲೂ 7ನೆಯ ಸ್ಥಾನವು ರೋಗಸ್ಥಾನವೆಂತಲೂ 10ನೆಯ ಸ್ಥಾನವು ಔಷಧಸ್ಥಾನವೆಂತಲೂ ತಿಳಿಯಬೇಕು. ಆ ಸ್ಥಾನಗಳನ್ನು ಸ್ಪಷ್ಟವಾಗಿ ವಿಚಾರ ಮಾಡಬೇಕು. ವೈದ್ಯನ ಹಾಗೂ ಔಷಧಸ್ಥಾನವು ಸಬಲವಿದ್ದ ಪಕ್ಷದಲ್ಲಿ ಬೇನೆಯು ತೀವ್ರದಲ್ಲಿ ಗುಣವಾಗುವುದೆಂದು ಹೇಳಬೇಕು. ಆ ಸ್ಥಾನಗಳು ನಿರ್ಬಲವಿದ್ದ ಪಕ್ಷದಲ್ಲಿ ಬೇನೆಯು ಗುಣವಾಗುವುದಿಲ್ಲವೆಂದು ಹೇಳಬೇಕು.

ಪ್ರಶ್ನಲಗ್ನದಿಂದ ದೋಷಗಳನ್ನು ಹೇಳುವುದು

6) ಮೇಷ- ಪಿತ್ತದೋಷ ಉಷ್ಣ । ವೃಷಭ-ದೇವಕೋಪ ಜ್ವರ । ಮಿಥುನ-ಮಹಾಮಾಯಾಕೋಪ, ವಾತಜ್ವರ । ಕರ್ಕ- ಶಾಕಿನಿ ಮೌನ ಹಾಸ್ಯಬಾಧೆ, ರೋದನ । ಸಿಂಹ-ಪ್ರೇತಬಾಧೆ, ಹಿಮಜ್ವರ । ಕನ್ಯಾ-ಗ್ರಹದೋಷ, ಅರುಚಿ ಕ್ರೋಧ । ತುಲಾ - ಕ್ಷೇತ್ರಪಾಲಬಾಧೆ, ಸಂತತಿಪೀಡೆ । ವೃಶ್ಚಿಕ - ನಾಗಬಾಧೆ, ದಾಹ ಬುದ್ಧಿಭ್ರಂಶ । ಧನು - ದೇಹದಲ್ಲಿ ಹುಟ್ಟಿದ ರೋಗ । ಮಕರ-ಶಂಪಾಬಾಧೆ, ದೇಹಭಯ ಜ್ವರ । ಕುಂಭ- ದುಷ್ಟ ಪ್ರೇತಬಾಧೆ, ದೇಹಪೀಡಾ । ಮೀನ-ಯೋಗಿನೀಬಾಧೆ, ಮನೋವ್ಯಥಾ ॥

11, 2, 8 ರಲ್ಲಿ ರವಿ, ಕ್ಷೇತ್ರಪಾಲಬಾಧೆ 7, 12 ಗುರು ದೇವರಬಾಧೆ, 1, 6, 8, 12 ಚಂದ್ರ ದೇವೀಬಾಧೆ, 7,12 ಶುಕ್ರ ಭೂತಬಾಧೆ, 11, 12 ಕುಜ ಶಾಕಿನಿ ಬಾಧೆ, 7, 12 ಶನಿಃ ವಾತರೋಗ ।, 7, 12 ಬುಧ ವನದೇವೀಬಾಧೆ ।,7,12 ರಾಹುಃ ಪ್ರೇತದೋಷ. 3, 6, 9, 12 ಈ ಸ್ಥಾನಗಳಲ್ಲಿ ಪಾಪಗ್ರಹಗಳಿದ್ದರೆ ಕುಲದಲ್ಲಿ ವಿಷ, ಶಸ್ತ್ರ, ಜಲಾದಿಗಳಿಂದ ಮರಣ.

7) ಸಂಖ್ಯಾ ಪ್ರಶ್ನೆ

ಪ್ರಶ್ನೆ ಕೇಳುವವರಿಗೆ 108 ಅಂಕಿಗಳಲ್ಲಿ ಒಂದು ಅಂಕಿಯನ್ನು ಹೇಳಲು ತಿಳಿಸಬೇಕು. ಅವರು ಹೇಳಿದ ಅಂಕೆಯನ್ನು 12 ರಿಂದ ಭಾಗಿಸಿ 1,7,9 ಉಳಿದರೆ ಆಲಸ್ಯದಿಂದ ಕಾರ್ಯಸಿದ್ಧಿಯು 2, 3, 6, 11, 0 ಉಳಿದರೆ ತೀವ್ರದಲ್ಲಿ ಕಾರ್ಯಸಿದ್ಧಿ 4, 5, 8, 10 ಉಳಿದರೆ ಕಾರ್ಯಹಾನಿ ಎಂದು ಹೇಳಬೇಕು.

1) ಪಂಥಾ ಪ್ರಶ್ನೆ

ಪ್ರಶ್ನ ಲಗ್ನದಿಂದ 2, 3, 4 ಸ್ಥಾನಗಳಲ್ಲಿ ಬಲಿಷ್ಠವಾದ ಶುಭಗ್ರಹನಿದ್ದರೆ ಅಥವಾ ಅಷ್ಟಮದಲ್ಲಿ ಚಂದ್ರನಿದ್ದು, ಕೇಂದ್ರಗಳಲ್ಲಿ (1, 4, 7, 10 ಸ್ಥಾನಗಳಲ್ಲಿ) ಪಾಪಗ್ರಹಗಳು, ಇರದಿದ್ದರೆ, ಪ್ರವಾಸಿಯು ಸುಖದಿಂದ ಬರುವನು. ಕೇಂದ್ರಗಳಲ್ಲಿ ಶುಭಗ್ರಹಗಳಿದ್ದರೆ ಲಾಭಸಮೇತನಾಗಿ ಬರುವನು.

2) ದನಗಳು ಕಳೆದುಹೋಗಿದ್ದರೆ ನಕ್ಷತ್ರ ಪರವಾಗಿ ಪ್ರಶ್ನೆ ನೋಡುವುದು

ಅಂಧ	ಮಂದ	ಮಧ್ಯ	ಸುಲೋಚನ
ರೋಹಿ	ಮೃಗ	ಆರ್ದ್ರಾ	ಪುನರ್ವಸು
ಪುಷ್ಯಾ	ಆಶ್ಲೇಷಾ	ಮಘಾ	ಪೂರ್ವಾ
ಉತ್ತ	ಹಸ್ತಾ	ಚಿತಾ	ಸ್ವಾತೀ
ವಿಶಾಖಾ	ಅನೂ	ಜ್ಯೇಷ್ಠಾ	ಮೂಲಾ
ಪೂ.ಷಾ	ಉ.ಷಾ	ಅಬಿ	ಶ್ರವಣಾ
ಧನಿಷ್ಠಾ	ಶತ	ಪೂ.ಭಾ	ಉ.ಭಾ
ರೇವತೀ	ಅಶ್ವಿ	ಭರ	ಕೃತ್ತಿ
ಪೂರ್ವ	ದಕ್ಷಿಣ	ಪಶ್ಚಿಮ	ಉತ್ತರ
ಸಿಗುವದು	ಸಿಗುವದು	ಸಿಗುತ್ತದೆ	ಸಿಗುವುದಿಲ್ಲ

3) ಪ್ರಕಾರ ಪಂಥಾ ಪ್ರಶ್ನೆ

ತಿಥಿಪ್ರಹರಸಂಯುಕ್ತಂ ತಾರಕಾವಾರಮಿಶ್ರಿತಮ್ ।
ಸಪ್ತಭಿಸ್ತು ಹರೇದ್ಭಾಗಂ ಶೇಷಂ ತು ಫಲಮಾದಿಶೇತ್ ॥

1 ಉಳಿದರೆ ಊರಲ್ಲಿರುವರು.
2 " ಸುಖದಿಂದ ಬರುವರು.
3 " ಅರ್ಧಹಾದಿಗೆ ಬಂದಿರುವರು.
4 " ಊರು ಸಮೀಪಕ್ಕೆ ಬಂದಿರುವರು.
5 " ಊರುಬಿಟ್ಟು ಪುನಃ ತಿರುಗಿಹೋಗಿರುವರು
6 " ರೋಗಪೀಡಿತರಾಗಿರುವರು
0 " ಸದ್ಯಕ್ಕೆ ಬರುವುದಿಲ್ಲ.

ತೇಜಿಮುಂದಿಯ ಭವಿಷ್ಯ

ಪ್ರಶ್ನೆ ಕಾಲದಲ್ಲಿರುವ ತಿಥಿ ವಾರ ನಕ್ಷತ್ರ ಮತ್ತು ಸೂರ್ಯಸಂಕ್ರಮಣ ಕಾಲದಲ್ಲಿದ್ದ ನಕ್ಷತ್ರ ತಿಥಿ–ಯಾಮ–ನಕ್ಷತ್ರ–ವಾರಗಳ (ಪ್ರಶ್ನಕಾಲದಲ್ಲಿನ) ಸಂಖ್ಯೆಯನ್ನು ಒಟ್ಟುಗೂಡಿಸಿ, 7 ರಿಂದ ಭಾಗಿಸಿದಾಗ ಶೇಷವು ಇವೆಲ್ಲವುಗಳನ್ನು ಒಂದುಗೂಡಿಸಿ ಆಯಾ ಧಾನ್ಯದ ಹೆಸರಿನ ಅಕ್ಷರಗಳ ಸಂಖ್ಯೆಯನ್ನು ಸೇರಿಸಿ 3 ರಿಂದ ಭಾಗಿಸಬೇಕು. 1 ಉಳಿದರೆ ಮಂದಿ, 2 ಉಳಿದರೆ ಸಮ 3 ಉಳಿದರೆ ತೇಜಿಯೆಂದು ತಿಳಿಯಬೇಕು.

ಹರಿವಾಸರ ಮಾಡುವ ವಿಧಾನ

ದಶಮೀ	ಘಟೀ-ಪಳ
ಆರ್ಯದಶಮೀ ತಿಥಿ ಘಟೀ	52-05
ಆರ್ಯ ಏಕಾದಶೀತಿಥಿ ಘಟೀ	46-17
ಏಕಾದಶೀ ಆದ್ಯಂತ	60-00(-)52-05(+)46-17
ಏಕಾದಶೀ ಆದ್ಯಂತ ಮುಕ್ಕಾಲುಭಾಗ	40-39
ದಶಮಿಯದಿನ ಸಂದ ಏಕಾದಶೀ	7-55 ಕಳೆದಾಗ
ಸೂರ್ಯೋದಯಾದಿ ರಾತ್ರಿ ಹರಿವಾಸರ	32-44
ದ್ವಾದಶೀ	ಘಟೀ-ಪಳ
ಏಕಾದಶೀತಿಥಿ ಘಟೀ	46-17
ದ್ವಾದಶೀ ತಿಥಿ ಘಟೀ	52-05
ಏಕಾದಶೀ ಆದ್ಯಂತ	60-00(-)46-17(+)52-06
ದ್ವಾದಶೀ ಆದ್ಯಂತದ ಕಾಲುಭಾಗ	16-26.5
ದಶಮೀನಂತರದಏಕಾದಶೀಘಟೀ	13-43.5
ಸೂರ್ಯೋದಯಾನಂತರಪ್ರಾತಃ	
ಹರಿವಾಸರ	2.42.5

ಉಪಯುಕ್ತ ಜ್ಯೋತಿಷ್ಯ ಮಾಹಿತಿ

ವಧೂ ಪ್ರವೇಶಕ್ಕೆ : ವಿವಾಹವಾದ ದಿನದಿಂದ 16 ದಿವಸಗಳಲ್ಲಿ ಸಮದಿನ ಮತ್ತು 5,7,9ನೇ ದಿನಗಳಲ್ಲಿ, 16 ದಿನಗಳ ನಂತರ ಒಂದು ತಿಂಗಳು ತುಂಬುವವರೆಗೆ ವಿಷಮ ದಿನಗಳಲ್ಲಿ, ಅನಂತರ ವಿಷಮ ತಿಂಗಳಲ್ಲಿ, ವಿಷಮ ವರ್ಷಗಳಲ್ಲಿ ವೈಶಾಖ, ಮಾರ್ಗಶಿರ, ಫಾಲ್ಗುಣ ಮಾಸಗಳಲ್ಲಿ, ಶುಕ್ಲಪಕ್ಷದಲ್ಲಿ ದ್ವಿತೀಯಾ, ತೃತೀಯಾ, ಪಂಚಮಿ, ಷಷ್ಠಿ, ಸಪ್ತಮಿ, ಅಷ್ಟಮಿ, ದಶಮಿ, ಶತತಾರಾ, ರೇವತಿ ಈ ನಕ್ಷತ್ರಗಳಲ್ಲಿ, ರವಿ, ಮಂಗಳ, ಶನಿವಾರಗಳನ್ನು, ಕುಯೋಗಗಳನ್ನು ಬಿಟ್ಟು ನವವಧೂವನ್ನು ಮನೆ ತುಂಬಿಸಿಕೊಳ್ಳತಕ್ಕದ್ದು.

ವಿವಾಹದ ನಂತರ ವಧುವಿಗೆ ನಿಯಮಗಳು : ವಿವಾಹವಾದ ಮೇಲೆ ವಧೂವು ಮೊದಲಿನ ಆಷಾಢ ಮಾಸದಲ್ಲಿ ಅತ್ತೆಯ ಮನೆಯಲ್ಲಿ ಇರಕೂಡದು. ಒಂದು ವೇಳೆ ವಾಸ ಮಾಡಿದರೆ ಅತ್ತೆಗೆ ಅನಿಷ್ಟವು. ಕ್ಷಯ ಮಾಸದಲ್ಲಿ ಅತ್ತೆಯ ಮನೆಯಲ್ಲಿದ್ದರೆ ವಧೂವಿಗೆ ಅನಿಷ್ಟವು, ಜ್ಯೇಷ್ಠಮಾಸದಲ್ಲಿದ್ದರೆ ಭಾವನಿಗೆ ಗಂಡಾಂತರ, ಪುಷ್ಯಮಾಸದಲ್ಲಿದ್ದರೆ ಮಾವನಿಗೆ ಗಂಡಾಂತರ ಹಾಗೂ ಅಧಿಕ ಮಾಸದಲ್ಲಿದ್ದರೆ ಗಂಡನಿಗೆ ಗಂಡಾಂತರವಿರುವುದು. ಅಲ್ಲದೇ ವಧುವು ಚೈತ್ರ ಮಾಸದಲ್ಲಿ ತಂದೆಯ ಮನೆಯಲ್ಲಿದ್ದರೆ ತಂದೆಗೆ ಗಂಡಾಂತರ. ಒಂದು ವೇಳೆ ಗಂಡಾಂತರವುಳ್ಳವರು ಜೀವಿಸಿರದಿದ್ದಲ್ಲಿ ಯಾವುದೇ ದೋಷವಿಲ್ಲ.

ದತ್ತಕ ವಿಧಾನ : ಅಶ್ವಿನೀ, ಪುಷ್ಯ, ಹಸ್ತಾ, ಚಿತ್ರಾ, ಸ್ವಾತಿ, ವಿಶಾಖ, ಅನುರಾಧಾ, ಧನಿಷ್ಠಾ, ಈ ನಕ್ಷತ್ರಗಳಲ್ಲಿ, ರವಿ, ಮಂಗಳ, ಗುರು, ಶುಕ್ರವಾರಗಳಲ್ಲಿ ವಿಶೇಷವಾಗಿ ಸಿಂಹ, ವೃಷಭ ಲಗ್ನಗಳಲ್ಲಿ ದತ್ತಕ ಸ್ವೀಕಾರವು ಯೋಗ್ಯವಾಗಿದೆ.

ವೈಧವ್ಯ ಯೋಗ : ಯಾವ ಕನ್ಯೆಯು ಕುಂಡಲಿಯಲ್ಲಿ ಜನ್ಮಾಲಗ್ನದಿಂದ ಅಷ್ಟಮದಲ್ಲಿ ಕ್ರೂರಗ್ರಹವಿರುವುದೋ ಆ ಕನ್ಯೆಯು ವೈಧವ್ಯವನ್ನು ಹೊಂದುವಳು. ಒಂದು ವೇಳೆ ಅಪವಾದವಿದ್ದಲ್ಲಿ ಅಂದರೆ ಆ ಗ್ರಹಗಳು ನಿರ್ಬಲ ಅಥವಾ ಸಂಧ್ಯಂಶದಲ್ಲಿ ಇದ್ದರೆ ದೋಷವಿರುವುದಿಲ್ಲ.

ವಿಷಕನ್ಯಾಯೋಗ: ರವಿ, ಮಂಗಳ, ಶನಿವಾರಗಳಲ್ಲಿ ಕೃತ್ತಿಕಾ, ಆಶ್ಲೇಷಾ, ಶತತಾರಾ ಇವುಗಳಲ್ಲಿ ಯಾವುದಾದರೊಂದು ತಿಥಿಯು ಜನನಕಾಲದಲ್ಲಿ ಇದ್ದರೆ ಆ ಸಮಯದಲ್ಲಿ ಹುಟ್ಟಿದ ಕನ್ಯೆಯು ವಿಷಕನ್ಯೆಯಾಗುವಳು.

ಅ) ಕನ್ನೆಯ ಜನ್ಮಲಗ್ನದಲ್ಲಿ ಎರಡು ಶುಭಗ್ರಹಗಳು ತಮ್ಮ ಶತ್ರುಸ್ಥಾನದಲ್ಲಿದ್ದರೆ ಆ ಕನ್ಯೆಯು ವಿಷಕನ್ಯೆಯಾಗುವಳು.

ಇ) ವರನ ಕುಂಡಲಿಯಲ್ಲಿಯ ಶತ್ರು ಸ್ಥಾನದಲ್ಲಿರುವ ಒಂದು ಪಾಪ ಗ್ರಹವು ವಧುವಿನ ಜನ್ಮಲಗ್ನದಲ್ಲಿ ಬಂದರೆ ಆ ಕನ್ಯೆಯು ವಿಷಕನ್ಯೆಯಾಗುವಳು.

ಈ) ಜನ್ಮಲಗ್ನದಲ್ಲಿ ಶನಿಯು ಇದ್ದು, ಪಂಚಮ ಸ್ಥಾನದಲ್ಲಿ ರವಿಯು, ನವಮ ಸ್ಥಾನದಲ್ಲಿ ಮಂಗಳಗ್ರಹಗಳು ಇರುವ ಕನ್ಯೆಯು ವಿಷಕನ್ಯೆಯಾಗುವಳು.

ವಿಷಕನ್ಯಾದೋಷ ಪರಿಹಾರ : ಜನ್ಮಲಗ್ನ ಅಥವಾ ಜನ್ಮರಾಶಿಯಿಂದ ಸಪ್ತಮ ಸ್ಥಾನಾಧಿಪತಿಯು ಬಲಿಷ್ಠನಾಗಿದ್ದು ಶುಭಸ್ಥಾನದಲ್ಲಿದ್ದರೆ ಇಲ್ಲವೇ ಗುರು ಶುಕ್ರರು ಬಲಶಾಲಿಗಳಾಗಿ ಕೇಂದ್ರ, ತ್ರಿಕೋಣ ಸ್ಥಾನದಲ್ಲಿದ್ದು, ಸಪ್ತಮಸ್ಥಾನ ನೋಡುತ್ತಿದ್ದರೆ ವಿಷಕನ್ಯಾ ದೋಷ ಸಂಭವಿಸಲಾರದು.

ತ್ರಿಜ್ಯೇಷ್ಠ ವಿಚಾರವು : ವಿವಾಹದಲ್ಲಿ ತ್ರಿಜ್ಯೇಷ್ಠವಾಗಬಾರದು. ಅಂದರೆ ಜ್ಯೇಷ್ಠಮಾಸದಲ್ಲಿ ಜ್ಯೇಷ್ಠವಧುವಿನ ವಿವಾಹವನ್ನು ಜ್ಯೇಷ್ಠವರನೊಡನೆ ಮಾಡಬಾರದು.

ಮಂಗಳಕಾರ್ಯವಾದ ಮೇಲೆ ಮಾಡುವ, ಮಾಡಬಾರದ ಕಾರ್ಯಗಳು : ಅವಿಭಕ್ತ ಕುಟುಂಬಗಳಲ್ಲಿ ಮಂಡನ ಕಾರ್ಯ(ವಿವಾಹಾದಿ) ವಾದ ಮೇಲೆ ಆರು ತಿಂಗಳೊಳಗೆ ಪುನಃ ಮಂಡನ ಕಾರ್ಯ (ಚೌಲ, ಉಪನಯನ ಮತ್ತು ತೀರ್ಥಯಾತ್ರಾದಿ) ಕಾರ್ಯಗಳು, ಹೊಸ ಮನೆ ಕಟ್ಟುವುದು, ನೂತನ ವ್ರತವನ್ನು ಹಿಡಿಯುವುದು ಮತ್ತು ಉದ್ಯಾಪನೆ ಮಾಡುವುದು ಮುಂತಾದವುಗಳನ್ನು ಮಾಡಕೂಡದು.

ಸಹೋದರ ಸಂಸ್ಕಾರ ನಿಯಮ : ಏಕೋದರರ ಸಮಾನ ಸಂಸ್ಕಾರವನ್ನು ಒಂದೇ ದಿನ, ಒಂದೇ ಮೂಹೂರ್ತದಲ್ಲಿ ಮಾಡಬಾರದು. ಮಧ್ಯದಲ್ಲಿ ನಾಲ್ಕು

ದಿನಗಳಾದರೂ ಅಥವಾ ಮಂಟಪ ಭೇದದಿಂದ ಉಪನಯನಾದಿ ಕಾರ್ಯಗಳನ್ನು ಮಾಡಬಹುದು. ಅಲ್ಲದೇ ಇಬ್ಬರು ಸಹೋದರರಿಗೆ ಇಬ್ಬರು ಕನ್ನಿಕೆಯರನ್ನು ಕೊಟ್ಟು ಲಗ್ನ ಮಾಡಬಾರದು ಹಾಗು ಇದಿರು ಲಗ್ನವನ್ನು ಮಾಡಬಾರದು.

ಗ್ರಹವು ಯಾವ ಪಾದದಿಂದ ಬರುವುದು: ಯಾವುದಾದರೊಂದು ಗ್ರಹವು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗುವ ಸಮಯದಲ್ಲಿ ಚಂದ್ರನು ಯಾವ ರಾಶಿಯಲ್ಲಿ ಇರುವನೋ ಆ ರಾಶಿಯು ಜನ್ಮರಾಶಿಯಿಂದ 1,6,11ನೇ ರಾಶಿಯಾಗಿದ್ದಲ್ಲಿ ಸುವರ್ಣಪಾದವಾಗುವುದು. ಇದರ ಫಲ ಚಿಂತಿತವಾದದ್ದು ದೊರಕುವುದು. 2,5,9ನೇ ರಾಶಿಗಳಾದರೆ ರೌಪ್ಯಪಾದವಾಗುವುದು. ಇದರ ಫಲ – ಧನಲಾಭ. 3,7,10 ನೇ ರಾಶಿಯಾದಲ್ಲಿ ತಾಮ್ರಪಾದವಾಗುವುದು. ಇದರ ಫಲ – ಲಕ್ಷ್ಮೀಪ್ರಾಪ್ತಿ. 4,8,12ನೇ ರಾಶಿಯಾದಲ್ಲಿ ಲೋಹಪಾದವಾಗುವುದು. ಇದರ ಫಲ – ಕಷ್ಟವು. ಶನಿ, ರಾಹು, ಕೇತು ಈ ಗ್ರಹಗಳು ಲೋಹಪಾದದಿಂದ, ಗುರು ಸುವರ್ಣಪಾದದಿಂದ, ಮಂಗಳ ತಾಮ್ರಪಾದದಿಂದ ಬಂದರೆ ಶುಭ ಫಲ ದೊರಕುವುದು.

ಅಗ್ನಿಚಕ್ರ : ಶುಕ್ಲ ಪ್ರತಿಪಾದದಿಂದ ಅಂದಿನ ತಿಥಿಯವರೆಗೆ ಕಳೆದ ತಿಥಿಯ ಸಂಖ್ಯೆಗೆ ಒಂದನ್ನು ಕೂಡಿಸಿ, ವಾರಸಂಖ್ಯೆಯನ್ನು ಸೇರಿಸಿ, ಬಂದ ಸಂಖ್ಯೆಯನ್ನು ನಾಲ್ಕರಿಂದ ಭಾಗಿಸಿದಾಗ ಶೇಷವು 1 ಉಳಿದರೆ ಅಕಾಶದಲ್ಲಿ, 2 ಉಳಿದರೆ ಪಾತಾಳದಲ್ಲಿ, 3,0 ಉಳಿದರೆ ಭೂಮಿಯಲ್ಲಿ ಅಗ್ನಿಯು ಇದೆಯೆಂದು ತಿಳಿಯಬೇಕು. ಭೂಮಿಯಲ್ಲಿ ಅಗ್ನಿಯು ಇರುವ ದಿನದಂದು ಶಾಂತಿಯನ್ನು ಮಾಡಬೇಕು.

ಶುಭ ಗ್ರಹಗಳ ಆಹುತಿಯನ್ನು ನೋಡುವ ಕ್ರಮ : ಸೂರ್ಯ ನಕ್ಷತ್ರದಿಂದ ನಿತ್ಯನಕ್ಷತ್ರದವರೆಗೆ ಎಣಿಸಿ ಬಂದ ಸಂಖ್ಯೆಯನ್ನು ಮೂರರಿಂದ ಭಾಗಿಸಬೇಕು. ಕ್ರಮವಾಗಿ ಸೂರ್ಯ, ಬುಧ, ಶುಕ್ರ, ಶನಿ, ಚಂದ್ರ, ಮಂಗಳ, ಗುರು, ರಾಹು, ಕೇತು ಗ್ರಹಗಳು ಬರುವವು. ಹೋಮ ಮಾಡುವ ದಿನದಂದು ಶುಭ ಗ್ರಹದ ಮುಖದಲ್ಲಿ ಆಹುತಿ ಇದ್ದರೆ ಶಾಂತಿ ಕರ್ಮಗಳನ್ನು ಮಾಡಬಹುದು.

ಅಂಗಡಿ ಸ್ಥಾಪಿಸುವುದಕ್ಕೆ : ಅಶ್ವಿನೀ, ರೋಹಿಣೀ, ಮೃಗಶಿರಾ, ಪುಷ್ಯ, ಉತ್ತರಾ, ಹಸ್ತಾ, ಚಿತ್ತಾ, ಅನುರಾಧಾ, ರೇವತಿ ಈ ನಕ್ಷತ್ರಗಳಲ್ಲಿ ಶುಭವಾರ, ಶುಭ ತಿಂಗಳಲ್ಲಿ ಚಂದ್ರಬಲವನ್ನು ನೋಡಿಕೊಂಡು ವ್ಯಾಪಾರ, ಉದ್ಯೋಗವನ್ನು ಪ್ರಾರಂಭಿಸಬೇಕು.

ಆಪರೇಷನ್ನಿಗೆ : ದ್ವಿತೀಯಾ, ತೃತೀಯಾ, ಪಂಚಮಿ, ಸಪ್ತಮಿ, ದಶಮಿ, ತ್ರಯೋದಶೀ ಈ ತಿಥಿಗಳಲ್ಲಿ, ಅಶ್ವಿನೀ, ರೋಹಿಣೀ, ಮೃಗಶಿರಾ, ಪುಷ್ಯ, ಹಸ್ತಾ, ಚಿತ್ತಾ, ಸ್ವಾತಿ, ಅನುರಾಧಾ, ಶ್ರವಣಾ, ಅಭಿಜಿತ್, ಧನಿಷ್ಠಾ, ಶತತಾರಾ ಈ ನಕ್ಷತ್ರಗಳಲ್ಲಿ, ಘಾತವಾರಗಳನ್ನು ಬಿಟ್ಟು ರವಿ, ಮಂಗಳ, ಗುರುವಾರಗಳಲ್ಲಿ, ಶುಭಕರರಾದ ಮಂಗಳ ಮತ್ತು ಚಂದ್ರನಿರುವ ದಿನದಲ್ಲಿ ಆಪರೇಷನ್ ಮಾಡಿಸಬೇಕು.

ಪ್ರಯಾಣಕ್ಕೆ: ದ್ವಿತೀಯಾ, ತೃತೀಯಾ, ಪಂಚಮಿ, ಸಪ್ತಮಿ, ದಶಮಿ, ತ್ರಯೋದಶೀ ಈ ತಿಥಿಗಳು, ಅಶ್ವಿನೀ, ಮೃಗಶಿರಾ, ಪುನರ್ವಸು, ಪುಷ್ಯ, ಹಸ್ತಾ, ಅನುರಾಧಾ, ಶ್ರವಣಾ, ಧನಿಷ್ಠಾ, ರೇವತಿ ಈ ನಕ್ಷತ್ರಗಳು ಮಧ್ಯಮ. ಈ ನಕ್ಷತ್ರಗಳಲ್ಲಿ, ಜನ್ಮ ನಕ್ಷತ್ರ, ಘಾತವಾರಗಳನ್ನು ಬಿಟ್ಟು, ಚಂದ್ರಬಲವಿರುವ ದಿವಸ ಪ್ರಯಾಣ ಮಾಡಬೇಕು.

ಅಧಿಕಾರಿಗಳ ಸಂದರ್ಶನಕ್ಕೆ: ಪ್ರತಿಪದಾ, ದ್ವಿತೀಯಾ, ತೃತೀಯಾ, ಪಂಚಮಿ, ಷಷ್ಟಿ, ಸಪ್ತಮಿ, ದಶಮಿ, ತ್ರಯೋದಶೀ ಈ ತಿಥಿಗಳಲ್ಲಿ, ಅಶ್ವಿನೀ, ರೋಹಿಣೀ, ಮೃಗಶಿರಾ, ಪುಷ್ಯ, ಉತ್ತರಾ, ಹಸ್ತಾ, ಚಿತ್ತಾ, ಅನುರಾಧಾ, ಶ್ರವಣಾ, ಅಭಿಜಿತ್ ಈ ನಕ್ಷತ್ರಗಳಲ್ಲಿ, ಸೋಮ, ಬುಧ, ಗುರು, ಶುಕ್ರವಾರಗಳಲ್ಲಿಯೂ, ಘಾತಾದಿವಾರಗಳನ್ನು ಬಿಟ್ಟು, ಚಂದ್ರಬಲವನ್ನು ನೋಡಿಕೊಂಡು ಅಧಿಕಾರಿಗಳ ದರ್ಶನ ಮಾಡಬೇಕು. ಹಾಗೂ ಮೊಕದ್ದಮೆ, ದಾವೆಗಳನ್ನು ಮಾಡಲು ಇದೇ ಮುಹೂರ್ತವು ಪ್ರಶಸ್ತವಾಗಿರುವುದು.

ಔಷಧ ತೆಗೆದುಕೊಳ್ಳಲು : ಅಶ್ವಿನೀ, ಮೃಗಶಿರಾ, ಪುನರ್ವಸು, ಪುಷ್ಯ, ಹಸ್ತಾ, ಚಿತ್ತಾ, ಸ್ವಾತಿ, ಅನುರಾಧಾ, ಮೂಲಾ, ಶ್ರವಣಾ, ಶತತಾರಾ, ರೇವತಿ ಈ ನಕ್ಷತ್ರಗಳಲ್ಲಿ, ಜನ್ಮ ನಕ್ಷತ್ರ, ಘಾತವಾರಾದಿಗಳನ್ನು, ವೈಧೃತಿ, ವ್ಯತೀಪಾತ, ದಗ್ಧ, ಮೃತ್ಯುಯೋಗಗಳನ್ನು ಬಿಟ್ಟು ಶುಭತಿಥಿ, ವಾರಗಳಲ್ಲಿ ತೆಗೆದುಕೊಳ್ಳಬಹುದು.

ಹೊಸದಾಗಿ ಉದ್ಯೋಗ ಪ್ರಾರಂಭಿಸಲು : ದ್ವಿತೀಯಾ, ತೃತೀಯಾ, ಪಂಚಮಿ, ಸಪ್ತಮಿ, ದಶಮಿ, ತ್ರಯೋದಶೀ ಈ ತಿಥಿಗಳಲ್ಲಿ, ಅಶ್ವಿನೀ, ಮೃಗಶಿರಾ, ಪುನರ್ವಸು, ಪುಷ್ಯ, ಹಸ್ತಾ, ಚಿತ್ತಾ, ಅನುರಾಧಾ, ಅಭಿಜಿತ್, ರೇವತಿ ಈ ನಕ್ಷತ್ರಗಳಲ್ಲಿ, ರವಿ, ಬುಧ, ಗುರು, ಶುಕ್ರವಾರಗಳಲ್ಲಿ, ಘಾತವಾರ, ಮಾಸಾದಿಗಳನ್ನು ಬಿಟ್ಟು ಉದ್ಯೋಗವನ್ನು ಪ್ರಾರಂಭಿಸತಕ್ಕದ್ದು.

ಪಶುಗಳ ಕ್ರಯ ವಿಕ್ರಯಕ್ಕೆ : ಅಶ್ವಿನೀ, ಕೃತ್ತಿಕಾ, ಮೃಗಶಿರಾ, ಪುನರ್ವಸು, ಪುಷ್ಯ, ಹಸ್ತಾ, ಜ್ಯೇಷ್ಠಾ, ಅಭಿಜಿತ್, ಧನಿಷ್ಠಾ, ಶತತಾರಾ ಈ ನಕ್ಷತ್ರಗಳಲ್ಲಿ ಎಮ್ಮೆ, ಆಕಳು, ಎತ್ತು, ಕುದುರೆ ಮುಂತಾದ ಪಶುಗಳನ್ನು ತೆಗೆದುಕೊಳ್ಳುವುದು ಮಾರುವುದು ಇವುಗಳನ್ನು ಮಾಡಬಹುದು.

ದೇವತಾ ಸ್ಥಾಪನೆಗೆ : ಗುರು, ಶುಕ್ರರು ಉದಯರಿದ್ದಾಗ, ಉತ್ತರಾಯಣದಲ್ಲಿ, ದ್ವಿತೀಯಾ, ತೃತೀಯಾ, ಪಂಚಮಿ, ಸಪ್ತಮಿ, ದಶಮಿ, ತ್ರಯೋದಶೀ ಈ ತಿಥಿಗಳಲ್ಲಿ, ಅಶ್ವಿನೀ, ರೋಹಿಣೀ, ಪುಷ್ಯ, ಉತ್ತರಾ, ಅಭಿಜಿತ್ ಈ ನಕ್ಷತ್ರ, ಶುಭವಾರಗಳಲ್ಲಿ, ಕುಯೋಗ ವರ್ಜ್ಯ ಮಾಡಿ ದೇವತಾ ಪ್ರತಿಷ್ಠಾಪನೆ ಮಾಡಬಹುದು.

ಹೊಸವಸ್ತ್ರ ಧಾರಣೆಗೆ : ದ್ವಿತೀಯಾ, ತೃತೀಯಾ, ಪಂಚಮಿ, ಸಪ್ತಮಿ, ದಶಮಿ, ತ್ರಯೋದಶೀ ಈ ತಿಥಿಗಳಲ್ಲಿ, ಅಶ್ವಿನೀ, ಪುನರ್ವಸು, ಪುಷ್ಯ, ಹಸ್ತಾ, ಚಿತ್ತಾ, ಸ್ವಾತಿ, ಅನುರಾಧಾ, ರೇವತಿ ಈ ನಕ್ಷತ್ರಗಳಲ್ಲಿ, ಸೋಮ, ಬುಧ, ಗುರು, ಶುಕ್ರವಾರಗಳಂದು ನೂತನ ವಸ್ತ್ರಗಳನ್ನು ಧಾರಣೆ ಮಾಡಬಹುದು.

ಸ್ವಯಂಸಿದ್ಧವಾದ ಸಾಡೇತೀನ ಮುಹೂರ್ತಗಳು : ಯುಗಾದಿಪಾಡ್ಯ, ಅಕ್ಷಯ ತೃತೀಯಾ, ವಿಜಯ ದಶಮಿಗಳಂದು ಪೂರ್ಣದಿನ ಮತ್ತು ಕಾರ್ತೀಕ ಶುಕ್ಲ ಪಾಡ್ಯದಂದು ಅರ್ಧ ದಿನ ಹೀಗೆ ಈ ಮೂರೂವರೆ ದಿನಗಳು ಸ್ವಯಂಸಿದ್ಧವಾದ ಮುಹೂರ್ತಗಳು. ಈ ದಿನಗಳಲ್ಲಿ ಯಾವುದೇ ರೀತಿಯ ಪಂಚಾಂಗ ಶುದ್ಧಿಯನ್ನು ನೋಡದೇ ಯಾವುದೇ ರೀತಿಯ ಕಾರ್ಯವನ್ನು ಮಾಡಬಹುದು.

ಕಾರ್ಯಗಳಿಗನುಗುಣವಾಗಿ ಗ್ರಹಗಳ ಬಲ ನಿರ್ಣಯ : ರಾಜದರ್ಶನಕ್ಕೆ ರವಿ, ವಿವಾಹ, ಉಪನಯನಗಳಿಗೆ ಗುರು, ಯುದ್ಧಕಾರ್ಯದಲ್ಲಿ ಮಂಗಳ, ಶಸ್ತ್ರ ಅಥವಾ ವಿದ್ಯಾಭ್ಯಾಸಕ್ಕೆ ಬುಧ, ಶಿಲ್ಪ ಅಥವಾ ಪ್ರಯಾಣಕ್ಕೆ ಶುಕ್ರ, ಮಂತ್ರೋಪದೇಶಕ್ಕೆ ಶನಿ, ಸರ್ವಕಾರ್ಯಗಳಿಗೆ ಚಂದ್ರ ಹೀಗೆ ಆಯಾ ಕಾರ್ಯಗಳಿಗನುಗುಣವಾಗಿ ಅವಶ್ಯವಾಗಿ ಗ್ರಹಬಲವನ್ನು ನೋಡಿಕೊಂಡು ಕಾರ್ಯವನ್ನು ಮಾಡತಕ್ಕದ್ದು.

ಪಶುಗಳ ಜನನದಿಂದ ಅನಿಷ್ಟ : ಸಿಂಹ ಸಂಕ್ರಮಣದಲ್ಲಿ ಆಕಳು, ಮಾಘಮಾಸದಲ್ಲಿ ಇಲ್ಲವೇ ಬುಧವಾರದಂದು ಎಮ್ಮೆ, ಶ್ರಾವಣ ಮಾಸದಲ್ಲಿ ಹಗಲು ಕುದುರೆ ಪ್ರಸವಿಸಿದರೆ ಯಜಮಾನನಿಗೆ ಮೃತ್ಯುಭಯವಿದೆ. ಆದಕಾರಣ ಪೀಡಾ ಪರಿಹಾರಾರ್ಥ ಶಾಂತಿ ಮಾಡಿಸಿಕೊಳ್ಳಬೇಕು.

ಗೃಹಪ್ರವೇಶಕ್ಕೆ ಕಲಶ ಚಕ್ರವು : ಮುಹೂರ್ತ ಚಿಂತಾಮಣಿಕಾರರ ಮತದಂತೆ ಸೂರ್ಯ ನಕ್ಷತ್ರದಿಂದ ಚಂದ್ರ ನಕ್ಷತ್ರದವರೆಗೆ ಅಭಿಜಿತ್ ಕೂಡಿಸಿ ಎಣಿಸಿದರೆ 9 ರಿಂದ 18 ರವರೆಗೆ ಬಂದರೆ ವೃಷವಾಸ್ತು ಇದೆ ಎಂದು ಅಥವಾ ಮಾರ್ತಾಂಡ ಮತದಂತೆ ಅಭಿಜಿತ್ ಬಿಟ್ಟು ಎಣಿಸಿದರೆ 2,4,6,7,10,11,12,13,2,23,24,25,26 ಇವುಗಳಲ್ಲಿ ಯಾವುದಾದರೊಂದು ನಕ್ಷತ್ರವು ಬಂದರೆ ಕಲಶ ಚಕ್ರವಿದೆ ಎಂದು ತಿಳಿಯಬೇಕು.

ಚೌಕಟ್ಟು ಹಚ್ಚಲಿಕ್ಕೆ : ಅಶ್ವಿನೀ, ರೋಹಿಣೀ, ಮೃಗಶಿರಾ, ಪುಷ್ಯ, ಉತ್ತರಾ, ಹಸ್ತಾ, ಚಿತ್ತಾ, ಶ್ರವಣಾ, ರೇವತಿ ಈ ನಕ್ಷತ್ರಗಳಲ್ಲಿ ಶುಕ್ರವಾರ ಮತ್ತು ಸ್ಥಿರ ಲಗ್ನಗಳಲ್ಲಿ ಹೊಸ ಚೌಕಟ್ಟು ಕೂಡಿಸಬಹುದು.

ದ್ವಾರ ಚಕ್ರವು : ಬಾಗಿಲನ್ನು ಕೂಡಿಸುವ ದಿನದಂದು ಇರುವ ನಕ್ಷತ್ರದವರೆಗೆ ಎಣಿಸಲು ಸೂರ್ಯ ನಕ್ಷತ್ರದಿಂದ ನಾಲ್ಕು ನಕ್ಷತ್ರಗಳಾದರೆ ಚೌಕಟ್ಟಿನ ಮೇಲೆ ಬಿದ್ದು ಯಜಮಾನನಿಗೆ ಲಕ್ಷ್ಮೀಪ್ರಾಪ್ತಿಯಾಗುವುದು. ಮುಂದಿನ ಎಂಟು ನಕ್ಷತ್ರಗಳು ಕೋನದಲ್ಲಿ ವಾಸಿಸಿ ಮನೆಯನ್ನು ಕಿತ್ತಿಸುವವು. ಅವುಗಳ ಮುಂದಿನ ಎಂಟು ನಕ್ಷತ್ರಗಳು ಪಾತಾಳದಲ್ಲಿ ಉಳಿದು ವಸತಿ ಸುಖವನ್ನು ಕೊಡುವವು. ಆನಂತರದ ಮೂರು ನಕ್ಷತ್ರಗಳು ಹೊಸ್ತಲಿನಲ್ಲಿ ಉಳಿದು ಯಜಮಾನನಿಗೆ ಮರಣವನ್ನು ತಂದು ಕೊಡುವವು. ಅಲ್ಲಿಂದ ನಾಲ್ಕು ನಕ್ಷತ್ರಗಳು ಆಕಾಶದಲ್ಲಿ ಉಳಿದು ಸುಖವನ್ನು ಕೊಡುವವು.

ಹೊಸ ಆಸ್ತಿ ಮತ್ತು ಹೊಸ ವಸ್ತು ಸಂಗ್ರಹಕ್ಕೆ : ದ್ವಿತೀಯಾ, ತೃತೀಯಾ, ಪಂಚಮಿ, ಸಪ್ತಮಿ, ದಶಮಿ, ತ್ರಯೋದಶೀ ಈ ತಿಥಿಗಳಲ್ಲಿ, ರೋಹಿಣೀ, ಮೃಗಶಿರಾ, ಉತ್ತರಾ, ಹಸ್ತಾ, ಚಿತ್ತಾ, ಅನುರಾಧಾ ಈ ನಕ್ಷತ್ರಗಳಲ್ಲಿ, ಶುಕ್ರವಾರ, ಮತ್ತು ಶುಭದಿನಗಳನ್ನು ನೋಡಿಕೊಂಡು ಸಂಗ್ರಹಿಸಬೇಕು.

ಧಾನ್ಯಗಳ ಖರೀದಿ ಮತ್ತು ಮಾರಾಟಕ್ಕೆ : ದ್ವಿತೀಯಾ, ತೃತೀಯಾ, ಪಂಚಮಿ, ಸಪ್ತಮಿ, ದಶಮಿ, ತ್ರಯೋದಶೀ ಈ ತಿಥಿಗಳಲ್ಲಿ ರೋಹಿಣೀ, ಮೃಗಶಿರಾ, ಉತ್ತರಾ, ಹಸ್ತಾ, ಚಿತ್ತಾ, ಅನುರಾಧಾ ಈ ನಕ್ಷತ್ರಗಳಲ್ಲಿ, ಶುಕ್ರವಾರ, ಮತ್ತು ಶುಭದಿನಗಳನ್ನು ನೋಡಿಕೊಂಡು ಸಂಗ್ರಹಿಸಬೇಕು.

ಧಾನ್ಯಗಳ ಖರೀದಿ ಮತ್ತು ಮಾರಾಟಕ್ಕೆ: ದ್ವಿತೀಯಾ, ತೃತೀಯಾ, ಪಂಚಮಿ, ಸಪ್ತಮಿ, ದಶಮಿ, ತ್ರಯ್ಯೋದಶೀ ಈ ತಿಥಿಗಳಲ್ಲಿ ಅಶ್ವಿನೀ, ಚಿತ್ತಾ, ಸ್ವಾತಿ, ಶ್ರವಣಾ, ಶತತಾರಾ, ರೇವತಿ ಈ ನಕ್ಷತ್ರಗಳಲ್ಲಿ ಧಾನ್ಯವನ್ನು ಖರೀದಿ ಮಾಡಬೇಕು. ಭರಣಿ, ಕೃತ್ತಿಕಾ, ಆಶ್ಲೇಷಾ, ಪೂರ್ವಾ,ವಿಶಾಖಾ, ಪೂರ್ವಾಷಾಢ, ಪೂರ್ವಾಭಾದ್ರಾ ನಕ್ಷತ್ರಗಳನ್ನು ಬಿಟ್ಟು ಶುಭವಾರ, ಶುಭ ಮೂಹೂರ್ತಗಳಲ್ಲಿ ಧಾನ್ಯಪದಾರ್ಥಗಳನ್ನು ಮಾರಾಟ ಮಾಡಬೇಕು.

ಹೊಸ ಒಲೆಯನ್ನು ಹಾಸಲು : ಅಶ್ವಿನಿ, ಕೃತ್ತಿಕಾ, ರೋಹಿಣೀ, ಉತ್ತರಾಷಢ, ಉತ್ತರಾಭಾದ್ರ, ರೇವತಿ ನಕ್ಷತ್ರಗಳಲ್ಲಿ ಮಂಗಳವಾರ, ಶನಿವಾರಗಳನ್ನು ಬಿಟ್ಟು ಇನ್ನುಳಿದ ವಾರಗಳಲ್ಲಿ ಮನೆಯಲ್ಲಿ ಹೊಸ ಒಲೆಯನ್ನು ಹೂಡಬಹುದು.

ಹೊಸ ಒಲೆಯಲ್ಲಿ ಬೆಂಕಿ ಹಾಕಲು: ಶನಿವಾರವನ್ನು ಬಿಟ್ಟುಉಳಿದ ವಾರಗಳಲ್ಲಿ, ಚತುರ್ಥಿ, ನವಮಿ. ಚತುರ್ದಶಿ ತಿಥಿಗಳಲ್ಲಿ, ಕೃತ್ತಿಕಾ, ಮೃಗಶಿರಾ, ಪುನರ್ವಸು, ಪುಷ್ಯ, ಉತ್ತರಾ, ಹಸ್ತಾ, ಅನುರಾಧ, ಉತ್ತರಾಷಾಢ ನಕ್ಷತ್ರಗಳು ಶುಭಕರವಾದವುಗಳು.

ಮರಣಕ್ಕೆ ದುಷ್ಟ ನಕ್ಷತ್ರಗಳು : ಧನಿಷ್ಟಾ ನಕ್ಷತ್ರದ ಮೂರನೇ ಮತ್ತು ನಾಲ್ಕನೇ ಚರಣ, ಶತತಾರಾ, ಪೂರ್ವಾಭಾದ್ರಾ, ಉತ್ತರಾಭಾದ್ರಾ, ರೇವತಿ ನಕ್ಷತ್ರಗಳು ಪಂಚಕ ನಕ್ಷತ್ರಗಳು ಮರಣಕ್ಕೆ ಅನಿಷ್ಟದಾಯಕಗಳು. ಈ ನಕ್ಷತ್ರಗಳಲ್ಲಿ ಮರಣವಾದರೆ ಆರು ತಿಂಗಳು ಮನೆಯನ್ನು ಬಿಡಬೇಕು. ನಂತರ ಮೃತ್ಯುಂಜಯ ಶಾಂತಿಯನ್ನು ಮಾಡಿಸಿಕೊಂಡು ಪ್ರವೇಶ ಮಾಡಬೇಕು. ದೀರ್ಘಾವಧಿ ಮನೆಯನ್ನು ಬಿಡಲು ಶಕ್ಯವಿಲ್ಲದಿದ್ದರೆ ಯಾವ ನಕ್ಷತ್ರದಲ್ಲಿ ಮರಣವಾಗಿರುವುದೋ ಆ ನಕ್ಷತ್ರ ಬರುವ ಪೂರ್ವದಲ್ಲಿ ಆ ಮನೆಯನ್ನು ಬಿಟ್ಟು, ಆ ನಕ್ಷತ್ರವು ಹೋದ ನಂತರದಲ್ಲಿ ಮನೆಗೆ ಬರಬೇಕು. ಇದೂ ಆಗದಿದ್ದರೆ ಉತ್ತಮ ರೀತಿಯಿಂದ ನಕ್ಷತ್ರಶಾಂತಿಯನ್ನು ಮಾಡಿಸಬೇಕು.

ಒಕ್ಕಲುತನ ಉದ್ಯೋಗ ಮುಹೂರ್ತಗಳು

1) ಬೀಜ ಸಂಗ್ರಹಕ್ಕೆ : ರೋಹಿಣಿ, ಪುನರ್ವಸು, ಪುಷ್ಯಾ, ಚಿತ್ರಾ, ಸ್ವಾತಿ, ಶ್ರವಣಾ ಈ ನಕ್ಷತ್ರಗಳಲ್ಲಿ, ಶುಭ ತಿಥಿ, ಸ್ಥಿರಲಗ್ನ, ಬುಧ, ಗುರು, ಶುಕ್ರವಾರಗಳಲ್ಲಿಬಿತ್ತುವ ಬೀಜವನ್ನು ಸಂಗ್ರಹಿಸಬೇಕು.

2) ರೆಂಟೆ-ಕುಂಟೆ ಹೊಡೆಯಲು : ಭರಣಿ, ಕೃತ್ತಿಕಾ, ಆರ್ದ್ರಾ, ಆಶ್ಲೇಷಾ, ಹುಬ್ಬಾ, ಉತ್ತರಾ, ಹಸ್ತಾ ಈ ನಕ್ಷತ್ರಗಳಲ್ಲಿ, ಚತುರ್ಥಿ, ನವಮಿ, ಚತುರ್ಥಿ, ನವಮಿ, ಚತುರ್ದಶಿ, ಅಮಾವಾಸ್ಯೆ ತಿಥಿಗಳನ್ನು, ದುಷ್ಟ ಯೋಗಗಳನ್ನು ಬಿಟ್ಟು, ಉಳಿದ ತಿಥಿ ನಕ್ಷತ್ರಗಳಲ್ಲಿ ಮಂಗಳ, ಬುಧ, ಗುರು, ಶುಕ್ರವಾರಗಳಲ್ಲಿ ಹೊಲದ ಹಾಗೂ ನೇಗಿಲಿನ ಪೂಜೆ ಮಾಡಿ ಗುರು ಬಲವುಳ್ಳವನ ಕಡೆಯಿಂದ ಪೂರ್ವ ಇಲ್ಲವೇ ಉತ್ತರಾಭಿ ಮುಖವಾಗಿ ರೆಂಟೆ ಹೊಡೆಯಲು ಪ್ರಾರಂಭಿಸಬೇಕು.

3) ಬೀಜ ಬಿತ್ತುವುದಕ್ಕೆ : ದ್ವಿತೀಯಾ, ತೃತೀಯಾ, ದಶಮಿ, ಏಕಾದಶೀ, ತ್ರಯೋದಶೀ ಈ ನಕ್ಷತ್ರಗಳನ್ನು, ಚತುರ್ಥಿ, ನವಮಿ, ಚತುರ್ದಶಿ, ಅಮಾವಾಸ್ಯೆ ತಿಥಿಗಳನ್ನು, ದುಷ್ಟ ಯೋಗಗಳನ್ನು ಬಿಟ್ಟು, ಉಳಿದ ತಿಥಿ ನಕ್ಷತ್ರಗಳಲ್ಲಿ ಮಂಗಳ, ಬುಧ, ಗುರು ಬಲವುಳ್ಳವನ ಕಡೆಯಿಂದ ಪೂರ್ವ ಇಲ್ಲವೇ ಉತ್ತರಾಭಿ ಮುಖವಾಗಿ ರೆಂಟೆ ಹೊಡೆಯಲು ಪ್ರಾರಂಭಿಸಬೇಕು.

4) ಬೀಜ ಬಿತ್ತುವುದಕ್ಕೆ: ದ್ವಿತೀಯಾ, ತೃತೀಯಾ, ದಶಮಿ, ಏಕಾದಶೀ, ತ್ರಯೋದಶೀ ಈ ತಿಥಿಗಳಲ್ಲಿ, ಅಶ್ವಿನೀ, ರೋಹಿಣೀ, ಮೃಗಶಿರಾ, ಪುಷ್ಯ, ಮಘಾ, ಉತ್ತರಾ, ಹಸ್ತಾ, ಚಿತ್ತಾ, ಸ್ವಾತಿ, ಅನುರಾಧಾ, ಮೂಲಾ, ಧನಿಷ್ಠಾ, ರೇವತಿ ಈ ನಕ್ಷತ್ರಗಳಲ್ಲಿಯೂ, ರವಿ, ಸೋಮ, ಬುಧ, ಗುರು, ಶುಕ್ರವಾರಗಳಲ್ಲಿ ಬೀಜವನ್ನು ಬಿತ್ತಬೇಕು. ರವಿ, ಮಂಗಳವಾರಗಳಲ್ಲಿ ಕೆಂಪು ಬೀಜಗಳನ್ನು ಆಯಾ ವರ್ಷದ ಫಣಿಚಕ್ರವನ್ನು ನೋಡಿಕೊಂಡು ಬೀಜವನ್ನು ಬಿತ್ತಬೇಕು.

5) ಬಿತ್ತುವ ಮುಂಚೆ ಮಾಡಬೇಕಾದ ಕಾರ್ಯ: ಬಿತ್ತಲಿಕ್ಕೆ ಹೋಗುವವನು ಸ್ನಾನ ಮಾಡಿ, ಮೃಷ್ಟಾನ್ನ ಭಕ್ಷಣ ಮಾಡಿ, ಒಗೆದ ಬಟ್ಟೆಯನ್ನುಟ್ಟು, ಎತ್ತುಗಳ ಮೈ ತೊಳೆದುಕೊಂಡು, ಪೂಜೆ ಮಾಡಿ, ಭೂಮಿಯನ್ನು ಕಾಯಿ-ಕರ್ಪೂರ, ಹಣ್ಣು ಹಂಪಲುಗಳಿಂದ ಪೂಜಿಸಿ, ಎಂಟು ದಿಕ್ಕಿಗೆ ಆಹಾರವನ್ನು ಚೆಲ್ಲಿ, ಪ್ರಪುಲ್ಲಿತ ಮನಸಿನಿಂದ ಪೂರ್ವ ಅಥವಾ ಉತ್ತರಾಭಿಮುಖವಾಗಿ ಬಿತ್ತಲಿಕ್ಕೆ ಪ್ರಾರಂಭಿಸಬೇಕು. ಹೀಗೆ ಮಾಡುವುದರಿಂದ ಭೂಮಿಯಲ್ಲಿ ಯಾವುದೇ ಉಪದ್ರವವಾಗದೇ ಬಿತ್ತಿದ ಬೀಜಗಳು ಫಲವತ್ತಾಗಿ ಬೆಳೆಯುವವು.

6) ಪೈರು ಕೊಯ್ಯಲು : ಶನಿ, ಮಂಗಳವಾರ, ರಿಕ್ತಾ ತಿಥಿ, ಅಶ್ವಿನಿ, ರೋಹಿಣಿ, ಪೂರ್ವಾ, ವಿಶಾಖಾ, ಅನುರಾಧಾ, ಶತತಾರಾ ನಕ್ಷತ್ರಗಳನ್ನು ಬಿಟ್ಟು ಉಳಿದ ನಕ್ಷತ್ರ, ತಿಥಿ, ವಾರಗಳಲ್ಲಿ ಪ್ರಾರಂಭಿಸಬಹುದು.

7) ಕಣ ಮಾಡುವುದಕ್ಕೆ : ಮಘಾ, ಪೂರ್ವಾ, ಉತ್ತರಾ, ಅನುರಾಧಾ, ಜ್ಯೇಷ್ಠಾ, ಮೂಲಾ, ಶ್ರವಣಾ, ರೇವತಿ ಈ ನಕ್ಷತ್ರಗಳಲ್ಲಿ ಕಣ ಮಾಡುವುದು ಪ್ರಶಸ್ತ.

8) ತೆನೆ ಕೊಯ್ಯಲು : ಅಶ್ವಿನಿ, ರೋಹಿಣಿ, ಮೃಗಶಿರಾ, ಹಸ್ತಾ, ಅನುರಾಧ, ಮೂಲಾ, ಶ್ರವಣಾ, ರೇವತಿ ಈ ನಕ್ಷತ್ರಗಳಲ್ಲಿ ಮತ್ತು ಶುಭ ತಿಥಿಗಳಲ್ಲಿ ಪ್ರಾರಂಭಿಸಬೇಕು.

9) ಹಂತಿ ಕಟ್ಟಲು: ಉತ್ತರಾತ್ರಯ, ಅನುರಾಧಾ, ಮೂಲಾ, ಶ್ರವಣಾ, ರೇವತಿ ಈ ನಕ್ಷತ್ರಗಳಲ್ಲಿ ಮತ್ತು ಶುಭ ತಿಥಿಗಳಲ್ಲಿ ಹಂತಿ ಕಟ್ಟಲು ಪ್ರಾರಂಭಿಸಬೇಕು.

10) ಹಗೆಗಳಲ್ಲಿ ಧಾನ್ಯವನ್ನು ಸಂಗ್ರಹಿಸಲು : ಅಶ್ವಿನೀ, ರೋಹಿಣೀ, ಮೃಗಶಿರಾ, ಪುನರ್ವಸು, ಪುಶ್ಯ, ಹಸ್ತಾ, ಚಿತ್ತಾ, ಸ್ವಾತಿ, ಅನುರಾಧಾ, ಮೂಲ, ರೇವತಿ ಈ ನಕ್ಷತ್ರಗಳಲ್ಲಿ ರವಿ, ಸೋಮ, ಗುರು, ಶುಕ್ರವಾರಗಳಲ್ಲಿ ಹಗೆಯಲ್ಲಿ ಕಾಳುಗಳನ್ನು ಹಾಕಬೇಕು.

11) ಬಣಿವೆ, ಕುಳ್ಳು, ಕಟ್ಟಿಗೆ ಒಟ್ಟುವುದಕ್ಕೆ : ದ್ವಿತೀಯಾ, ತೃತೀಯಾ, ಪಂಚಮಿ, ಸಪ್ತಮಿ, ದಶಮಿ, ತ್ರಯೋದಶೀ ಈ ತಿಥಿಗಳಲ್ಲಿ, ಅಶ್ವಿನೀ, ರೋಹಿಣೀ, ಮೃಗಶಿರಾ, ಪುಷ್ಯ, ಹಸ್ತಾ, ಚಿತ್ತಾ, ಸ್ವಾತಿ, ಅನುರಾಧಾ, ಮೂಲ, ಉತ್ತರಾಷಾಢ, ಶ್ರವಣ ಈ ನಕ್ಷತ್ರಗಳಲ್ಲಿ ಸೋಮ, ಬುಧ, ಗುರು, ಶುಕ್ರವಾರಗಳಲ್ಲಿ ಒಟ್ಟಬಹುದು.

12) ಭಾವಿ, ಕೆರೆಗಳನ್ನು ತೆಗೆಸಲು : ರಿಕ್ತಾ ತಿಥಿ, ಅಮಾವಾಸ್ಯೆ ಮುಂತಾದವುಗಳನ್ನು ಬಿಟ್ಟು, ಉಳಿದ ತಿಥಿಗಳಲ್ಲಿ, ಭರಣಿ, ಕೃತ್ತಿಕಾ, ರೋಹಿಣೀ, ಪುಷ್ಯ, ಆಶ್ಲೇಷಾ, ಮಘಾ, ವಿಶಾಖ, ಅನುರಾಧ, ಹಸ್ತಾ, ಚಿತ್ತಾ, ಸ್ವಾತಿ, ಮೂಲ, ಶ್ರವಣ, ರೇವತಿ ಈ ನಕ್ಷತ್ರಗಳಲ್ಲಿ, ಕರ್ಕ, ಮಕರ, ವೃಷಭ, ಕುಂಭಲಗ್ನಗಳಲ್ಲಿ, ಗುರು, ಚಂದ್ರ ಗ್ರಹಬಲವು ಇರುವ ಸಮಯದಲ್ಲಿ ಇಲ್ಲವೇ ಆ ಸ್ಥಾನದ ಗ್ರಹಗಳು ಇರುವ ಸಮಯದಲ್ಲಾಗಲೀ, ಸ್ಥಳ ಹಾಗೂ ಆಯುಧಗಳನ್ನು ಪೂಜಿಸಿ ಕಾರ್ಯವನ್ನು ಪ್ರಾರಂಭಿಸಬೇಕು.

ಏಕಾದಶೀ ಮಾಹಾತ್ಮ್ಯ

ಏಕಾದಶೀವ್ರತವನ್ನು ಬಿಟ್ಟು ಇತರ ವ್ರತಗಳನ್ನು ಮಾಡುವುದು ತನ್ನ ಕೈಯಲ್ಲಿದ್ದ ರಾಜ್ಯವನ್ನು ಬಿಟ್ಟು ಭಿಕ್ಷೆ ಬೇಡಿದಂತೆ. ಮಹಾಪಾಪಿಯೂ ಸಹ ಏಕಾದಶೀವ್ರತದಿಂದ ಪಾಪಗಳನ್ನು ಕಳೆದುಕೊಂಡು ವಿಷ್ಣುಸಾನ್ನಿಧ್ಯವನ್ನು ಪಡೆಯುವನು. ಆದ್ದರಿಂದ ಏಕಾದಶಿಗೆ ಸಮವಾದ ವ್ರತವಿಲ್ಲ.

ಧರ್ಮಸಂಹಿತಾ

ಪ್ರಾಯಶ್ಚಿತ್ತವೇ ಇಲ್ಲದಿರುವ ಎಷ್ಟೋ ಪಾಪಗಳಿವೆ. ಆ ಪಾಪಗಳನ್ನು ಕಳೆಯುವುದಕ್ಕೆ ಏಕಾದಶೀ ವ್ರತವನ್ನು ಬಿಟ್ಟು ಬೇರೆ ಮಾರ್ಗವಿಲ್ಲ. ಒಂದೊಂದು ಪಕ್ಷದಲ್ಲಿ ಮಾಡಿದ ಪಾಪರಾಶಿಗಳ ಪರಿಹಾರಕ್ಕಾಗಿ ಶ್ರೀವಿಷ್ಣುವು ದಿವ್ಯವಾದ

ಏಕಾದಶೀವ್ರತವನ್ನು ನಿರ್ಮಿಸಿದನು. ಏಕಾದಶೀವ್ರತವೊಂದರಿಂದ ಬಂದ ಪುಣ್ಯದಿಂದಲೇ ಚಂಡಾಲನೂ ಸಹ ಮುಕ್ತಿಯನ್ನು ಹೊಂದುವನು. ಬೇರೆ ಯಾವ ಪುಣ್ಯದಿಂದಲೂ ಸಾಧ್ಯವಿಲ್ಲ.

ಕೃಷ್ಣಾಮೃತಮಹಾರ್ಣವ

ಗಂಗೆಯೇ ಮೊದಲಾದ ಸಕಲತೀರ್ಥಗಳೂ ಕುರುಕ್ಷೇತ್ರ ಮುಂತಾದ ಸಕಲ ಕ್ಷೇತ್ರಗಳೂ ಏಕಾದಶಿಗೆ ಸಮವಲ್ಲ.

ವಸಿಷ್ಠವಚನ

11 ಇಂದ್ರಿಯಗಳಿಂದ ಸಂಪಾದಿಸಿದ ಸಕಲಪಾಪಗಳನ್ನು 11ನೆಯ ತಿಥಿಯಾದ ಏಕಾದಶಿಯು ಚಿಂತಾಮಣಿ ಕಲ್ಪವೃಕ್ಷ ವೇದಶಾಸ್ತ್ರ ಮತ್ತು ನಿಧಿಗಳಿಗೆ ಸಮ. ಅನಾಯಾಸದಿಂದ ಮುಕ್ತಿಯನ್ನು ಕೊಡುತ್ತದೆ. 1000 ಅಶ್ವಮೇಧಯಾಗಗಳು 100ವಾಜಪೇಯಯಾಗಗಳು ಏಕಾದಶಿಯ 16ನೆಯ ಒಂದು ಭಾಗದ ಅರ್ಹತೆಯನ್ನೂ ಪಡೆದಿಲ್ಲ. ಏಕಾದಶಿಯೆಂಬ ಅಗ್ನಿಯಿಂದ 100 ಜನ್ಮಗಳಲ್ಲಿ ಮಾಡಿದ ಪಾಪವೆಂಬ ಕಟ್ಟಿಗೆಯ ರಾಶಿಯು ಭಸ್ಮವಾಗುತ್ತದೆ. ಹರಿದಿನವಾದ ಏಕಾದಶೀದಿನದಲ್ಲಿ ಉಪವಾಸವನ್ನು ಮಾಡುವ ವರೆಗೆ ದೇಹದಲ್ಲಿ ಪಾಪಗಳು ಇರುತ್ತವೆ. ಆ ಮೇಲೆ ಇರುವುದಿಲ್ಲ. ಆದ್ದರಿಂದ ಏಕಾದಶಿಗೆ ಸಮವಾದ ಪಾವನವಾದದ್ದು ಯಾವುದೂ ಇಲ್ಲ.

ಹಾರೀತವಚನ

1) ಏಕಾದಶೀ ಉಪವಾಸ 2) ಶಂಖಚಕ್ರಾದಿಧಾರಣೆ 3) ವಿಷ್ಣು ಭಕ್ತರ ಪೂಜೆ ; ಈ ಮೂರು ವಿಷ್ಣುಪ್ರೀತಿಕರವಾದದ್ದು. ಸಾವಿರಗ್ರಹಣಗಳು ಹತ್ತು ಸಾವಿರ ವ್ಯತೀಪಾತಯೋಗಗಳು 1 ಲಕ್ಷ ಅಮಾವಾಸ್ಯಾಪರ್ವಕಾಲಗಳು ಒಟ್ಟುಗೂಡಿದರೂ ಏಕಾದಶೀವ್ರತದ 16ನೆಯ ಒಂದು ಭಾಗದ ಯೋಗ್ಯತೆಯನ್ನು ಪಡೆಯಲಿಲ್ಲ. ಇದು ಎಲ್ಲಾ ಶಾಸ್ತ್ರದ ತಿರುಳು.

ಏಕಾದಶೀವ್ರತ ಮಾಡುವುದಕ್ಕೆ ಅಧಿಕಾರಿಗಳು

ಎಲ್ಲಾ ಜಾತಿಯ ಗಂಡಸರು ಮತ್ತು ಸ್ತ್ರೀಯರು ಏಕಾದಶೀವ್ರತವನ್ನು ಮಾಡಲೇ ಬೇಕು. ಇದರಲ್ಲಿ ಸಂದೇಹವಿಲ್ಲ.

ಕೃಷ್ಣಾಮೃತಮಹಾರ್ಣವ

ಬ್ರಾಹ್ಮಣಾದಿ ಸಕಲ ಜಾತಿಯವರು, ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥ ಸಂನ್ಯಾಸಿಗಳು, ವಿಧವೆಯರು ಸುಮಂಗಲೆಯರು ಮತ್ತು ಉಳಿದ ಸರ್ವರೂ ಕೃಷ್ಣಪಕ್ಷ ಮತ್ತು ಶುಕ್ಲಪಕ್ಷಗಳಲ್ಲಿ ಏಕಾದಶೀವ್ರತವನ್ನು ಮಾಡಲೇಬೇಕು.

ವರಾಹಪುರಾಣ

ಜಾತಾಶೌಚ ಮತ್ತು ಮೃತಾಶೌಚಗಳಲ್ಲಿಯೂ ಸ್ತ್ರೀಯರು ಬಹಿಷ್ಠೆಯಾಗಿರುವಾಗಲೂ ಏಕಾದಶೀ ಉಪವಾಸವನ್ನು ಮಾಡಲೇಬೇಕು.

ಕಾತ್ಯಾಯನ ವಚನ

8 ವರ್ಷಗಳ ಮೇಲೆ 80 ವರ್ಷಗಳ ವರೆಗಿನ ವಯಸ್ಸುಳ್ಳ ಸರ್ವರೂ ಏಕಾದಶೀಉಪವಾಸವನ್ನು ಮಾಡಲೇಬೇಕು.

ಏಕಾದಶೀವ್ರತದಲ್ಲಿ ದೇವತೆಗಳಿಗೂ ಅಧಿಕಾರವಿದೆ

ಪದ್ಮಪುರಾಣ

ದೇವತೆಗಳು ಮಹಾಲಕ್ಷ್ಮೀದೇವತೆಯ ಆವಿರ್ಭಾವಕ್ಕಾಗಿ ನಿಯಮದಿಂದ ಏಕಾದಶೀ ಉಪವಾಸವನ್ನು ಮಾಡಿ ವಿಷ್ಣುಸಹಸ್ರನಾಮವನ್ನು ಜಪಿಸುತ್ತಾ ಸಮುದ್ರಮಥನವನ್ನು ಮಾಡಿದರು. ಆಗ ಎಲ್ಲಾ ಮಹರ್ಷಿಗಳು ನಿಯಮದಿಂದ ಏಕಾದಶೀಉಪವಾಸವನ್ನು ಮಾಡಿ ಶ್ರೀಸೂಕ್ತವನ್ನು ಜಪಿಸಿದರು. ಇದರಿಂದ ಮಹಾಲಕ್ಷ್ಮೀಯು ಆವಿರ್ಭವಿಸಿದಳು. ಆಗ ನಾರಾಯಣನು ಮಾಡಿದ ಆಜ್ಞೆಯಂತೆ ಬ್ರಹ್ಮಾದಿಸಕಲದೇವತೆಗಳೂ, ಋಷಿಗಳೂ, ಏಕಾದಶೀದಿನದಲ್ಲಿ ಉಪೋಷಣವನ್ನು ಮಾಡಿ ವಿಷ್ಣುವನ್ನು ಪೂಜಿಸುತ್ತಾರೆ.

ವಿಷ್ಣುತೀರ್ಥೀಯ

ರಮಾದಿಸಕಲದೇವತೆಗಳೂ ಏಕಾದಶೀವ್ರತವನ್ನು ಮಾಡಲೇಬೇಕು. ಈ ವಿಷಯದಲ್ಲಿ ಸಂಶಯವಿಲ್ಲ.

ಈ ಏಕಾದಶೀವ್ರತವು ನಿತ್ಯ

1) ಸನತ್ಕುಮಾರಸಂಹಿತೆಯಲ್ಲಿ ಏಕಾದಶೀವ್ರತವನ್ನು "ಸದಾ" ಅಂದರೆ ಯಾವಾಗಲೂ ಮಾಡಬೇಕು. 2) ವಿಷ್ಣುರಹಸ್ಯದಲ್ಲಿ ಏಕಾದಶೀವ್ರತವನ್ನು "ಯಾವದಾಯುಃ" ಅಂದರೆ ಬದುಕಿರುವವರೆಗೂ ಮಾಡಬೇಕು. 3) ಗರುಡ ಪುರಾಣದಲ್ಲಿ ಏಕಾದಶೀವ್ರತವನ್ನು "ನಿತ್ಯ" ಅಂದರೆ ಯಾವಾಗಲೂ ಮಾಡಬೇಕು. 4) ಕಣ್ವವಚನದಲ್ಲಿ "ನ ಕದಾಚಿದತಿಕ್ರಮೇತ್" ಅಂದರೆ ಏದಾದಶೀ ವ್ರತವನ್ನು ಎಂತಹ ಕಷ್ಟ ಬಂದರೂ ಬಿಡಬಾರದು. 5) ಸನತ್ಕುಮಾರವಚನದಲ್ಲಿ "ಪಕ್ಷೇ ಪಕ್ಷೇ" ಒಂದೊಂದು ಪಕ್ಷದಲ್ಲಿಯೂ ಏಕಾದಶೀ ಉಪವಾಸವನ್ನು ಮಾಡಲೇಬೇಕು. 6) ಮಾಡದಿದ್ದವನು " ಸ ನರೋ ನರಕಂ ಯಾತಿ" ರೌರವನರಕವನ್ನು ಹೊಂದುವನು ಎಂದು ಹೇಳಿರುವುದರಿಂದ ಈ ಏಕಾದಶೀವ್ರತವು ಸಂಧ್ಯಾವಂದನಾದಿಕರ್ಮದಂತೆ ನಿತ್ಯವೆಂದು ಸಿದ್ಧವಾಯಿತು.

ಈ ಏಕಾದಶೀವ್ರತವನ್ನು ಶ್ರೀಹರಿಯ ಪ್ರೀತಿಯನ್ನು ಉದ್ದೇಶಿಸಿ ಮಾಡಬೇಕು. ಐಶ್ವರ್ಯಾದಿ ರೂಪವಾದ ನಶ್ವರಫಲವನ್ನು ಅಪೇಕ್ಷಿಸಿ ಮಾಡಿದಾಗ ಈ ವ್ರತವು ಕಾಮ್ಯವಾಗುತ್ತದೆ.

ಏಕಾದಶೀದಿನದಲ್ಲಿ ಶ್ರಾದ್ಧವನ್ನು ಮಾಡಕೂಡದು

ಜಾತಾಶೌಚ ಮೃತಾಶೌಚ ಕಾಲಗಳಲ್ಲಿ ಶ್ರಾದ್ಧವು ಬಂದರೆ ಅಶೌಚಕಾಲದಲ್ಲಿ ಯಾರೂ ಶ್ರಾದ್ಧವನ್ನು ಶ್ರಾದ್ಧದಿನದಲ್ಲಿ ಮಾಡುವುದಿಲ್ಲ. ಅಶೌಚವು ಮುಗಿಯುವ ದಿನದಲ್ಲಿಯೇ ಮಾಡುತ್ತಾರೆ. ಅದರಂತೆ ಏಕಾದಶೀ ಶ್ರಾದ್ಧವನ್ನು ದ್ವಾದಶೀದಿನದಲ್ಲಿ ಮಾಡಬೇಕು. ಏಕಾದಶೀದಿನದಲ್ಲಿ ಮಾಡಕೂಡದು. ಏಕಾದಶೀ ದಿನದಲ್ಲಿ ಮಾಡಿದರೆ ಶ್ರಾದ್ಧವನ್ನು ಮಾಡಿದವನಿಗೂ ಪುರೋಹಿತನಿಗೂ ಊಟಮಾಡಿದವರಿಗೂ ಪಿತೃಗಳಿಗೂ ನರಕ ಪ್ರಾಪ್ತಿಯಾಗುತ್ತದೆ.

.... ಶ್ರಾದ್ಧ ನಿರ್ಣಯ ....

ಶ್ರೀರಾಘವೇಂದ್ರಗುರುಸಾರ್ವಭೌಮರ ಶಿಷ್ಯರಾದ ಶ್ರೀಕೃಷ್ಣಾಚಾರ್ಯರಿಂದ ರಚಿತವಾದ ಸ್ಮೃತಿಮುಕ್ತಾವಲೀಗ್ರಂಥದ ಆಧಾರದಿಂದ.

ಸಾಂಪತ್ಸರಿಕಶ್ರಾದ್ಧವಿಷಯದಲ್ಲಿ ಎರಡು ವಿಧವಾದ ಪ್ರಮಾಣಗಳಿವೆ.

ಅಹ್ನೋ ಮುಹೂರ್ತಾ ವಿಖ್ಯಾತಾ ದಶ ಪಂಚ ಚ ಸರ್ವದಾ । ತತ್ರಾಷ್ಟಮೋ ಮುಹೂರ್ತೋ ಯಃ ಸ ಕಾಲಃ ಕುತಪಃ ಸ್ಮೃತಃ (ಪ್ರಭಾಸಖಂಡ) ರೌಹಿಣೋ ಮೂಹೂರ್ತಃ ಕುತಪಾದುತ್ತರಃ

1. ಹಗಲಿನ ಪ್ರಮಾಣವನ್ನು 15 ವಿಭಾಗ ಮಾಡಬೇಕು. ಅವುಗಳಲ್ಲಿ 8ನೆಯ ಭಾಗವು ಕುತಪ ಮುಹೂರ್ತವೆಂದೂ 9ನೆಯ ಭಾಗವು ರೌಹಿಣ ಮುಹೂರ್ತವೆಂದೂ ಹೇಳಲಡುತ್ತದೆ. ಕುತಪ ಮುಹೂರ್ತದಲ್ಲಿ ಶ್ರಾದ್ಧವನ್ನು ಆರಂಭಿಸಿ ರೌಹಿಣ ಮುಹೂರ್ತದಲ್ಲಿ ಮುಗಿಸಬೇಕು. ಆ ರೌಹಿಣ ಮುಹೂರ್ತವನ್ನು ದಾಟಿ ಹೋಗಬಾರದು.

ಉದಾ–30 ಘಳಿಗೆ ಹಗಲಿನ ಪ್ರಮಾಣವಾಗಿರುವಾಗ ಒಂದೊಂದು ಮುಹೂರ್ತಕ್ಕೆ ಎರಡೆರಡು ಘಳಿಗೆಗಳಾಗುತ್ತವೆ. ಈ ಪ್ರಮಾಣದಿಂದ ಕುತಪಮುಹೂರ್ತವು ಸೂರ್ಯೋದಯದ ಮೇಲೆ 15–16 ಘಳಿಗೆಗಳೂ ರೌಹಿಣ ಮುಹೂರ್ತವು 17–18 ಘಳಿಗೆಗಳೂ ಆಗುತ್ತವೆ.

15ನೇ ಘಳಿಗೆಯಲ್ಲಿ ಶ್ರಾದ್ಧವನ್ನು ಆರಂಭಿಸಿ 18ನೇ ಘಳಿಗೆಯಲ್ಲಿ ಮುಗಿಸಬೇಕು. ಅದಕ್ಕಿಂತ ಮುಂದಿನ 19–20 ಘಳಿಗೆಗಳ ವರೆಗೆ ಶ್ರಾದ್ಧವನ್ನು ಮುಂದುವರಿಸಬಾರದು. ಈ ವಿಷಯವು

ಆರಭ್ಯ ಕುತಪೇ ಶ್ರಾದ್ಧಂ ಕುರ್ಯಾದಾರೌಹಿಣಂ ಬುಧಃ ।
ವಿಧಿಜ್ಞೋ ವಿಧಿಮಾಸ್ಥಾಯ ರೌಹಿಣಂ ನ ತು ಲಂಘಯೇತ್॥

ಎಂಬ ಗೌತಮವಚನದಿಂದ ಸಿದ್ಧವಾಗಿದೆ.

2. ಅಪರಾಹ್ಣಃ ಪಿತೄಣಾಂ

ಎಂಬ ಶ್ರುತಿವಾಕ್ಯದಲ್ಲಿ ಪಿತೃಶ್ರಾದ್ಧವನ್ನು ಅಪರಾಹ್ಣದಲ್ಲಿ ಮಾಡಬೇಕೆಂದು ಹೇಳಿರುತ್ತದೆ. ಈ ಶ್ರುತಿಯಲ್ಲಿರುವ ಅಪರಾಹ್ಣ ಎಂಬ ಶಬ್ದಕ್ಕೆ ಅರ್ಥವನ್ನು ವಿಚಾರಿಸಬೇಕಾಗಿದೆ.

ಹಗಲಿನ ಪ್ರಮಾಣವನ್ನು 5 ವಿಭಾಗ ಮಾಡಬೇಕು. ಅದರಲ್ಲಿ 4ನೆಯ ಭಾಗಕ್ಕೆ ಅಪರಾಹ್ಣವೆಂದು ಹೆಸರು. ಹಗಲಿನ ಪ್ರಮಾನವು 30 ಘಳಿಗೆ ಆಗಿರುವಾಗ ಸೂರ್ಯೋದಯಾನಂತರದಲ್ಲಿ 19 ರಿಂದ 24 ಘಳಿಗೆಗಳು ಅಪರಾಹ್ಣವೆನಿಸುತ್ತವೆ.

ಈ ಅಪರಾಹ್ಣದ ಘಳಿಗೆಗಳು ಕುತಪ ಮತ್ತು ರೌಹಿಣ ಮುಹೂರ್ತದ ಘಳಿಗೆಗಳಾಗಿರುವ 15 16 17 18ನೆಯ ಘಳಿಗೆಗಳಾದ ಮೇಲೆ ಬರುತ್ತವೆ. ಆದ್ದರಿಂದ ಹಗಲಿನ ಪ್ರಮಾಣದ 5 ಭಾಗಗಳಲ್ಲಿ 4ನೆಯ ಭಾಗವಾದ ಅಪರಾಹ್ಣದ ಮಧ್ಯದಲ್ಲಿ ಕುತಪ ಮತ್ತು ರೌಹಿಣ ಮುಹೂರ್ತಗಳು ಬರುವುದಿಲ್ಲ.

ಆದ್ದರಿಂದಲೇ ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ ಶ್ರಾದ್ಧವನ್ನು ಮಾಡಿದರೆ ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ ಮಾಡಿದಂತಾಗುವುದಿಲ್ಲ. ಆದ್ದರಿಂದ ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ ಶ್ರಾದ್ಧವನ್ನು ಮಾಡಿದರೆ "ಅಪರಾಹ್ಣಃ ಪಿತೄಣಾಂ" ಎಂಬ ವಾಕ್ಯವನ್ನು ಬಿಟ್ಟಂತಾಗುತ್ತದೆ. ಅಪರಾಹ್ಣದಲ್ಲಿ ಮಾಡಿದರೆ "ಆರಭ್ಯ ಕುತಪೇ" ಎಂಬ ವಾಕ್ಯವನ್ನು ಬಿಟ್ಟಂತಾಗುವದು.

ಅದಕ್ಕಾಗಿ ಶ್ರಾದ್ಧವಿಷಯದಲ್ಲಿ ಹಗಲಿನ ಪ್ರಮಾಣದ 5 ಭಾಗಗಳಲ್ಲಿ 4ನೆಯ ಭಾಗವನ್ನು ಅಪರಾಹ್ಣವೆಂದು ತೆಗೆದುಕೊಳ್ಳಬಾರದು. ಹಗಲಿನ ಪ್ರಮಾಣವನ್ನು ಎರಡು ವಿಭಾಗ ಮಾಡಿಕೊಳ್ಳಬೇಕು. 1ನೆಯ ಘಳಿಗೆಯಿಂದ 15ನೆಯ ಘಳಿಗೆಯವರೆಗೆ ಪೂರ್ವಾಹ್ಣವೂ 16ನೆಯ ಘಳಿಗೆಯಿಂದ 30ನೆಯ ಘಳಿಗೆಯ ವರೆಗೆ ಅಪರಾಹ್ಣವೂ ಆಗುತ್ತದೆ. ಈ ಅಪರಾಹ್ಣಕಾಲದಲ್ಲಿ ಕುತಪ ಮುಹೂರ್ತದ 16ನೇ ಘಳಿಗೆ ರೌಹಿಣ ಮುಹೂರ್ತದ 17 18 ಘಳಿಗೆಗಳು ಇವೆ. ಆದ್ದರಿಂದ ಕುತಪಕಾಲದಲ್ಲಿ ಶ್ರಾದ್ಧವನ್ನು ಆರಂಭಿಸಿ ರೌಹಿಣ ಮುಹೂರ್ತದಲ್ಲಿ ಮುಗಿಸಿದರೆ ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ ಮತ್ತು ಅಪರಾಹ್ಣ ಕಾಲದಲ್ಲಿ ಶ್ರಾದ್ಧವನ್ನು ಮಾಡಿದಂತಾಗುವದು. ಆದ್ದರಿಂದ ಎರಡು ವಾಕ್ಯಗಳನ್ನೂ ಅಂಗೀಕರಿಸಿ ದಂತಾಗುವದು.

1) ಯಾವುದಾದರೊಂದು ತಿಥಿಗೆ ಮೊದಲನೆಯ ದಿನದಲ್ಲಿಯೇ ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ ಪೂರ್ಣವ್ಯಾಪ್ತಿ ಅಥವಾ 2) ಅಂಶತಃ ಅಧಿಕ ವ್ಯಾಪ್ತಿ

ಅಥವಾ 3) ಎರಡು ದಿನಗಳಲ್ಲಿಯೂ ಪೂರ್ಣವ್ಯಾಪ್ತಿ ಅಥವಾ 4) ಎರಡು ದಿನಗಳಲ್ಲಿಯೂ ಸಮವ್ಯಾಪ್ತಿ ಇದೆಯೋ ಆ ತಿಥಿಯ ಶ್ರಾದ್ಧವನ್ನು ಮೊದಲನೆಯ ದಿನದಲ್ಲಿಯೇ ಮಾಡಬೇಕು. 5) ಯಾವ ತಿಥಿಗೆ ಮರುದಿನದಲ್ಲಿಯೇ ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ ಪೂರ್ಣವ್ಯಾಪ್ತಿ ಅಥವಾ 6) ಅಧಿಕವ್ಯಾಪ್ತಿ ಇದೆಯೋ ಆ ತಿಥಿಯ ಶ್ರಾದ್ಧವನ್ನು ಮರುದಿನದಲ್ಲಿಯೇ ಮಾಡಬೇಕು. 7)ಎರಡು ದಿನಗಳಲ್ಲಿಯೂ ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ ವ್ಯಾಪ್ತಿ ಇಲ್ಲದಿರುವಾಗ ಮೊದಲನೇ ದಿನದಲ್ಲಿಯೇ ಮಾಡಬೇಕು.

1) ಉದಾ–ದಶಮಿ 14 ಘಳಿಗೆಗಳು ಏಕಾದಶೀ 14 ಘಳಿಗೆಗಳು. ಈ ಉದಾಹರಣದಲ್ಲಿ ಮೊದಲನೆಯ ದಿನದಲ್ಲಿ 15 16 17 18 ಘಳಿಗೆಗಳಲ್ಲಿ ಏಕಾದಶಿಯು ಪೂರ್ಣವಾಗಿದೆ. ಆ ಕಾಲವೇ ಶ್ರಾದ್ಧಕಾಲವಾಗಿದೆ. ಮರುದಿನದಲ್ಲಿ ಹಾಗಿಲ್ಲ. ಇದು ಮೊದಲನೆಯ ದಿನದಲ್ಲಿಯೇ ಪೂರ್ಣವ್ಯಾಪ್ತಿಯೆನಿಸುತ್ತದೆ.

2) ಉದಾ–ದಶಮೀ 15 ಘಳಿಗೆಗಳು. ಏಕಾದಶೀ 16 ಘಳಿಗೆಗಳು. ಈ ಉದಾಹರಣದಲ್ಲಿ ಮೊದಲನೆಯ ದಿನದಲ್ಲಿ 3 ಘಳಿಗೆಗಳಲ್ಲಿ ಮತ್ತು ಮರುದಿನದಲ್ಲಿ 2 ಘಳಿಗೆಗಳಲ್ಲಿ ಏಕಾದಶೀತಿಥಿಯು ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿದೆ. ಇದು ಮೊದಲನೆಯ ದಿನದಲ್ಲಿಯೇ ಅಧಿಕವ್ಯಾಪ್ತಿಗೆ ಉದಾಹರಣವಾಗಿದೆ. 3) ದಶಮೀ 14 ಘಳಿಗೆಗಳು ಏಕಾದಶೀ 18 ಘಳಿಗೆಗಳು. ಇದು ಎರಡು ದಿನದಲ್ಲಿಯೂ ಪೂರ್ಣ ವ್ಯಾಪ್ತಿಗೆ ಉದಾಹರಣೆಯಾಗಿದೆ. 4) ದಶಮೀ 16 ಘಳಿಗೆಗಳು ಏಕಾದಶೀ 16 ಘಳಿಗೆಗಳು. ಇದು ಎರಡೂ ದಿನಗಳಲ್ಲಿಯೂ ಸಮವ್ಯಾಪ್ತಿಗೆ ಉದಾಹರಣೆ. 5) ದಶಮೀ 18 ಘಳಿಗೆಗಳು ಏಕಾದಶೀ 18 ಘಳಿಗೆಗಳು ಇದು ಮರುದಿನದಲ್ಲಿಯೇ ಪೂರ್ಣವ್ಯಾಪ್ತಿಗೂ. 6) ದಶಮೀ 16 ಘಳಿಗೆಗಳು. ಏಕಾದಶೀ 17 ಘಳಿಗೆಗಳು. ಇದು ಮರುದಿನದಲ್ಲಿಯೇ ಅಧಿಕವ್ಯಾಪ್ತಿಗೂ 7) ದಶಮೀ 18 ಘಳಿಗೆಗಳು ಏಕಾದಶೀ 14 ಘಳಿಗೆಗಳು. ಇದು 2 ದಿನಗಳಲ್ಲಿಯೂ ವ್ಯಾಪ್ತಿ ಇಲ್ಲದಿರುವುದಕ್ಕೂ ಉದಾಹರಣವೆಂದು ತಿಳಿಯಬೇಕು. ಈ ನಿರ್ಣಯವನ್ನು ಅನುಸರಿಸಿ ಪಂಚಾಂಗದಲ್ಲಿ ಎಲ್ಲಾ ಶ್ರಾದ್ಧಗಳನ್ನು ಗುರುತಿಸಿದ್ದೇವೆ.

ಏಕಾದಶೀಶ್ರಾದ್ಧ ನಿರ್ಣಯ

ಏಕಾದಶೀಶ್ರಾದ್ಧದ ವಿಷಯದಲ್ಲಿ ಮಾಧ್ವರಲ್ಲಿಯೇ ಅನೇಕ ಭಿನ್ನಾಭಿಪ್ರಾಯಗಳಿವೆ.

1) ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ (1) ಏಕಾದಶೀತಿಥಿಗೆ ಎರಡು ದಿನಗಳಲ್ಲಿಯೂ ಪೂರ್ಣವ್ಯಾಪ್ತಿ ಅಥವಾ (2) ಎರಡು ದಿನಗಳಲ್ಲಿಯೂ ಅಂಶತಃ ಸಮವ್ಯಾಪ್ತಿ ಅಥವಾ 3) ಮೊದಲನೇ ದಿನದಲ್ಲಿಯೇ ಅಧಿಕವ್ಯಾಪ್ತಿ ಅಥವಾ 4) ಮೊದಲನೆಯ ದಿನದಲ್ಲಿಯೇ ಪೂರ್ಣವ್ಯಾಪ್ತಿ ಅಥವಾ 5) ಎರಡು ದಿನಗಳಲ್ಲಿ ವ್ಯಾಪ್ತಿ ಇಲ್ಲದಿರುವಿಕೆ ಎಂಬ ಈ ಐದು ಪ್ರಕಾರಗಳಿಂದ ದಶಮೀದಿನದಲ್ಲಿಯೇ ಏಕಾದಶೀಶ್ರಾದ್ಧವು ಉಂಟಾಗುತ್ತದೆ. ದ್ವಾದಶಿಯಲ್ಲಿ ಆಗುವುದಿಲ್ಲ.

2) ದಶಮೀವೇಧವು ಏಕಾದಶಿಗೆ ಏರ್ಪಟ್ಟಾಗ ಏಕಾದಶೀಶ್ರಾದ್ಧವು ದಶಮೀವಿದ್ಧ ಏಕಾದಶಿಯಲ್ಲಿ ಅಂದರೆ ಭೋಜನಾರ್ಹವಾದ ಏಕಾದಶೀದಿನದಲ್ಲಿಯೇ ಏರ್ಪಡುತ್ತದೆ.

3) (1) ದಶಮೀವೇಧವುಳ್ಳ ಏಕಾದಶೀದಿನದಲ್ಲಿ ಸತ್ತವರ ಶ್ರಾದ್ಧವನ್ನು ಮಾತ್ರ ದಶಮೀವಿದ್ಧ ಏಕಾದಶೀ ತಿಥಿಯಲ್ಲಿ ಮಾಡಬೇಕು. ದಶಿಮೀವೇಧವಿಲ್ಲದ ಏಕಾದಶೀತಿಥಿಯಲ್ಲಿ ಸತ್ತವರ ಶ್ರಾದ್ಧವನ್ನು ದಶಮೀವಿದ್ಧ ಏಕಾದಶೀತಿಥಿಯಲ್ಲಿ ಮಾಡಕೂಡದು. (2) ಮೇಲ್ಕಂಡ ಮೊದಲನೆಯ ಕ್ರಮದಿಂದ ದಶಮೀ ದಿನದಲ್ಲಿ ಶ್ರಾದ್ಧಪ್ರಸಕ್ತಿಯಿದ್ದರೂ ದಶಮೀಯಲ್ಲಿ ಮಾಡಕೂಡದು. ದ್ವಾದಶೀದಿನದಲ್ಲಿಯೇ ಮಾಡಬೇಕು.

4) ದಶಮೀವೇಧವುಳ್ಳ ಏಕಾದಶೀತಿಥಿಯಲ್ಲಿ ಸತ್ತವನ ಶ್ರಾದ್ಧ ಮತ್ತು ದಶಮೀವೇಧವಿಲ್ಲದ ಏಕಾದಶೀದಿನದಲ್ಲಿ ಸತ್ತವನ ಶ್ರಾದ್ಧ ಈ ಎರಡು ಶ್ರಾದ್ಧಗಳೂ ದ್ವಾದಶೀದಿನದಲ್ಲಿಯೇ ಆಗುತ್ತವೆ. ಮೇಲ್ಕಂಡ 1, 2 ಪ್ರಕಾರಗಳಿಂದ ದಶಮೀತಿಥಿಯಲ್ಲಿಯೇ ಆ ಶ್ರಾದ್ಧವನ್ನು ಮಾಡಲಿಕ್ಕೆ ಅವಕಾಶವಿದ್ದರೂ ಆ ದಿನದಲ್ಲಿ ಮಾಡಬಾರದು.

5) ಏಕಾದಶೀತಿಥಿಗೆ ರೌಹಿಣ ಮತ್ತು ಕುತಪ ಮುಹೂರ್ತಗಳ ಸಂಪೂರ್ಣ ಅಥವಾ ಅಂಶತಃ ಅಧಿಕ ವ್ಯಾಪ್ತಿಯು ಮರುದಿನದಲ್ಲಿಯೇ ಇದ್ದರೆ ದಶಮೀವಿದ್ಧ ಏಕಾದಶೀತಿಥಿಯಲ್ಲಿ ಸತ್ತವರ ಶ್ರಾದ್ಧವನ್ನೂ ದಶಮೀವೇಧವಿಲ್ಲದ ಏಕಾದಶೀತಿಥಿಯಲ್ಲಿ ಸತ್ತವರ ಶ್ರಾದ್ಧವನ್ನೂ ದ್ವಾದಶೀದಿನದಲ್ಲಿಯೇ ಮಾಡಬೇಕು.

ಈ 5 ಪಕ್ಷಗಳಲ್ಲಿ ಶ್ರೀ ಸ್ಮೃತಿಮುಕ್ತಾವಲೀಕಾರರಿಗೆ ಸಮ್ಮತವಾದ ಪಕ್ಷವು ಯಾವುದು ಎಂಬುದನ್ನು ವಿಮರ್ಶಿಸೋಣ.

ಪಿತ್ರೋಃ ಶ್ರಾದ್ಧಂ ನ ಕುರ್ವೀತ ಏಕಾದಶ್ಯಾಂ ದ್ವಿಜೋತ್ತಮಃ ।
ದ್ವಾದಶ್ಯಾಂ ತತ್ರ ಕುರ್ವೀತ ನೋಪವಾಸದಿನೇ ಕ್ವಚಿತ್ (ಹಾರೀತಃ)

ಅರ್ಥ :-

ಏಕಾದಶೀದಿನದಲ್ಲಿ ತಂದೆ ತಾಯಿಗಳ ಶ್ರಾದ್ಧವನ್ನು ಮಾಡಬಾರದು. ದ್ವಾದಶೀದಿನದಲ್ಲಿ ಮಾಡಬೇಕು. ಉಪವಾಸವುಳ್ಳ ದಿನದಲ್ಲಿ ಶ್ರಾದ್ಧವನ್ನು ಯಾವ ಕಾರಣದಿಂದಲೂ ಮಾಡಬಾರದು.

ಈ ವಾಕ್ಯದ ಅರ್ಥವನ್ನು ವಿಮರ್ಶಿಸೋಣ. ಏಕಾದಶೀತಿಥಿಯು ದಶಮೀವಿದ್ಧವಾದಾಗ ಭೋಜನಾರ್ಹವಾಗುತ್ತದೆ. ಇಲ್ಲದಿದ್ದರೆ ಉಪವಾಸಾರ್ಹವಾಗುತ್ತದೆ. "ಪಿತ್ರೋ ಃ ಶ್ರಾದ್ಧಂ ನ ಕುರ್ವೀತ ಏಕಾದಶ್ಯಾಂ" ಎಂಬ ವಾಕ್ಯದಿಂದ ಏಕಾದಶೀದಿನದಲ್ಲಿ ಶ್ರಾದ್ಧವನ್ನು ಮಾಡಕೂಡದು ಎಂದು ಹೇಳಿ ಪುನಃ "ನೋಪವಾಸದಿನೇದ್ವಚಿತ್" ಪವಾಸಾರ್ಹವಾದ ದಿನದಲ್ಲಿ ಶ್ರಾದ್ಧವನ್ನು ಮಾಡಬಾರದು ಎಂದು ಪ್ರತ್ಯೇಕವಾಗಿ ಹೇಳಿರುವುದರಿಂದ

ಈ ಪ್ರಮಾಣದಲ್ಲಿರುವ ಏಕಾದಶೀ ಎಂಬ ಪದಕ್ಕೆ ಉಪವಾಸದಿನ ಎಂದು ವ್ಯಾಖ್ಯಾನವನ್ನು ಮಾಡಿದಂತಾಯಿತು. ಇದರಿಂದ ಏಕಾದಶೀತಿಥಿಯಲ್ಲಿ ಶ್ರಾದ್ಧವನ್ನು ನಿಷೇಧಿಸುವ ಸಕಲ ವಾಕ್ಯಗಳೂ ಉಪವಾಸರ್ಹವಾದ ಏಕಾದಶೀದಿನದಲ್ಲಿ ಶ್ರಾದ್ಧವನ್ನು ನಿಷೇಧಿಸಿ ದ್ವಾದಶೀದಿನದಲ್ಲಿ ಶ್ರಾದ್ಧವನ್ನು ವಿಧಿಸುತ್ತವೆ ಎಂದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಭೋಜನಾರ್ಹವಾದ ದಶಮೀವಿದ್ಧ ಏಕಾದಶೀ ದಿನದಲ್ಲಿ ಶ್ರಾದ್ಧವನ್ನು ನಿಷೇಧಿಸುವುದಿಲ್ಲವೆಂದು ಸಿದ್ಧವಾಯಿತು. ಆದ್ದರಿಂದ ದಶಮೀವೇಧವುಳ್ಳ ಏಕಾದಶೀ ದಿನದಲ್ಲಿ ಸತ್ತವರ ಶ್ರಾದ್ಧ ಮತ್ತು ದಶಮೀವೇಧವಿಲ್ಲದ ಏಕಾದಶೀ ದಿನದಲ್ಲಿ ಸತ್ತವರ ಶ್ರಾದ್ಧ ಇವೆರಡನ್ನೂ ದಶಮೀವಿದ್ಧವಾದ ಏಕಾದಶೀದಿನದಲ್ಲಿಯೇ ಮಾಡಬೇಕೆಂದು ಹೇಳಬೇಕು.

ಶ್ರಾದ್ಧವಿಘ್ನೇ ಸಮುತ್ಪನ್ನೇಽವಿಜ್ಞಾತೇ ಚ ಮೃತೇಽಹನಿ ।
ಏಕಾದಶ್ಯಾಂ ತು ಕರ್ತವ್ಯಂ ದರ್ಶೇ ವಾಽಥ ವಿಚಕ್ಷಣೈಃ ॥
ನ ವಿಜ್ಞಾತೇ ಮೃತೇಽಹನೀತಿ ತತ್ರ ಶ್ರಾದ್ಧಾಭ್ಯನು ಜ್ಞಾನಂ
ವಿದ್ಧೈಕಾದಶೀಪರತ್ವೇನ ಜ್ಞೇಯಮ್ ॥

ಸ್ಮೃ. ಮು.,

ತಾತ್ಪರ್ಯ–ಯಾವುದಾದರೊಂದು ತೊಂದರೆಯಿಂದ ಶ್ರಾದ್ಧವು ನಡೆಯದೆ ಇದ್ದರೂ, ಶ್ರಾದ್ಧದಿನವು ತಿಳಿಯದೇ ಇದ್ದರೂ ಆ ಶ್ರಾದ್ಧವನ್ನು ಏಕಾದಶೀದಿನದಲ್ಲಿ ಮಾಡಬೇಕೆಂದು ಶಾಸ್ತ್ರದಲ್ಲಿ ಹೇಳಿರುವುದು ದಶಮೀ ವಿದ್ಧವಾದ ಏಕಾದಶೀದಿನದಲ್ಲಿ ಮಾಡಬೇಕೆಂಬ ಅಭಿಪ್ರಾಯದಿಂದ ಎಂದು ತಿಳಿಯಬೇಕು.

ಸ್ಮೃತಿಮುಕ್ತಾವಲೀ ಗ್ರಂಥದಲ್ಲಿ ಹೇಳಿರುವ ಇನ್ನೊಂದು ವಿಷಯವನ್ನು ಗಮನಿಸಬೇಕು. ಮೃತಾಶೌಚ ಮುಂತಾದ ನಿಮಿತ್ತಗಳಿಂದ ನಿಂತುಹೋದ ಶ್ರಾದ್ಧವನ್ನು ಅಮಾವಾಸ್ಯಾ ಅಥವಾ ಕೃಷ್ಣ ಏಕಾದಶೀ ಮುಂತಾದ ದಿನಗಳಲ್ಲಿ ಮಾಡಬೇಕೆಂದು ಗೌತಮರ ವಚನವಿದೆ. ಅದರ ಅಭಿಪ್ರಾಯವನ್ನು ವಿವರಿಸುತ್ತಾ ಹೇಳಿದ್ದಾರೆ–

'ಯತ್ತು ವಚನಂ ಕೃಷ್ಣೈಕಾದಶ್ಯಾಂ ಕರ್ತವ್ಯಮಿತಿ
ತತ್ ವಿದ್ಧೈಕಾದಶೀವಿಷಯಂ ದ್ವಾದಶೀವಿಷಯಂ ವಾ'

ತಾತ್ಪರ್ಯ–ಕೃಷ್ಣಪಕ್ಷದ ಏಕಾದಶೀ ತಿಥಿಯಲ್ಲಿ ಶ್ರಾದ್ಧವನ್ನು ಮಾಡಬೇಕೆಂಬ ಗೌತಮರ ವಚನಕ್ಕೆ ದಶಮೀವಿದ್ಧವಾದ ಏಕಾದಶೀತಿಥಿಯಲ್ಲಿ ಅಥವಾ ದ್ವಾದಶೀತಿಥಿಯಲ್ಲಿ ಶ್ರಾದ್ಧವನ್ನು ಮಾಡಬೇಕೆಂಬುದೇ ಅಭಿಪ್ರಾಯ.

ಇದರಿಂದ ಮೃತಾಶೌಚಾದಿ ನಿಮಿತ್ತಗಳಿಂದ ನಿಂತುಹೋದ ಮುವತ್ತುತಿಥಿಗಳ ಶ್ರಾದ್ಧವನ್ನು ದಶಮೀವಿದ್ಧತಿಥಿಯಲ್ಲಿ ಮಾಡಬೇಕೆಂದು ಹೇಳುತ್ತಿರುವ ಸ್ಮೃತಿಮುಕ್ತಾವಲೀಕಾರರಿಗೆ ದಶಮೀವೇಧವಿಲ್ಲದ ಏಕಾದಶೀತಿಥಿಯಲ್ಲಿ ಸತ್ತವನ ಶ್ರಾದ್ಧವನ್ನು ಸಹ ದಶಮೀವಿದ್ಧವಾದ ಏಕಾದಶೀತಿಥಿಯಲ್ಲಿ ಮಾಡಬಹುದೆಂಬ ಅಭಿಪ್ರಾಯವು ಸಿದ್ಧವಾಯಿತು.

ಮೇಲ್ಕಂಡ ಮೊದಲನೆಯ ಪಕ್ಷವನ್ನು ಸಾಮಾನ್ಯವಾಗಿ ಎಲ್ಲಾ ತಿಥಿಗಳ ವಿಷಯದಲ್ಲಿಯೂ ಸ್ಮೃತಿಮುಕ್ತಾವಲೀಕಾರರು ಹೇಳಿರುವುದರಿಂದ ಆ ಪಕ್ಷವು ಏಕಾದಶೀತಿಥಿಯ ವಿಷಯದಲ್ಲಿಯೂ ಸ್ಮೃತಿಮುಕ್ತಾವಲೀಕಾರರು ಹೇಳಿರುವುದರಿಂದ ಆ ಪಕ್ಷವು ಏಕಾದಶೀ ತಿಥಿಯ ವಿಷಯದಲ್ಲಿಯೂ ಅನ್ವಯಿಸುತ್ತದೆ. ಅಲ್ಲದೆ ಆ ದಿನವು ಉಪವಾಸದಿನವಲ್ಲದಿರುವುದರಿಂದ ಮೇಲ್ಕಂಡ ಏಕಾದಶೀಶ್ರಾದ್ಧ ನಿಷೇಧಕವಾದ ಯಾವ ವಚನದಿಂದಲೂ ಆ ದಿನದಲ್ಲಿ ಶ್ರಾದ್ಧವು ನಿಷಿದ್ಧವಲ್ಲ. ಆದ್ದರಿಂದ ದಶಮೀದಿನದಲ್ಲಿ ಸರ್ವತಿಥಿಸಾಧಾರಣವಾದ ಮೊದಲನೆಯ ಕ್ರಮದಂತೆ ಬಂದಿರುವ ಏಕಾದಶೀ ಶ್ರಾದ್ಧವನ್ನು ಅಂದೇ ಮಾಡಬೇಕು. ದ್ವಾದಶೀದಿನದಲ್ಲಿ ಮಾಡಬಾರದು. ಆದ್ದರಿಂದ ಮೇಲ್ಕಂಡ ನಾಲ್ಕನೆಯ ಪಕ್ಷವು ಸ್ಮೃತಿ ಮುಕ್ತಾವಲೀಕಾರರಿಗೆ ಸಮ್ಮತವಲ್ಲ.

ಆದ್ದರಿಂದ ಪಂಚಾಂಗದಲ್ಲಿ ಸ್ಮೃತಿಮುಕ್ತಾವಲೀಕಾರರ ಅಭಿಪ್ರಾಯದಂತೆ ದಶಮೀದಿನದಲ್ಲಿ ಏಕಾದಶೀಶ್ರಾದ್ಧ ಬಂದಾಗ ದಶಮೀದಿನದಲ್ಲಿಯೂ ದಶಮೀವಿದ್ಧ ಏಕಾದಶೀದಿನದಲ್ಲಿ ಏಕಾದಶೀಶ್ರಾದ್ಧ ಬಂದಾಗ ದಶಮೀವಿದ್ಧ ಏಕಾದಶೀದಿನದಲ್ಲಿಯೂ ಬರೆದಿದ್ದೇವೆ. ಮೇಲ್ಕಂಡ ಅರ್ಥವನ್ನು ವಿವರಿಸುವ ಸ್ಮೃತಿ ಮುಕ್ತಾವಲೀಕಾರರಿಂದ ಉದಾಹೃತವಾದ ಕೆಲವು ವಾಕ್ಯಗಳು ಕೆಳಗೆ ಕೊಟ್ಟಿವೆ.

ಯಥಾऽಶೌಚಗತಂ ಶ್ರಾದ್ಧಮಾಶೌಚಾಂತೇ ವಿಧೀಯತೇ ।
ತಥೈವೈಕಾದಶೀಶ್ರಾದ್ಧಂ ದ್ವಾದಶ್ಯಾಮೇವ ಕಾರಯೇತ್ ॥
ತಸ್ಮಾದೇಕಾದಶೀಶ್ರಾದ್ಧಂ ನೋಪವಾಸೇ ಸಮಾಚರೇತ್ ।
ದಾತೃಭೋಕ್ತೃಪಿತೄಣಾಂ ತದನ್ನಂ ದುರ್ಗತಿಸಾಧಕಮ್ ॥

(ಸಂಗ್ರಹಃ)

ಜಾತಾಶೌಚ ಅಥವಾ ಮೃತಾಶೌಚದಿನದಲ್ಲಿ ಸಾಂವತ್ಸರಿಕಶ್ರಾದ್ಧ [ಮಾಸಿಕ] ಮುಂತಾದವುಗಳು ಬಂದಾಗ ಅವುಗಳನ್ನು ಆ ದಿನದಲ್ಲಿಯೇ ಮಾಡಬೇಕು ಎಂಬ ಅಂಧಶ್ರದ್ಧೆಯಿಂದ ಆ ದಿನದಲ್ಲಿ ಶ್ರಾದ್ಧವನ್ನು ಮಾಡಿದರೆ ಶ್ರಾದ್ಧವನ್ನು ಮಾಡಿದ ಯಜಮಾನನಿಗೂ ಅವನ ಪಿತೃಗಳಿಗೂ ಶ್ರಾದ್ಧಭೋಜನವನ್ನು ಮಾಡಿದ ಬ್ರಾಹ್ಮಣನಿಗೂ ನರಕ ಮುಂತಾದ ದುರ್ಗತಿಗಳು ಏರ್ಪಡುತ್ತವೆ. ಅದಕ್ಕಾಗಿ ಶ್ರಾದ್ಧಕ್ಕೆ ನಿಷಿದ್ಧವಾದ ಆಶೌಚಕಾಲದಲ್ಲಿ ಬಂದ ಶ್ರಾದ್ಧವನ್ನು ಆಶೌಚಕಾಲದಲ್ಲಿ ಮಾಡದೆ ಆಶೌಚಕಾಲವು ಮುಗಿದ ಮೇಲೆ ಶ್ರಾದ್ಧಕ್ಕೆ ಯೋಗ್ಯವಾದ ಕಾಲವು ಬಂದ ಕೂಡಲೇ ಮಾಡಬೇಕೆಂಬ ವಿಷಯದಲ್ಲಿ ವಿವಾದವಿಲ್ಲ. ಅದರಂತೆ ಭೋಜನಕ್ಕೆ ನಿಷಿದ್ಧವಾದ ಉಪವಾಸಕ್ಕೆ ಯೋಗ್ಯವಾದ ಏಕಾದಶೀದಿನದಲ್ಲಿ ಸಾಂವತ್ಸರಿಕಶ್ರಾದ್ಧ ಮುಂತಾದವುಗಳು ಬಂದಾಗ ಆ ದಿನದಲ್ಲಿ ಶ್ರಾದ್ಧವನ್ನು ಮಾಡಿದರೆ ಶ್ರಾದ್ಧವನ್ನು ಮಾಡಿದ ಯಜಮಾನನಿಗೂ ಅವನ ಪಿತೃಗಳಿಗೂ ಶ್ರಾದ್ಧಭೋಜನವನ್ನು

ಮಾಡಿದ ಬ್ರಾಹ್ಮಣರಿಗೂ ನರಕ ಮುಂತಾದ ದುರ್ಗತಿಗಳು ಉಂಟಾಗುತ್ತವೆ. ಅದಕ್ಕಾಗಿ ಶ್ರಾದ್ಧಕ್ಕೆ ನಿಷಿದ್ಧವಾದ ಉಪವಾಸವುಳ್ಳ ಏಕಾದಶೀದಿನದಲ್ಲಿ ಪ್ರಾಪ್ತವಾದ ಶ್ರಾದ್ಧವನ್ನು ಉಪವಾಸವುಳ್ಳ ಏಕಾದಶೀದಿನದಲ್ಲಿ ಮಾಡದೆ ಶ್ರಾದ್ಧಕ್ಕೆ ಯೋಗ್ಯವಾದ ಮರುದಿನ ಅಂದರೆ ದ್ವಾದಶೀದಿನದಲ್ಲಿ ಮಾಡಬೇಕು.''

ಏಕಾದಶ್ಯಾಂ ತು ಸಂಪ್ರಾಪ್ತೇ ಮಾತಾಪಿತ್ರೋರ್ಮೃತೇಽಹನಿ।
ದ್ವಾದಶ್ಯಾಂ ತತ್ಪ್ರದಾತವ್ಯಂ ನೋಪವಾಸದಿನೇ ಕ್ವಚಿತ್ ॥

(ಸ್ಮೃತಿಃ)

ಉಪವಾಸವುಳ್ಳ ಏಕಾದಶೀದಿನದಲ್ಲಿ ಬಂದ ಶ್ರಾದ್ಧವನ್ನು ಅಂದು ಮಾಡದೆ ದ್ವಾದಶೀದಿನದಲ್ಲಿ ಮಾಡಬೇಕು.

ಏಕಾದಶ್ಯಾಂ ಪ್ರಾಪ್ತವತ್ಯಾಂ ಮಾತಾಪಿತ್ರೋರ್ಮೃತೇಽಹನಿ ।
ದ್ವಾದಶ್ಯಾಂ ತತ್ಪ್ರದಾತವ್ಯಂ ನೋಪವಾಸದಿನೇ ಕ್ವಚಿತ್ ॥
ಏಕಾದಶೀಂ ಪರಿತ್ಯಜ್ಯ ದ್ವಾದಶ್ಯಾಮೇವ ಕಾರಯೇತ್ ।
ದೂಷಿತಾನ್ನಂ ನ ಚಾಶ್ನಂತಿ ಪಿತರಶ್ಚ ದಿವೌಕಸಃ ॥

ಉಪವಾಸವುಳ್ಳ ಏಕಾದಶೀದಿನದಲ್ಲಿ ಶ್ರಾದ್ಧವನ್ನು ಮಾಡಿದರೆ ನಿಂದ್ಯವಾದ ಆ ಶ್ರಾದ್ಧವನ್ನು ಪಿತೃಗಳೂ ದೇವತೆಗಳೂ ಸ್ವೀಕರಿಸುವುದಿಲ್ಲ. ಆದ್ದರಿಂದ ಅಂದು ಶ್ರಾದ್ಧವನ್ನು ಮಾಡಬಾರದು. ದ್ವಾದಶೀದಿನದಲ್ಲಿಯೇ ಮಾಡಬೇಕು.

ಮೇಲ್ಕಂಡ 5ನೆಯ ಪಕ್ಷವು ಸಕಲ ಮಾಧ್ವರಿಗೂ ಸಮ್ಮತವಾಗಿದೆ. ಏಕಾದಶೀತಿಥಿಗೆ 1) ಏಕಾದಶೀದಿನದಲ್ಲಿಯೇ ಕುತಪ ಮತ್ತು ರೌಹಿಣ ಮುಹೂರ್ತಗಳ ವ್ಯಾಪ್ತಿ ಅಥವಾ 2) ಅಂಶತಃ ಅಧಿಕವ್ಯಾಪ್ತಿ ಇರುವಾಗಲೂ 3) ದಶಮೀತಿಥಿಯ ವೇಧವು ಏಕಾದಶೀತಿಥಿಗೆ ಇಲ್ಲದಿರುವಾಗಲೂ ದಶಮೀವಿದ್ಧವಾದ ಏಕಾದಶೀತಿಥಿಯಲ್ಲಿ ಸತ್ತವರಿಗೂ ದ್ವಾದಶೀದಿನದಲ್ಲಿಯೇ ಶ್ರಾದ್ಧವು ಸರ್ವಸಮ್ಮತವಾಗಿದೆ. ಆದರಂತೆ (1) ದಶಮೀದಿನದಲ್ಲಿಯೇ ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ ಏಕಾದಶೀಥಿಯ ಪೂರ್ಣವ್ಯಾಪ್ತಿ ಅಥವಾ 2) ಎರಡು ದಿನಗಳಲ್ಲಿಯೂ ಏಕಾದಶೀ ತಿಥಿಯ ಪೂರ್ಣವ್ಯಾಪ್ತಿ ಅಥವಾ 3) ಎರಡು ದಿನಗಳಲ್ಲಿ ಏಕಾದಶೀತಿಥಿಯ ಸಮವ್ಯಾಪ್ತಿ ಅಥವಾ 4) ದಶಮೀದಿನದಲ್ಲಿಯೇ ಏಕಾದಶೀಥಿಯ ಅಧಿಕವ್ಯಾಪ್ತಿ ಅಥವಾ 5) ಏಕಾದಶೀತಿಥಿಗೆ ದಶಮೀವೇಧವುಂಟಾಗಿರುವುದು ಅಥವಾ (6) ದಶಮೀ ಮತ್ತು ಏಕಾದಶೀ ಈ ಎರಡು ದಿನಗಳಲ್ಲಿಯೂ ವ್ಯಾಪ್ತಿ ಇಲ್ಲದಿರುವುದು ಎಂಬ ಆರು ಸಂದರ್ಭಗಳಲ್ಲಿ ಶಾಸ್ತ್ರಸಮ್ಮತವಾಗಿ ದಶಮೀತಿಥಿಯಲ್ಲಿಯೇ ಏಕಾದಶೀಶ್ರಾದ್ಧವನ್ನು ಸರ್ವರೂ ಅಂಗೀಕರಿಸಲೇಬೇಕು.

ಏಕಾದಶೀತಿಥಿಯ ಶ್ರಾದ್ಧವು ದ್ವಾದಶೀದಿನದಲ್ಲಿ ಏರ್ಪಡುವುದಕ್ಕೆ ಯಾವ ಕಾರಣವನ್ನು ಹೇಳುತ್ತೇವೆಯೋ ಆ ಕಾರಣಗಳಿಗೆ ನೇರವಿರುದ್ಧವಾದ ಕಾರಣಗಳಿರುವಾಗ ದಶಮೀತಿಥಿಯಲ್ಲಿಯೇ ಆ ಶ್ರಾದ್ಧಗಳನ್ನು ಮಾಡಬೇಕು.

ಇಲ್ಲದಿದ್ದರೆ ಆ ಶ್ರಾದ್ಧವು ದ್ವಾದಶಿಯಲ್ಲಿಯೂ ಇಲ್ಲದೆ ದಶಮಿಯಲ್ಲಿಯೂ ಇಲ್ಲದೆ ಲುಪ್ತವಾದೀತು.

ಏಕಾದಶೀದಿನದಲ್ಲಿ ಮಾಡಬೇಕಾದ ಶ್ರಾದ್ಧವನ್ನು ದ್ವಾದಶೀದಿನದಲ್ಲಿಯೇ ಮಾಡಬೇಕು. ಯಾವ ಕಾರಣದಿಂದಲೂ ದಶಮೀದಿನದಲ್ಲಿ ಮಾಡಕೂಡದು" ಎಂದು ಹೇಳುವ ಪಕ್ಷವನ್ನು ಈಗ ಸ್ವಲ್ಪ ವಿಮರ್ಶಿಸೋಣ. ಅವರಿಗೆ ಆಧಾರವಾಗಿರುವ ಪ್ರಮಾಣವಾಕ್ಯವನ್ನು ಕೆಳಗೆ ಕೊಟ್ಟಿದ್ದೇನೆ.

ಯಥಾऽಶೌಚಗತಂ ಶ್ರಾದ್ಧಮಾಶೌಚಾಂತೇ ವಿಧೀಯತೇ ।
ತಥೈವೈಕಾದಶೀಶ್ರಾದ್ಧಂ ದ್ವಾದಶ್ಯಾಮೇವ ಕಾರಯೇತ್ ॥

"ಜಾತಾಶೌಚ ಮೃತಾಶೌಚಕಾಲಗಳಲ್ಲಿ ಬಂದಿರುವ ಶ್ರಾದ್ಧವನ್ನು ಆಶೌಚಕಾಲಗಳಲ್ಲಿ ಯಾರೂ ಯಾವ ಕಾರಣದಿಂದಲೂ ಮಾಡುವುದಿಲ್ಲ. ಅಶೌಚವು ಮುಗಿದ ಮೇಲೆ ಮಾಡುತ್ತಾರೆ. ಅದರಂತೆ ಏಕಾದಶೀ ತಿಥಿಯಲ್ಲಿ ಮಾಡಬೇಕಾದ ಶ್ರಾದ್ಧವನ್ನು ದ್ವಾದಶೀದಿನದಲ್ಲಿಯೇ ಮಾಡಬೇಕು. ಯಾರೂ ಯಾವ ಕಾರಣದಿಂದಲೂ ದ್ವಾದಶೀದಿನವನ್ನು ಬಿಟ್ಟು ಬೇರೆ ದಿನದಲ್ಲಿ ಮಾಡಕೂಡದು" ಎಂದು ಈ ವಾಕ್ಯಕ್ಕೆ ಆ ಪಕ್ಷದವರು ಅರ್ಥವನ್ನು ಹೇಳುತ್ತಾರೆ.

ಈ ವಾಕ್ಯದಲ್ಲಿ "ದ್ವಾದಶೀದಿನದಲ್ಲಿಯೇ ಏಕಾದಶೀ ಶ್ರಾದ್ಧವನ್ನು ಮಾಡಬೇಕು. ಬೇರೆ ದಿನದಲ್ಲಿ ಮಾಡಲೇಕೂಡದು" ಎಂದು ಹೇಳಿದೆ. ಆದ್ದರಿಂದ ಏಕಾದಶೀತಿಥಿಯಲ್ಲಿ ಮಾಡಬೇಕಾದ ಶ್ರಾದ್ಧವನ್ನು ದಶಮೀವಿದ್ಧಏಕಾದಶೀದಿನದಲ್ಲಿ ಯಾರೂ ಯಾವ ಕಾರಣದಿಂದಲೂ ಮಾಡಕೂಡದು. ಅದೇ ರೀತಿಯಲ್ಲಿ ದಶಮೀದಿನದಲ್ಲಿಯೇ ಕುತಪ ಮತ್ತು ರೌಹಿಣ ಮುಹೂರ್ತಗಳಲ್ಲಿ ಏಕಾದಶೀತಿಥಿಗೆ ಪೂರ್ಣವ್ಯಾಪ್ತಿ ಮುಂತಾದ ಹಿಂದೆ ಹೇಳಿದ ಐದು ಕಾರಣಗಳಿಂದ ಶ್ರಾದ್ಧವನ್ನು ಮಾಡುವುದಕ್ಕೆ ಅವಕಾಶವಿದ್ದರೂ ಅಂದು ·ಏಕಾದಶೀತಿಥಿಯಲ್ಲಿ ಮಾಡಬೇಕಾದ ಶ್ರಾದ್ಧವನ್ನು ಮಾಡಕೂಡದು ಎಂದು ಹೇಳುತ್ತಾರೆ. ಇದು ತುಂಬಾ ಆಶ್ಚರ್ಯವಾಗಿದೆ.

ಮೇಲ್ಕಂಡ ದಶಮೀವಿದ್ಧಏಕಾದಶೀದಿನದಲ್ಲಿ ಅವರು ಊಟ ಮಾಡುತ್ತಾರೆ. ಬ್ರಹ್ಮಯಜ್ಞಾಂಗವಾದ ಪಿತೃತರ್ಪಣವನ್ನು ಕೊಡುತ್ತಾರೆ. ಅದೇ ದಿನದಲ್ಲಿ ದಕ್ಷಿಣಾಯನ ಪುಣ್ಯಕಾಲ ಮತ್ತು ಉತ್ತರಾಯಣ ಪುಣ್ಯಕಾಲವು ಬಂದರೆ ಪಿತೃಗಳಿಗೆ ತಿಲತರ್ಪಣವನ್ನು ಕೊಡುತ್ತಾರೆ. ಸತ್ತವರಿಗೆ ಅದೇ ದಿನದಲ್ಲಿ ಸಪಿಂಡೀಕರಣವು ಬಂದರೆ ಅಂದೇ ಮಾಡುತ್ತಾರೆ. ಹತ್ತು ದಿನಗಳಲ್ಲಿ ಮಾಡಬೇಕಾದ ಪಿಂಡದಾನ ತರ್ಪಣ ಮುಂತಾದವುಗಳನ್ನು ಅಂದೇ ಮಾಡುತ್ತಾರೆ. ಆದರೆ ಸಾಂವತ್ಸರಿಕಶ್ರಾದ್ಧ ಮಾಸಿಕ ಇವುಗಳನ್ನು ಮಾತ್ರ ಅಂದು ಮಾಡದೆ ದ್ವಾದಶೀದಿನದಲ್ಲಿಯೇ ಮಾಡುತ್ತಾರೆ. ಇದಲ್ಲವೇ ಆಶ್ಚರ್ಯ?.

ಇನ್ನೊಂದು ವಿಷಯವನ್ನು ಇಲ್ಲಿ ತುಂಬಾ ಗಮನಿಸಬೇಕಾಗಿದೆ. ಏಕಾದಶೀತಿಥಿಗೆ ದಶಮೀತಿಥಿಯ ವೇಧವು ಬಂದಾಗ ಏಕಾದಶೀತಿಥಿಯಲ್ಲಿ

ಭೋಜನವನ್ನೂ ದ್ವಾದಶೀತಿಥಿಯಲ್ಲಿ ಉಪವಾಸವನ್ನೂ ತ್ರಯೋದಶೀತಿಥಿಯಲ್ಲಿ ಪಾರಣೆಯನ್ನೂ ಅವರೂ ನಮ್ಮಂತೆಯೇ ಮಾಡುತ್ತಾರೆ. ಅದೇ ತ್ರಯೊದಶೀ ದಿನದಲ್ಲಿಯೇ ಏಕಾದಶೀತಿಥಿಯ ಶ್ರಾದ್ಧವನ್ನೂ ಅವರು ಮಾಡುತ್ತಾರೆ. ಆಗ ಹಿಂದೆ ಹೇಳಿದ ಪ್ರಮಾಣದಂತೆ ಅವರು ಏಕಾದಶೀತಿಥಿಯ ಶ್ರಾದ್ಧವನ್ನು 'ದ್ವಾದಶ್ಯಾಮೇವ ಕಾರಯೇತ್' ಎಂಬ ಪ್ರಮಾಣವನ್ನು ಅನುಸರಿಸಿ ಉಪೋಷಣ ಮಾಡಬೇಕಾದ ದ್ವಾದಶೀದಿನದಲ್ಲಿಯೇ ಮಾಡಬೇಕು. ಪಾರಣೆ ಮಾಡುತ್ತಿರುವ ತ್ರಯೋದಶೀದಿನದಲ್ಲಿ ಸರ್ವಥಾ ಮಾಡಕೂಡದು. ಆದರೆ ಅವರು ಹಾಗೆ ಮಾಡುವುದಿಲ್ಲ. ಆದ್ದರಿಂದ ಅವರಿಗೆ 'ದ್ವಾದಶ್ಯಾಮೇವ ಕಾರಯೇತ್' ಎಂಬ ಪ್ರಮಾಣವನ್ನು ತಿರಸ್ಕರಿಸಿದ ಪುಣ್ಯವು ಬರುತ್ತದೆ. ಅವರು ಈ ವಾಕ್ಯಕ್ಕೆ ಮರ್ಯಾದೆಯನ್ನೂ ತಮ್ಮ ಅನುಷ್ಠಾನಕ್ಕೆ ಗೌರವವನ್ನೂ ಕೊಡುವುದಕ್ಕಾಗಿ "ಈ ವಾಕ್ಯದಲ್ಲಿರುವ 'ದ್ವಾದಶೀ' ಎಂಬ ಪದಕ್ಕೆ 'ದ್ವಾದಶೀತಿಥಿ' ಎಂಬ ಅರ್ಥವಲ್ಲ. 'ಪಾರಣೆದಿನ' ಎಂದು ಅರ್ಥ. ಅದು ದಶಮೀವೇಧ ವಿಲ್ಲದಿರುವಾಗ ದ್ವಾದಶೀ ತಿಥಿಯೂ ದಶಮೀವೇಧವಿದ್ದಾಗ ತ್ರಯೋದಶೀ ತಿಥಿಯೂ ಆಗುತ್ತದೆ. ಎಂದು ಹೇಳಲೇಬೇಕು.

ಅದರಂತೆ ಈ ಪ್ರಮಾಣದಲ್ಲಿರುವ 'ಏಕಾದಶೀ' ಎಂಬ ಪದಕ್ಕೆ ಏಕಾದಶೀತಿಥಿ ಎಂಬ ಅರ್ಥವಲ್ಲ. 'ಉಪವಾಸದಿನ' ಎಂದೇ ಅರ್ಥವನ್ನು ಹೇಳಬೇಕು. ಇದನ್ನು ಬಿಟ್ಟು ಬೇರೆ ಗತಿಯಿಲ್ಲ. ಹಾಗೆ ಹೇಳದಿದ್ದರೆ ನಾವು ಉಪವಾಸ ಮಾಡುತ್ತಿರುವ ದ್ವಾದಶೀತಿಥಿಯ ಶ್ರಾದ್ಧವನ್ನು ಪಾರಣದಿನದಲ್ಲಿ ಮಾಡಬೇಕೆಂಬ ಅರ್ಥವು ಈ ವಾಕ್ಯದಿಂದ ಸಿದ್ಧಿಸುವುದಿಲ್ಲ. ಆದ್ದರಿಂದ 'ಮೃತಾಹೇ ತು' ಎಂಬ ಸಾಮಾನ್ಯವಾಕ್ಯದಿಂದ ಉಪವಾಸ ದಿನವಾದ ದ್ವಾದಶೀದಿನದಲ್ಲಿಯೇ ದ್ವಾದಶೀಶ್ರಾದ್ಧವನ್ನು ಮಾಡಬೇಕಾದೀತು.

ಇದೇ ಅರ್ಥವನ್ನೇ ಸ್ಮೃತಿಮುಕ್ತಾವಲೀಕಾರರು ಉದಾಹರಿಸಿರುವ ಪ್ರಮಾಣಗಳು 'ಏಕಾದಶೀ' ಎಂಬ ಪದಕ್ಕೆ ಬದಲಾಗಿ 'ಉಪವಾಸದಿನೇ' ಎಂಬ ಪದವನ್ನು ಪ್ರಯೋಗಿಸಿ ಸ್ಪಷ್ಟಪಡಿಸಿವೆ.

'ದಶಮೀವಿದ್ಧ ಏಕಾದಶೀದಿನದಲ್ಲಿ ಸತ್ತವರಿಗೆ ಮಾತ್ರ ದಶಮೀವಿದ್ಧ ಏಕಾದಶೀದಿನದಲ್ಲಿ ಶ್ರಾದ್ಧವನ್ನು ಮಾಡಬೇಕು. ಶುದ್ಧ ಏಕಾದಶೀದಿನದಲ್ಲಿ ಸತ್ತವರಿಗೆ ಅಂದು ಮಾಡಕೂಡದು.' ಎಂಬ ಪಕ್ಷವು ತುಂಬಾ ಹೇಯವಾದುದು. ಶುದ್ಧ ಏಕಾದಶೀತಿಥಿಯಲ್ಲಿ ಸತ್ತವರಿಗೆ ದಶಮೀವಿದ್ಧ ಏಕಾದಶೀದಿನದಲ್ಲಿ ಕೊಡುವ ತಿಲ ತರ್ಪಣಾದಿಗಳು ರುಚಿಸುತ್ತವೆ. ಶ್ರಾದ್ಧವು ಕಹಿಯಾಗುವುದೇ ? ಪ್ರಮಾಣವಿಲ್ಲದೆ ತಮ್ಮ ಇಷ್ಟದಂತೆ ಸಿದ್ಧಾಂತವನ್ನು ಮಂಡಿಸುತ್ತಿರುವ ಇವರಿಗೆ ಶುದ್ಧೈಕಾದಶೀದಿನದಲ್ಲಿ ಶ್ರಾದ್ಧವನ್ನು ಮಾಡುವುದೂ ತಪ್ಪಾಗಿ ತೋರಲಾರದು.

ಶ್ರೀರಾಘವೇಂದ್ರಗುರುಸಾರ್ವಭೌಮರ ವಿದ್ಯಾಶಿಷ್ಯರಾದ ಶ್ರೀಕೃಷ್ಣಾಚಾರ್ಯರು ಶ್ರೀರಾಘವೇಂದ್ರ ಮಠದ ಸಂಪ್ರದಾಯವನ್ನು ತಿಳಿದಂತೆ ಯಾರೂ ತಿಳಿಯಲು

ಶಕ್ಯವಿಲ್ಲ ಎಂಬ ವಿಷಯುವನ್ನು ಎಲ್ಲಾ ವಿವೇಕಿಗಳು ಅವಶ್ಯವಾಗಿ ಅಂಗೀಕರಿಸಲೇಬೇಕು. ಅವರು ತಾವು ಬರೆದ ಸ್ಮೃತಿಮುಕ್ತಾವಲೀಗ್ರಂಥದಲ್ಲಿ ಸಕಲ ಶ್ರುತಿಸ್ಮೃತಿಗಳಿಗೂ ಅವಿರುದ್ಧವಾದ ಮತ್ತು ಶ್ರೀರಾಘವೇಂದ್ರಮಠದ ಸಂಪ್ರದಾಯಕ್ಕೂ ಅವಿರುದ್ಧವಾದ ವಿಷಯಗಳನ್ನೇ ಬರೆದಿರುತ್ತಾರೆಯೇ ಹೊರತು ವಿರುದ್ಧವಾದ ವಿಷಯಗಳನ್ನು ಬರೆದಿಲ್ಲ ಎಂಬ ವಿಷಯವನ್ನೂ ಎಲ್ಲಾ ವಿವೇಕಿಗಳೂ ಅಂಗೀಕರಿಸಲೇಬೇಕು.

ಯಾವ ಆಚಾರವೇ ಆಗಲಿ ನಮ್ಮಿಂದ ಅನುಷ್ಠಿಸಲ್ಪಡುತ್ತಿರುವಾಗ ಅದಕ್ಕೆ ವಿರುದ್ಧವಾದ ಸ್ಮೃತಿ ಅಥವಾ ಶ್ರುತಿವಾಕ್ಯಗಳು ನಮಗೆ ಸಿಕ್ಕಿದರೆ ಆ ಆಚಾರವನ್ನು ಬಿಡಬೇಕೆಂದು ಅವರೇ ಹೇಳಿದ್ದಾರೆ. ಸ್ಮೃತಿಮುಕ್ತಾವಲಿಯಲ್ಲಿ ಹೇಳಿರುವ ನಿರ್ಣಯಕ್ಕೆ ವಿರುದ್ಧವಾದ ಆಚಾರವು ಅವರ ಅನಂತರದಲ್ಲಿ ಬಂದವರಿಂದ ಅನುಷ್ಠಿಸಲ್ಪಟ್ಟಿದ್ದರೆ ಅವರು ಹಿಂದಿನ ಆಚಾರವನ್ನು ಬಿಟ್ಟಂತೆ ನಾವು ಈ ಮೇಧಾವಿಗಳು ಅನುಷ್ಠಿಸುತ್ತಿದ್ದ ಆಚಾರವನ್ನು ಬಿಡುವುದರಲ್ಲಿ ತಪ್ಪಿಲ್ಲ. ಅದರಲ್ಲಿಯೂ ಸ್ಮೃತಿಮುಕ್ತಾವಲೀಗ್ರಂಥದ ಆಧಾರದಿಂದ ಅಲ್ಲಿ ಹೇಳಿರುವ ಆಚಾರವನ್ನು ಸ್ವೀಕರಿಸಿ ಅನಂತರದಲ್ಲಿ ಬಂದಿರುವ ನಿರಾಧಾರವಾದ ಆಚಾರವನ್ನು ಬಿಡುವುದರಿಂದ ನಮಗೆ ಶ್ರೀಗುರುಸಾರ್ವಭೌಮರ ಮತ್ತು ಹಿರಿಯರ ಅನುಗ್ರಹವೂ ಏರ್ಪಡುತ್ತದೆ. ಇದೇ ವಿಷಯವು ಭಾಟ್ಟಸಂಗ್ರಹ ಗ್ರಂಥದಲ್ಲಿ ಶ್ರೀರಾಘವೇಂದ್ರ ಗುರುಸಾರ್ವಭೌಮರಿಂದಲೂ ಸಮರ್ಥಿಸಲ್ಪಟ್ಟಿದೆ. ಈ ವಿಷಯದಲ್ಲಿ ಕೃಷ್ಣಾಚಾರ್ಯರ ಸ್ಮೃತಿಮುಕ್ತಾವಲೀವಾಕ್ಯವನ್ನು ಕೆಳಗೆ ಕೊಟ್ಟಿದೆ.

ಶಿಷ್ಟಾಚಾರಕ್ಕೆ ಪ್ರಾಮಾಣ್ಯ

ಏಕಾದಶೀಶ್ರಾದ್ಧದ ವಿಷಯದಲ್ಲಿ ಒಬ್ಬೊಬ್ಬರು ಒಂದೊಂದು ವಿಧವಾಗಿ ನಡೆದುಕೊಳ್ಳುತ್ತಾ ಅದಕ್ಕೆ ಪ್ರಮಾಣವೇನೆಂದು ಕೇಳಿದರೆ ಶಿಷ್ಟಾಚಾರವೇ ಪ್ರಮಾಣವೆಂದು ಹೇಳುತ್ತಾರೆ. ಅವರಿಗಾಗಿ ಸ್ಮೃತಿಮುಕ್ತಾವಲೀಕಾರರೇ ಉತ್ತರವನ್ನು ಕೊಟ್ಟಿರುತ್ತಾರೆ. ಆ ವಾಕ್ಯಗಳು ಕೆಳಗೆ ಕೊಟ್ಟಿದೆ.

ಅಯಮತ್ರ ನಿರ್ಣಯಃ–ಯತ್ರ ಪ್ರಮಾಣಮಾತ್ರಂ ನ ಜ್ಞಾಯತೇ ತತ್ರ ಕೇವಲಂ ಸ್ವಾಭಿಮತಶಿಷ್ಟಾಚಾರಾನುಷ್ಠಾನಪ್ರಯೋಜಕ ಪ್ರಮಾಣವಿಚಾರಾನಂತರಂ ತದನುಕೂಲಪ್ರಮಾಣದರ್ಶನೇ ತತ್ ಸರ್ವಥಾ ಅನುಷ್ಠೇಯಮೇವ. ಯತ್ರ ತು ತದ್ವಿರೋಧಿಪ್ರಮಾಣ ದರ್ಶನಂ ತತ್ರ ಸ್ವಾಭಿಮತಶಿಷ್ಟಾಚಾರಮಾತ್ರಂ ಪ್ರಮಾಣಂ ನ ಭವತ್ಯೇವೇತಿ

ಶಿಷ್ಟಾಚಾರವೆಂದು ತಾನು ತಿಳಿದುಕೊಂಡ ಆಚಾರವು ಯಾವುದಾದರೊಂದು ಪ್ರಮಾಣವನ್ನೇ ಅವಲಂಬಿಸಿರಬೇಕು. ಅದಕ್ಕೆ ಮೂಲವಾದ ಪ್ರಮಾಣವು ಸಿಗದಿರುವಾಗ ಅದನ್ನು ಹುಡುಕಬೇಕು. ಹುಡುಕುವಾಗ ಶಿಷ್ಟಾಚಾರಕ್ಕೆ

ಅನುಕೂಲವಾದ ಪ್ರಮಾಣವು ಸಿಕ್ಕಿದರೆ ಆಶಿಷ್ಟಾಚಾರದಂತೆ ಅನುಷ್ಠಾನವನ್ನು ಮಾಡಲೇಬೇಕು. ಅನುಕೂಲವಾದ ಪ್ರಮಾಣವು ಸಿಗದೆ ವಿರುದ್ಧವಾದ ಪ್ರಮಾಣವು ಸಿಕ್ಕಿದರೆ ತಾನು ಶಿಷ್ಟಾಚಾರವೆಂದು ತಿಳಿದಿರುವ ಆಚಾರವು ಶಿಷ್ಟಾಚಾರವೂ ಅಲ್ಲ. ಅದು ಪ್ರಮಾಣವೂ ಅಲ್ಲ. ಅದರಂತೆ ಅನುಷ್ಠಾನ ಮಾಡಬಾರದು."

ಈ ವಿವರಣದಿಂದ ಮೇಲ್ಕಂಡ ಸಂಪ್ರದಾಯಗಳಲ್ಲಿ ಸ್ಮೃತಿಮುಕ್ತಾವಲೀಕಾರರು ಉದಾಹರಿಸಿರುವ ಪ್ರಮಾಣಗಳಿಗೆ ವಿರುದ್ಧವಾದ 1) ವಿದ್ಧೈಕಾದಶೀ ದಿನದಲ್ಲಿ ಬಂದ ಏಜಾದಶೀ ಶ್ರಾದ್ಧವನ್ನು ದ್ವಾದಶೀದಿನದಲ್ಲಿ ಮಾಡುವುದು. 2) ದಶಮೀದಿನದಲ್ಲಿ ಬಂದ ಶ್ರಾದ್ಧವನ್ನು ಅಂದು ಮಾಡದಿರುವುದು. 3) ವಿದ್ಧೈಕಾದಶೀದಿನದಲ್ಲಿ ಸತ್ತವರ ಶ್ರಾದ್ಧವನ್ನೇ ವಿದ್ಧೈಕಾದಶೀ ದಿನದಲ್ಲಿ ಮಾಡಿ ದಶಮೀವೇಧವಿಲ್ಲದ ಏಕಾದಶೀದಿನದಲ್ಲಿ ಸತ್ತವರ ಶ್ರಾದ್ಧವನ್ನು ದಶಮೀದಿನದಲ್ಲಿ ಮಾಡದಿರುವುದು ಮುಂತಾದ ಎಲ್ಲಾ ಆಚಾರಗಳು ಶಿಷ್ಟಾಚಾರಗಳು ಆಗಲಾರವು. ಅವುಗಳಿಗೆ ಪ್ರಾಮಾಣ್ಯವೂ ಇಲ್ಲ ಅದರಂತೆ ಅನುಷ್ಠಾನವನ್ನು ಮಾಡಬಾರದು ಎಂದು ಸಿದ್ಧವಾಯಿತು.

ಅತಿರಿಕ್ತೈಕಾದಶೀ

ಏಕಾದಶೀತಿಥಿಗೆ ದಶಮೀವೇಧವು ಬಾರದೆ ದ್ವಾದಶೀತಿಥಿಯು 2 ದಿನಗಳಲ್ಲಿ ಬಂದರೆ ಏಕಾದಶೀ ತಿಥಿಯಲ್ಲಿಯೂ ಮೊದಲನೇ ದ್ವಾದಶೀ ತಿಥಿಯಲ್ಲಿಯೂ ಉಪವಾಸವನ್ನು ಮಾಡಬೇಕು.

ಉದಾ–ದಶಮೀ 54 ಘಳಿಗೆಗಳು, ಏಕದಶೀ 58 ಘಳಿಗೆಗಳು, ದ್ವಾದಶೀ 60 ಘಳಿಗೆಗಳು, ಶೇಷದ್ವಾದಶೀ 2 ಘಳಿಗೆಗಳು ಹೀಗೆ ಬಂದಾಗ ಏಕಾದಶೀ ತಿಥಿಯಲ್ಲಿಯೂ 60 ಘಳಿಗೆಯುಳ್ಳ ಮೊದಲನೆಯ ದ್ವಾದಶೀತಿಥಿಯಲ್ಲಿಯೂ ಎರಡು ಉಪವಾಸಗಳನ್ನು ಮಾಡಬೇಕು.

ಶ್ರವಣದ್ವಾದಶೀ ಉಪವಾಸ

ಪಂಚಾಂಗದಲ್ಲಿ ಆಯಾ ದಿನದ ಹಗಲಿನ ಪ್ರಮಾಣವನ್ನು ಕೊಟ್ಟಿದ್ದೇವೆ. ಅದನ್ನು ಅರ್ಧಭಾಗ ಮಾಡಬೇಕು. 1) ಆ ಅರ್ಧಕ್ಕಿಂತ ದ್ವಾದಶೀ ಮತ್ತು ಶ್ರವಣಾ ನಕ್ಷತ್ರಗಳ ಘಟೀಪಳಗಳು ಅಧಿಕವಾಗಿರಬೇಕು. 2) ಆ ದ್ವಾದಶೀ ಮತ್ತು ಶ್ರವಣಾ ನಕ್ಷತ್ರಗಳು ಉದಯ ಕಾಲದಲ್ಲಿಯೂ ಇರಬೇಕು. 3) 59 ಘಳಿಗೆ 33 ಪಳಕ್ಕಿಂತ ದ್ವಾದಶೀ ಮತ್ತು ಶ್ರವಣಾ ನಕ್ಷತ್ರಗಳು ಕಡಿಮೆಯಾಗಿರಬೇಕು. 4) ಏಕಾದಶೀತಿಥಿಗೆ ದಶಮೀವೇಧವಿಲ್ಲದಿರಬೇಕು. ಹೀಗಿದ್ದರೆ ಶ್ರವಣದ್ವಾದಶೀ ಎಂದು ಹೇಳುತ್ತಾರೆ. ಆ ಶ್ರವಣದ್ವಾದಶೀತಿಥಿಯಲ್ಲಿ ಸರ್ವರೂ ಉಪವಾಸವನ್ನು ಮಾಡಬೇಕು. ಪೂರ್ವದಿನದಲ್ಲಿ ಏಕಾದಶೀ ಉಪವಾಸವನ್ನು ಮಾಡಿ ಮರುದಿನದಲ್ಲಿ ಶ್ರವಣ ದ್ವಾದಶೀ ಉಪವಾಸವನ್ನು ಮಾಡಬೇಕು. ಇದು

ಮಹಾಫಲಪ್ರದವಾಗಿದೆ. ಏಕಾದಶೀ ಉಪವಾಸವನ್ನು ಮಾಡದೆ ಶ್ರವಣೋಪವಾಸವನ್ನು ಮಾಡಿದರೆ ಫಲವಿಲ್ಲ.

ಹರಿವಾಸರ

1) ದಶಮೀವೇಧ ಬಂದಾಗ ಏಕಾದಶೀದಿನದಲ್ಲಿ ಭೋಜನವನ್ನು ಮಾಡಬೇಕೆಂದು ಹೇಳಿದೆ. ಏಕಾದಶೀತಿಥಿಯ ಆದ್ಯಂತವನ್ನು ಕಂಡುಹಿಡಿದು ಅದನ್ನು 4 ರಿಂದ ಭಾಗಿಸಬೇಕು. ಬಂದ ಘಟೀಪಳಗಳನ್ನು ಏಕಾದಶೀತಿಥಿಯ ಸಮಾಪ್ತಿಕಾಲದ ಘಟೀಪಳ (ಪಂಚಾಂಗದಲ್ಲಿ ಬರೆದಿರುವ ಘಟೀಪಳಗಳು) ಗಳಲ್ಲಿ ಕಳೆಯಬೇಕು. ಉಳಿದ ಘಟೀಪಳಗಳಿಗೆ ಸರಿಯಾಗಿ ಹರಿವಾಸರ ಆರಂಭವಾಗುತ್ತದೆ. ದಶಮೀವೇಧವುಳ್ಳ ಏಕಾದಶೀತಿಥಿಯಲ್ಲಿ ರಾತ್ರಿಯಲ್ಲಿ ಈ ಹರಿವಾಸರಕಾಲ ಬರುವುದಕ್ಕೆ ಮುಂಚಿತವಾಗಿಯೇ ಭೋಜನವನ್ನು ಮಾಡಬೇಕು.

2) ದ್ವಾದಶೀತಿಥಿಯ ಆದ್ಯಂತವನ್ನು ತಿಳಿದು ಅದನ್ನು 4 ರಿಂದ ಭಾಗಿಸಬೇಕು. ಬಂದ ಘಟೀಪಳಗಳನ್ನು ಏಕಾದಶೀಘಟೀಪಳಗಳಲ್ಲಿ ಕೂಡಿಸಬೇಕು. ಬಂದ ಘಟೀಪಳಗಳು ಹರಿವಾಸರದ ಸಮಾಪ್ತಿಕಾಲವನ್ನು ಸೂಚಿಸುತ್ತವೆ. ದ್ವಾದಶೀತಿಥಿಯಲ್ಲಿ ಆ ಹರಿವಾಸರಕಾಲವು ಮುಗಿದಮೇಲೆಯೇ ನೈವೇದ್ಯ ವೈಶ್ವದೇವಾದಿಗಳನ್ನು ಮಾಡಿ ಭೋಜನವನ್ನು ಮಾಡಬೇಕು. ಏಕಾದಶೀತಿಥಿಗೆ ದಶಮೀವೇಧವಿಲ್ಲದಿರುವಾಗ ದ್ವಾದಶೀದಿನದಲ್ಲಿ ಹರಿವಾಸರವು ಬರುವ ಸಂಭವವಿದೆ.

ಸಾಧನ ದ್ವಾದಶೀ

ಏಕಾದಶೀ ದ್ವಾದಶೀ ತ್ರಯೋದಶೀ ಈ ಮೂರು ದಿನಗಳಲ್ಲಿ ಸೂರ್ಯೋದಯಾನಂತರದಲ್ಲಿ ಯಾವ ದಿನದಲ್ಲಿ ಘಟೀಪಳಗಳು ಕಡಿಮೆಯಾಗಿವೆಯೋ ಆ ಘಟೀ ಪಳಗಳೊಳಗೆ ಪಾರಣೆಯನ್ನು ಮಾಡಬೇಕು. ಈ ಘಟೀಪಳಗಳು 6 ಘಳಿಗೆಗಿಂತ ಕಡಿಮೆಯಾಗಿರುವಾಗ ಈ ನಿಯಮ. ಅದಕ್ಕಿಂತ ಅಧಿಕವಾಗಿದ್ದರೆ ಸಾಧನ ದ್ವಾದಶೀ ಎಂಬ ಹೆಸರಿಲ್ಲ. ಸಾಧಾರಣದ್ವಾದಶೀ ಆಗುತ್ತದೆ. ಸಾಧಾರಣ ದ್ವಾದಶೀದಿನದಲ್ಲಿಯೂ 6 ಘಳಿಗೆಯೊಳಗೆ ಪಾರಣವನ್ನು ಮಾಡಬೇಕು. ಅದನ್ನು ಮೀರಬಾರದು.

ದಶಮೀವೇಧವಿಚಾರ

ಅರುಣೋದಯವೇಲಾಯಾಂ ದಶಮೀ ಯದಿ ದೃಶ್ಯತೇ ।
ಪಾಪಮೂಲಂ ತದಾ ಜ್ಞೇಯಮೇಕಾದಶ್ಯುಪವಾಸನಮ್ ॥

–ಕೃಷ್ಣಾಮೃತಮಹಾರ್ಣವ

'ಏಕಾದಶೀದಿನದಲ್ಲಿ ಸೂರ್ಯೋದಯಕ್ಕಿಂತ ಪೂರ್ವದಲ್ಲಿರುವ ಅರುಣೋದಯವೇಳೆಯಲ್ಲಿ ದಶಮೀ ತಿಥಿಯು ಇರಬಾರದು. ಹಾಗಿದ್ದಾಗ ಮಾತ್ರ

ಏಕಾದಶಿದಿನದಲ್ಲಿ ಏಕಾದಶೀ ಉಪವಾಸವನ್ನು ಮಾಡಬೇಕು. ಹಾಗಿಲ್ಲದೆ ಏಕಾದಶೀದಿನದಲ್ಲಿ ಸೂರ್ಯೋದಯಕ್ಕಿಂತ ಪೂರ್ವದಲ್ಲಿರುವ ಅರುಣೋದಯವೇಳೆಯಲ್ಲಿ ದಶಮಿಯು ಸ್ವಲ್ಪವಾದರೂ ಇದ್ದರೆ ಆ ಏಕಾದಶಿಯಲ್ಲಿ ಉಪವಾಸವನ್ನು ಮಾಡುವವರಿಗೆ ಪಾಪವು ಬರುತ್ತದೆ.' ಈ ಏಕಾದಶಿಯೇ ದಶಮಿವಿದ್ಧ ಏಕಾದಶಿಯೆನಿಸುತ್ತದೆ.

ಈ ವಾಕ್ಯದಲ್ಲಿರುವ 'ಅರುಣೋದಯವೇಲಾ' ಎಂಬ ಪದದ ಅರ್ಥವನ್ನು ವಿಮರ್ಶಿಸೋಣ.

ಚತಸ್ರೋ ಘಟಿಕಾಃ ಪ್ರಾತರರುಣೋದಯ ಉಚ್ಯತೇ ।

–ಕೃಷ್ಣಾಮೃತಮಹಾರ್ಣವ

ಸೂರ್ಯೋದಯಕ್ಕಿಂತ ಪೂರ್ವದಲ್ಲಿರುವ ನಾಲ್ಕು ಘಳಿಗೆಗಳಿಗೆ 'ಅರುಣೋದಯ' ಎಂದು ಹೆಸರು. ಅಂದರೆ ಹಿಂದಿನ ದಿನ ಸೂರ್ಯೋದಯವಾದ ಮೇಲೆ 56 ಘಳಿಗೆಗಳು ಮುಗಿಯಬೇಕು. ಅನಂತರದಲ್ಲಿರುವ 57 58 59 60 ನೇ ಘಳಿಗೆಗಳು ಅರುಣೋದಯದಕಾಲವೆನಿಸುತ್ತವೆ ಎಂದು ಈ ವಾಕ್ಯದಲ್ಲಿ ಶ್ರೀ ಮಧ್ವಾಚಾರ್ಯರು ಅಪ್ಪಣೆ ಮಾಡಿರುತ್ತಾರೆ.

"ಅರುಣೋದಯ" ಎಂಬ ಪದದ ಅರ್ಥವನ್ನು ತಿಳಿದೆವು. ಈಗ "ಅರುಣೋದಯವೇಳಾ" ಎಂಬ ಪದದಲ್ಲಿರುವ "ವೇಲಾ" ಎಂಬ ಪದದ ಅರ್ಥವನ್ನು–ವಿಮರ್ಶಿಸೋಣ. ಇದಕ್ಕೆ ಮುಂಚಿತವಾಗಿ ಅತಿವೃದ್ಧಿ ಪಕ್ಷ ಸಮವೃದ್ಧಿಪಕ್ಷ ಸಮಪಕ್ಷ. ಕ್ಷಯಪಕ್ಷ ಎಂಬ ನಾಲ್ಕು ಪಕ್ಷಗಳ ಸ್ವರೂಪವನ್ನು ತಿಳಿಯೋಣ.

ಅತಿವೃದ್ಧಿಪಕ್ಷ

ಷಟ್ಪಂಚಘಟಿಕಾವೃದ್ಧಿರತಿವೃದ್ಧಿಃ (ಸ್ಮೃತಿಮುಕ್ತಾವಲೀ) ಒಂದು ತಿಥಿಯ ಆದ್ಯಂತ ಅಂದರೆ ಅ ತಿಥಿಯು ಅರಂಭಿಸಿ ಮುಗಿಯುವವರೆಗಿನ ಕಾಲವನ್ನು ತಿಳಿಯಬೇಕು. ಅದನ್ನು ತಿಳಿಯುವ ಕ್ರಮ:– ಪಂಚಾಂಗದಲ್ಲಿ ತಿಥಿಯ ಹೆಸರೂ ಅದರ ಪಕ್ಕದಲ್ಲಿ ಘಳಿಗೆ ಮತ್ತು ಪಳಗಳೂ ಗುರ್ತಿಸಲ್ಪಟ್ಟಿವೆ. ಅಂದು ಸೂರ್ಯೋದಯ ಕಾಲದಲ್ಲಿ ಆತಿಥಿಯು ಇದೆಯೆಂದೂ ಅದು ಅಂದಿನ ಸೂರ್ಯೋದಯಾನಂತರದಲ್ಲಿ ಅಲ್ಲಿ ಬರೆದಿರುವ ಘಳಿಗೆ ಮತ್ತು ಪಳಗಳಿಗೆ ಮುಗಿಯುತ್ತದೆಯೆಂದೂ ಈ ಅಂಶವು ತಿಳಿಸುತ್ತದೆ.

ಉದಾ–ಸೋಮವಾರ, ಪಂಚಮೀ 10–10 ಎಂದು ಪಂಚಾಂಗದಲ್ಲಿ ಬರೆದಿದೆ. 'ಸೋಮವಾರದಲ್ಲಿ ಸೂರ್ಯೋದಯಕಾಲದಲ್ಲಿ ಪಂಚಮೀ ತಿಥಿಯು ಇದೆಯೆಂದೂ ಆ ತಿಥಿಯು ಸೂರ್ಯೋದಯಾನಂತರದಲ್ಲಿ 10 ಘಳಿಗೆ ಮತ್ತು 10 ಪಳಗಳು ಮುಗಿಯುವಾಗ ಮುಗಿಯುತ್ತದೆ.' ಎಂದೂ ಇಲ್ಲಿ ಬರೆದಿರುವುದು ತಿಳಿಸುತ್ತದೆ.

ಈ ತಿಥಿಯ ಆದ್ಯಂತವನ್ನು ತಿಳಿಯಬೇಕಾದರೆ ಪಂಚಾಂಗದಲ್ಲಿ ಬರೆದಿರುವ ಹಿಂದಿನ ತಿಥಿಯ ಘಳಿಗೆ ಮತ್ತು ಪಳಗಳನ್ನು 60 ಘಳಿಗೆಗಳಿಂದ ಕಳೆಯಬೇಕು. ಕಳೆದು ಬಂದದ್ದರಲ್ಲಿ ಇಂದಿನ ತಿಥಿಯ ಘಳಿಗೆ ಮತ್ತು ಪಳಗಳನ್ನು ಸೇರಿಸಬೇಕು. ಇದು ಅಂದಿನ ತಿಥಿಯ ಆದ್ಯಂತವೆನಿಸುತ್ತದೆ.

ಉದಾ–ಚತುರ್ಥೀ–15–10 ಪಂಚಮೀ 10–10 ಎಂದು ಪಂಚಾಂಗದಲ್ಲಿ ಬರೆದಿದೆ. ಇಲ್ಲಿ ಪಂಚಮೀ ತಿಥಿಯ ಆದ್ಯಂತವನ್ನು ಕಂಡುಹಿಡಿಯೋಣ. 60–00 ಘಳಿಗೆಗಳಿಂದ ಚತುರ್ಥೀ ತಿಥಿಯ 15–10 ಘಳಿಗೆ ಮತ್ತು ಪಳಗಳನ್ನು ಕಳೆದರೆ (60 ಘ, 00 ಪ) (15–ಘ 10.ಪ) = 44. ಘ 50 ಪಳಗಳಾಗುತ್ತವೆ. ಇವುಗಳಲ್ಲಿ ಪಂಚಮೀತಿಥಿಯ 10 ಘ, 10 ಪಳಗಳನ್ನು ಕೂಡಿಸೋಣ (44 ಘ, 50 ಪ) + (10 ಘ, 10 ಪ) = 55 ಘಳಿಗೆಗಳಾಗುತ್ತವೆ. ಇದೇ ಪಂಚಮೀತಿಥಿಯ ಆದ್ಯಂತವೆನಿಸುತ್ತವೆ.

ಹೀಗೆ ದಶಮೀತಿಥಿಯ ಆದ್ಯಂತ ಘಳಿಗೆಗಳನ್ನು ಕಂಡುಹಿಡಿಯಬೇಕು. ಈ ಅದ್ಯಂತ ಘಳಿಗೆಗಳು 60 ಘಳಿಗೆಗಳ ಮೇಲೆ 5 ಅಥವಾ 6 ಘಳಿಗೆಗಳು ಹೆಚ್ಚಾಗಿ ಬಂದರೆ ಅಂದರೆ 65 ಅಥವಾ 66 ಘಳಿಗೆಗಳಾದರೆ ಅತಿವೃದ್ಧಿ ಪಕ್ಷವೆಂದು ಹೇಳಬೇಕು.

ಉದಾ–ನವಮೀ 50 ಘ, 4ಪ, ದಶಮೀ 55 ಘ, 4 ಪ ಇಲ್ಲಿ ಹಿಂದಿನಂತೆ ಆದ್ಯಂತವನ್ನು ತಿಳಿದಾಗ 65 ಘಳಿಗೆಗಳು ದಶಮೀ ತಿಥಿಯ ಆದ್ಯಂತವೆನಿಸುತ್ತವೆ. ಆದ್ದರಿಂದ ಈ ದಶಮೀ ತಿಥಿಯು ಅತಿವೃದ್ಧಿಪಕ್ಷದ ತಿಥಿಯೆನಿಸುತ್ತದೆ.

ಸಮವೃದ್ಧಿ ಪಕ್ಷ

ಏಕದ್ವಿತ್ರ್ಯಾತ್ಮಿಕಾ ವೃದ್ಧಿಃ ಸಮವೃದ್ಧಿಃ (ಸ್ಮೃತಿಮುಕ್ತಾವಲೀ) ಆದ್ಯಂತ ಘಳಿಗೆಗಳಲ್ಲಿ 60 ಘಳಿಗೆಗಳ ಮೇಲೆ 1, 2, 3, 4 ಘಳಿಗೆಗಳು ಅಧಿಕವಾಗಿದ್ದರೆ ಅಂದರೆ ದಶಮೀತಿಥಿಯ ಆದ್ಯಂತ ಘಳಿಗೆಗಳು 61,62,63,64 ಘಳಿಗೆಗಳಾಗಿದ್ದರೆ ಸಮವೃದ್ಧಿ ಪಕ್ಷವೆನಿಸುತ್ತದೆ.

(ಉದಾ–ನವಮೀ 50 ಘ, 10 ಪ, ದಶಮೀ 52 ಘ, 10 ಪಳ ಇರುವಾಗ 62 ಘಳಿಗೆಗಳು ದಶಮೀ ತಿಥಿಯ ಆದ್ಯಂತ ಘಳಿಗೆಗಳಾಗುತ್ತವೆ. ಆದ್ದರಿಂದ ಈ ದಶಮೀತಿಥಿಯು ಸಮವೃದ್ಧಿಪಕ್ಷದ ತಿಥಿಯೆನಿಸುತ್ತದೆ.)

ಸಮಪಕ್ಷ

ದಶಮಿತಿಥಿಯ ಆದ್ಯಂತ ಘಳಿಗೆಗಳು 60 ಘಳಿಗೆಗಳಿಗೆ ಅಧಿಕವೂ ಕಡಿಮೆಯೂ ಇಲ್ಲದೆ ಅರುವತ್ತೇ ಘಳಿಗೆಗಳಾಗಿರುವಾಗ ಸಮಪಕ್ಷವೆನಿಸುತ್ತದೆ.

(ಉದಾ–ನವಮೀ 50 ಗ, 10 ಪ, ದಶಮೀ 50ಗ, 10ಪ, ಇರುವಾಗ ದಶಮೀತಿಥಿಯ ಆದ್ಯಂತವು 60 ಘಳಿಗೆಗಳಾಗುತ್ತವೆ. ಆದ್ದರಿಂದ ಈ ದಶಮೀ ತಿಥಿಯು ಸಮಪಕ್ಷದ ತಿಥಿಯೆನಿಸುತ್ತದೆ.

ಕ್ಷಯಪಕ್ಷ

ದಶಮೀತಿಥಿಯ ಆದ್ಯಂತವು 60 ಘಳಿಗೆಗಳಿಗಿಂತ ಕಡಿಮೆಯಾಗಿದ್ದರೆ ಕ್ಷಯಪಕ್ಷದ ದಶಮೀಯೆನಿಸುತ್ತದೆ.

ಉದಾ–ನವಮೀ 51 ಘ, 10 ಪ, ದಶಮೀ 50 ಘ 10 ಪ. ಇಲ್ಲಿ ದಶಮೀತಿಥಿಯ ಆದ್ಯಂತ ಘಳಿಗೆಗಳು 59 ಘಳಿಗೆಗಳಾಗುತ್ತವೆ. ಆದ್ದರಿಂದ ಈ ದಶಮೀತಿಥಿಯು ಕ್ಷಯಪಕ್ಷದ ದಶಮೀಯೆನಿಸುತ್ತದೆ.

ಹೀಗೆ ಅತಿವೃದ್ಧಿ ಪಕ್ಷ ಸಮವೃದ್ಧಿಪಕ್ಷ ಸಮಪಕ್ಷ ಕ್ಷಯಪಕ್ಷ ಈ ನಾಲ್ಕು ಪಕ್ಷಗಳಲ್ಲಿ ಅರುಣೋದಯುವೇಳೆಯು ಯಾವುದು ಎಂಬುದನ್ನು ಕೆಳಗೆ ಕೊಟ್ಟಿರುತ್ತದೆ.

ಅತ್ರಾತಿವೃದ್ಧಿಪಕ್ಷೇ ಆಚರ್ಯೋದಾಹೃತ ವೇಲಾಶಬ್ದಸ್ಯ ಸೂರ್ಯೋದಯಾತ್‌ಪ್ರಾಕ್‌ಷಷ್ಟಿ ಏಕೋನಷಷ್ಟಿ ಅಷ್ಟಪಂಚಾಶತ್ ಸಪ್ತಪಂಚಾಶದ್ಘಟಿಕಾಭ್ಯಃ ಪ್ರಾಕ್ ಷಟ್ಪಂಚಾಶದ್ಘಟಿಕೈಕಾ, ಪಂಚಪಂಚಾಶದ್ಘಟಿಕಾಂತ್ಯಭಾಗರೂಪಪೂರ್ವಕಾಲಶ್ಚಾರ್ಥಃ, ಸಮವೃದ್ಧಿಪಕ್ಷೇ ಘಟಿಕಾಮಾತ್ರಂ, ಸಮಪಕ್ಷೇ ಕ್ಷಯಪಕ್ಷೇ ಚ ಷಟ್ಪಂಚಾಶದ್ಘಟಿಕಾಯಾಂ ಚತುರ್ಥಭಾಗಪರ್ಯಂತಂ ವೇಲಾಶಬ್ದಾರ್ಥಃ।

ಏಕಾದಶೀದಿನದಲ್ಲಿ ಸೂರ್ಯೋದಯಕ್ಕಿಂತ ಪೂರ್ವದಲ್ಲಿ ನಾಲ್ಕು ಘಳಿಗೆಗಿಂತ ಹಿಂದೆ ಅಂದರೆ ದಶಮೀದಿನದಲ್ಲಿ ಸೂರ್ಯೋದಯಾನಂತರದಲ್ಲಿ 57, 58, 59, 60 ಘಳಿಗೆಗಳನ್ನು ಬಿಟ್ಟು ಅದರ ಹಿಂದೆ 56 ನೆಯ ಘಳಿಗೆ ಮತ್ತು 55ನೇ ಘಳಿಗೆಯಲ್ಲಿ ಕೊನೆಯ 20 ಪಳಗಳು ಅತಿವೃದ್ಧಿ ಪಕ್ಷದಲ್ಲಿ ಅರುಣೋದಯ ವೇಳೆಯೆನಿಸುತ್ತವೆ.

ಸಮವೃದ್ಧಿಪಕ್ಷದಲ್ಲಿ ದಶಮೀ ಸೂರ್ಯೋದಯಾನಂತರದಲ್ಲಿ 56 ನೇ ಘಳಿಗೆಯು ಮಾತ್ರ ಅರುಣೋದಯವೇಳೆಯೆನಿಸುತ್ತದೆ.

ಸಮೇ ದಶ ವಿನಾಡಿಕಾಃ, ಹ್ರಾಸೇ ಪಂಚವಿನಾಡಿಕಾಃ

(ಸ್ಮೃತಿಮುಕ್ತಾವಲೀ) ಮೇಲ್ಕಂಡ ಸಮಪಕ್ಷದಲ್ಲಿ ದಶಮೀದಿನದಲ್ಲಿ ಸೂರ್ಯೋದಯಾನಂತರದಲ್ಲಿರುವ 56ನೆಯ ಘಳಿಗೆಯಲ್ಲಿ ನಾಲ್ಕನೆಯ ಪಾದದಲ್ಲಿ ಕೊನೆಯ ಹತ್ತು ಪಳಗಳೂ ಕ್ಷಯಪಕ್ಷದಲ್ಲಿ 5 ಪಳಗಳೂ ಅರುಣೋದಯವೇಳೆಯೆನಿಸುತ್ತವೆ.

ಪ್ರಮಾಣವಚನಗಳನ್ನು ಉದಾಹರಿಸಿ ಸ್ಮೃತಿಮುಕ್ತಾವಲೀಕಾರರು ಮೇಲ್ಕಂಡ ನಿರ್ಣಯವನ್ನು ಹೇಳಿರುತ್ತಾರೆ. ಶ್ರೀತ್ರಿವಿಕ್ರಮಪಂಡಿತಾಚಾರ್ಯರು ಬರೆದಿರುವ ಎರಡು ಶ್ಲೋಕಗಳಿಗೆ ಶ್ರೀವಾದಿರಾಜತೀರ್ಥರು ಬರೆದಿರುವ ವ್ಯಾಖ್ಯಾನಶ್ಲೋಕಗಳನ್ನು ಉದಾಹರಿಸಿ ತಮ್ಮ ನಿರ್ಣಯವನ್ನು ಸಮರ್ಥಿಸಿರುತ್ತಾರೆ. ಆದ್ದರಿಂದ

ಅತಿವೃದ್ಧಿಪಕ್ಷದಲ್ಲಿ 54 ಘ, 40 ಪಳಗಳೂ ಸಮವೃದ್ಧಿ ಪಕ್ಷದಲ್ಲಿ 55 ಗ, 50 ಪಳಗಳೂ ಕ್ಷಯಪಕ್ಷದಲ್ಲಿ 55 ಘ, 55 ಪಳಗಳೂ ಅರುಣೋದಯವೇಳೆ ಅಂದರೆ ಅರುಣೋದಯದ ಎಲ್ಲೆಯೆನಿಸುತ್ತವೆ. ಈ ಸಮಯಕ್ಕಿಂತ ಒಂದು ಪಳಕ್ಕಿಂತ ಕಡಿಮೆಯಾದರೂ ದಸಮೀ ಇದ್ದರೆ ಏಕಾದಶೀತಿಥಿಗೆ ದಶಮೀವೇಧವು ಇಲ್ಲವೆಂದೂ ಈ ಗಳಿಗೆಗಳು ಇದ್ದರೆ ಅಥವಾ ಇದಕ್ಕಿಂತ ಒಂದು ಪಳವಾದರೂ ಅಧಿಕವಾಗಿದ್ದರೆ ಏಕಾದಶೀತಿಥಿಗೆ ದಶಮೀವೇಧವಿದೆಯೆಂದೂ ತಿಳಿಯಬೇಕು.

ತಪ್ತಮುದ್ರಾಧಾರಣನಿರ್ಣಯ

(ತಪ್ತಮುದ್ರಾಧಾರಣ ಕಾಲ)

ಚಕ್ರಸ್ಯ ಧಾರಣೇ ಕಾಲಂ ಬ್ರಾಹ್ಮಣಾನಾಂ ವಿದುರ್ಬುಧಾಃ ।
ಜಾತಕರ್ಮಣಿ ವೈ ಕುರ್ಯಾತ್ ಚೌಲೋಪನಯನೇಽಪಿ ವಾ ॥
ಮಂತ್ರಗ್ರಹಣಕಾಲೇ ವಾ ಚಕ್ರಂ ಧಾರ್ಯಂ ವಿಧಾನತಃ ।

–ವಸಿಷ್ಠಃ

ಉದ್ವಾಹಸಮಯೇ ಸ್ತ್ರೀಣಾಂ ಪುಂಸಾಂ ಚೌಲೋಪನಾಯನೇ ॥

–ವೃದ್ಧಮನುಃ

ಚಕ್ರಸ್ಯಧಾರಣಂ ಪ್ರೋಕ್ತಂ ಮಂತ್ರೈಃ ಪಂಚಾಯುಧಾನಿವಾ ।
ಪ್ರತಪ್ತಂ ಬಿಭೃಯಾಚ್ಚಕ್ರಂ ಶಂಖಂ ಚ ಭುಜಮೂಲಯೋಃ
ಶ್ರೌತಸ್ಮಾರ್ತಾದಿಸಿದ್ಧ್ಯರ್ಥಂ ಚಕ್ರಂ ಧಾರ್ಯಂ ವಿಧಾನತಃ ॥

ಕೂಸು ಹುಟ್ಟಿದ ಕೂಡಲೇ ನಾಲಛೇದನಕ್ಕಿಂತ ಮುಂಚೆ ಜಾತಕರ್ಮಸಂಸ್ಕಾರವನ್ನು ಮಾಡಬೇಕು. ಆಗಲೇ ಮಂತ್ರದಿಂದ ತಪ್ತಮುದ್ರೆಯನ್ನು ಕೂಸಿಗೆ ಹಾಕಬೇಕು. ಆಗ ತಪ್ತಮುದ್ರಾಧಾರಣವಾಗದಿದ್ದರೆ ಚೌಲಸಂಸ್ಕಾರಕಾಲ ಅಥವಾ ಉಪನಯನಕಾಲದಲ್ಲಿ, ಹೆಣ್ಣು ಹುಡಿಗಿಯರಿಗೆ ವಿವಾಹಕಾಲದಲ್ಲಿ, ಗಂಡಸರಿಗೆ ಗಾಯತ್ರ್ಯಾದಿಮಂತ್ರೋಪದೇಶಕಾಲದಲ್ಲಿ ಮಂತ್ರಗಳನ್ನು ಉಚ್ಚರಿಸುತ್ತ ತಪ್ತಮುದ್ರಾಧಾರಣ ಮಾಡಿಸಬೇಕು. ಭಗವಂತನ 5 ಆಯುಧಗಳು (ಚಕ್ರ, ಶಂಖ, ಗದಾ, ನಂದಕ, ಶಾರ್ಙ್ಗ) ಎಂಬ ಚಿಹ್ನೆಯುಳ್ಳ 5 ಮುದ್ರೆಗಳನ್ನು ಅಥವಾ ಚಕ್ರ, ಶಂಖಗಳೆಂಬ ಎರಡನ್ನಾಗಲಿ ಅಥವಾ ಚಕ್ರಮುದ್ರೆ ಒಂದನ್ನಾಗಲಿ ಧಾರಣ ಮಾಡಿಸಬೇಕು. ಈ ಮುದ್ರಾಧಾರಣವನ್ನು ಮಾಡಿಸಿಕೊಳ್ಳದ ಸ್ತ್ರೀಪುರುಷರು ಶೃತಿಸ್ಮೃತ್ಯುಕ್ತಕರ್ಮಾನುಷ್ಠಾನಮಾಡಲು ಅರ್ಹರಾಗುವುದಿಲ್ಲ.

ತಪ್ತಮುದ್ರಾಧಾರಣಕ್ಕೆ ಪ್ರಮಾಣವು ಮಹೋಪನಿಷತ್ತಿನಲ್ಲಿ–

ದಕ್ಷಿಣೇ ತು ಕರೇ ವಿಪ್ರೋ ಬಿಭೃಯಾದ್ವೈ ಸುದರ್ಶನಮ್ ।
ಸವ್ಯೇ ತು ಶಂಖಂ ಬಿಭೃಯಾದಿತಿ ಬ್ರಹ್ಮವಿದೋ ವಿದುಃ ॥

ಬಲಗೈಯಲ್ಲಿ ಚಕ್ರವನ್ನು ಎಡಗೈಯಲ್ಲಿ ಶಂಖವನ್ನು ಧರಿಸಬೇಕೆಂದು ಬ್ರಹ್ಮಜ್ಞಾನಿಗಳು ತಿಳಿಸಿದ್ದಾರೆ. ಇದರಂತೆ ಶೃತಿಸ್ಮೃತಿಗಳಲ್ಲಿ ಅಸಂಖ್ಯ ಪ್ರಮಾಣಗಳಿವೆ–

ತಪ್ತಮುದ್ರಾಧಾರಣಕ್ರಮಃ–
ಪೂಜಯಿತ್ವಾ ಸಹಸ್ರಾರಂ ಧ್ಯಾಯೇತ್ತದ್ವಹ್ನಿಮಂಡಲೇ ।
ಪಶ್ಚಾದಗ್ನೌ ವಿನಿಕ್ಷಿಪ್ಯ ಚಕ್ರಾದ್ಯಾಯುಧಪಂಚಕಮ್ ॥
ಷಡಕ್ಷರೇಣ ಜುಹುಯಾದಾಜ್ಯಂ ವಿಶಂತಿಸಂಖ್ಯಯಾ ।
ಸರ್ವೈಶ್ಚ ಹೇತಿಮಂತ್ರೈಸ್ತು ಏಕೈಕಾಜ್ಯಾಹುತೀಃ ಕ್ರಮಾತ್ ॥
ತತಃ ಪ್ರದಕ್ಷಿಣಂ ಕೃತ್ವಾ ಸಶಿಷ್ಯೋ ವಹ್ನಿಮಾತ್ಮವಾನ್ ।
ಸಂಸ್ಮೃತ್ಯ ಚ ತತೋ ವಿಷ್ಣುಂ ಜಪ್ತ್ವಾ ಮಂತ್ರವರಂ ಶುಭಮ್ ।
ಪ್ರಾಙ್ಮುಖಂ ತು ಸಮಾಸೀನಂ ಶಿಷ್ಯಮೇಕಾಗ್ರಚೇತಸಮ್ ।
ಪ್ರತಪೇಚ್ಛಂಖಚಕ್ರಾದಿಹೇತಿಮಂತ್ರಂ ಸಮುಚ್ಚರನ್ ॥

ತಪ್ತಮುದ್ರಾಧಾರಣೆಯನ್ನು ಮಾಡತಕ್ಕ ಗುರುಗಳೂ ಶಿಷ್ಯರೂ ಸ್ನಾನಾಹ್ನಿಕಾದಿಗಳನ್ನು ಮುಗಿಸಬೇಕು. ಪುರೋಹಿತರ ಮೂಲಕವಾಗಿ ಅಗ್ನಿಪ್ರತಿಷ್ಠಾಪನ, ಅನ್ವಾಧಾನ ಮುಂತಾದ ಕಾರ್ಯಗಳನ್ನು ಮಾಡಿಸಿ ಮುದ್ರೆಗಳನ್ನು ವಹ್ನಿಕುಂಡದಲ್ಲಿಟ್ಟು ಪೂಜಿಸಿ ಅಗ್ನಿಯಲ್ಲಿ ಚಕ್ರಾಂತರ್ಗತ ಸುದರ್ಶನರೂಪಿ ನಾರಾಯಣನನ್ನು ಧ್ಯಾನಮಾಡುತ್ತಾ ಆಜ್ಯಾಹುತಿಯನ್ನು ಸುದರ್ಶನ ಮಂತ್ರಗಳಿಂದ 20 ಆಹುತಿಗಳನ್ನು ಮುದ್ರಾದೇವತೆಗಳ ಮಂತ್ರಗಳಿಂದ ಒಂದೊಂದು ಆಹುತಿಗಳನ್ನೂ ಕೊಡಬೇಕು. ನಂತರ ಗುರುಗಳು ಶಿಷ್ಯರು ಪ್ರದಕ್ಷಿಣನಮಸ್ಕಾರವನ್ನು ಮಾಡಿ ಹೋಮವನ್ನು ಮುಗಿಸಿ ಗುರುಗಳು ಮುದ್ರೆಗಳನ್ನು ತೆಗೆದುಕೊಂಡು ನಾರಾಯಣಾಷ್ಟಾಕ್ಷರಮಂತ್ರವನ್ನೂ ಆ ಆಯುಧ ಮಂತ್ರಗಳನ್ನೂ ಜಪಿಸುತ್ತ ಶಿಷ್ಯನಿಗೆ ಮುದ್ರಾಧಾರಣ ಮಾಡಬೇಕು. ಶಿಷ್ಯನು ಗುರುಭಕ್ತಿಯುತನಾಗಿ ಚಕ್ರರೂಪಿ ನಾರಾಯಣನನ್ನು ಸ್ಮರಿಸುತ್ತಾ ಮುದ್ರೆಗಳನ್ನು ಸ್ವೀಕರಿಸಬೇಕು. (ಮುದ್ರಾದಾರಣ ಮಾಡಿಸಿಕೊಳ್ಳುವ ಅಂಗಗಳು)

ದಕ್ಷಿಣೇ ತು ಭುಜೇ ಚಕ್ರಂ ವಾಮಾಂಸೇ ಶಂಖಮೇವಚ
ಗದಾಂ ಚ ಫಾಲಮಧ್ಯೇತು ಹೃನ್ಮಧ್ಯೇ ನಂದಕಂ ತಥಾ ॥
ಮಸ್ತಕೇ ತು ತಥಾ ಶಾರ್ಙ್ಗಂ ಅಂಕಯೇದ್ವಿಮಲಂ ತಥಾ ॥
–(ಹಾರೀತ)

ಬಲಭುಜದಲ್ಲಿ ಚಕ್ರಮುದ್ರೆ ಎಡಭುಜದಲ್ಲಿ ಶಂಖಮುದ್ರೆ ಎದೆಯಲ್ಲಿ ನಂದಕಮುದ್ರೆ ನೆತ್ತಿಯಲ್ಲಿ ಶಾರ್ಙ್ಗಮುದ್ರೆ ಹಣೆಯಲ್ಲಿ ಗದಾಮುದ್ರೆಯನ್ನು ಧರಿಸಬೇಕು.

ಮಾರ್ಕಂಡೇಯ ಪುರಾಣದಲ್ಲಿ ಸಂನ್ಯಾಸಿಗಳಿಂದಲೇ ಈ ಮುದ್ರೆಗಳನ್ನು ತೆಗೆದುಕೊಳ್ಳಲು ಹೇಳಿದೆ. ಆ ವಚನಗಳು ಕೆಳಗೆ ಕೊಡಲ್ಪಟ್ಟಿವೆ.

ಪ್ರತಪ್ತಂ ವಿಧಿನಾ ವಹ್ನೌ ಸಹಸ್ರಾರಂ ಸುವರ್ಣಕಮ್ ।
ಪ್ರಣತಾಯ ಸ್ವಶಿಷ್ಯಾಯ ಹಂಸೋ ಗುರುರಥಾಂಕಯೇತ್ ॥

ಪರಮಹಂಸಾದಿ ಗುರುಗಳು ಬಂಗಾರದಿಂದ ನಿರ್ಮಿತವಾದ ಚಕ್ರಮುದ್ರೆಯನ್ನು ವಿಧಿಪೂರ್ವಕಕವಾಗಿ ಆ ಅಗ್ನಿಯಲ್ಲಿ ಕಾಸಿ ನಮಸ್ಕರಿಸಿದ ತಮ್ಮ ಶಿಷ್ಯನಿಗೆ ಮುದ್ರಾಂಕನ ಮಾಡಬೇಕು.

ಮುದ್ರಾಧಾರಣಾವಶ್ಯಕತಾ

ಉಪವೀತಾದಿವದ್ಧಾರ್ಯಾಃ ಶಂಖಚಕ್ರಾದಯಸ್ತಥಾ ।

–ವಾಯವ್ಯಂ (ಶಂಖಸ್ಮೃತಿ)

ಯಜ್ಞೋಪವೀತದಂತೆ ಶಂಖಚಕ್ರಾದಿಮುದ್ರೆಗಳನ್ನು ಅವಶ್ಯವಾಗಿ ಧರಿಸಬೇಕು.

ಉಪವೀತಂ ಶಿಖಾಬಂಧಂ ಊರ್ಧ್ವಪುಂಡ್ರಂ ತಥೈವ ಚ ।
ಚಕ್ರಲಾಂಛನಹೀನಸ್ಯ ವಿಪ್ರಸ್ಯ ವಿಫಲಂ ಭವೇತ್ ॥

ತಪ್ತಮುದ್ರೆಯನ್ನು ಧರಿಸದೆ ಜುಟ್ಟು ಜನಿವಾರ ಮುಂತಾದವುಗಳನ್ನು ಧರಿಸಿದರೂ ನಿಷ್ಫಲವಾಗುತ್ತದೆ.

ವಿಷ್ಣುಪಂಚಕ ನಿರ್ಣಯ

ಪ್ರೋಷ್ಠಪದ್ಯಾಂ ಸಿತೇ ಪಕ್ಷೇ ದ್ವಾದಶ್ಯಾಂ ಶ್ರವಣಂ ಯದಾ ।
ತದಾರಭ್ಯ ವ್ರತಂ ಕಾರ್ಯಂ ಮಾರ್ಗಶೀರ್ಷೇಽಥವಾ ನೃಪ ॥
ಏಕಾದಶ್ಯಾಮುಪವಸೇತ್ ಪ್ರತಿಪಕ್ಷಂ ಚ ಪರ್ವಣಿ ।
ಶ್ರವಣೇ ಚ ತಥೋಪೋಷ್ಯ ಪೂಜಯೇದ್ಗರುಡಧ್ವಜಮ್।

–(ಭವಿಷ್ಯತ್ಪುರಾಣ)

ಮಾಸಿ ಭಾದ್ರಪದೇ ಶುಕ್ಲೇ ಶ್ರವಣೇನ ಯುತಾ ಯದಿ ।
ಏಕಾದಶೀ ತದಾ ಗ್ರಾಹ್ಯಂ ವ್ರತಂ ವರ್ಷಾತ್ಮಕಂ ಶುಭಂ ॥
ಪ್ರಾರಂಭದಿವಸೇ ಪ್ರಾಪ್ತೇ ಸ್ವಸ್ತಿವಾಚನಪೂರ್ವಕಂ ।
ಸಂಕಲ್ಪಂ ವಿಧಿವತ್ಕುರ್ಯಾದ್ವ್ರತಮಾವತ್ಸರಂ ಕ್ರಮಾತ್ ॥
ಮಾರ್ಗಶೀರ್ಷೇಽಥವಾ ಕುರ್ಯಾದೇಕಾದಶ್ಯಾಂ ಸಿತೇ ಶುಭೇ ।
ಹೀನಾಯಾಂ ವಿಷ್ಣಭೇನಾಪಿ ವ್ರತಮೇತತ್ಸಮಾಚರೇತ್ ॥

ಭಾದ್ರಪದಮಾಸ ಶುಕ್ಲಪಕ್ಷದಲ್ಲಿ ದ್ವಾದಶೀ ದಿನದಲ್ಲಿ ಶ್ರವಣಾನಕ್ಷವು ಬಂದಾಗ ವಿಷ್ಣುಪ್ರೀತ್ಯರ್ಥವಾಗಿ ವಿಷ್ಣುಪಂಚಕವ್ರತವನ್ನು ಆರಂಭಿಸಬೇಕು. ಅಥವಾ ಮಾರ್ಗಶಿರಮಾಸ ಶುಕ್ಲಪಕ್ಷ ಏಕಾದಶೀದಿನದಲ್ಲಿ ಆರಂಭಿಸಬೇಕು. ಮಾರ್ಗಶಿರ ಶುಕ್ಲಪಕ್ಷ ಏಕಾದಶೀದಿನದಲ್ಲಿ ಶ್ರವಣಾನಕ್ಷತ್ರವು ಬರುವ ಸಂಭವವಿಲ್ಲದಿದ್ದರೂ ವಿಷ್ಣುಪಂಚಕವ್ರತವನ್ನು ಆರಂಭಿಸಬಹುದು. ಒಂದು ತಿಂಗಳಿನಲ್ಲಿ ಶುಕ್ಲಪಕ್ಷ ಏಕಾದಶೀ ಪೂರ್ಣಿಮಾ ಕೃಷ್ಣಪಕ್ಷಏಕಾದಶೀ ಶ್ರವಣಾನಕ್ಷತ್ರ, ಅಮಾವಾಸ್ಯೆ ಹೀಗೆ 5 ದಿನಗಳಲ್ಲಿ 5 ಉಪೋಷಣಗಳಂತೆ ಒಂದು ವರ್ಷದಲ್ಲಿ 60 ಉಪೋಷಣೆಗಳನ್ನು

ಮಾಡಬೇಕು ಆರಂಭಕಾಲದಲ್ಲಿ ಪುಣ್ಯಾಹವಾಚನವನ್ನು ಮಾಡಿ ಗುರು ದೇವತೆಗಳನ್ನು ಪ್ರಾರ್ಥಿಸಿ ಆರಂಭಿಸಬೇಕು.

ಏಕಾದಶ್ಯಾಂ ಸಿತೇ ಪಕ್ಷೇ ಕೃತ್ವೋಪೋಷ್ಯಂ ತನೂದ್ಭವ ।
ತರ್ಪಣಂ ತತ್ರ ಕರ್ತವ್ಯಂ ಮಂತ್ರೈರ್ದ್ವಾದಶಭಿಃ ಕ್ರಮಾತ್ ॥
ಏಕಾದಶ್ಯಾಂ ತಥಾ ಕೃಷ್ಣೇ ತಥಾ ಪರ್ವದ್ವಯೇಽಪಿ ಚ ।
ಶ್ರವಣೇಽಪಿ ಚ ತನ್ಮಂತ್ರೈಃ ಕುರ್ಯಾದ್ದ್ವಾದಶಭಿಃ ಕ್ರಮಾತ್ ।
ಅಥವೋದ್ಯಾಪನೇ ಕಾಲೇ ತರ್ಪಣಂ ಸಕಲಂ ಚರೇತ್ ॥

ಒಂದೊಂದು ಉಪವಾಸದಲ್ಲಿಯೂ ಗರುಡಧ್ವಜನಾಮಕನಾದ ನಾರಾಯಣನನ್ನು ಭಕ್ತಿಯಿಂದ ಪೂಜಿಸಿ, ಕೇಶವಾದಿ ತತ್ತದ್ದೇವತಾ ದ್ವಾದಶನಾಮಗಳಿಂದ ತರ್ಪಣವನ್ನು ಕೊಡಬೇಕು. ಅಥವಾ ಉದ್ಯಾಪನೆಯ ಕಾಲದಲ್ಲಿ ಒಟ್ಟಿಗಾದರೂ 60 ದೇವತೆಗಳ ಉದ್ದೇಶ್ಯ ತರ್ಪಣವನ್ನು ಕೊಡಬೇಕು. ಜಾತಾಶೌಚ ಮೃತಾಶೌಚಾದಿಗಳಲ್ಲಿ ಉಪವಾಸವನ್ನು ನಿಲ್ಲಿಸಬಾರದು. ಪೂಜಾ ತರ್ಪಣಾದಿಗಳನ್ನು ಉದ್ಯಾಪನಾ ಕಾಲದಲ್ಲಿಯಾದರೂ ಮಾಡಬೇಕು. ಸ್ವತಃ ಜಾತಾಶೌಚಗಳಲ್ಲಿ ತರ್ಪಣ ಮಾಡಬಾರದು.

ಸ್ಪರ್ಶದೋಷಾದಿಭಿರ್ದೋಷೈರ್ಲೋಪಶ್ಚೇತ್ಪರ್ವ ಖುಕ್ಷಯೋಃ ॥
ಲುಪ್ತಾನಾಮುಪರೇ ವರ್ಷೇ ನ ಕುರ್ಯಾದುಪವಾಸನಮ್ ।
ಕ್ರಮಾದ್ವ್ಯಾಧ್ಯಾದಿನಾ ವಾಽಪಿ ಲೋಪಶ್ಚೇತ್ಪರ್ವ ಖುಕ್ಷಯೋಃ
ತದಾ ಕುರ್ಯಾತ್ಪರೇ ವರ್ಷೇ ಲುಪ್ತಾನಾಮುಪವಾಸನಮ್ ।
ಪ್ರಾಯಶ್ಚಿತ್ತಸ್ತಥೌಘಾನಾಂ ಪುನರಾವೃತ್ತಿರಿಷ್ಯತೇ ॥

(ಸ್ಕಾಂದ ಪುರಾಣೇ)

ಪ್ರತಿತಿಂಗಳಿನಲ್ಲಿ ಮಾಡುವ ವಿಷ್ಣುಪಂಚಕ ಉಪವಾಸಗಳಲ್ಲಿ ಶ್ರವಣ, ಪೂರ್ಣಿಮಾ, ಅಮಾವಾಸ್ಯಾ ಈ ಮೂರು ಉಪೋಷಣಗಳು ಸ್ಪರ್ಶಾದಿ ದೋಷಗಳಿಂದ ಲುಪ್ತವಾಗುವ ಪ್ರಸಂಗವಿರುವುದು. ಹಾಗೆ ಒಂದು ವರ್ಷದಲ್ಲಿ 60 ಉಪವಾಸಗಳಲ್ಲಿ ಲುಪ್ತವಾದ ಉಪೋಷಣೆಗಳನ್ನು ಪುನಃ ಮಾರನೇ ವರ್ಷದಲ್ಲಿ ಮಾಡಬಾರದು. ರೋಗಾದ್ಯುಪದ್ರವಗಳಿಂದ ಲುಪ್ತವಾದ ಉಪವಾಸಗಳನ್ನು ಮಾತ್ರ ಲೋಪಕ್ಕೆ ಕಾರಣವಾದ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡು ಲೋಪವಾದಷ್ಟು ಉಪೋಷಣೆಗಳನ್ನು ಪುನಃ ಮಾರನೇ ವರ್ಷ ಯಾವ ಯಾವ ಉಪೋಷಣೆಗಳು ಎಷ್ಟು ಲುಪ್ತವಾಗಿರುವವೋ ಅಷ್ಟಷ್ಟೇ ಉಪೋಷಣೆಗಳನ್ನು ಮಾಡಲೇಬೇಕು.

ವಿಷ್ಣುಪಂಚಕೋಪವಾಸಲೋಪಕ್ಕೆ ಕಾರಣಗಳು

ಪೂರ್ವವಿದ್ಧಂ ನ ಕರ್ತವ್ಯಂ ತತ್ರ ಚೈಕಾದಶೀದ್ವಯಮ್ ।
ಚತುರ್ದಶೀವಿಮಿಶ್ರೇ ಯೇ ನೋಪೋಷ್ಯೇ ಪರ್ವಣೀ ಉಭೇ ॥
ಉತ್ತರಾಷಾಢಮಿಶ್ರಂ ತು ನೋಪೋಷ್ಯಂ ಶ್ರವಣಂ ಬುಧೈಃ

(ಇತಿ ಸ್ಕಾಂದೇ)

ಶುಕ್ಲ ಮತ್ತು ಕೃಷ್ಣಪಕ್ಷಗಳಲ್ಲಿ ಏಕಾದಶೀ ತಿಥಿಗೆ ದಶಮೀವೇಧವಿದ್ದಾಗ ದಶಮೀವಿದ್ಧೈಕಾದಶಿಯಲ್ಲಿ ಉಪೋಷಣೆ ಮಾಡಬಾರದು. ಇದರಂತೆ ಸೂರ್ಯೋದಯಾನಂತರದಲ್ಲಿ ಸ್ವಲ್ಪ ಚತುರ್ದಶೀ ಇದ್ದು ನಂತರ ಪೂರ್ಣಿಮಾ ಅಥವಾ ಅಮಾವಾಸ್ಯಾ ಬಂದಿದ್ದರೆ ಅಂದು ವಿಷ್ಣುಪಂಚಕೋಪವಾಸವನ್ನು ಮಾಡಬಾರದು ಮತ್ತು ಸೂರ್ಯೋದಯಾನಂತರದಲ್ಲಿ ಸ್ವಲ್ಪ ಉತ್ತರಾಷಾಢಾ ಇದ್ದು ಅನಂತರ ಶ್ರವಣಾನಕ್ಷತ್ರವು ಬಂದರೆ ಅಂದು ವಿಷ್ಣುಪಂಚಕೋಪೋಷಣೆ ಮಾಡಬಾರದು.

ಪಂಚಾಂಗಶ್ರವಣಫಲಂ

ಆಯುರ್ವೃದ್ಧಿಂ ಪುತ್ರಪೌತ್ರಾಭಿವೃದ್ಧಿಂ ।
ನಿತ್ಯಾರೋಗ್ಯಂ ಸಂಪದಂ ಚಾನಪಾಯಾಂ ॥
ಅಚ್ಛಿನ್ನಾನಾಮುತ್ಸವಾನಾಮವಾಪ್ತಿಂ ।
ಯಚ್ಛಂತ್ಯೇತೇ ವತ್ಸರಾಧೀಶಮುಖ್ಯಾಃ ॥
ತಿಥೇಶ್ಚ ಶ್ರಿಯಮಾಪ್ನೋತಿ ವಾರಾದಾಯುಷ್ಯವರ್ಧನಮ್ ।
ನಕ್ಷತ್ರಾದ್ಧರತೇ ಪಾಪಂ ಯೋಗಾದ್ರೋಗನಿವಾರಣಮ್ ॥

ಚೈತ್ರಮಾಸದ ವಿಶೇಷ ಧರ್ಮಗಳು

ಪ್ರಪಾದಾನದ ವಿಧಾನ

ಈ ಮಾಸದಲ್ಲಿ ಪ್ರಪಾ (ಅರವಟ್ಟಿಗೆ) ವನ್ನು ಸುಮುಹೂರ್ತದಲ್ಲಿ ಆರಂಭಿಸಿ 4 ತಿಂಗಳಿನವರೆಗೆ ನಡೆಸಬೇಕು.

ಪ್ರಪೇಯಂ ಸರ್ವಸಾಮಾನ್ಯಾ ಭೂತೇಭ್ಯಃ ಪ್ರತಿಪಾದಿತಾ ।
ಅಸ್ಯಾಃ ಪ್ರದಾನಾತ್ಪಿತರಸ್ತೃಪ್ಯಂತು ಹಿ ಪಿತಾಮಹಾಃ ॥

ಎಂಬ ಮಂತ್ರದಿಂದ ಆರಂಭಿಸಬೇಕು. ಅಶಕ್ತನಾದವನು ಪ್ರತಿದಿನದಲ್ಲಿಯೂ ಜಲಕುಂಭವನ್ನು ವಸ್ತ್ರದಿಂದ ಮುಚ್ಚಿ

ಏಷ ಧರ್ಮಘಟೋ ದತ್ತೋ ಬ್ರಹ್ಮಾವಿಷ್ಣುಶಿವಾತ್ಮಕಃ ।
ಅಸ್ಯ ಪ್ರದಾನಾತ್ಸಕಲಾ ಮಮ ಸಂತು ಮನೋರಥಾಃ ॥

ಎಂಬ ಮಂತ್ರದಿಂದ ದಾನ ಮಾಡಬೇಕು.

ಗೌರೀತದಿಗೆ

ಈ ವ್ರತವನ್ನು ಮಾಡುವವರು ಜೇನು ಹಾಲು ಮೊಸರು ತುಪ್ಪಗಳನ್ನು ಬಿಟ್ಟು ದಂಪತಿಪೂಜೆಯನ್ನು ಮಾಡಬೇಕು. ಇದೇ ಶುಕ್ಲದ್ವಿತಿಯಾತಿಥಿಯಲ್ಲಿ ಗೌರೀ ಮತ್ತು ಶಿವನ ಪೂಜೆಯನ್ನೂ ಚತುರ್ಥಿಯಲ್ಲಿ ಗಣೇಶನನ್ನೂ ಪಂಚಮಿಯಲ್ಲಿ

ನಾಗಗಳನ್ನೂ ಷಷ್ಠಿಯಲ್ಲಿ ಸ್ಕಂದನನ್ನೂ ಸಪ್ತಮಿಯಲ್ಲಿ ಸೂರ್ಯನನ್ನೂ ನವಮಿಯಲ್ಲಿ ದುರ್ಗೆಯನ್ನೂ ಹುಣ್ಣಿಮೆಯಲ್ಲಿ ಸಕಲದೇವತೆಗಳನ್ನೂ ಪೂಜಿಸಿ ದಮನವನ್ನೂ ಅರ್ಪಿಸಬೇಕು. ಈ ತದಿಗೆಯಿಂದ ಒಂದು ತಿಂಗಳಿನವರೆಗೆ ಶ್ರೀರಾಮದೇವರಿಗೂ ಗೌರೀ ಶಿವ ಮುಂತಾದ ದೇವತೆಗಳಿಗೂ ಡೋಲೋತ್ಸವವನ್ನು ಮಾಡಬೇಕು. ಈ ದಿನವು ಉತ್ತಮಮನ್ವಾದಿ ದಿನವಾಗಿದೆ.

14 ಮನ್ವಾದಿ ದಿನಗಳು
4 ಯುಗಾದಿ ದಿನಗಳು
12 ಸಂಕ್ರಮಣಗಳು,
12 ಅಮಾವಾಸ್ಯಾದಿನಗಳು
15 ಮಹಾಲಯದಿನಗಳು,
12 ವ್ಯತೀಪಾತಯೋಗ ದಿನಗಳು,
12 ವೈಧೃತಿಯೋಗದಿನಗಳು
5 ಪೂರ್ವೇದ್ಯುದಿನಗಳು
5 ಅಷ್ಟಕಾ ದಿನಗಳು
5 ಅನ್ವಷ್ಟಕ್ಯ ದಿನಗಳು

96 ದಿನಗಳು ಷಣ್ಣವತಿಶ್ರಾದ್ಧದಿನಗಳು. ಇವುಗಳಲ್ಲಿ ಮಹಾಲಯವನ್ನು ಬಿಟ್ಟು ಉಳಿದ ಶ್ರಾದ್ಧಗಳನ್ನು ಪಿಂಡವಿಲ್ಲದೆ ತರ್ಪಣರೂಪದಿಂದ ಮಾಡಬೇಕು. ಈ ಶ್ರಾದ್ಧವು ನಿತ್ಯ. ಈ ಶ್ರಾದ್ಧದಿಂದ ಪಿತೃಗಳಿಗೆ 2 ಸಹಸ್ರವರ್ಷಗಳವರೆಗೆ ತೃಪ್ತಿಯಾಗುತ್ತದೆ.

ಶ್ರೀರಾಮನವಮಿ

ಈ ದಿನದಲ್ಲಿ ಶ್ರೀರಾಮದೇವರನ್ನು ಷೋಡಶೋಪಚಾರಗಳಿಂದ ಪೂಜಿಸಬೇಕು. ನಂತರ

ರಾಮಸ್ಯ ಜನನೀ ಚಾಸಿ ರಾಮಾತ್ಮಕಮಿದಂ ಜಗತ್ ।
ಅತಸ್ತ್ವಾಂ ಪೂಜಯಿಷ್ಯಾಮಿ ಲೋಕಮಾತರ್ನಮೋಽಸ್ತು ತೇ ॥

ಎಂಬ ಮಂತ್ರದಿಂದ ಕೌಸಲ್ಯೆಯನ್ನು ಪೂಜಿಸಬೇಕು. ನಂತರ 'ಓಂ ನಮೋ ದಶರಥಾಯ' ಎಂಬ ಮಂತ್ರದಿಂದ ದಶರಥನನ್ನು ಪೂಜಿಸಬೇಕು.

ಕೌಸಲ್ಯಾಗರ್ಭಸಂಭೂತ ಸದಾ ಸೌಮಿತ್ರಿವತ್ಸಲ ।
ಜಾನಕೀಸಹಿತೋ ರಾಮ ಗೃಹಾಣಾರ್ಘ್ಯಂ ನಮೋಽಸ್ತು ತೇ ॥
ಕೌಸಲ್ಯಾನಂದನೋ ವೀರ ರಾವಣಾಸುರಮರ್ದನ ।
ಸೀತಾಪತೇ ನಮಸ್ತುಭ್ಯಂ ಗೃಹಾಣಾರ್ಘ್ಯಂ ನಮೋಽಸ್ತು ತೇ ॥

ಎಂಬ ಮಂತ್ರಗಳಿಂದ ಶ್ರೀರಾಮದೇವರಿಗೆ ಅರ್ಘ್ಯವನ್ನು ಫಲಪುಷ್ಪಜಲಪೂರ್ಣವಾದ ಶಂಖದಿಂದ ಕೊಡಬೇಕು.

ಶ್ರೀರಾಮನವಮಿಯಿಂದ ವೈಶಾಖಶುಕ್ಲಪೂರ್ಣಿಮವರೆಗೆ

ವಸಂತಪೂಜಾ - ಬ್ರಾಹ್ಮಣರಿಗೆ ಪಾನಕ-ಕೋಸಂಬ್ರಿ-ಇತ್ಯಾದಿ ಫಲಹಾರಪೂಜೆ.

ಚಿತ್ರಾಪೂರ್ಣಿಮಾ

ಈ ದಿನದಲ್ಲಿ ಚಿತ್ರವಸ್ತ್ರದಾನ ಸೌಭಾಗ್ಯಕರವಾಗುತ್ತದೆ. ಮತ್ತು ಇದೇ ದಿನದಲ್ಲಿ

ವೈಶಾಖಂ ಸಕಲಂ ಮಾಸಂ ಮೇಷಸಂಕ್ರಮಣೇ ರವೇಃ ।
ಪ್ರಾತಃ ಸನಿಯಮಃ ಸ್ನಾಸ್ಯೇ ಪ್ರೀಯತಾಂ ಮಧುಸೂದನಃ ॥
ಮಧುಹಂತುಃ ಪ್ರಸಾದೇನ ಬ್ರಾಹ್ಮಣಾನಾಮನುಗ್ರಹಾತ್ ।
ನಿರ್ವಿಘ್ನಮಸ್ತು ಮೇ ಪುಣ್ಯಂ ವೈಶಾಖಸ್ನಾನಮನ್ವಹಂ ॥
ಮಾಧವೇ ಮೇಷಗೇ ಭಾನೌ ಮುರಾರೇ ಮಧುಸೂದನ ।
ಪ್ರಾತಃ ಸ್ನಾನೇನ ಮೇ ನಾಥ ಫಲದೋ ಭವ ಪಾಪಹನ್ ॥

ಎಂಬ ಮಂತ್ರದಿಂದ ಸ್ನಾನವನ್ನೂ ಆರಂಭಿಸಬೇಕು.

ವೈಶಾಖ ಮಾಸದ ವಿಶೇಷಧರ್ಮಗಳು

ಚೈತ್ರಶುಕ್ಲ ಹುಣ್ಣಿಮೆಯಿಂದ ವೈಶಾಖಶುಕ್ಲ ಹುಣ್ಣಿಮೆಯ ವರೆಗೆ ಮಾಸನಿಯಾಮಕಮಧುಸೂದನನ ಪ್ರೀತ್ಯರ್ಥವಾಗಿ ವೈಶಾಖಸ್ನಾನವನ್ನು ಮಾಡಬೇಕು. ಈ ಮಾಸದಲ್ಲಿ ಪ್ರಾತಃಸ್ನಾನ, ಎಳ್ಳಿನಿಂದ ಪಿತೃತರ್ಪಣ ಮತ್ತು ಧರ್ಮಘಟದಾನವನ್ನು ಮಾಡಬೇಕು. ವೈಶಾಖಜ್ಯೇಷ್ಠಮಾಸಗಳಲ್ಲಿ ಬಿಸಿಲು ಹೆಚ್ಚಾದಾಗ ಬೆಳಿಗ್ಗೆ ನಿತ್ಯಪೂಜೆಯನ್ನು ಮುಗಿಸಿ ಗಂಧೋದಕ ಪೂರ್ಣಪಾತ್ರದಲ್ಲಿ ವಿಷ್ಣುವಿಗ್ರಹವನ್ನಿಟ್ಟು ಪಂಚೋಪಚಾರಗಳಿಂದ ಪೂಜಿಸಿ ಸೂರ್ಯಾಸ್ತವಾದ ಮೇಲೆ ಆ ನೀರಿನಿಂದ ವಿಷ್ಣುವಿಗ್ರಹವನ್ನು ತೆಗೆದು ಸ್ವಸ್ಥಾನದಲ್ಲಿಟ್ಟು ಪಂಚೋಪಚಾರಗಳಿಂದ ಪೂಜಿಸಿ ಆ ನೀರಿನಿಂದ ತನ್ನನ್ನೂ ಗೃಹ ಮುಂತಾದ ವಸ್ತುಗಳನ್ನೂ ಪ್ರೋಕ್ಷಣೆ ಮಾಡಬೇಕು. ದ್ವಾದಶೀದಿನದಲ್ಲಿ ಪ್ರತಿಮೆಯನ್ನು ಹಗಲಿನಲ್ಲಿ ನೀರಿನಲ್ಲಿಡದೆ ರಾತ್ರಿ ಕೆಲಕಾಲ ಗಂಧೋದಕದಲ್ಲಿಟ್ಟು ಪೂಜಿಸಿ ಸ್ವಸ್ಥಾನದಲ್ಲಿಡಬೇಕು. ಈ ತಿಂಗಳಲ್ಲಿ ತುಳಸಿಯಿಂದ ಹರಿಯನ್ನು ಪೂಜಿಸಿದರೆ ಮುಕ್ತಿ. ಬೆಳಿಗ್ಗೆ ಸ್ನಾನಮಾಡಿ ಅಶ್ವತ್ಥಮೂಲಕ್ಕೆ ನೀರು ಹಾಕಿದರೆ ಮತ್ತು ಗೋಸೇವೆಯನ್ನು ಮಾಡಿದರೆ ಕುಲೋದ್ಧಾರ. ಅರವಟ್ಟಿಗೆ ಛತ್ರಿ ಬೀಸಣಿಗೆ ಪಾದರಕ್ಷೆ ಗಂಧ ಮುಂತಾದ ವಸ್ತುಗಳ ದಾನದಿಂದ ಸಕಲಾಭೀಷ್ಟ ಉಂಟಾಗುತ್ತದೆ.

ಅಕ್ಷಯತೃತಿಯಾ

ಈ ದಿನದಲ್ಲಿ (ಜವೆಗೋಧಿ) ಯವಹೋಮ ಯವದಾನ ಯವಭಕ್ಷಣ ಮಾಡುವುದರಿಂದ ಸರ್ವಪಾಪಪರಿಹಾರವಾಗುವುದು. ದೇವರಿಗೆ ಗಂಧಲೇಪವನ್ನು

ಮಾಡಿದರೆ ಮುಕ್ತಿ. ಅತ್ಯಲ್ಪಪುಣ್ಯಕ್ಕೂ ಅಕ್ಷಯಫಲ ಉಂಟಾಗುತ್ತದೆ. ಈ ದಿನದಲ್ಲಿ ದೇವತೆಗಳ ಮತ್ತು ಪಿತೃಗಳ ಪ್ರೀತ್ಯರ್ಥವಾಗಿ–

ಏಷ ಧರ್ಮಘಟೋ ದತ್ತೋ ಬ್ರಹ್ಮವಿಷ್ಣುಶಿವಾತ್ಮಕಃ ।
ಅಸ್ಯಪ್ರದಾನಾತ್ ಸಕಲಾ ಮಮ ಸಂತು ಮನೋರಥಾಃ ॥
ಏಷ ಧರ್ಮಘಟೋ ದತ್ತೋ ಬ್ರಹ್ಮವಿಷ್ಣು ಶಿವತ್ಮಕಃ ।
ಅಸ್ಯ ಪ್ರದಾನಾತ್ತೃಪ್ಯಂತು ಪಿತರೋಽಥ ಪಿತಾಮಹಾಃ ॥
ಗಂಧೋದಕತಿಲೈರ್ಮಿಶ್ರಂ ಸಾನ್ನಂ ಕುಂಭಂ ಫಲಾನ್ವಿತಂ ।
ಪಿತೃಭ್ಯಃ ಸಂಪ್ರದಾಸ್ಯಾಮಿ ಅಕ್ಷಂಯ್ಯಮುಪತಿಷ್ಠತು ॥

ಎಂದು ಧರ್ಮಘಟದಾನವನ್ನು ಮಾಡಬೇಕು.

ಪರಶುರಾಮ ಜಯಂತೀ

ಪ್ರದೋಷಕಾಲದಲ್ಲಿ ಪರಶುರಾಮದೇವರನ್ನು ಪೂಜಿಸಿ

ಜಮದಗ್ನಿಸುತೋ ವೀರ ಕ್ಷತ್ರಿಯಾಂತಕರ ಪ್ರಭೋ ।
ಗೃಹಾಣಾರ್ಘ್ಯಂ ಮಯಾ ದತ್ತಂ ಕೃಪಯಾ ಪರಮೇಶ್ವರ ॥

ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು.

ನೃಸಿಂಹ ಜಯಂತೀ

ಈ ದಿನದಲ್ಲಿ ಸಂಧ್ಯಾಕಾಲದಲ್ಲಿ ನರಸಿಂಹದೇವರನ್ನೂ ಪೂಜಿಸಿ ಪರಿತ್ರಾಣಾಯ ಸಾಧೂನಾಂ ಜಾತೋ ವಿಷ್ಣೋ ನೃಕೇಸರೀ। ಗೃಹಾಣಾರ್ಘ್ಯಂ ಮಯಾ ದತ್ತಂ ಸಲಕ್ಷ್ಮೀರ್ನೃಹರಿಃ ಸ್ವಯಂ ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು.

ವೈಶಾಖ ಶುಕ್ಲ ಪೂರ್ಣಿಮಾ

ಈ ದಿನದಲ್ಲಿ ಕೃಷ್ಣಾಜಿನದಾನದಿಂದ ಭೂದಾನಫಲವನ್ನೂ ಮಧುಯುಕ್ತ ತಿಲದಾನ, ತಿಲಸ್ನಾನ, ತಿಲಹೋಮ, ತಿಲತೈಲದಿಂದ ದೀಪದಾನ, ತಿಲದಿಂದ ಪಿತೃತರ್ಪಣ ಮಾಡುವುದರಿಂದ ಮಹಾಫಲವನ್ನೂ ಹೊಂದುವರು.

ಜ್ಯೇಷ್ಠಮಾಸದ ವಿಶೇಷ ಧರ್ಮಗಳು

ಈ ಮಾಸದಲ್ಲಿ ಮಾಸನಿಯಾಮಕನಾದ ತ್ರಿವಿಕ್ರಮದೇವನ ಪ್ರೀತ್ಯರ್ಥವಾಗಿ ಮಾಡಿದ ಚಂದನ, ಛತ್ರಿ, ಬೀಸಣಿಕೆ, ಉದಕುಂಭ, ಪಾದರಕ್ಷೆ ದಾನಗಳಿಂದ ರಾಜ್ಯಪದವೀಲಾಭವಾಗುತ್ತದೆ.

ಅಥ ದಶಹರಾವ್ರತಮ್

ಜ್ಯೇಷ್ಠ ಶು. ಪ್ರತಿಪತ್ತಿನಿಂದ ದಶಮೀವರೆಗೆ ಕಾಶೀವಾಸಿಗಳೂ ದಶಾಶ್ವಮೇಧಘಾಟಿನಲ್ಲಿಯೂ ಬೇರೆ ಸ್ಥಳದಲ್ಲಿದ್ದವರು ಗಂಗೆಯ ಸಮೀಪದಲ್ಲಿದ್ದರೆ

ಗಂಗೆಯಲ್ಲಿಯೂ, ದೂರದಲ್ಲಿದ್ದರೆ ಸಮೀಪದಲ್ಲಿರುವ ಇತರ ನದಿಗಳಲ್ಲಿಯೂ ಸ್ನಾನವನ್ನು ಮಾಡಿ ಗಂಗೆಯನ್ನು ಪೂಜಿಸಬೇಕು.

ಜ್ಯೇಷ್ಠೇ ಮಾಸಿ ಸೀತೇ ಪಕ್ಷೇ ದಶಮ್ಯಾಂ ಬುಧಹಸ್ತಯೋಃ ।
ವ್ಯತೀಪಾತೇ ಗರಾನಂದೇ ಕನ್ಯಾಚಂದ್ರೇ ವೃಷೇ ರವೌ ॥

ಈ ಪ್ರಮಾಣದಲ್ಲಿ ಹೇಳಿರುವ 10 ಯೋಗಗಳ ಪೈಕಿ ಎಷ್ಟು ಯೋಗಗಳು ಬಂದಿವೆ ಎಂದು ಪಂಚಾಂಗ ಪುಟದಲ್ಲಿ ನೋಡಿ ಅದರಂತೆ ಹತ್ತು ದಂಪತ್ತು ಪೂಜೆ ದಾನಾದಿಗಳನ್ನು ಮಾಡಬೇಕು.

ತ್ರಿವಿಕ್ರಮಪೂಜಾ

ದ್ವಾದಶೀ ದಿನದಲ್ಲಿ ಶ್ರೀ ತ್ರಿವಿಕ್ರಮನ ಪೂಜೆ ಮಾಡಿ.

ದೇವದೇವ ಹೃಷೀಕೇಶ ಸಂಸಾರಾರ್ಣವತಾರಕ ।
ಉದಕುಂಭಪ್ರದಾನೇನ ಯಾಸ್ಯಾಮಿ ಪರಮಾಂ ಗತಿಂ ॥

ಎಂಬ ಮಂತ್ರದಿಂದ ಸಕ್ಕರೆ ಸುವರ್ಣಯುತವಾದ ಉದಕುಂಭದಾನ ಮಾಡಬೇಕು.

ಗ್ರಹಣಶಾಂತಿ ವಿಚಾರ ಗ್ರಹಣದ ಅನಿಷ್ಟವುಳ್ಳವರು ಗರ್ಗಾಚಾರ್ಯರು ಮುಂತಾದವರು ಹೇಳಿರುವ ಗ್ರಹಣಶಾಂತಿಯನ್ನು ಮಾಡಬೇಕು. ಅಥವಾ ಬೆಳ್ಳಿಯಿಂದ ನಿರ್ಮಿತವಾದ ಚಂದ್ರಬಿಂಬವನ್ನೂ ಸುವರ್ಣದಿಂದ ನಿರ್ಮಿತವಾದ ನಾಗಪ್ರತಿಮೆಯನ್ನೂ ತುಪ್ಪದಿಂದ ತುಂಬಲ್ಪಟ್ಟ ತಾಮ್ರಪಾತ್ರ ಅಥವಾ ಕಂಚಿನ ಪಾತ್ರದಲ್ಲಿಟ್ಟು ಅಕ್ಕಿ ರಾಶಿಯೊಡನೆ ದಾನ ಮಾಡಬೇಕು. ದಾನ ಮಂತ್ರ –

ತಮೋಮಯ ಮಹಾಭೀಮ ಸೋಮಸೂರ್ಯವಿಮರ್ದನ ।
ಹೇಮತಾರಾ ಪ್ರದಾನೇನ ಮಮ ಶಾಂತಿಪ್ರದೋ ಭವ ॥
ವಿಧುಂತುದ ನಮಸ್ತುಭ್ಯಂ ಸಿಂಹಿಕಾನಂದನಾಚ್ಯುತ ।
ದಾನೇನಾನೇನ ನಾಗಸ್ಯ ರಕ್ಷ ಮಾಂ ವೇಧಜಾದ್ಭಯಾತ್ ॥

ಈ ದಾನವನ್ನು ಮಾಡುವುದಕ್ಕೆ ಪೂರ್ವದಲ್ಲಿ ಸಂಕಲ್ಪಮಾಡಿ ಕ್ರಮವಾಗಿ ಚಂದ್ರಬಿಂಬದಲ್ಲಿ ಚಂದ್ರನನ್ನೂ ನಾಗಬಿಂಬದಲ್ಲಿ ವಾಸುಕಿಯನ್ನೂ ಆವಾಹಿಸಿ ಕ್ರಮವಾಗಿ ಪೂಜಿಸಿದ ಮೇಲೆ ದಾನ ಮಾಡಬೇಕು.

ಗ್ರಹಣ ಹಿಡಿಯುವಾಗ ಉಟ್ಟುಕೊಂಡಿರುವ ಬಟ್ಟೆಯೊಡನೆ ಸ್ನಾನ ಮಾಡಬೇಕು. ಆ ಬಟ್ಟೆಯನ್ನು ಬಿಚ್ಚಿ ಬೇರೆ ಬಟ್ಟೆಯನ್ನು ಉಟ್ಟುಕೊಂಡು ಸ್ನಾನವನ್ನು ಮಾಡಬಾರದು. ಜಾತಾಶೌಚ ಮೃತಾಶೌಚಗಳು ಇದ್ದವರಿಗೂ ಗ್ರಹಣಕಾಲದಲ್ಲಿ ತಾತ್ಕಾಲಿಕ ಶುದ್ಧಿಯು ಇರುತ್ತದೆ. ಆದ್ದರಿಂದ ಆಗ ಸ್ನಾನಮಾಡಿ ತರ್ಪಣ ಮುಂತಾಧ್ದ ಗ್ರಹಣಕಾಲದಲ್ಲಿ ಮಾಡಬೇಕಾದ ಎಲ್ಲಾ ಕಾರ್ಯಗಳನ್ನು ಮಾಡಬೇಕು.

ಗ್ರಹಣಕಾಲದಲ್ಲಿ ಯಾವ ಆಹಾರವಸ್ತುವನ್ನೂ ತಯಾರಿಸಬಾರದು. ತಯಾರಿಸಿದರೆ ಆ ಪಸ್ತುವನ್ನು ಆಗಲೂ ಗ್ರಹಣ ಮುಗಿದ ಮೇಲೆಯೂ ತಿನ್ನಬಾರದು.

ಗ್ರಹಣಕಾಲದಲ್ಲಿ ಸ್ನಾನ ಮಾಡದವನಿಗೆ ಆಯುಸ್ಸು ಕ್ಷೀಣವಾಗುತ್ತದೆ. ಗ್ರಹಣವು ಹಿಡಿಯುತ್ತಿರುವಾಗ ಮತ್ತು ಬಿಟ್ಟ ಮೇಲೆ ಸ್ನಾನ ಮಾಡಬೇಕು. ಗ್ರಹಣವು ಆರಂಭಿಸಿ ಮಧ್ಯಗ್ರಹಣದವರೆಗೆ ದಾನವನ್ನೂ ಜಪವನ್ನೂ ಮಾಡಬೇಕು. ಸ್ಪರ್ಶಕಾಲದಲ್ಲಿ ಮಾಡುವ ಸ್ನಾನವು ಲಕ್ಷ ಸ್ನಾನಗಳ ಫಲವನ್ನೂ ಮೋಕ್ಷವಾದ ಮೇಲೆ ಮಾಡುವ ಸ್ನಾನವು ಅನಂತ ಸ್ನಾನಗಳ ಫಲವನ್ನೂ ಕೊಡುತ್ತದೆ. ಗ್ರಹಣಮಧ್ಯ ಕಾಲದಲ್ಲಿ ಮಾಡುವ ಹೋಮ ಮತ್ತು ಗ್ರಹಣ ಶ್ರಾದ್ಧವು ಕೋಟಿಹೋಮಗಳ ಮತ್ತು ಕೋಟಿಶ್ರಾದ್ಧಗಳ ಫಲವನ್ನು ಕೊಡುತ್ತದೆ. ಗ್ರಹಣಕಾಲದಲ್ಲಿ ಶ್ರಾದ್ಧವನ್ನು ಅವಶ್ಯವಾಗಿ ಮಾಡಲೇ ಬೇಕು. ಮಾಡದಿರುವವನು ಕೆಸರಿನಲಿ ಸಿಕ್ಕಿದ ದನದಂತೆ ತುಂಬಾ ಕಷ್ಟ ಪಡುತ್ತಾನೆ.

ಸ್ಪರ್ಶಕಾಲದಿಂದ ಮಧ್ಯಗ್ರಹಣಕಾಲದ ವರೆಗಿನ ಕಾಲವು ದೇವತೆಗಳಿಗೂ ಪಿತೃಗಳಿಗೂ, ಮಧ್ಯಗ್ರಹಣ ಕಾಲವು ಮನುಷ್ಯರಿಗೂ, ಅನಂತರದ ಕಾಲವು ರಾಕ್ಷಸರಿಗೂ ಪ್ರಿಯವಾಗಿರುತ್ತದೆ. ಆದ್ದರಿಂದ ದೇವತೆಗಳಿಗೂ ಪಿತೃಗಳಿಗೂ ಪ್ರಿಯವಾದ ಕಾಲದಲ್ಲಿಯೇ ಶ್ರಾದ್ಧ ಮತ್ತು ಹೋಮವನ್ನು ಮಾಡಬೇಕು. ಈ ಶ್ರಾದ್ಧದಿಂದ ಸಮಸ್ತಭೂಮಿಯನ್ನು ದಾನ ಮಾಡಿದ ಫಲವು ಬರುತ್ತದೆ.

ಈ ಶ್ರಾದ್ಧವನ್ನು ಅಕ್ಕಿಹಿಟ್ಟು ಮುಂತಾದ ಅಪಕ್ವವಸ್ತುಗಳಿಂದ ಮಾಡಬೇಕು. ಪಕ್ವಾನ್ನದಿಂದ ಮಾಡಬಾರದು. ಇದು ಆಮಶ್ರಾದ್ಧವೆನಿಸುತ್ತದೆ. ಅಥವಾ ಸುವರ್ಣದಿಂದ ಮಾಡಬೇಕು. ಅಂದರೆ ಶಕ್ತ್ಯನುಸಾರವಾಗಿ ದಕ್ಷಿಣೆ ಕೊಡಬೇಕು. ಇದು ಹೇಮಶ್ರಾದ್ಧವೆನಿಸುತ್ತದೆ. ಗ್ರಹಣವು ಆರಂಭವಾದ ಮೇಲೆ ಮೋಕ್ಷದವರೆಗೆ ಕ್ರಮವಾಗಿ ಸ್ನಾನ, ಜಪ, ಹೋಮ, ದಾನ, ಸ್ನಾನ ಇವುಗಳನ್ನು ಮಾಡಬೇಕು. ಈ ದಾನಗಳನ್ನು ಯೋಗ್ಯಬ್ರಾಹ್ಮಣನಿಗೆ ಕೊಡಬೇಕು. ಅವನು ಸಿಗದಿದ್ದರೆ ಆಗ ಸಿಕ್ಕಿದ ಬ್ರಾಹ್ಮಣನಿಗೆ ಕೊಡಬೇಕು.

ಚಂದ್ರ ಅಥವಾ ಸೂರ್ಯನು ಮೇಘಾದಿಗಳಿಂದ ಮುಚ್ಚಲ್ಪಟ್ಟು ಮೋಕ್ಷಕಾಲದಲ್ಲಿ ಕಾಣಿಸದಿದ್ದರೆ ಶಾಸ್ತ್ರದಿಂದ ಮೋಕ್ಷ ಕಾಲವನ್ನು ತಿಳಿದು ಆ ಕಾಲದಲ್ಲಿ ಸ್ನಾನವನ್ನು ಮಾಡಿದರೆ ಶುದ್ಧಿಯು ಏರ್ಪಡುತ್ತದೆ. ಗ್ರಸ್ತಾಸ್ತ ಗ್ರಹಣವಿದ್ದಾಗ ಗ್ರಸ್ತಾಸ್ತವಾಗುವ ಊರುಗಳಲ್ಲಿ ಚಂದ್ರ ಅಥವಾ ಸೂರ್ಯನು ಪಾಡ್ಯದಿನದಲ್ಲಿ ಚಂದ್ರೋದಯವಾದ ಮೇಲೆ ಚಂದ್ರನು ಮೇಘಗಳಿಂದ ಮುಚ್ಚಲ್ಪಟ್ಟು ಕಾಣಿಸದಿದ್ದರೆ ಶಾಸ್ತ್ರದಿಂದ ತಿಳಿದಿರುವ ಚಂದ್ರ ಅಥವಾ ಸೂರ್ಯೋದಯ ಕಾಲದಲ್ಲಿ ಸ್ನಾನ ಮಾಡಿದರೆ ಶುದ್ಧಿಯಾಗುತ್ತದೆ.

ಹಗಲಿನಲ್ಲಿ ಭೋಜನವಿಲ್ಲ

ಸರ್ವಗ್ರಾಸೋ ಭವೇಂದಿಂದೋರರ್ಧರಾತ್ರಾದಧಸ್ತನಃ ।
ತದಹರ್ನೈವ ಭೋಕ್ತವ್ಯಂ ಮುಕ್ತಂ ದೃಷ್ಟ್ವಾತತಶ್ಚರೇತ್ ॥

—ದಕ್ಷವಚನ

ಅರ್ಧರಾತ್ರಿಗಿಂತ ಪೂರ್ವದಲ್ಲಿ ಚಂದ್ರನಿಗೆ ಪೂರ್ಣಗ್ರಹಣವು ಏರ್ಪಟ್ಟರೆ ಅಂದು ಹಗಲಿನಲ್ಲಿ ಊಟ ಮಾಡಬಾರದು. ಗ್ರಹಣ ಮೋಕ್ಷವಾದ ಮೇಲೆ ಚಂದ್ರನನ್ನು ನೋಡಿ ಭೋಜನ ಮಾಡಬೇಕು.

ರಾತ್ರಿಯಲ್ಲಿ ಭೋಜನಕಾಲ

ದಶಸಪ್ತಘಟೀ ಯಾವದ್ರಾತ್ರೌ ಭೋಜನಮಿಷ್ಯತೇ ।
ಸ್ಥಾಲೀಪಾಕೇ ವಿವಾಹೇ ಚ ಗ್ರಹಣೇ ಚಾಷ್ಟಮೀವ್ರತೇ ॥

–ಅನಂತಸಂಹಿತಾ

"ಸ್ಥಾಲೀಪಾಕ ವಿವಾಹ ಗ್ರಹಣ ಕೃಷ್ಣಾಷ್ಟಮೀವ್ರತ ಈ ನಾಲ್ಕರಲ್ಲಿ ಸೂರ್ಯಾಸ್ತವಾದಮೇಲೆ 17 ಘಳಿಗೆಗಳ ವರೆಗೆ ಗ್ರಹಣ ಮುಂತಾದ ನಾಲ್ಕು ಸಂದರ್ಭಗಳಲ್ಲಿ ಭೋಜನ ಕಾಲವೆಂದು ಈ ಪ್ರಮಾಣವಚನದಲ್ಲಿ ಹೇಳಲ್ಪಟ್ಟಿದೆ.

ಗ್ರಹಣದ ದಿವಸ ಪೂರ್ಣಿಮಾಶ್ರಾದ್ಧವನ್ನು ಎಂದು ಮಾಡಬೇಕು?

ಏವಂ ಶ್ರಾದ್ಧಾದಿಕರ್ಮಾಪಿ ತದೈವ ಕರ್ತವ್ಯಮಿತಿ ಸಿದ್ಧಮ್

–ಸ್ಮೃತಿಮುಕ್ತಾವಲೀ

ಗ್ರಹಣದಿನದಲ್ಲಿ ರಾತ್ರಿಯಲ್ಲಿ ಭೋಜನಕಾಲವು ಹಿಂದೆ ಉದಾಹರಿಸಿದ ಅನಂತಸಂಹಿತೆಯಲ್ಲಿ ಹೇಳಲ್ಪಟ್ಟಿತು. ರಾತ್ರಿಯಲ್ಲಿ ಭೋಜನಕಾಲವು ಇದ್ದಮೇಲೆ ಆ ಕಾಲದಲ್ಲಿ ಭೋಜನವನ್ನು ಮಾಡುತ್ತಿರುವಂತೆ ಶ್ರಾದ್ಧ ಮುಂತಾದ ನೈಮಿತ್ತಿಕಕರ್ಮಗಳನ್ನೂ ಮಾಡಬೇಕೆಂದು ಸಿದ್ಧವಾಯಿತು.

ಗ್ರಹಣಾದಿವತ್ ದ್ವಾದಶೀವಚ್ಚ ಕುತಪಾದ್ಯನಪೇಕ್ಷಣಾ ಯದಾ ಪಾರಣಪ್ರಸಕ್ತಿಃ ತದೈವ ಶ್ರಾದ್ಧಾದಿಕಮಪಿ ಕರ್ತವ್ಯಮಿತಿ ಸಿದ್ಧಮ್

–ಸ್ಮೃತಿ ಮುಕ್ತಾವಲೀ

ಗ್ರಹಣ ಮುಂತಾದ ಸಂದರ್ಭಗಳಲ್ಲಿಯೂ ದ್ವಾದಶೀದಿನದಲ್ಲಿಯೂ ಕುತಪ ಮುಂತಾದ ಶ್ರಾದ್ಧ ಮುಖ್ಯಕಾಲವನ್ನು ಅಪೇಕ್ಷಿಸುವುದಿಲ್ಲ. ಪಾರಣಕಾಲವು ಶಾಸ್ತ್ರದಿಂದ ಯಾವಾಗ ಸಿದ್ಧವಾಗುವುದೋ ಆಗ ಶ್ರಾದ್ಧವನ್ನು ಮಾಡುವುದು ಶಾಸ್ತ್ರಸಿದ್ಧವಾಗಿದೆ. ಅದರಂತೆ ಕೃಷ್ಣಜನ್ಮಾಷ್ಟಮಿಯಲ್ಲಿಯೂ ಸೂರ್ಯಾಸ್ತಾನಂತರದಲ್ಲಿ 17 ಘಳಿಗೆಗಳ ವರೆಗೆ ಪಾರಣಕಾಲವು ಶಾಸ್ತ್ರಸಿದ್ಧವಾಗಿರುವುದರಿಂದ ಆ ಪಾರಣಕಾಲದಲ್ಲಿಯೇ ಶ್ರಾದ್ಧ ಮುಂತಾದವುಗಳನ್ನು ಮಾಡಬೇಕು.

ಈ ಎರಡು ವಾಕ್ಯಗಳಲ್ಲಿ ಮೊದಲನೆಯ ವಾಕ್ಯದಲ್ಲಿ ಗ್ರಹಣದಲ್ಲಿ ಸೂರ್ಯಾಸ್ತವಾದ ನಂತರದಲ್ಲಿ 17 ಘಳಿಗೆಗಳವರೆಗೆ ಶ್ರಾದ್ಧಕಾಲವೆಂದು ತೀರ್ಮಾನಿಸಿರುವರು. ಎರಡನೆಯ ವಾಕ್ಯದಲ್ಲಿ ಆ ತೀರ್ಮಾನವನ್ನು ಉದಾಹರಣವಾಗಿಟ್ಟುಕೊಂಡು ಕೃಷ್ಣಜನ್ಮಾಷ್ಟಮಿಯಲ್ಲಿಯೂ ಸೂರ್ಯಾಸ್ತವಾದ

ನಂತರದಲ್ಲಿ 17 ಘಳಿಗೆಗಳ ವರೆಗೆ ಶ್ರಾದ್ಧಕಾಲವೆಂದು ತೀರ್ಮಾನಿಸಿರುವರು. ಗ್ರಹಣಶ್ರಾದ್ಧವನ್ನು ದೃಷ್ಟಾಂತವಾಗಿ ಈ ಎರಡನೆಯ ವಾಕ್ಯದಲ್ಲಿ ಉದಾಹರಿಸಿರುವುದರಿಂದ ಗ್ರಹಣಶ್ರಾದ್ಧವನ್ನು ರಾತ್ರಿ 17 ಘಳಿಗೆಗಳ ವರೆಗೆ ಮಾಡುವ ವಿಷಯದಲ್ಲಿ ಸಂದೇಹವೇ ಇಲ್ಲ ಎಂದು ಹೇಳಿದಂತಾಯಿತು. ಸಂದಿಗ್ಧವಿಷಯವನ್ನು ಯಾರಾದರೂ ದೃಷ್ಟಾಂತವಾಗಿ ಕೊಡುವರೇ?

ಗ್ರಹಣ ಬಿಟ್ಟಕೂಡಲೇ ಸ್ನಾನಮಾಡಿ ಸಂಕ್ಷೇಪವಾಗಿ ಎಲ್ಲಾ ಕಾರ್ಯಗಳನ್ನೂ ಮುಗಿಸಿ ಶ್ರಾದ್ಧವನ್ನೂ ಮಾಡಿ ಭೋಜನಕಾಲದೊಳಗೆ ಪಾರಣವನ್ನು ಮಾಡಬೇಕು. ಸಾಧನದ್ವಾದಶೀದಿನದಲ್ಲಿ 56 ಘಳಿಗೆಗೆ ಸರಿಯಾಗಿ ಸ್ನಾನ ಮಾಡಿ ಸೂರ್ಯೋದಯಕಾಲಕ್ಕೆ ಸರಿಯಾಗಿ ಪಾರಣಮಾಡುವುದಿಲ್ಲವೆ? ಆಗ ನಾಲ್ಕೇ ಘಳಿಗೆಗಳಲ್ಲಿ ಎಲ್ಲಾ ಕಾರ್ಯಗಳನ್ನೂ ಮಾಡುವುದಿಲ್ಲವೇ ? ಅದರಂತೆ ಎಲ್ಲಾ ಕಾರ್ಯಗಳನ್ನೂ ಮುಗಿಸುವುದು ಶ್ರದ್ಧೆಯಿದ್ದವರಿಗೆ ಅಶಕ್ಯವಲ್ಲ.

ಸ್ಮೃತಿಮುಕ್ತಾವಲೀಕಾರರಿಂದ ಎರಡನೆಯ ವಾಕ್ಯದಲ್ಲಿ "ಗ್ರಹಣಾದಿವತ್ ದ್ವಾದಶೀವತ್" ಎಂದು ಸಾಧನದ್ವಾದಶಿಗೆ ಸಮಾನವಾಗಿ ಗ್ರಹಣವು ಹೇಳಲ್ಪಟ್ಟಿದೆ. ಆದ್ದರಿಂದ "ಸಾಧನದ್ವಾದಶೀದಿನದಲ್ಲಿ ಪಾರಣಕಾಲದಲ್ಲಿಯೋ ಶ್ರಾದ್ಧವನ್ನು ಮುಗಿಸುವಂತೆ ಗ್ರಹಣದಿನದಲ್ಲಿ ರಾತ್ರಿಯಲ್ಲಿ ಭೋಜನ ಕಾಲದಲ್ಲಿಯೋ ಶ್ರಾದ್ಧವನ್ನು ಮಾಡಬೇಕು. ಮರುದಿನದಲ್ಲಿ ಮಾಡಬಾರದು. ಅಂದು ಭೋಜನಕಾಲವನ್ನು ಮೀರಲೂಬಾರದು" ಎಂದು ದೃಢಪಡಿಸಿರುವರು.

ಚಾತುರ್ಮಾಸ್ಯ ವ್ರತಸಂಕಲ್ಪ ಮತ್ತು ವಿಷ್ಣುಶಯನೋತ್ಸವ

ಆಷಾಢ ಶುಕ್ಲಪಕ್ಷ ಏಕಾದಶೀದಿನದಲ್ಲಿ ಗುರುಗಳಿಂದ ತಪ್ತಮುದ್ರಾಧಾರಣ ಮಾಡಿಸಿಕೊಂಡು ದೇವರಿಗೆ ವಿಶೇಷಪೂಜೆಯನ್ನು ಮಾಡಬೇಕು.

ಸುಪ್ತೇ ತ್ವಯಿ ಜಗನ್ನಾಥೇ ಜಗತ್ಸುಪ್ತಂ ಭವೇದಿದಮ್ ।
ವಿಬುದ್ಧೇ ತ್ವಯಿ ಬುದ್ಧ್ಯೇತ ತತ್ಸರ್ವಂ ಸಚರಾಚರಮ್ ॥

ಎಂಬ ಮಂತ್ರದಿಂದ ಪ್ರಾರ್ಥಿಸಿ, ಕೈಜೋಡಿಸಿ ಕೊಂಡು

ಚತುರೋ ವಾರ್ಷಿಕಾನ್ಮಾಸಾನ್ ದೇವಸ್ಯೋತ್ಥಾಪನಾವಧಿ ।
ಶ್ರಾವಣೇ ವರ್ಜಯೇಚ್ಛಾಕಂ ದಧಿ ಭಾದ್ರಪದೇ ತಥಾ ॥
ದುಗ್ಧಮಾಶ್ವಯುಜೇ ಮಾಸಿ ಕಾರ್ತಿಕೇ ದ್ವಿದಲಂ ತಥಾ ।
ಇಮಂ ಕರಿಷ್ಯೇ ನಿಯಮಂ ನಿರ್ವಿಘ್ನಂ ಕುರು ಮೇಽಚ್ಯುತ ॥
ಇದಂ ವ್ರತಂ ಮಯಾ ದೇವ ಗೃಹೀತಂ ಪುರತಸ್ತವ ।
ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ ತೇ ರಮಾಪತೇ ॥

ಗೃಹೀತೇಽಸ್ಮಿನ್ ವ್ರತೇ ದೇವ ಪಂಚತ್ವಂ ಯದಿ ಮೇ ಭವೇತ್ ।
ತದಾ ಭವತು ಸಂಪೂರ್ಣಂ ಪ್ರಸಾದಾತ್ ತೇ ಜನಾರ್ದನ ॥

ಎಂಬ ಮಂತ್ರವನ್ನು ಪಠಿಸುತ್ತಾ ಶಂಖದಿಂದ ದೇವರಿಗೆ ಅರ್ಘ್ಯವನ್ನು ಕೊಡಬೇಕು. ಹೀಗೆ ಚಾತುರ್ಮಾಸ್ಯ ವ್ರತಸಂಕಲ್ಪವನ್ನು ಮಾಡಿ, ಮಂಚದಲ್ಲಿ ವಿಷ್ಣುವಿನ ಪ್ರತಿಮೆಯನ್ನು ಮಲಗಿಸಿ ವಿಶೇಷಪೂಜೆಯನ್ನು ಮಾಡಿ,

ಸುಪ್ತೇ ತ್ವಯಿ ಜಗನ್ನಾಥೇ

ಎಂಬ ಹಿಂದೆ ಹೇಳಿದ ಮಂತ್ರದಿಂದ ಪ್ರಾರ್ಥಿಸಿ ರಾತ್ರಿಯಲ್ಲಿ ಜಾಗರಣೆ ಮಾಡಿ ದ್ವಾದಶೀದಿನದಲ್ಲಿ ಪುನಃ ಪೂಜಿಸಿ ಪಾರಣೆ ಮಾಡಿ ತ್ರಯೋದಶೀದಿನದಲ್ಲಿ ವಾದ್ಯಾದಿಗಳಿಂದ ಸೇವಿಸಬೇಕು. ಈ ತ್ರಿದಿನಾತ್ಮಕವಾದ ಉತ್ಸವವು ವಿಷ್ಣುಶಯನೋತ್ಸವವೆನಿಸುತ್ತದೆ.

ಶಾಕವ್ರತ

ಆಷಾಢ ಶುದ್ಧದ್ವಾದಶಿಯಿಂದ ಶ್ರಾವಣ ಶುದ್ಧ ದಶಮೀವರೆಗೆ ಶಾಕವ್ರತ (ತರಕಾರಿಯನ್ನು ಸ್ವೀಕರಿಸದೆ ಇರುವುದು)ವನ್ನು ಮಾಡಬೇಕು.

ಆಷಾಢ ಶು. ಪೂರ್ಣಿಮಾ

ಈ ದಿನದಲ್ಲಿ ಯತಿಗಳು ವ್ಯಾಸಪೂಜಾ ಮಾಡಿ ಕ್ಷೌರವನ್ನು ಮಾಡಿಸಿಕೊಂಡು ಈ ದಿನದಲ್ಲಾಗಲೀ, ಶ್ರೀಮಠದ ಸಂಪ್ರದಾಯಪ್ರಾಪ್ತವಾದ ದಿನಾಂತರದಲ್ಲಾಗಲೀ ಚಾತುರ್ಮಾಸ್ಯಸಂಕಲ್ಪವನ್ನು ಮಾಡಬೇಕು. ಆಗ ವೇದವ್ಯಾಸದೇವರ ಮತ್ತು ಭಾಷ್ಯಕಾರಾದಿಗಳ ಪೂಜೆಯನ್ನು ಮಾಡಿ ಮಹಾಜನಗಳ ಮಧ್ಯದಲ್ಲಿ

ಅಹಂ ತಾವನ್ನಿವತ್ಸ್ಯಾಮಿ ಸರ್ವಭೂತಹಿತಾಯ ವೈ ।
ಪ್ರಾಯೇಣ ಪ್ರಾವೃಷಿ ಪ್ರಾಣಿಸಂಕುಲಂ ವರ್ತ್ಮ ದೃಶ್ಯತೇ ॥
ಅತಸ್ತೇಷಾಮಹಿಂಸಾರ್ಥಂ ಪಕ್ಷಾನ್ವೈ ಶ್ರುತಿಸಂಶ್ರಯಾನ್ ।
ಸ್ಥಾಸ್ಯಾಮಶ್ಚತುರೋ ಮಾಸಾನತ್ರೈವಾಸತಿ ಬಾಧಕೇ ॥

ಎಂದು ಹೇಳಬೇಕು. ಆಗ ಗ್ರಹಸ್ಥರು–

ನಿವಸಂತು ಸುಖೇನಾತ್ರ ಗಮಿಷ್ಯಾಮಃ ಕೃತಾರ್ಥತಾಂ ।
ಯಥಾಶಕ್ತಿ ಚ ಶುಶ್ರೂಷಾಂ ಕರಿಷ್ಯಾಮೋ ವಯಂ ಮುದಾ ॥

ಎಂದು ಪ್ರಾರ್ಥಿಸಬೇಕು.

ಅಶೂನ್ಯಶಯನವ್ರತ

ಈದಿನ ಚಂದ್ರೋದಯಕಾಲದಲ್ಲಿ ಲಕ್ಷ್ಮೀನಾರಾಯಣನ ಪ್ರತಿಮೆಯನ್ನು ಹಾಸಿಗೆಯಲ್ಲಿಟ್ಟು ಪೂಜಿಸಿ–

ಪತ್ನೀ ಭರ್ತುರ್ವಿಯೋಗಂ ಚ ಭರ್ತ್ರಾ ಭಾರ್ಯಾಸಮುದ್ಭವಮ್ ।
ನಾಪ್ನುವಂತಿ ಯಥಾ ದುಃಖಂ ದಾಂಪತ್ಯಾನಿ ತಥಾ ಕುರು ॥

ಎಂಬ ಮಂತ್ರದಿಂದ ಪ್ರಾರ್ಥಿಸಿ ಚಂದ್ರನಿಗೆ ಅರ್ಘ್ಯವನ್ನು ಕೊಟ್ಟು ರಾತ್ರಿಯಲ್ಲಿ ಭೋಜನವನ್ನು ಮಾಡಬೇಕು. ಈ ದಿನ ಆರಂಭಿಸಿ ಮುಂದೆ ಶ್ರಾವಣ, ಭಾದ್ರಪದ, ಅಶ್ವಿನ ಮಾಸಗಳ ಕೃಷ್ಣಪಕ್ಷದ್ವಿತಿಯಾದಿನಗಳಲ್ಲಿ ಹೀಗೆಯೇ ಪೂಜಿಸಿ ಕೊನೆಗೆ ಪ್ರತಿಮೆಯನ್ನು ಹಾಸಿಗೆಯೊಡನೆ ಬ್ರಾಹ್ಮಣರಿಗೆ ದಾನಮಾಡಬೇಕು. ಇದರಿಂದ ದಾಂಪತ್ಯಸುಖವು ಏಳುಜನ್ಮಗಳ ವರೆಗೆ ಅಖಂಡವಾಗಿರುತ್ತದೆ.

ದಕ್ಷಿಣಾಯನ ಪರ್ವಕಾಲ

ಈ ದಿನದಲ್ಲಿ ಏಕಾದಶಿಯಾರೆ ತರ್ಪಣವನ್ನು ಕೊಡಬಾರದು, ತರ್ಪಣಕ್ಕೆ ಪ್ರತಿನಿಧಿಯಾಗಿ ಪವಮಾನಸೂಕ್ತ ಪಾರಾಯಣ ಅಥವಾ ಆಯಾ ಶಾಖೆಯಲ್ಲಿ ಹೇಳಿರುವ ವೈಶ್ವದೇವ ಸೂಕ್ತಪಾರಾಯಣವನ್ನು ಮಾಡಬೇಕು.

ದಿನ ಆರಂಭವಾಗುವ ದಕ್ಷಿಣಾಯಣದಲ್ಲಿ ಭೈರವ ದುರ್ಗ ನರಸಿಂಹ ವರಾಹ ತ್ರಿವಿಕ್ರಮ ಮುಂತಾದ ಉಗ್ರದೇವತೆಗಳ ಪ್ರತಿಷ್ಠೆಯನ್ನು ಮಾಡಬಹುದು. ಗೃಹಪ್ರವೇಶ ಸೌಮ್ಯದೇವತಾಪ್ರತಿಷ್ಠಾ, ವಿವಾಹ, ಉಪನಯನ, ಚೌಲ ಮುಂತಾದ ಶುಭಕಾರ್ಯಗಳನ್ನು ಮಾಡಬಾರದು. ಈ ದಿನದಲ್ಲಿ ಘೃತಧೇನುದಾನ ಮುಂತಾದ ದಾನಗಳನ್ನು ಯಥಾಶಕ್ತಿ ಮಾಡಬೇಕು. ಪಿತೃಗಳಿಗೆ ತಿಲತರ್ಪಣವನ್ನು ಮಾಡಬೇಕು.

ಶ್ರಾವಣಮಾಸದ ವಿಶೇಷಧರ್ಮಗಳು

ಈ ತಿಂಗಳಿನಲ್ಲಿ ಆಕಳು ಕರು ಹಾಕಿದರೆ ಯಜಮಾನನಿಗೆ ಮೃತ್ಯು. ತತ್ಪರಿಹಾರಾರ್ಥವಾಗಿ 10,000 (ಸಾಸ್ವಿ) ಸರ್ಷಪ ಹೋಮವನ್ನು ಮಾಡಿ ಆಕಳನ್ನು ಬ್ರಾಹ್ಮಣರಿಗೆ ದಾನ ಮಾಡಬೇಕು. ಹಗಲಿನಲ್ಲಿ ಕುದುರೆಯು ಕರು ಹಾಕಿದರೆ ರಾತ್ರಿ ಆಕಳು ರೋದನ ಮಾಡಿದರೆ ಯಜಮಾನನಿಗೆ ಮೃತ್ಯು. ಇದಕ್ಕಾಗಿ ಮೃತ್ಯುಂಜಯ ಹೋಮಾದಿಗಳನ್ನು ಮಾಡಬೇಕು.

ಶ್ರಾವಣಶುಕ್ಲ ದ್ವಾದಶೀ

ಈ ದಿನದಲ್ಲಿ ಶಾಕವ್ರತಸಂಪೂರ್ಣಫಲಕ್ಕಾಗಿ–

ಉಪಾಯನಮಿದಂ ದೇವ ವ್ರತಸಂಪೂರ್ತಿಹೇತವೇ ।
ಶಾಕಂ ತು ದ್ವಿಜವರ್ಯಾಯ ಸಹಿರಣ್ಯಂ ದದಾಮ್ಯಹಮ್ ॥

ಎಂಬ ಮಂತ್ರದಿಂದ ಶಾಕದಾನವನ್ನು ಮಾಡಬೇಕು.

ದಧಿವ್ರತ

ದಧಿ ಭಾದ್ರಪದೇ ಮಾಸೇ ವರ್ಜಯಿಷ್ಯೇ ಸದಾ ಹರೇ ।
ಇಮಂ ಕರಿಷ್ಯೇ ನಿಯಮಂ ನಿರ್ವಿಘ್ನಂ ಕುರು ಕೇಶವ ॥

ಎಂಬ ಮಂತ್ರದಿಂದ ದಧಿವ್ರತದ ಸಂಕಲ್ಪವನ್ನು ಮಾಡಬೇಕು. ಇಂದಿನಿಂದ ಒಂದು ತಿಂಗಳು ಮೊಸರನ್ನು ಬಿಡಬೇಕು. ಮಜ್ಜಿಗೆಗೆ ದೋಷವಿಲ್ಲ.

ಉಪಾಕರ್ಮನಿರ್ಣಯ

(ಚಾಂದ್ರಮಾನದವರಿಗೆ)

1) ಪೂರ್ಣಿಮಾ ತೂಪಾಕರಣೇ ಉದಯ ವ್ಯಾಪಿನೀ ಗ್ರಾಹ್ಯಾ
"ಉದಯವ್ಯಾಪಿಯಾದ ಹುಣ್ಣಿಮೆಯು ಉಪಾಕರ್ಮಕ್ಕೆ ಗ್ರಾಹ್ಯ"

(ಇದು ಶ್ರೀವಿಜಯೀಂದ್ರತೀರ್ಥರ ತಮ್ಮನ ಮೊಮ್ಮಕ್ಕಳಾದ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರ ಪೂರ್ವಾಶ್ರಮದ ಅಳಿಯಂದಿರೂ ವಿದ್ಯಾಶಿಷ್ಯರೂ ಆಗಿರುವ ಶ್ರೀಕೃಷ್ಣಾಚಾರ್ಯರು ತಮ್ಮಿಂದ ರಚಿತವಾದ ಸ್ಮೃತಿಮುಕ್ತಾವಲೀಗ್ರಂಥದಲ್ಲಿ ಮಾಡಿರುವ ಪ್ರತಿಜ್ಞೆ.)

2) ತದಾಹ ಗಾರ್ಗ್ಯ:- ನಾನು ಮಾಡಿರುವ ಈ ಪ್ರತಿಜ್ಞೆಯು ಗಾರ್ಗ್ಯರ ವಚನದಿಂದ ಸಮರ್ಥಿಸಲ್ಪಡುತ್ತದೆ.

ಪರ್ವಣ್ಯೌದಯಿಕೇ ಕುರ್ಯುಃ ಶ್ರಾವಣಂ ತೈತ್ತಿರೀಯಕಾಃ ।

3) ಬಹ್ವೃಚಾಃ ಶ್ರವಣೇ ಕುರ್ಯುರ್ಹಸ್ತರ್ಕ್ಷೇ ಸಾಮವೇದಿನಃ॥ ಇತಿ

ತೈತ್ತಿರೀಯರು ಎಂದು ಪ್ರಸಿದ್ಧರಾದ ಯಜುರ್ವೇದಿಗಳು ಔದಯಿಕ ಅಂದರೆ ಉದಯವ್ಯಾಪಿಯದ ಹುಣ್ಣಿಮೆಯಲ್ಲಿಯೂ ಋಗ್ವೇದಿಗಳು ಶ್ರವಣಾನಕ್ಷತ್ರದಲ್ಲಿಯೂ ಸಾಮವೇದಿಗಳು ಹಸ್ತಾನಕ್ಷತ್ರದಲ್ಲಿಯೂ ಉಪಾಕರ್ಮವನ್ನು ಮಾಡಬೇಕು.

4) ಔದಯಿಕಮಪಿ ತದೇವ ಗ್ರಾಹ್ಯಮಿತಿ ತೇನೈವೋಕ್ತಮ್.

ಮೇಲ್ಕಂಡ ಶ್ಲೋಕದಲ್ಲಿ ಹುಣ್ಣಿಮೆಯು ಔದಯಿಕವಾಗಿರಬೇಕೆಂದು ಗಾರ್ಗ್ಯರಿಂದ ಹೇಳಲ್ಪಟ್ಟಿದೆ. ಆ ಪದಕ್ಕೆ ಪ್ರಕೃತದಲ್ಲಿ ಹೇಳಬೇಕಾದ ಅರ್ಥವನ್ನು ಅದೇ ಗಾರ್ಗ್ಯರೇ ಕೆಳಗಿನ ಶ್ಲೋಕದಿಂದ ತಿಳಿಸಿರುವರು.

5) ಶ್ರಾವಣೀ ಪೌರ್ಣಮಾಸೀ ತು ಸಂಗವಾತ್ಪರತೋ ಯದಿ
ತದೈವೌದಯಿಕೀ ಗ್ರಾಹ್ಯಾ ನಾನ್ಯದೌದಯಿಕೀ ಸ್ಮೃತಾ ॥ ಇತಿ

ಶ್ರಾವಣಹುಣ್ಣಿಮೆಯು ಸಂಗವಕಾಲಕ್ಕಿಂತ ಅಧಿಕವಾಗಿದ್ದಾಗಲೇ ಉದಯವ್ಯಾಪಿ ಎಂದು ಹೇಳಲ್ಪಡುತ್ತದೆ. ಹಾಗಿಲ್ಲದಿರುವಾಗ ಇಲ್ಲ.

(ಮಠದ ಪಂಚಾಂಗದಲ್ಲಿ ಒಂದೊಂದು ಹಗಲಿನ ಪ್ರಮಾಣವು ಕೊಡಲ್ಪಟ್ಟಿದೆ. ಆ ಪ್ರಮಾಣವನ್ನು ಸಮವಾಗಿ ಐದು ವಿಭಾಗ ಮಾಡಬೇಕು. ಆ ಐದು ಭಾಗಗಳಿಗೆ

ಸೂರ್ಯೋದಯಕಾಲದಿಂದ ಆರಂಭಿಸಿ ಕ್ರಮವಾಗಿ– 1) ಪ್ರಾತಃಕಾಲ 2) ಸಂಗವಕಾಲ 3) ಮಧ್ಯಾಹ್ನಕಾಲ 4) ಅಪರಾಹ್ಣಕಾಲ 5) ಸಾಯಂಕಾಲ ಎಂದು ಹೆಸರು. ಶ್ರಾವಣ ಹುಣ್ಣಿಮೆಯು ಸೂರ್ಯೋದಯಕಾಲದಲ್ಲಿದ್ದರೂ ಸೂರ್ಯೋದಯಕಾಲಾನಂತರದಲ್ಲಿ ಪ್ರಾತಃಕಾಲ ಮತ್ತು ಸಂಗವಕಾಲವು ಮುಗಿಯುವವರೆಗೆ ಇದ್ದರೂ ಉಪಾಕರ್ಮ ವಿಷಯದಲ್ಲಿ ಉದಯವ್ಯಾಪಿಯೆನಿಸುವುದಿಲ್ಲ. ಸಂಗವಕಾಲ ಮುಗಿದ ಮೇಲೆ ಇದ್ದರೆ ಮಾತ್ರ ಉದಯವ್ಯಾಪಿ ಎನಿಸುತ್ತದೆ. ಇದು ಗಾರ್ಗ್ಯರ ವಚನದ ಸಾರಾಂಶ.)

6) ಬೃಹಸ್ಪತಿರಪಿ

ಹಸ್ತಶ್ರವಣಪರ್ವಾಣಿ ಗ್ರಾಹ್ಯಾಣ್ಯೌದಯಿಕಾನಿ ತು ।
ಹಸ್ತರ್ಕ್ಷಃ ಸಂಗವಸ್ಪರ್ಶೀ ತ್ರಿಮುಹೂರ್ತಾ ತು ವೈಷ್ಣವೀ ।
ಸಂಗವಾತ್ಪರತಃ ಸಾ ಚೇತ್ಪೂರ್ಣಿಮೌದಯಿಕೀ ಸ್ಮೃತಾ ॥

ಬೃಹಸ್ಪತ್ಯಾಚಾರ್ಯರೂ ಸಹ ಮೇಲ್ಕಂಡ ವಚನವನ್ನೇ ದೃಢಪಡಿಸಿರುವರು. ಹಸ್ತನಕ್ಷತ್ರ ಶ್ರವಣ ಮತ್ತು ಹುಣ್ಣಿಮೆಗಳು ಉದಯವ್ಯಾಪಿಯಾಗಿರಬೇಕು. ಈ ಉದಯವ್ಯಾಪ್ತಿಯು ಒಂದೊಂದಕ್ಕೆ ಒಂದೊಂದು ವಿಧವಾಗಿರುತ್ತದೆ. 1) ಹಸ್ತನಕ್ಷತ್ರವು ಪ್ರಾತಃಕಾಲ ಮುಗಿದ ಮೇಲೆ ಇರಬೇಕು. ಪ್ರಾತಃಕಾಲವು ಮುಗಿಯುವಷ್ಟೆ ಆಗಲೀ ಅದಕ್ಕಿಂತ ಕಡಿಮೆಯಾಗಲೀ ಇರಬಾರದು. 2) ಶ್ರವಣನಕ್ಷತ್ರವು ಪ್ರಾತಃಕಾಲ ಮುಗಿಯುವವರೆಗೆ ಇರಬೇಕು. ಅದಕ್ಕಿಂತ ಕಡಿಮೆ ಇರಬಾರದು. 3) ಶ್ರಾವಣ ಹುಣ್ಣಿಮೆಯು ಸಂಗವ ಕಾಲಕ್ಕಿಂತ ಅಧಿಕವಾಗಿರಬೇಕು. ಸಂಗವಕಾಲವು ಮುಗಿಯುವ ವರೆಗಾಗಲೀ ಅದಕ್ಕಿಂತ ಕಡಿಮೆ ಆಗಲೀ ಇರಬಾರದು. ಹೀಗಿರುವಾಗಲೇ ಹಸ್ತಾ ಶ್ರವಣಾ ಮತ್ತು ಶ್ರಾವಣಹುಣ್ಣಿಮೆಗಳು ಔದಯಿಕವೆನಿಸುತ್ತವೆ. ಅವುಗಳೇ ಉಪಾಕರ್ಮಕ್ಕೆ ಗ್ರಾಹ್ಯ ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಾ ಬೃಹಸ್ಪತ್ಯಾಚಾರ್ಯರೂ ಸಹ ಗಾರ್ಗ್ಯರ ಅಭಿಪ್ರಾಯವನ್ನೇ ದೃಢಪಡಿಸಿರುವರು.

1) ಶ್ರಾವಣ ಹುಣ್ಣಿಮೆಯು ಸಂಗವಕಾಲವು ಮುಗಿದ ಮೇಲೆ ಅಂದರೆ ಸುಮಾರು ಹನ್ನೆರಡು ಘಳಿಗೆಗಳಿಗಿಂತ ಅಧಿಕವಾಗಿರಬೇಕು. 2) ಹಸ್ತನಕ್ಷತ್ರವು ಪ್ರಾತಃಕಾಲ ಮುಗಿದಮೇಲೆ ಅಂದರೆ ಸುಮಾರು ಆರು ಗಳಿಗೆಗಳಿಗಿಂತ ಅಧಿಕವಾಗಿರಬೇಕು. 3) ಶ್ರವಣಾನಕ್ಷತ್ರವು ಪ್ರಾತಃಕಾಲ ಮುಗಿಯುವವರೆಗೆ ಅಂದರೆ ಸುಮಾರು ಆರು ಘಳಿಗೆಗಳ ವರೆಗೆ ಇರಬೇಕು. ಹೀಗಿದ್ದಾಗಲೇ ಈ ಹಸ್ತನಕ್ಷತ್ರ ಶ್ರವಣನಕ್ಷತ್ರ ಮತ್ತು ಶ್ರಾವಣ ಹುಣ್ಣಿಮೆಗಳು ಉದಯವ್ಯಾಪಿ ಎನಿಸುತ್ತವೆ. ಇದಕ್ಕಿಂತ ಕಡಿಮೆಯಾಗಿದ್ದರೆ ಉದಯಕಾಲದಲ್ಲಿದ್ದರೂ ಉದಯವ್ಯಾಪಿ ಎನಿಸುವುದಿಲ್ಲ. 4) ಇವುಗಳೆಲ್ಲವೂ ಉದಯವ್ಯಾಪಿಯಾಗಿರುವಾಗಲೇ ಆ ದಿನದಲ್ಲಿ ಉಪಾಕರ್ಮವನ್ನು ಮಾಡಬೇಕು. ಇಲ್ಲದಿದ್ದರೆ ಇಲ್ಲ. ಇದು ಮೇಲ್ಕಂಡ ನಿರ್ಣಯದ ಸಾರಾಂಶ.

7) ಉಪಾಕರಣೇ ಪ್ರೌಷ್ಠಪದ್ಯಪಿ ತಾದೃಶೀ ಗ್ರಾಹ್ಯಾ ।
ಆಷಾಢ್ಯಪ್ಯುದಯವ್ಯಾಪಿನೀ ಗ್ರಾಹ್ಯಾ ।

ಶ್ರಾವಣ ಹುಣ್ಣಿಮೆಯಲ್ಲಿ ಗ್ರಹಣ, ಸಂಕ್ರಾಂತಿ ಮುಂತಾದ ದೋಷವಿದ್ದಾಗ ಭಾದ್ರಪದ ಹುಣ್ಣಿಮೆಯಲ್ಲಿ ಉಪಾಕರ್ಮವನ್ನು ಮಾಡಬೇಕು. ಭಾದ್ರಪದ ಹುಣ್ಣಿಮೆಯಲ್ಲಿಯೂ ದೋಷವಿದ್ದಾಗ ಆಷಾಢ ಹುಣ್ಣಿಮೆಯಲ್ಲಿ ಉಪಾಕರ್ಮವನ್ನು ಮಾಡಬೇಕು. ಈ ವಿಷಯ ಶಾಸ್ತ್ರಾಂತರದಲ್ಲಿ ಹೇಳಲ್ಪಟ್ಟಿದೆ. ಈ ವಿಷಯವು ನಮಗೂ ಸಂಮತವಾಗಿದೆ. ಭಾದ್ರಪದ ಹುಣ್ಣಿಮೆ ಅಥವಾ ಆಷಾಢ ಹುಣ್ಣಿಮೆಗಳಲ್ಲಿ ಉಪಾಕರ್ಮ ಮಾಡುವ ಸಂಭವವು ಬಂದಾಗ ಶ್ರಾವಣ ಹುಣ್ಣಿಮೆಯಂತೆ ಆ ಎರಡು ಹುಣ್ಣಿಮೆಗಳೂ ಸಂಗವ ಕಾಲಕ್ಕಿಂತ ಅಧಿಕವಾಗಿರುವ ದಿನದಲ್ಲಿಯೇ ಉಪಾಕರ್ಮವನ್ನು ಮಾಡಬೇಕು.

8) ಪೂರ್ಣಿಮಾಯಾ ದಿನದ್ವಯವ್ಯಾಪಿತ್ವೇ (ಪರೇದ್ಯುರೇವೋದಯವ್ಯಾಪಿತ್ವೇ ವಾ) ಯದಾ ಪರೇದ್ಯುರ್ಮಧ್ಯಾಹ್ನಸ್ಪರ್ಶಿನೀ ಸಂಗವಸ್ಪರ್ಶಿನೀ ವಾ ಸಾ ಭವೇತ್ತದಾ ತತ್ರೈವ ಕಾರ್ಯಮ್. ಅನ್ಯಥಾ ಪೂರ್ವೇದ್ಯುಃ ।

1) ಹುಣ್ಣಿಮೆಯು ಎರಡು ದಿನಗಳಲ್ಲಿಯೂ ಸೂರ್ಯೋದಯಕಾಲದಲ್ಲಿದ್ದಾಗ ಮರುದಿನದಲ್ಲಿ ಪ್ರಾತಃಕಾಲ ಮುಗಿದ ಮೇಲೆ ಇದ್ದರೆ ಮರುದಿನದಲ್ಲಿಯೇ ಉಪಾಕರ್ಮವನ್ನು ಮಾಡಬೇಕು. ಅದಕ್ಕಿಂತ ಕಡಿಮೆ ಇದ್ದರೆ ಹಿಂದಿನ ದಿನದಲ್ಲಿಯೇ ಮಾಡಬೇಕು.2) ಒಂದೇ ದಿನದಲ್ಲಿ ಸೂರ್ಯೋದಯಕಾಲದಲ್ಲಿರುವ ಹುಣ್ಣಿಮೆಯು ಅಂದು ಪ್ರಾತಃಕಾಲಕ್ಕಿಂತ ಅಧಿಕವಾಗಿದ್ದರೆ ಅದೇ ದಿನದಲ್ಲಿಯೇ ಉಪಾಕರ್ಮವನ್ನು ಮಾಡಬೇಕು. ಅದಕ್ಕಿಂತ ಕಡಿಮೆಯಾಗಿದ್ದರೆ ಹಿಂದಿನ ದಿನದಲ್ಲಿಯೇ ಮಾಡಬೇಕು. ಇದು ಕೆಲವರ ಅಭಿಪ್ರಾಯ.

ಇದೇ ಸಂದರ್ಭದಲ್ಲಿ ಹುಣ್ಣಿಮೆಯು ಸಂಗವ ಕಾಲಕ್ಕಿಂತ ಅಧಿಕವಾಗಿದ್ದಾಗ ಆ ದಿನದಲ್ಲಿಯೇ ಮಾಡಬೇಕು. ಇಲ್ಲದಿದ್ದರೆ ಹಿಂದಿನ ದಿನದಲ್ಲಿಯೇ ಮಾಡಬೇಕು. ಇದು ಮತ್ತೆ ಕೆಲವರ ಅಭಿಪ್ರಾಯ ಈ ವಿಷಯದಲ್ಲಿ ನಿಗಮ ಎಂಬ ಪ್ರಮಾಣದ ವಾಕ್ಯವನ್ನು ಉದಾಹರಿಸಿದೆ.

ತದುಕ್ತಂ ನಿಗಮೇ:-

ಪರೇಽಹ್ನಿ ಸಂಗವಾದೂರ್ಧ್ವಂ ಪೂರ್ಣಿಮಾ ಶ್ರಾವಣವ್ರತೇ ।
ಸಂಗವಸ್ಪರ್ಶಿನೀ ವಾಽಪಿ ಹೀನಾ ಪೂರ್ವಾ ಶುಭಾವಹಾ ॥
ದಿನದ್ವಯಂ ಸಮಾಶ್ರಿತ್ಯ ಪೌರ್ಣಮಾಸೀ ಯದಾ ಸ್ಥಿತಾ ।
ಪರೇದ್ಯುಃ ಸಂಗವಂ ಪ್ರಾಪ್ಯ ಸ್ಥಿತಾ ಸಾ ಕರ್ಮಣೋಽರ್ಹತಿ ॥

1) ಮರುದಿನದಲ್ಲಿ ಸಂಗವಕಾಲಕ್ಕಿಂತ ಹುಣ್ಣಿಮೆಯು ಅಧಿಕವಾಗಿದ್ದಾಗ ಅಥವಾ ಪ್ರಾತಃಕಾಲಕ್ಕಿಂತ ಅಧಿಕವಾಗಿದ್ದಾಗ ಮರುದಿನದಲ್ಲಿಯೇ ಉಪಾಕರ್ಮವನ್ನು

ಮಾಡಬೇಕು. 2) ಎರಡು ದಿನಗಳಲ್ಲಿಯೂ ಹುಣ್ಣಿಮೆಯು ಸೂರ್ಯೋದಯಕಾಲದಲ್ಲಿದ್ದಾಗ ಮರುದಿನದಲ್ಲಿ ಪ್ರಾತಃಕಾಲಕ್ಕಿಂತ ಅಧಿಕವಾಗಿದ್ದರೆ ಮರುದಿನವೇ ಉಪಾಕರ್ಮಕ್ಕೆ ಅರ್ಹವಾಗುತ್ತದೆ.'' ಇದು ಮೇಲ್ಕಂಡ ಎರಡು ವಾಕ್ಯಗಳ ಅಭಿಪ್ರಾಯ.

ಇಲ್ಲಿ ಮೊದಲನೆಯ ವಾಕ್ಯದಲ್ಲಿ ''ಮರುದಿನ ಮಧ್ಯಾಹ್ನದ ವರೆಗೆ ಹುಣ್ಣಿಮೆಯು ಇದ್ದಾಗ ಮರುದಿನದಲ್ಲಿ ಉಪಾಕರ್ಮವನ್ನು ಮಾಡಬೇಕು'' ಎಂದು ಹೇಳಿದೆ. ಎರಡು ದಿನಗಳಲ್ಲಿಯೂ ಸೂರ್ಯೋದಯ ಕಾಲದಲ್ಲಿರುವ ತಿಥಿಯು ಮರುದಿನದಲ್ಲಿ ಮಧ್ಯಾಹ್ನ ಕಾಲದಲ್ಲಿರುವುದು ಸರ್ವಥಾ ಅಸಂಭಾವಿತವಾಗಿದೆ. ಆದ್ದರಿಂದ ಈ ವಾಕ್ಯದಲ್ಲಿ ಒಂದೇ ದಿನದಲ್ಲಿ ಹುಣ್ಣಿಮೆಯು ಸೂರ್ಯೋದಯಕಾಲದಲ್ಲಿದ್ದಾಗ ಉಪಾಕರ್ಮವನ್ನು ನಿರ್ಣಯಿಸುವುದಕ್ಕಾಗಿ ಹೊರಟಿದೆಯೆಂದು ಸ್ಪಷ್ಟವಾಗುತ್ತದೆ.

ಅದೇ ವಾಕ್ಯದಲ್ಲಿ ಹುಣ್ಣಿಮೆಯು ಪ್ರಾತಃಕಾಲಕ್ಕಿಂತ ಅಧಿಕವಾಗಿದ್ದಾಗ ಅಥವಾ ಸಂಗವಕಾಲಕ್ಕಿಂತ ಅಧಿಕವಾಗಿದ್ದಾಗ ಮರುದಿನದಲ್ಲಿ ಉಪಾಕರ್ಮವಾಗುತ್ತದೆ'' ಎಂದು ಹೇಳಲ್ಪಟ್ಟಿದೆ. ಇದು ಎರಡು ಮುನಿಗಳ ಬೇರೆ ಬೇರೆ ಮತವೆಂದು ಹೇಳಲೇಬೇಕು. ಇಲ್ಲದಿದ್ದರೆ ಸಂಗವಕಾಲಕ್ಕಿಂತ ಅಧಿಕವಾಗಿರುವ ತಿಥಿಯು ಪ್ರಾತಃಕಾಲಕ್ಕಿಂತ ಅಧಿಕವಾಗಿರುವುದು ಸ್ವತಃಸಿದ್ಧವಾಗಿರುವುದರಿಂದ ''ಸಂಗವಸ್ಪರ್ಶಿನೀ ವಾಽಪಿ'' ಎಂದು ಹೇಳಿದ ಮೇಲೆ ''ಸಂಗವಸ್ಪರ್ಶಿನೀ ವಾಪಿ'' ಎಂದು ಹೇಳಿದ್ದು ವ್ಯರ್ಥವಾಗುತ್ತದೆ. ಅದಕ್ಕಾಗಿ ಎರಡು ಮುನಿಗಳ ಮತವನ್ನು ಈ ವಾಕ್ಯವು ತಿಳಿಸುವುದಾಗಿ ಹಿಂದೆ ವ್ಯಾಖ್ಯಾನ ಮಾಡಲ್ಪಟ್ಟಿದೆ.

ಶ್ರಾವಣದಲ್ಲಿ ಉಪಾಕರ್ಮ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದಾಗ ಭಾದ್ರಪದದಲ್ಲಿಯೂ, ಅಲ್ಲಿಯೂ ಸಾಧ್ಯವಿಲ್ಲದಿದ್ದಾಗ ಆಷಾಢದಲ್ಲಿಯೂ ಉಪಾಕರ್ಮವನ್ನು ಮಾಡಬೇಕೆಂದು ಸ್ಮೃತಿಮುಕ್ತಾವಳೀಕಾರರೇ ಮೊದಲಾದ ಎಲ್ಲ ಧರ್ಮಶಾಸ್ತ್ರಕಾರರೂ ಹೇಳಿರುತ್ತಾರೆ. ಸ್ಮೃತಿಮುಕ್ತಾವಲೀಕಾರರು ಈ ವಿಷಯವನ್ನು ಉಪಾಕರಣೇ ಪ್ರೌಷ್ಠಪದ್ಯಪಿ ಗ್ರಾಹ್ಯಾ ಮುಂತಾದ ವಾಕ್ಯಗಳಿಂದ ಸಮರ್ಥಿಸಿದ್ದಾರೆ.

ಗುರುಶುಕ್ರಾಸ್ತವಿದ್ದಾಗ ಗುರುಶುಕ್ರ ಶಾಂತಿ ಪೂರ್ವಕ ನೂತನ ಉಪಾಕರ್ಮ ಮಾಡಬಹುದೆಂದು ಸ್ಮೃತಿಮುಕ್ತಾವಳೀಕಾರರ ಅಭಿಪ್ರಾಯ.

ಶ್ರೀಕೃಷ್ಣಾಷ್ಟಮಿ ಪೂಜಾ

ಬೆಳಿಗ್ಗೆ ಎದ್ದು ದಂತಧಾವನವನ್ನು ಮಾಡಿಕೊಂಡು ನಿಯಮವನ್ನು ಸ್ವೀಕರಿಸಬೇಕು. ನಿಯಮವಿಲ್ಲದಿದ್ದರೆ ನಿಷ್ಫಲವಾಗುವುದು. ನಿಯಮಸ್ವೀಕಾರ ಮಂತ್ರ.

ಅದ್ಯ ಸ್ಥಿತ್ವಾ ನಿರಾಹಾರಃ ಶ್ವೋಽಭೂತೇ ಪರಮೇಶ್ವರ ।
ಭೋಕ್ಷ್ಯಾಮಿ ಪುಂಡರೀಕಾಕ್ಷ ಜಯಂತೀವ್ರತತತ್ಪರಃ ॥

ನಿಯಮಸ್ವೀಕಾರವನ್ನು ಮಾಡಿದಮೇಲೆ ಮರುದಿನ ಪಾರಣಕಾಲದವರೆಗೂ ಉಪವಾಸವಿರಬೇಕು. ಮಧ್ಯಾಹ್ನಕಾಲದಲ್ಲಿ ಬಿಳಿಎಳ್ಳು ಮತ್ತು ನೆಲ್ಲಿಕಾಯಿಯನ್ನು ತಲೆಗೆ ಹಚ್ಚಿಕೊಂಡು ಸ್ನಾನ ಮಾಡಬೇಕು. ಇದರಿಂದ ಕೋಟಿತೀರ್ಥಸ್ನಾನದ ಫಲವು ಬರುತ್ತದೆ.

ಸ್ನಾನಮಂತ್ರ–

ಸಮಸ್ತಜಗದಾಧಾರ ಶಂಖಚಕ್ರಗದಾಧರ ।
ದೇವ ದೇಹಿ ಮಮಾನುಜ್ಞಾಂ ಯುಷ್ಮತ್ತೀರ್ಥನಿಷೇವಣೇ ॥
ಸತ್ಯಾಯ ಸತ್ಯಪತಯೇ ಸತ್ಯೇಶ್ವರಾಯ ಸತ್ಯಸಂಭವಾಯ ।
ಶ್ರೀಗೋವಿಂದಾಯ ನಮೋ ನಮಃ ॥

ಈ ಸ್ನಾನವನ್ನು ನದೀಜಲ ಮುಂತಾದ ಹೊರಗಿನ ಜಲದಲ್ಲಿ ಮಾಡಿಕೊಂಡು ನಿತ್ಯಾಹ್ನಿಕವನ್ನು ಮುಗಿಸಿಕೊಂಡು ಮನೆಗೆ ಬಂದು ಅಲಂಕೃತವಾದ ಮಂಟಪದಲ್ಲಿ ವಿಧಿಪೂರ್ವಕವಾಗಿ ಕಲಶಸ್ಥಾಪನೆಯನ್ನು ಮಾಡಬೇಕು. ಆ ಕಲಶದ ಮೇಲೆ ಬಂಗಾರ ಬೆಳ್ಳಿ ಅಥವಾ ಬಿದಿರಿನ ಪಾತ್ರದಲ್ಲಿ ಬಂಗಾರದಿಂದ ನಿರ್ಮಿತವಾದ ಸುಲಕ್ಷಣವಾದ ಶ್ರೀಕೃಷ್ಣ ವಿಗ್ರಹವನ್ನು ಇಡಬೇಕು. ಶ್ರೀಕೃಷ್ಣನು ಒಂದು ಕೈಯಿಂದ ತನ್ನ ಬಾಯಿಯಲ್ಲಿಟ್ಟುಕೊಂಡಿರುವ ತಾಯಿಯ ಸ್ತನವನ್ನು ಹಿಡಿದುಕೊಂಡು ಇನ್ನೊಂದು ಕೈಯಿಂದ ಇನ್ನೊಂದು ಸ್ತನವನ್ನು ಮುಟ್ಟುತ್ತಾ ಪ್ರೇಮದಿಂದ ತಾಯಿಯ ಮುಖವನ್ನು ನೋಡುತ್ತಿರಬೇಕು. ಈ ವಿಗ್ರಹವನ್ನು ಕ್ಷೀರಾಭಿಷೇಕ ಗಂಧ ಧೂಪ ದೀಪ ಭಕ್ಷ್ಯ ಭೋಜ್ಯಯುಕ್ತನೈವೇದ್ಯ ಮಹಾಮಂಗಳಾರತಿ ಗೀತ ವಾದ್ಯ ನೃತ್ಯಾದಿಗಳಿಂದ ಪೂಜಿಸಬೇಕು. ಪೂಜೆ ಮುಗಿದ ಮೇಲೆ ಅರ್ಧರಾತ್ರಿಯವರೆಗೆ ಶಾಂತಿಸೂಕ್ತ ಶಾಸ್ತ್ರಗ್ರಂಥಗಳು ಗೀತಾ ಸಹಸ್ರನಾಮ್ಮ ಪಾಪವಿಮೋಚನಸ್ತೋತ್ರ ಮುಂತಾದವುಗಳನ್ನು ಪಠನ ಮಾಡಬೇಕು. ಚಂದ್ರೋದಯಕಾಲದಲ್ಲಿ ಪುನಃ ಷೋಡಶೋಪಚಾರಪೂಜೆಯನ್ನು ಮಾಡಿ ದೇವಕೀದೇವಿಯನ್ನು ಪೂಜಿಸಿ ಅವಳನ್ನು ಪ್ರಾರ್ಥಿಸಬೇಕು.

ಪ್ರಾರ್ಥನಮಂತ್ರ

ಅದಿತೇ ದೇವಮಾತಸ್ತ್ವಂ ಸರ್ವಪಾಪಪ್ರಣಾಶಿನೀ ।
ಅತಸ್ತ್ವಾಂ ಪೂಜಯಿಷ್ಯಾಮಿ ಭೀತೋ ಭವಭಯಾದಹಮ್ ॥
ಪೂಜಿತಾ ತ್ವಂ ಯಥಾ ದೇವೈಃ ಪ್ರಸನ್ನಾ ತ್ವಂ ವರಾನನೇ ।
ಪೂಜಿತಾ ತ್ವಂ ಮಯಾ ಭಕ್ತ್ಯಾ ಪ್ರಸಾದಂ ಕುರು ಸುವ್ರತೇ ॥
ಯಥಾ ಪುತ್ರಂ ಹರಿಂ ಲಬ್ಧ್ವಾ ಪ್ರಾಪ್ತಾ ತ್ವಂ ನಿರ್ವೃತಿಂ ಪುರಾ ।
ತಾಮೇವ ನಿರ್ವೃತಿಂ ದೇವಿ ಸುಪುತ್ರೇ ದರ್ಶಯಸ್ವ ಮೇ ॥

ಶ್ರೀಕೃಷ್ಣಪ್ರಾರ್ಥನಮಂತ್ರ

ಅವತಾರಸಹಸ್ರಾಣಿ ಕರೋಷಿ ಮಧುಸೂದನ ।
ನ ತೇ ಸಂಖ್ಯಾವತಾರಾಣಾಂ ಕಶ್ಚಿಜ್ಜಾನಾತಿ ವೈ ಭುವಿ ॥
ದೇವಾ ಬ್ರಹ್ಮಾದಯೋ ವಾಽಪಿ ಸ್ವರೂಪಂ ನ ವಿದುಸ್ತವ ।
ಅತಸ್ತ್ವಾಂ ಪೂಜಯಿಷ್ಯಾಮಿ ಮಾತುರುತ್ಸಂಗಸಂಸ್ಥಿತಮ್ ।
ವಾಂಛಿತಂ ಕುರು ಮೆ ದೇವ ಸಂಸಾರಾರ್ತಿಭಯಾಪಹ ।

ಹೀಗೆ ಪ್ರಾರ್ಥಿಸಿ ಶಂಖದಲ್ಲಿ ಪುಷ್ಪಫಲಚಂದನಸಹಿತವಾಗಿ ಜಲವನ್ನು ತುಂಬಿಸಿ ಶ್ರೀಕೃಷ್ಣದೇವನಿಗೆ ಅರ್ಘ್ಯವನ್ನು ಕೊಡಬೇಕು.

ಕೃಷ್ಣಾರ್ಘ್ಯಮಂತ್ರ

ಜಾತಃ ಕಂಸವಧಾರ್ಥಾಯ ಭೂಭಾರಹರಣಾಯ ಚ ।
ಕೌರವಾಣಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ ॥
ಪಾಂಡವಾನಾ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ ।
ಗೃಹಾಣಾರ್ಘ್ಯಂ ಮಯಾ ದತ್ತಂ ದೇವಕ್ಯಾ ಸಹಿತೋ ಹರೇ ॥

ಈ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು. ಇದರಿಂದ ಸಕಲ ಭೂದಾನಫಲವು ದೊರೆಯುತ್ತದೆ. ಆಮೇಲೆ ಚಂದ್ರನನ್ನು ಪ್ರಾರ್ಥಿಸಬೇಕು.

ಚಂದ್ರಪ್ರಾರ್ಥನಾಮಂತ್ರ

ಜ್ಯೋತ್ಸ್ನಾಪತೇ ನಮಸ್ತುಭ್ಯಂ ನಮಸ್ತೇ ಜ್ಯೋತಿಷಾಂ ಪತೇ ।
ನಮಸ್ತೇ ರೋಹಿಣೀಕಾಂತ ಸುಧಾಕುಂಭ ನಮೋಽಸ್ತು ತೇ ॥

ಈ ಮಂತ್ರದಿಂದ ಚಂದ್ರನನ್ನು ಪ್ರಾರ್ಥಿಸಿ ಅರ್ಘ್ಯವನ್ನು ಕೊಡಬೇಕು.

ಚಂದ್ರಾರ್ಘ್ಯಮಂತ್ರ

ಕ್ಷೀರೋದಾರ್ಣವಸಂಭೂತ ಅತ್ರಿನೇತ್ರಸಮುದ್ಭವ ।
ಗೃಹಾಣಾರ್ಘ್ಯಂ ಶಶಾಂಕೇದಂ ರೋಹಿಣ್ಯಾ ಸಹಿತೋ ಮಮ ॥

ಈ ಮಂತ್ರದಿಂದ ಚಂದ್ರಾರ್ಘ್ಯವನ್ನು ಕೊಟ್ಟು, ಕೃಷ್ಣನನ್ನು ಸ್ತುತಿಸಬೇಕು.

ಶ್ರೀಕೃಷ್ಣಸ್ತೋತ್ರ

ಅನಘಂ ವಾಮನ ಶೌರಿಂ ಗೋವಿಂದಂ ಪುರುಷೋತ್ತಮಮ್ ।
ವಾಸುದೇವಂ ಹೃಷೀಕೇಶಂ ಮಾಧವಂ ಮಧುಸೂದನಮ್ ॥
ದಾಮೋದರಂ ಪದ್ಮನಾಭಂ ಕೇಶವಂ ಗರುಡಧ್ವಜಮ್ ।
ಗೋವಿಂದಮಚ್ಯುತಂ ಕೃಷ್ಣಮನಂತಮಪರಾಜಿತಮ್ ॥
ಅಧೋಕ್ಷಜಂ ಜಗದ್ಬೀಜಂ ಸರ್ಗಸ್ಥಿತ್ಯಂತಕಾರಿಣಮ್ ।

ಅನಾದಿನಿಧನಂ ವಿಷ್ಣುಂ ದೇವದೇವಂ ತ್ರಿವಿಕ್ರಮಮ್ ॥
ನಾರಾಯಣಂ ಚತುರ್ಬಾಹುಂ ಶಂಖಚಕ್ರಗದಾಧರಮ್ ।
ಪೀತಾಂಬರಧರಂ ಸೌಮ್ಯಂ ವನಮಾಲಾವಿಭೂಷಿತಮ್ ॥
ಶ್ರೀವತ್ಸವಕ್ಷಸಂ ಶ್ರೀಶಂ ಶ್ರೀಧರಂ ಶ್ರೀಪತಿಂ ಹರಿಮ್ ।
ಉಪೇಂದ್ರಂ ದೇವಕೀಸೂನುಂ ಪ್ರಣಮಾಮಿ ಪ್ರಜಾಪತಿಮ್ ॥

ಈ ಸ್ತೋತ್ರದಿಂದ ಸ್ತುತಿಸಿ ಪ್ರಾರ್ಥಿಸಬೇಕು.

ಪ್ರಾರ್ಥನಾಮಂತ್ರ

ಪುಷ್ಕರಾಕ್ಷ ನಿಮಗ್ನೋಽಹಂ ಮಹತ್ಯಜ್ಞಾನಸಾಗರೇ ।
ತ್ರಾಹಿ ಮಾಂ ದೇವದೇವೇಶ ಮಹಾಸಂಸಾರಸಾಗರಾತ್ ॥

ಈ ಮಂತ್ರದಿಂದ ಪ್ರಾರ್ಥಿಸಿ ಬೆಳಗಿನ ವರೆಗೆ ಜಾಗರವಿದ್ದು ಮರುದಿನದಲ್ಲಿ ಪುನಃ ಪೂಜೆಯನ್ನು ಮಾಡಿ ಹರಿವಾಸರ ಮುಗಿದ ಮೇಲೆ ಬ್ರಾಹ್ಮಣ ಸುವಾಸಿನಿಯರಿಗೆ ಭೋಜನವನ್ನು ಮಾಡಿಸಿ, ವ್ರತವನ್ನು ಶ್ರೀಕೃಷ್ಣನಿಗೆ ಸಮರ್ಪಿಸಬೇಕು.

ಭಾದ್ರಪದಮಾಸದ ವಿಶೇಷಧರ್ಮಗಳು

ಈ ಮಾಸದಲ್ಲಿ ಮಾಸನಿಯಾಮಕ ಹೃಷಿಕೇಶನ ಪ್ರೀತ್ಯರ್ಥವಾಗಿ ಪಾಯಸ, ಬೆಲ್ಲ, ಅನ್ನ, ಉಪ್ಪು ದಾನ ಮಾಡಬೇಕು.

ಗಣೇಶಚತುರ್ಥೀ

ಈ ದಿನದಲ್ಲಿ ಚಂದ್ರನನ್ನು ನೋಡಿದರೆ ಇಲ್ಲದಿರುವ ಅಪವಾದವು ಬರುತ್ತದೆ. ಸ್ಯಮಂತಕೋಖ್ಯಾನವನ್ನು ಕೇಳಿ ಆ ದೋಷದ ಪರಿಹಾರಕ್ಕಾಗಿ–

ಸಿಂಹಃ ಪ್ರಸೇನಮವಧೀತ್ಸಿಂಹೋ ಜಾಂಬವತಾ ಹತಃ ।
ಸುಕುಮಾರಕ ಮಾ ರೋದೀಸ್ತವ ಹ್ಯೇಷಃ ಸ್ಯಮಂತಕಃ ॥

ಎಂಬ ಶ್ಲೋಕವನ್ನು ಜಪಿಸಬೇಕು.

ಋಷಿಪಂಚಮೀ

ರಜಸ್ವಲೆಯಾದಾಗ ಸ್ತ್ರೀಯರು ಮಾಡಿದ ಸ್ಪರ್ಶದೋಷ ನಿವಾರಣೆಗಾಗಿ ಋಷಿಪಂಚಮಿ ವ್ರತಗ್ರಹಣ–ಉದ್ಯಾಪನೆಗಳನ್ನು ಮಾಡಬೇಕು.

ಅಖಂಡತಿಥಿ ಇರುವಾಗ ಗುರು ಶುಕ್ರಾಸ್ತವು ಇಲ್ಲದಿರುವಾಗ ವ್ರತಾರಂಭ ಮತ್ತು ಉದ್ಯಾಪನೆಗಳನ್ನು ಮಾಡಬಹುದು.

ವಾಮನಜಯಂತೀ

ಭಾದ್ರಪದ ಶುಕ್ಲ ದ್ವಾದಶೀ ದಿನದಲ್ಲಿ ನದೀಸಂಗಮದಲ್ಲಿ ಸ್ನಾನಮಾಡಿ, ಸುವರ್ಣವಿಗ್ರಹದಲ್ಲಿ ವಾಮನ ದೇವರನ್ನು

ದೇವೇಶ್ವರಾಯ ದೇವಾಯ ದೇವಸಂಭೂತಿಕಾರಿಣೇ ।
ಪ್ರಭವೇ ಸರ್ವದೇವಾನಾಂ ವಾಮನಾಯ ನಮೋ ನಮಃ ॥

ಎಂಬ ಮಂತ್ರದಿಂದ ಪೂಜಿಸಿ,

ನಮಸ್ತೇ ಪದ್ಮನಾಭಾಯ ನಮಸ್ತೇ ಜಲಶಾಯಿನೇ ।
ತುಭ್ಯಮರ್ಘ್ಯಂ ಪ್ರಯಚ್ಛಾಮಿ ಬಾಲವಾಮನರೂಪಿಣೇ ॥
ನಮಃ ಶಾರ್ಙ್ಗಧನುರ್ಬಾಣಪಾಣಯೇ ವಾಮನಾಯ ಚ ।
ಯಜ್ಞಭುಕ್ಫಲದಾತ್ರೇ ಚ ವಾಮನಾಯ ನಮೋ ನಮಃ ॥

ಈ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು.

ಈ ದಿನದಲ್ಲಿ ಸಂಧ್ಯಾಕಾಲದಲ್ಲಿ ವಿಷ್ಣುವನ್ನು ಪೂಜಿಸಿ

ವಾಸುದೇವ ಜಗನ್ನಾಥ ಪ್ರಾಪ್ತೋಽಯಂ ದ್ವಾದಶೀ ತವ ।
ಪಾರ್ಶ್ವೇನ ಪರಿವರ್ತಸ್ವ ಸುಖಂ ಸ್ವಪಿಹಿ ಮಾಧವ ॥

ಎಂಬ ಮಂತ್ರದಿಂದ ಪ್ರಾರ್ಥಿಸಬೇಕು.

ಈ ದಿನದಲ್ಲಿ ದಧಿವ್ರತವನ್ನು ದೇವರಿಗೆ ಸಮರ್ಪಿಸಿ ದಧಿದಾನವನ್ನು ಮಾಡಿ ಕ್ಷೀರವ್ರತವನ್ನು ಸಂಕಲ್ಪಿಸಬೇಕು. ದಧಿವ್ರತದಲ್ಲಿ ಮೊಸರಿನ ವಿಕಾರವಾದ ಮಜ್ಜಿಗೆ ಮುಂತಾದವುಗಳಿಗೆ ದೋಷವಿಲ್ಲ, ಅದರಂತೆ ಕ್ಷೀರವ್ರತದಲ್ಲಿ ಹಾಲಿನ ವಿಕಾರವಾದ ಮೊಸರು ಮುಂತಾದವುಗಳಿಗೆ ದೋಷವಿಲ್ಲ. ಹಾಲಿನಿಂದ ಪಕ್ವವಾದ ಪಾಯಸ ಮುಂತಾದವುಗಳಿಗೆ ದೋಷವುಂಟು.

ಭಾದ್ರಪದ ಶುದ್ಧ ಪೂರ್ಣಿಮಾ

ಈ ದಿನದಲ್ಲಿ ಪ್ರೋಷ್ಠಪದೀಶ್ರಾದ್ಧವು ಮುಖ್ಯ. ಈ ಶ್ರಾದ್ಧದಲ್ಲಿ ಪ್ರಪಿತಾಮಹರಿಗಿಂತ ಹಿಂದಿರುವ ಅವರ ಪಿತೃ ಪಿತಾಮಹ ಪ್ರಪಿತಾಮಹರನ್ನು ಅವರವರ ಪತ್ನಿಯರನ್ನು ಉದ್ದೇಶಿಸಿ ಸಪಿಂಡಕಶ್ರಾದ್ಧವನ್ನು ಮಾಡಬೇಕು.

ಭಾದ್ರಪದಮಾಸವು ಅಧಿಕಮಾಸವಾಗಿ ಬಂದಾಗ ಭಾದ್ರಪದ ಕೃಷ್ಣಪಕ್ಷದಲ್ಲಿ ಮಾಡಬೇಕಾದ ಮಹಾಲಯಶ್ರಾದ್ಧವನ್ನು ಅಧಿಕಭಾದ್ರಪದಮಾಸದಲ್ಲಿಯೂ ಶುದ್ಧಭಾದ್ರಪದಮಾಸದಲ್ಲಿಯೂ ಎರಡು ತಿಂಗಳುಗಳಲ್ಲಿಯೂ ಮಾಡಬೇಕು. ಈ ವಿಷಯದಲ್ಲಿ ಸ್ಮೃತಿಮುಕ್ತಾವಲೀಗ್ರಂಥದಲ್ಲಿ ಶ್ರೀಕೃಷ್ಣಾಚಾರ್ಯರು ಉದಾಹರಿಸಿರುವ ಪ್ರಮಾಣವಚನಗಳನ್ನು ಕೆಳಗೆ ಕೊಟ್ಟಿದೆ.

ಅಬ್ದೋದದಕುಂಭಮನ್ವಾದಿ ಮಹಾಲಯಯುಗಾದಿಷು ।
ಶ್ರಾದ್ಧಂ ದರ್ಶೇಽಪ್ಯಹರಹಃ ಶ್ರಾದ್ಧಮೂನಾದಿಮಾಸಿಕಮ್ ॥
ಮಲಿಮ್ಲುಚಾನ್ಯಮಾಸೇಷು ಮೃತಾನಾಂ ಶ್ರಾದ್ಧಮಾಬ್ದಿಕಮ್ ।
ಶ್ರಾದ್ಧಂ ಚ ಪೂರ್ವದೃಷ್ಟೇಷು ತೀರ್ಥೇಷು ಚ ಯುಗಾದಿಷು ॥
ಮನ್ವಾದಿಷು ಚ ಯದ್ದಾನಂ ದಾನಂ ದೈನಂದಿನಂ ಚ ಯತ್ ।

ತಿಲಗೋಭೂಹಿರಣ್ಯಾನಾಂ ಸಂಧ್ಯೋಪಾಸನಯೋಃ ಕ್ರಿಯಾಃ ॥
ಪರ್ವಹೋಮಶ್ಚಾಗ್ರಯಣಂ ಸಾಗ್ನೇರಿಷ್ಟಿಶ್ಚ ಪರ್ವಣಿ ।
ನಿತ್ಯಾಗ್ನಿಹೋತ್ರಹೋಮಶ್ಚ ದೇವತಾಽತಿಥಿಪೂಜನಮ್ ॥
ಸ್ನಾನಂ ಚ ಸ್ನಾನವಿಧಿನಾಪ್ಯಭಕ್ಷ್ಯಪೇಯವರ್ಜನಮ್।
ತರ್ಪಣಂ ಚ ನಿಮಿತ್ತಸ್ಯ ನಿತ್ಯತ್ವಾದುಭಯತ್ರ ಚ ॥

ಈ ವಾಕ್ಯದಲ್ಲಿ ಆರಂಭದಲ್ಲಿಯೇ ಅಬ್ದ ಎಂಬ ಪದದಿಂದ ಪ್ರತಿಸಾಂವತ್ಸರಿಕಶ್ರಾದ್ಧವನ್ನು ಅಧಿಕಮಾಸದಲ್ಲಿಯೂ ಶುದ್ಧಮಾಸದಲ್ಲಿಯೂ ಎರಡುಸಲ ಮಾಡಬೇಕೆಂದು ಹೇಳಿದಂತೆ ತೋರುತ್ತದೆ. ಕಾಲಾದರ್ಶ ಎಂಬ ಗ್ರಂಥದಲ್ಲಿಯೂ ಹೀಗೆಯೇ ಹೇಳಿದೆ. ಅಧಿಕಮಾಸದಲ್ಲಿ ಸಂಕಲ್ಪಶ್ರಾದ್ಧವನ್ನೂ ಶುದ್ಧಮಾಸದಲ್ಲಿ ಪಾರ್ವಣಶ್ರಾದ್ಧವನ್ನೂ ಮಾಡಬೇಕೆಂದು ನಿರ್ಣಯಾಮೃತ ಎಂಬ ಗ್ರಂಥದಲ್ಲಿ ಹೇಳಲ್ಪಟ್ಟಿದೆ. ಆದರೆ ಸ್ಮೃತಿಮುಕ್ತಾವಲೀಕಾರರು ಕ್ಷಯಮಾಸಕ್ಕಿಂತ ಪೂರ್ವದಲ್ಲಿ ಬರುವ ಅಧಿಕಮಾಸದಲ್ಲಿಯೂ ಶುದ್ಧಮಾಸದಲ್ಲಿಯೂ ಎರಡುಸಲ ಪ್ರತಿಸಾಂವತ್ಸರಿಕಶ್ರಾದ್ಧವನ್ನು ಮಾಡುವುದು ಶಾಸ್ತ್ರಸಂಮತವೇ ಹೊರತು ಇತರ ಅಧಿಕಮಾಸಗಳು ಬಂದಾಗ 2 ಮಾಸಗಳಲ್ಲಿ ಶ್ರಾದ್ಧವನ್ನು ಮಾಡುವುದು ಶಾಸ್ತ್ರ ಸಂಮತವಲ್ಲ ಎಂದು ಸಮರ್ಥಿಸಿ ಕಾಲಾದರ್ಶ ಮತ್ತು ನಿರ್ಣಯಾಮೃತಕಾರರ ನಿರ್ಣಯಗಳನ್ನು ನಿರಾಕರಿಸಿದ್ದಾರೆ. ಆದ್ದರಿಂದ ಸ್ಮೃತಿಮುಕ್ತಾವಲೀಕಾರರ ಸಿದ್ಧಾಂತವನ್ನು ಅವಲಂಬಿಸುವವರು ಪ್ರತಿಸಾಂವತ್ಸರಿಕಶ್ರಾದ್ಧವನ್ನು ಎರಡು ಮಾಸಗಳಲ್ಲಿಯೂ ಮಾಡಬಾರದು. ಶುದ್ಧಭಾದ್ರಪದಮಾಸದಲ್ಲಿಯೇ ಮಾಡಬೇಕು. ಶ್ರೀರಾಘವೇಂದ್ರ ಗುರುಸಾರ್ವಭೌಮರ ವಿದ್ಯಾಶಿಷ್ಯರಾದ ಸ್ಮೃತಿಮುಕ್ತಾವಲೀಕಾರರ ಸಿದ್ಧಾಂತವೇ ಶ್ರೀಗುರುಸಾರ್ವಭೌಮರಿಗೂ ಸಮ್ಮತವಾಗಿದೆ. ಈಗ ಈ ನಿರ್ಣಯವನ್ನು ಅನುಸರಿಸಿ ಮೇಲ್ಕಂಡ ಶ್ಲೋಕಗಳ ತಾತ್ಪರ್ಯವು :-

1) ಕ್ಷಯಮಾಸಕ್ಕಿಂತ ಪೂರ್ವದಲ್ಲಿ ಬರುವ ಅಧಿಕಮಾಸದಲ್ಲಿಯೂ ಶುದ್ಧಮಾಸದಲ್ಲಿಯೂ ಎರಡು ಸಲ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ಮಾಡಬೇಕು. 2) ಉದಕುಂಭಶ್ರಾದ್ಧ 3) ಮನ್ವಾದಿಶ್ರಾದ್ಧ 4) ಮಹಾಲಯಶ್ರಾದ್ಧ 5) ಯುಗಾದಿಶ್ರಾದ್ಧ 6) ದರ್ಶಶ್ರಾದ್ಧ 7) ದೈನಂದಿನಶ್ರಾದ್ಧ 8) ಅಧಿಕಮಾಸವು ಬರುವುದಕ್ಕಿಂತ ಪೂರ್ವದಲ್ಲಿ ವರ್ಷದೊಳಗೆ ಸತ್ತವರ ಮಾಸಿಕ ಊನಾಬ್ದಿಕ ಮುಂತಾದ ವರ್ಷ ಮುಗಿಯುವುದರೊಳಗೆ ಮಾಡುವ ಶ್ರಾದ್ಧಗಳು 9) ಹಿಂದೆ ತೀರ್ಥಶ್ರಾದ್ಧವನ್ನು ಮಾಡಿರುವ ತೀರ್ಥಗಳಲ್ಲಿ ಮಾಡುವ ತೀರ್ಥಶ್ರಾದ್ಧ 10) ಯುಗಾದಿಕಾಲ ಮತ್ತು 11) ಮನ್ವಾದಿಗಳಲ್ಲಿ ಮಾಡುವ ದಾನಗಳು 12) ತಿಲದಾನ ಗೋದಾನ ಭೂದಾನ ಹಿರಣ್ಯದಾನ ಮುಂತಾದ ಪ್ರತಿದಿನದಲ್ಲಿ ಕೊಡುತ್ತಿರುವ ದಾನಗಳು 13) ಸಂಧ್ಯಾವಂದನ 14) ಔಪಾಸನ 15) ಪರ್ವಕಾಲದಲ್ಲಿ ಮಾಡುತ್ತಿರುವ ದರ್ಶಪೂರ್ಣಮಾಸ ಹೋಮಗಳು 16) ನಿತ್ಯಾಗ್ನಿಹೋತ್ರಹೋಮ

17) ಅಗ್ರಯಣೇಷ್ಟಿ 18) ಪರ್ವಹೋಮಗಳು 19) ದೇವತಾತಿಥಿಪೂಜೆ 20) ಸ್ನಾನವಿಧಿಯಿಂದ ಮಾಡತಕ್ಕ ವಿಶೇಷ ಸ್ನಾನಗಳು 21) ಅಭಕ್ಷ್ಯ ವಸ್ತುಗಳ ತ್ಯಾಗ ಮತ್ತು ಕುಡಿಯುವುದಕ್ಕೆ ಅಯೋಗ್ಯವಾದ ವಸ್ತುಗಳ ತ್ಯಾಗ 22) ನಿತ್ಯ ತರ್ಪಣ.

ಈ 22 ಕಾರ್ಯಗಳನ್ನು ಮಾಡುವುದಕ್ಕೆ ಕಾರಣವೆಂದು ಶಾಸ್ತ್ರಗಳಲ್ಲಿ ಹೇಳಿರುವ ನಿಮಿತ್ತಗಳೆಲ್ಲವೂ ನಿತ್ಯವಾಗಿವೆ. ಆದ್ದರಿಂದ ಈ ಇಪ್ಪತ್ತೆರಡು ಕಾರ್ಯಗಳೂ ನಿತ್ಯವೆನಿಸುತ್ತವೆ. ನಿತ್ಯವಾದ ಈ ಇಪ್ಪತ್ತೆರಡು ಕಾರ್ಯಗಳನ್ನು ಅಧಿಕಮಾಸದಲ್ಲಿಯೂ ಶುದ್ಧಮಾಸದಲ್ಲಿಯೂ ಅವಶ್ಯವಾಗಿ ಮಾಡಲೇ ಬೇಕು."

ಈ ಪ್ರಮಾಣವಾಕ್ಯಗಳಲ್ಲಿ ಮಹಾಲಯಕಾಲವು ನಿತ್ಯವೆಂದೂ ಈ ಮಹಾಲಯಕಾಲವನ್ನು ನಿಮಿತ್ತವಾಗಿಟ್ಟುಕೊಂಡು ಮಾಡುವ ಮಹಾಲಯಶ್ರಾದ್ಧವು ನಿತ್ಯನೈಮಿತಿಕ ಅಂದರೆ ನಿತ್ಯವಾದ ನಿಮಿತ್ತದಿಂದ ಮಾಡಲ್ಪಡತಕ್ಕದ್ದೆಂದೂ ಆದ್ದರಿಂದಲೇ ನಿತ್ಯವೆಂದೂ ಅತಿಸ್ಪಷ್ಟವಾಗಿ ಹೇಳಿದೆ.

ಮಹಾಲಯಶ್ರಾದ್ಧವು ನಿತ್ಯನೈಮಿತ್ತಿಕ. ಆದ್ದರಿಂದಲೇ ಶುದ್ಧಮಾಸದಂತೆ ಅಧಿಕಮಾಸದಲ್ಲಿಯೂ ಮಾಡಲ್ಪಡಬೇಕು. ಎಂಬ ವಿಷಯವನ್ನು "ತಸ್ಯೈವ (ಮಹಾಲಯಸ್ಯೈವ) ನೈಮಿತ್ತಿಕತ್ವೇನಾನಿಷೇಧ್ಯತ್ವಾತ್", "ಸಂಕ್ರಾಂತಿವನ್ನಿತ್ಯನೈಮಿತ್ತಿಕತ್ವಮುಕ್ತಂ ಪುರಾಣೇ

ಕನ್ಯಾಗತೇ ಸವಿತರಿ ಯಾನ್ಯಹಾನಿ ಚ ಷೋಡಶ ।
ಕ್ರತುಭಿಸ್ತಾನಿ ತುಲ್ಯಾನಿ ಪಿತೃಣಾಂ ದತ್ತಮಕ್ಷಯಮ್ ॥ಇತಿ॥

"ತಥಾ ಚಾಸ್ಯ ನೈಮಿತ್ತಿಕತ್ವೇನ ನ ನಿಷೇಧವಿಷಯತ್ವಂ ಮುಕ್ತ್ವಾವಂ ನೈಮಿತ್ತಿಕಂ ಕರ್ಮೇತಿ ತದನ್ಯಸ್ಯೈವ ನಿಷೇಧಾತ್" "ಅಬ್ದೋದಕುಂಭಮನ್ವಾದಿಮಹಾಲಯಯುಗಾದಿಷು ಇತ್ಯಾದಿನಾ ವಿಶಿಷ್ಯ ವಿಧಾನಾತ್" ಮುಂತಾದ ವಾಕ್ಯಗಳಿಂದ ಸಮರ್ಥಿಸಿದ್ದಾರೆ.

ಮಹಾಲಯನಿರ್ಣಯ

ಸರ್ವಪಿತೃಗಳನ್ನು ಉದ್ದೇಶಿಸಿ ಮಾಡುವ ಶ್ರಾದ್ಧವು ಮಹಾಲಯವೆನಿಸುತ್ತದೆ. ಶಕ್ತಿಯುಳ್ಳವರು ಈ ಮಹಾಲಯಪಕ್ಷದಲ್ಲಿ ಪ್ರತಿಪತ್ತಿನಿಂದ ಅಮಾವಾಸ್ಯೆಯವರೆಗಿನ ಏಕಾದಶಿಯನ್ನು ಬಿಟ್ಟು ಉಳಿದ ಎಲ್ಲಾ ತಿಥಿಗಳಲ್ಲಿ ಮಹಾಲಯವನ್ನು ಮಾಡಬೇಕು. ಅಶಕ್ತರಾದವರು ಪಂಚಮೀ ಷಷ್ಠೀ ಅಷ್ಟಮೀ ಮತ್ತು ದಶಮೀ ಈ ತಿಥಿಗಳಲ್ಲಿ ಯಾವುದಾದರೊಂದು ತಿಥಿಯಿಂದ ಆರಂಭಿಸಿ ಏಕಾದಶಿಯನ್ನು ಬಿಟ್ಟು ಅಮಾವಾಸ್ಯೆಯ ವರೆಗೆ ಮಾಡಬೇಕು. ಅದರಲ್ಲಿಯೂ ಶಕ್ತಿಯಿಲ್ಲದವರು ನಿಷಿದ್ಧವಲ್ಲದ ಯಾವುದಾದರೊಂದು ದಿನದಲ್ಲಿ ಮಾಡಬೇಕು.

ಪ್ರತಿಪತ್ತಿನಿಂದ ಅಮಾವಾಸ್ಯೆಯವರೆಗೆ ಎಲ್ಲಾ ದಿನಗಳಲ್ಲಿ ಮಾಡುವುದಾದರೆ ಚತುರ್ದಶೀದಿನದಲ್ಲಿಯೂ ಮಾಡಬೇಕು. ಪಂಚಮೀ ಮೊದಲಾದ ತಿಥಿಯಿಂದ

ಮಾಡುವುದಾದರೆ ಚತುರ್ದಶೀತಿಥಿಯಲ್ಲಿ ಮಾಡಬಾರದು. ಒಂದೇ ದಿನದಲ್ಲಿ ಮಾಡುವುದಾದರೆ ಪ್ರತಿಪದಾ ಷಷ್ಠೀ ಏಕಾದಶೀ ಚತುರ್ದಶೀ ಶುಕ್ರವಾರ ಜನ್ಮತಾರಾಗಳಲ್ಲಿ ರೋಹಿಣೀ ರೇವತೀ ಮಘಾನಕ್ಷತ್ರಗಳಲ್ಲಿ ಮಾಡಬಾರದು.

ಕೆಲವು ಧರ್ಮಶಾಸ್ತ್ರಗಳಲ್ಲಿ ಹಿಂದೆ ಹೇಳಿದ ದಿನಗಳಲ್ಲಿಯೂ ಮತ್ತು ಸಪ್ತಮೀ ತ್ರಯೋದಶೀ, ರವಿವಾರ ಕುಜವಾರಗಳಲ್ಲಿಯೂ ಮಾಡಬಾರದೆಂದು ಹೇಳಿದೆ. ಒಂದೇ ದಿನದಲ್ಲಿ ಮಹಾಲಯವನ್ನು ಮಾಡುವವರು ತಂದೆಯ ಮೃತ ತಿಥಿಯಲ್ಲಿಯೇ ಮಾಡುವುದಾದರೆ ಅವರಿಗೆ ಏಕಾದಶಿಯನ್ನು ಬಿಟ್ಟು ಉಳಿದಮೇಲ್ಕಂಡ ತಿಥಿ ನಕ್ಷತ್ರಗಳು ದೋಷಕರವಾಗುವುದಿಲ್ಲ. ಬೇರೆ ದಿನಗಳಲ್ಲಿ ಮಾಡುವುದಾದರೆ ಮೇಲ್ಕಂಡ ದಿನಗಳನ್ನು ಬಿಟ್ಟು ಬೇರೆ ದಿನದಲ್ಲಿ ಮಾಡಬೇಕು. ಒಂದೇ ದಿನದಲ್ಲಿ ಮಹಾಲಯವನ್ನು ಮಾಡುವವರು ಅಷ್ಟಮೀ ದ್ವಾದಶೀ ಅಮಾವಾಸ್ಯಾ ತಿಥಿಗಳು, ಭರಣೀನಕ್ಷತ್ರ ಮತ್ತು ವ್ಯತೀಪಾತಯೋಗಗಳಲ್ಲಿ ಪಿತೃವಿನ ಮೃತತಿಥಿ ಅಲ್ಲದಿದ್ದರೂ ಮಹಾಲಯವನ್ನು ಮಾಡಬಹುದು. ಆ ದಿನಗಳಲ್ಲಿ ಮೇಲ್ಕಂಡ ದುಷ್ಟ ತಿಥಿನಕ್ಷತ್ರಾದಿಗಳು ಬಾಧಕವಾಗಲಾರವು. ಚತುರ್ದಶೀ ದಿನದಲ್ಲಿ ಮೃತಿಹೊಂದಿದವರಿಗೆ ಚತುರ್ದಶಿಯಲ್ಲಿ ಮಹಾಲಯವನ್ನು ಮಾಡಬಾರದು. ಅ ದಿನ ಶಸ್ತ್ರಹತರಾದವರೆಗೆ ಮಾತ್ರ ಮಹಾಲಯವನ್ನು ಮಾಡಬೇಕು. ಹುಣ್ಣಿಮೆಯಲ್ಲಿ ಮೃತರಾದವರೆಗೆ ಹುಣ್ಣಿಮೆಯಲ್ಲಿ ಮಹಾಲಯ ಪಕ್ಷವೇ ಬಾರದಿರುವುದರಿಂದ ಅವರಿಗೂ ಚತುರ್ದಶಿಯಲ್ಲಿ ಮೃತಪಟ್ಟವರಿಗೂ ಅಷ್ಟಮೀ ದಾದ್ವಶೀ ಅಮಾವಾಸ್ಯಾ ಮಹಾಭರಣೀ ಮತ್ತು ವ್ಯತೀಪಾತ ಮುಂತಾದ ಅನಿಷಿದ್ಧದಿನಗಳಲ್ಲಿ ಮಾಡಬೇಕು. ಮಹಾಲಯಪಕ್ಷದಲ್ಲಿ ಸಾಧ್ಯವಾಗದಿದ್ದರೆ ಆಶ್ವಿನಶುಕ್ಲ ಪಂಚಮೀವರೆಗೆ, ಆಗಲೂ ಸಾಧ್ಯವಾಗದಿದ್ದಾಗ "ಯಾವದ್ವೃಶ್ಚಿಕದರ್ಶನಂ" ಎಂದು ಇರುವುದರಿಂದ ತುಲಾಮಾಸದಲ್ಲಿ ಹಿಂದೆ ಹೇಳಿದ ಅಷ್ಟಮೀ, ದ್ವಾದಶೀ ಭರಣೀ, ವ್ಯತೀಪಾತ ಮುಂತಾದ ಪರ್ವದಿನಗಳಲ್ಲಿ ಮಾಡಬೇಕು. ಈ ಶ್ರಾದ್ಧವನ್ನು ಸಪಿಂಡಕವಾಗಿಯೇ ಮಾಡಬೇಕು. ಒಂದೇ ದಿನದಲ್ಲಿ ಮಹಾಲಯವನ್ನು ಮಾಡತಕ್ಕವರು ಶ್ರಾದ್ಧಾಂಗ ತಿಲತರ್ಪಣವನ್ನು ಮರುದಿನದಲ್ಲಿಯೇ ಪ್ರಾತಃಸಂಧ್ಯಾವಂದನಕ್ಕಿಂತ ಮುಂಚಿತವಾಗಿ ಅಥವಾ ಅನಂತರದಲ್ಲಿ ಬ್ರಹ್ಮಯಜ್ಞಾಂಗತರ್ಪಣಕ್ಕಿಂತ ಪ್ರತ್ಯೇಕವಾಗಿ ಮಾಡಬೇಕು. ಪಾಡ್ಯ ಪಂಚಮೀ ಮುಂತಾದ ದಿನಗಳಲ್ಲಿ ಆರಂಭಿಸಿ ಅಮಾವಾಸ್ಯೆಯವರೆಗೆ ಮಾಡತಕ್ಕವರು ಆಯಾ ದಿನದಲ್ಲಿಯೇ ಬ್ರಾಹ್ಮಣವಿಸರ್ಜನೆಯಾದ ಕೂಡಲೇ ತಿಲತರ್ಪಣವನ್ನು ಮಾಡಬೇಕು. ಒಂದೇ ದಿನದಲ್ಲಿ ಮಾಡತಕ್ಕವರು ಪತ್ನಿಯು ಬಹಿಷ್ಠೆಯಾದರೆ ಮಾಡಬಾರದು. ಪಾಕಾರಂಭವಾದ ಮೇಲೆ ಬಹಿಷ್ಠೆಯಾದರೆ ಅಂದೇ ಮಾಡಬೇಕು. ಪುತ್ರನಿಲ್ಲದ ವಿಧವೆಯು ತಾನು ಸಂಕಲ್ಪವನ್ನು ಮಾಡಿ ಬ್ರಾಹ್ಮಣರಿಂದ ಮಾಡಿಸಬೇಕು. ಪಾಕಾರಂಭಾನಂತರ ಅವಳು ಬಹಿಷ್ಠೆಯಾದರೆ ಆ ವಿಧವೆಯು ಮಾಡುವ ಸಂಕಲ್ಪವನ್ನು ಬ್ರಾಹ್ಮಣರೇ ಮಾಡಿ ಮುಂದುವರಿಸಬೇಕು. ಮೊದಲೇ ಬಹಿಷ್ಠೆಯಾದರೆ ನಿಲ್ಲಿಸಬೇಕು. ಮಾತಾಪಿತೃಗಳು ಸತ್ತವರ್ಷದಲ್ಲಿ

ಮಹಾಲಯವನ್ನು ಮಾಡಬಾರದು. ಭಾದ್ರಪದ ಅಧಿಕ ಬಂದಾಗ ಅಧಿಕಮಾಸದಲ್ಲಿ ಮಾಡಬಾರದೆಂದು ಧರ್ಮಸಿಂಧು ಮುಂತಾದ ಗ್ರಂಥಗಳಲ್ಲಿ ಹೇಳಿದೆ. ಅಧಿಕಮಾಸದಲ್ಲಿಯೂ ಶುದ್ಧಮಾಸದಲ್ಲಿಯೂ ಎರಡು ಸಲ ಮಾಡಬೇಕೆಂದು ಸ್ಮೃತಿಮುಕ್ತಾವಲೀಕಾರರ ಸಿದ್ಧಾಂತ.

ಮಹಾಲಯಪಕ್ಷದಲ್ಲಿ ತಂದೆ ತಾಯಿ ಶ್ರಾದ್ಧವು ಬಂದರೆ ಮೃತತಿಥಿಯಲ್ಲಿ ಕಾಲಶ್ರಾದ್ಧವನ್ನು ಬೇರೆ ತಿಥಿಯಲ್ಲಿ ಮಾಡಬೇಕು. ಈ ನಿಯಮ ಒಂದೇ ದಿನ ಮಹಾಲಯ ಮಾಡುವವರಿಗೆ ಮಾತ್ರ. ಪಾಡ್ಯ ಪಂಚಮೀ ಮುಂತಾದ ತಿಥಿಗಳಿಂದ ಅಮಾವಾಸ್ಯಾವರೆಗೆ ಮಹಾಲಯ ಮಾಡುವವರು ಪಿತೃವಿನ ಮೃತ ತಿಥಿಯಲ್ಲಿ ಮೊದಲು ಕಾಲಶ್ರಾದ್ಧವನ್ನು ಮಾಡಿ ಮಹಾಲಯವನ್ನು ಮಾಡಿ, ಪುನಃ ಬೇರೆ ಪಾಕದಿಂದ ಅದೇ ದಿನದಲ್ಲಿಯೇ ಮಹಾಲಯವನ್ನು ಮಾಡಬೇಕು. ಒಂದೇ ಸಲ ಮಹಾಲಯವನ್ನು ಮಾಡತಕ್ಕವರು ಪಿತೃಶ್ರಾದ್ಧ ಮತ್ತು ಮಹಾಲಯವನ್ನು ಅಮಾವಾಸ್ಯಾತಿಥಿಯಲ್ಲಿಯೇ ಮಾಡಬೇಕಾದ ಸಂದರ್ಭ ಬಂದರೆ ಪಿತೃಶ್ರಾದ್ಧ ಮಹಾಲಯಶ್ರಾದ್ಧ ಮತ್ತು ದರ್ಶಶ್ರಾದ್ಧಗಳನ್ನು ಬೇರೆ ಬೇರೆ ಪಾಕಗಳಿಂದ ಕ್ರಮವಾಗಿ ಮಾಡಬೇಕು. ಅಮಾವಾಸ್ಯೆಯಲ್ಲಿ ಮಹಾಲಯವನ್ನು ಮಾತ್ರ ಮಾಡುವುದಾದರೆ ಮಹಾಲಯವನ್ನು ಮೊದಲು ಮಾಡಿ, ದರ್ಶಶ್ರಾದ್ಧವನ್ನು ಬೇರೆ ಪಾಕದಿಂದ ಮಾಡಬೇಕು.

ಕಪಿಲಷಷ್ಠೀ

ನಭಸ್ಯ ಮಾಸಸ್ಯ ತು ಕೃಷ್ಣಪಕ್ಷೇ ।
ಹಸ್ತೇ ರವೌ ರೋಹಿಣಿಭೇಶಶಾಂಕೇ ॥
ಷಷ್ಠೀವ್ಯತೀಪಾತಯುತಾರ್ಕವಾರ ।
ಯುಕ್ತಾ ಯದಿ ಸ್ಯಾತ್ಕಪಿಲಾಖ್ಯಷಷ್ಠೀ ॥

"1) ಭಾದ್ರಪದಮಾಸ 2) ಕೃಷ್ಣಪಕ್ಷ 3) ಹಸ್ತಾ ನಕ್ಷತ್ರದಲ್ಲಿ ಸೂರ್ಯ 4) ರೋಹಿಣೀನಕ್ಷತ್ರದಲ್ಲಿ ಚಂದ್ರ 5) ಷಷ್ಠೀತಿಥಿ 6) ವ್ಯತೀಪಾತಯೋಗ 7) ರವಿವಾರ ಈ ಏಳು ಒಟ್ಟುಗೂಡಿದರೆ ಕಪಿಲಷಷ್ಠೀ ಎಂದು ಹೇಳಲ್ಪಡುತ್ತದೆ.

ಜಲಂ ಪಿಬತಿ ದತ್ತೇ ಚ ವರ್ಣೋಽಪಿ ಕಪಿಲಃ ಸ್ಮೃತಃ ।
ಅತಃ ಕಪಿಲನಾಮಾಽಸೌ ಮಮ ರೂಪಂ ರವಿಃ ಸ್ಮೃತಃ ॥
ಸ ಏವ ದೇವತಾ ತಸ್ಯಾಂ ಪೂಜನೀಯೋ ಹಿ ಭಕ್ತಿತಃ ।

1) ಕ=ನೀರನ್ನು ಪಿ=ಬೇಸಿಗೆ ಕಾಲದಲ್ಲಿ ಕುಡಿಯುವವನೂ, ಲ=ಮಳೆಗಾಲದಲ್ಲಿ ಅದೇ ನೀರನ್ನು ಹಿಂತಿರುಗಿಸಿ ಕೊಡುವವನೂ ಆಗಿರುವುದರಿಂದ ಸೂರ್ಯದೇವನಿಗೆ ಕಪಿಲ ಎಂದು ಹೆಸರು. 2) ಕಪಿಲ = ಕಪಿಲ ಬಣ್ಣವುಳ್ಳವನಾಗಿರುವುದರಿಂದಲೂ ಅದೇ ಸೂರ್ಯನಿಗೆ ಕಪಿಲ ಎಂದು ಹೆಸರು 3) ಆ ಸೂರ್ಯನು ಕಪಿಲ ನಾಮಕನಾದ ನನ್ನ ವಿಶೇಷ ಸನ್ನಿಧಾನಕ್ಕೆ ಪಾತ್ರನಾಗಿರುವುದರಿಂದಲೂ ಕಪಿಲ ಎಂದು

ಹೇಳಲ್ಪಡುವನು. ಕಪಿಲನಾಮಕಸೂರ್ಯನೇ ಅಧಿಪತಿಯಾಗಿರುವ ಈ ಕಪಿಲಷಷ್ಠೀ ದಿನದಲ್ಲಿ ಕಪಿಲನಾಮಕನಾದ ಸೂರ್ಯನನ್ನು ಅತ್ಯಂತ ಭಕ್ತಿಯಿಂದ ಪೂಜಿಸಬೇಕು'' ಇದು ವರಾಹಪುರಾಣದಲ್ಲಿರುವ ವರಾಹರೂಪಿಯಾದ ಶ್ರೀಹರಿಯ ವಚನ.

ಕದಾಚಿಲ್ಲಭ್ಯತೇ ಸಾ ತು ಮಾನುಷ್ಯೈರಲ್ಪಜೀವಿತೈಃ ।
ಅರ್ಧೋದಯಾಚ್ಛತಗುಣಂ ತಸ್ಯಾಂ ಪುಣ್ಯಂ ಪ್ರಕೀರ್ತಿತಮ್ ॥
ಪೌಷೇ ವಾ ಮಾಘಮಾಸೇ ವಾ ಅಮಾವಾಸ್ಯಾ ರವೇರ್ದಿನೇ ।
ಶ್ರವಣವ್ಯತಿಪಾತಾಭ್ಯಾಂ ಯುಕ್ತಾ ಸಾಽರ್ಧೋದಯಃ ಸ್ಮೃತಃ ॥
ಸೂರ್ಯಗ್ರಹಣತಃ ಪ್ರೋಕ್ತಂ ತಸ್ಯಾಂ ಪುಣ್ಯಂ ಶತಾಧಿಕಮ್ ।
ಭವೇತ್ಪುಣ್ಯಸಮೃದ್ಧೀನಾಮುದರ್ಯೋಽಸ್ಮಾದತೊ ಹ್ಯಯಮ್
ಅರ್ಧೋದಯ ಇತಿ ಖ್ಯಾತೋ ದತ್ತಸ್ಯಾಕ್ಷಯಪುಣ್ಯದಃ ॥
ಬ್ರಾಹ್ಮಣೇಭ್ಯಃ ಪ್ರದಾತವ್ಯಂ ಶಕ್ತ್ಯಾ ಅಪ್ಯಧಿಕಂ ಧನಮ್ ।
ಸ್ನಾನಂ ದಾನಂ ತಪೋ ಹೋಮೋ ಯತ್ಕಿಂಚಿತ್ಪುಣ್ಯಕಾರಕಮ್ ।
ತಸ್ಯಾಂ ತು ಯತ್ ಕೃತಂ ದೇವಿ ತದಕ್ಷಯಫಲಂ ಸ್ಮೃತಮ್ ।
ಮುಹೂರ್ತಮಪಿ ಲಭ್ಯೇತೇ ಕಪಿಲಾರ್ಧೋದಯೌ ನರೈಃ ।
ತದೈವ ಸರ್ವಂ ಕುರ್ವೀತ ಮನಸಾ ಯದ್ಯದೀಪ್ಸಿತಮ್ ॥

ಜನರ ಆಯುಸ್ಸು ಅತ್ಯಲ್ಪವಾಗಿದೆ. ಅಸಂಖ್ಯ ವರ್ಷಗಳ ಮೇಲೆ ಬರುವ ಈ ಕಪಿಲ ಷಷ್ಠಿಯು ಅವನ ಜೀವನಕಾಲದಲ್ಲಿ ಸಿಗುವುದು ದುರ್ಲಭ.

ಪುಷ್ಯ ಅಥವಾ ಮಾಘಮಾಸದಲ್ಲಿ ಅಮಾವಾಸ್ಯಾದಿನದಲ್ಲಿ ರವಿವಾರ ಶ್ರವಣನಕ್ಷತ್ರ ವ್ಯತೀಪಾತ ಯೋಗಗಳು ಸೇರಿದರೆ ಅರ್ಧೋದಯಯೋಗವು ಏರ್ಪಡುತ್ತದೆ. ಈ ಅರ್ಧೋದಯಯೋಗವು ಸೂರ್ಯಗ್ರಹಣಕ್ಕಿಂತ ನೂರುಪಾಲು ಅಧಿಕಪುಣ್ಯಕರವಾದುದು. ಪುಣ್ಯಸಮೃದ್ಧಿಗೆ ಕಾರಣವಾದ್ದರಿಂದಲೇ ಆ ಯೋಗಕ್ಕೆ ಅರ್ಧೋದಯ ಎಂದು ಹೆಸರು. ಈ ಯೋಗದಲ್ಲಿ ಮಾಡಿದ ದಾನವು ರಾಯರ ಅಷ್ಟೋತ್ತರ ಕ್ಷೀರಾಭಿಷೇಕ ಇತ್ಯಾದಿಗಳು ಅಕ್ಷಯಫಲವನ್ನು ಕೊಡುತ್ತದೆ.

ಕಪಿಲಷಷ್ಠೀಯೋಗವು ಅರ್ಧೋದಯಯೋಗಕ್ಕಿಂತಲೂ ನೂರುಪಾಲು ಅಧಿಕಪುಣ್ಯವನ್ನು ಕೊಡುತ್ತದೆ. ಈ ಯೋಗದಲ್ಲಿ ಬ್ರಾಹ್ಮಣರಿಗೆ ಶಕ್ತ್ಯನುಸಾರವಾಗಿ ಮಾಡುವ ದಾನ, ಸ್ನಾನ, ತಪಸ್ಸು, ಹೋಮ ರಾಯರ ಅಷ್ಟೋತ್ತರ ಕ್ಷೀರಾಭಿಷೇಕ ಇತ್ಯಾದಿಗಳು ಮುಂತಾದ ಎಲ್ಲಾ ಪುಣ್ಯಕಾರ್ಯಗಳೂ ಅನಂತ ಫಲವನ್ನು ಕೊಡುತ್ತವೆ. ಕಪಿಲಷಷ್ಠೀ ಮತ್ತು ಅರ್ಧೋದಯ ಯೋಗಗಳು ಒಂದು ಮುಹೂರ್ತಕಾಲವು ಸಿಕ್ಕಿದರೂ ಆ ಕಾಲದಲ್ಲಿ ಪುಣ್ಯಕಾರ್ಯವನ್ನು ಮಾಡಿ ಅಕ್ಷಯಫಲವನ್ನು ಪಡೆಯಬೇಕು. ಮಂಗಳವಾರದಲ್ಲಿ ಈ ಯೋಗವು ಏರ್ಪಡುವುದಾಗಿ ಈ ವರಾಹಪುರಾಣವು ತಿಳಿಸುತ್ತದೆ. ಸ್ಮೃತಿ ಸಾರಸಮುಚ್ಚಯದಲ್ಲಿ ಆದಿತ್ಯವಾರದಲ್ಲಿ ಬರುವುದಾಗಿ ಹೇಳಿದೆ.

ಮಹಾಭರಣೀ ಶ್ರಾದ್ಧ

ಈ ಶ್ರಾದ್ಧದಿಂದ ಗಯಾಶ್ರಾದ್ಧಫಲವು ಬರುತ್ತದೆ.

ಮಘಾಯುಕ್ತತ್ರಯೋದಶೀಶ್ರಾದ್ಧ

ಈ ಶ್ರಾದ್ಧವೂ ನಿತ್ಯವಾದ್ದರಿಂದ ಸರ್ವರೂ ಮಾಡಬೇಕು,

ಆಶ್ವಿನಮಾಸದ ಧರ್ಮಗಳು

ಆಶ್ವಿನಶುಕ್ಲಪ್ರತಿಪತ್ತಿನಿಂದ ನವಮೀವರೆಗೆ ಮಾಡುವ ಪೂಜೆಯು ನವರಾತ್ರಿಎನಿಸುತ್ತದೆ. ಆ ಪೂಜೆಗೆ ಅಂಗವಾಗಿ ಹೋಮ ಸರ್ವ–ಮೂಲಾದಿಸಚ್ಛಾಸ್ತ್ರಪಾರಾಯಣ ಮುಂತಾದವುಗಳನ್ನು ಮಾಡಬೇಕು. ಸಚ್ಛಾಸ್ತ್ರ ಗ್ರಂಥಪಾರಾಯಣ ಮಾಡಲು ಅಶಕ್ತರು ಬ್ರಾಹ್ಮಣರ ದ್ವಾರಾ ಮಾಡಿಸಬೇಕು. ಪಾಡ್ಯ, ತೃತೀಯಾ, ಪಂಚಮೀ, ಸಪ್ತಮೀ, ಅಥವಾ ಅಷ್ಟಮೀ ಆರಂಭಿಸಿ ನವಮೀದಿನದವರೆಗೆ ಮಾಡಬೇಕು. ಈ ನವರಾತ್ರಿಯಲ್ಲಿ ಮಂತ್ರಜಪ ಸ್ನಾನ ದಾನ ಮುಂತಾದವುಗಳು ಒಂದೊಂದು ಅನಂತ ಫಲವನ್ನು ಕೊಡುತ್ತವೆ.

ಸರಸ್ವತೀ ಸ್ಥಾಪನೆ ಮತ್ತು ವಿಸರ್ಜನೆ

ಮೂಲೇ ತು ಸ್ಥಾಪಯೇದ್ದೇವೀಂ ಪೂರ್ವಾಷಾಢಾಸು ಪೂಜನಮ್ ।
ಉತ್ತರಾಸು ಬಲಿಂ ದದ್ಯಾತ್ ಶ್ರವಣೇ ತು ವಿಸರ್ಜಯೇತ್ ॥
ಮೂಲಾದೌ ಸ್ಥಾಪಯೇದ್ದೇವೀಂ ಶ್ರವಣಾಂತೇ ವಿಸರ್ಜಯೇತ್ ।

–ವಿಷ್ಣುತೀರ್ಥೀಯಂ

ಮೂಲಾನಕ್ಷತ್ರದಲ್ಲಿ ಸಚ್ಛಾಸ್ತ್ರಗ್ರಂಥಗಳನ್ನು ಒಂದಾಗಿ ಸೇರಿಸಿ ಪೀಠದಲ್ಲಿಟ್ಟು ಆ ಪುಸ್ತಕಗಳಲ್ಲಿ ಶ್ರೀವೇದವ್ಯಾಸದೇವರನ್ನೂ ಪರಶುರಾಮದೇವರನ್ನೂಆವಾಹನೆ ಮಾಡಬೇಕು, ಅಷ್ಟದಿಕ್ಪಾಲಕರ ಸ್ಥಾನದಲ್ಲಿ ಬಾದರಿ ಜೈಮಿನಿ ಸುಮಂತು ವೈಶಂಪಾಯನ ಆಶ್ಮರಥ್ಯ ಪೈಲ ಕಾಶಕೃತ್ಸ್ನ ಲೋಮಶ ಎಂಬ ಶ್ರೀವೇದವ್ಯಾಸರ ಶಿಷ್ಯರುಗಳನ್ನು ಆವಾಹನೆ ಮಾಡಬೇಕು, ಸಚ್ಛಾಸ್ತ್ರಾಭಿಮಾನಿಗಳಾದ ಬ್ರಹ್ಮಾದಿ ಸಕಲದೇವತೆಗಳನ್ನು, ಸರಸ್ವತಾದಿ ಸಕಲ ದೇವತಾಸ್ತ್ರೀಯರನ್ನೂ ಶ್ರೀಮಧ್ವಾಚಾರ್ಯರೇ ಮೊದಲಾದ ಸಕಲ ಸಚ್ಛಾಸ್ತ್ರಾಪ್ರವರ್ತಕರಾದ ಗುರುಗಳನ್ನೂ ಆವಾಹನೆ ಮಾಡಬೇಕು. ಆಶ್ವಿನಶುಕ್ಲಪಕ್ಷದ ಮೂಲಾನಕ್ಷತ್ರದಲ್ಲಿ ಆವಾಹನೆ ಮತ್ತು ಆವಾಹನಾಂಗವಾದ ಪೂಜೆಯನ್ನು ಮಾಡಬೇಕು. ಪೂರ್ವಾಷಾಢಾನಕ್ಷತ್ರದಲ್ಲಿ ಸಾಮಾನ್ಯಪೂಜೆಯನ್ನು ಮಾಡಬೇಕು. ಉತ್ತರಾಷಾಢಾನಕ್ಷತ್ರದಲ್ಲಿ ಬಲಿದಾನ ಅಂದರೆ ವಿಶೇಷ ನೈವೇದ್ಯ ಸಮರ್ಪಣೆಯನ್ನು ಹಾಗು ಸಂಜೆ ವಿಶೇಷವಾಗಿ ಸ್ವಸ್ತಿವಾಚನಾದಿಗಳನ್ನು ವೇದವ್ಯಾಸ ಪೂಜೆಯನ್ನು ಮಾಡಬೇಕು. ಶ್ರವಣಾನಕ್ಷತ್ರದಲ್ಲಿ ವಿಸರ್ಜನಾಂಗವಾದ ಪೂಜೆಯನ್ನು ಮಾಡಿ ವಿಸರ್ಜನೆ ಮಾಡಬೇಕು.

ಮಹಾನವಮೀ

ಈ ದಿನದಲ್ಲಿ ಅಶ್ವಪೂಜೆ ಗಜಪೂಜೆ ಚಂಡಿಕಾದಿತಾಮಸದೇವತೆಗಳ ಪೂಜೆ ಆಯುಧಪೂಜೆಗಳನ್ನೂ ದುರ್ಗಾದಿಸಾತ್ವಿಕ ದೇವತೆಗಳ ಪೂಜೆ ವ್ರತದಾನ ತಪಸ್ಸು ಮುಂತಾದವುಗಳನ್ನೂ ಮಾಡಬೇಕು. ಆದರಿಂದ ವಿದ್ಯಾಪ್ರಾಪ್ತಿ ಮತ್ತು ಲಕ್ಷ್ಮೀಪ್ರಾಪ್ತಿಯುಂಟಾಗುತ್ತದೆ.

ವಿಜಯದಶಮೀ

ಈ ದಿನದಲ್ಲಿ ದಾನ ಭಗವತ್ಪೂಜಾ ಬ್ರಾಹ್ಮಣರ ಭೋಜನಾದಿಗಳನ್ನು ಮಾಡಿಸಬೇಕು. ಕೋಟಿಗುಣಫಲವು ಬರುತ್ತದೆ. ಶತ್ರುಜಯ ಪಾಪಪರಿಹಾರ ಮತ್ತು ಭಗವತ್ಪ್ರೀತಿಯುಂಟಾಗುತ್ತದೆ. ಇದೇ ದಿನದಲ್ಲಿ ಅಪರಾಹ್ಣಕಾಲದಲ್ಲಿ ಗ್ರಾಮದಿಂದ ಈಶಾನ್ಯದಿಕ್ಕಿನಲ್ಲಿರುವ ಶಮೀವೃಕ್ಷವಿದ್ದಲ್ಲಿಗೆ ಹೋಗಿ, ಶಮೀಪೂಜೆಯನ್ನು ಮಾಡಬೇಕು.

ಅಮಂಗಲಾನಾಂ ಶಮನೀಂ ಶಮನೀಂ ದುಷ್ಕೃತಸ್ಯ ಚ ।
ದುಃಖಪ್ರಣಾಶಿನೀಂ ಧನ್ಯಾಂ ಪ್ರಪದ್ಯೇಽಹಂ ಶಮೀಂ ಶುಭಾಮ್ ।

ಎಂಬ ಮಂತ್ರದಿಂದ ಪೂಜಿಸಿ,

ಶಮೀ ಶಮಯತೇ ಪಾಪಂ ಶಮೀ ಲೋಹಿತಕಂಟಕಾ ।
ಧರಿತ್ರ್ಯರ್ಜುನಬಾಣಾನಾಂ ರಾಮಸ್ಯ ಪ್ರಿಯವಾದಿನೀ ॥
ಕರಿಷ್ಯಮಾಣಯಾತ್ರಾಯಾಂ ಯಥಾ ಕಾಲಂ ಸುಖಂ ಮಯಾ ।
ಶತ್ರುನಿರ್ವಿಘ್ನಕರ್ತ್ರೀ ತ್ವಂ ಭವ ಶ್ರೀರಾಮಪೂಜಿತೇ ॥

ಎಂಬ ಮಂತ್ರದಿಂದ ಪ್ರಾರ್ಥಿಸಬೇಕು. ಸೂರ್ಯಾಸ್ತವಾದ ಮೇಲೆ ನಕ್ಷತ್ರಗಳು ಅರ್ಧಮೂಡಿದ ಸಮಯ ಅಥವಾ ಹಗಲಿನಲ್ಲಿ 2 ಗಂಟೆಯಿಂದ 3 ಗಂಟೆಯ ವರೆಗಿನ ಕಾಲ ವಿಜಯಮುಹೂರ್ತವೆನಿಸುತ್ತದೆ. ಈ ವಿಜಯಮುಹೂರ್ತದಲ್ಲಿ ಎಲ್ಲಾ ಶುಭ ಕಾರ್ಯಗಳನ್ನು ಮಾಡಬಹುದು. ಆದರೆ ಮಾಸವಿಶೇಷಗಳಲ್ಲಿ ಹೇಳಲ್ಪಟ್ಟ ಚೌಲಾದಿಗಳನ್ನೂ, ದೇವಪ್ರತಿಷ್ಠಾದಿಗಳನ್ನೂ ಮಾಡಬಾರದು. ಈ ದಿನದಲ್ಲಿ ರಾಜರಿಗೆ ಪಟ್ಟಾಭಿಷೇಕವನ್ನು ಮಾಡಬಹುದು.

ಬುದ್ಧಜಯಂತಿ ಹಾಗು ಮಧ್ವಜಯಂತಿ

ಇದೇ ದಿನದಲ್ಲಿ ಬುದ್ಧರೂಪಿಯಾದ ಪರಮಾತ್ಮನು ಅವತರಿಸಿದ ದಿವಸ ಹಾಗು ಮಧ್ವಾಚಾರ್ಯರು ಅವತರಿಸಿದ ದಿವಸ. ಆದ್ದರಿಂದ ಬುದ್ಧರೂಪಿ ಪರಮಾತ್ಮನನ್ನು ಮಧ್ವಾಚಾರ್ಯರನ್ನು ವಿಶೇಷ ಪೂಜಿಸಬೇಕು.

ಆಶ್ವಿನಶುಕ್ಲ ಪೂರ್ಣಿಮಾ (ಕಾರ್ತಿಕಸ್ನಾನ)

ಈ ದಿನದಿಂದ ಆರಂಭಿಸಿ ಕಾರ್ತಿಕಶುಕ್ಲ ಹುಣ್ಣಿಮೆಯ ವರೆಗೆ ಪ್ರತಿದಿನವೂ ಅರುಣೋದಯ ಕಾಲದಲ್ಲಿ ತೀರ್ಥಾದಿಗಳಿಗೆ ಹೋಗಿ ಕಾರ್ತಿಕಸ್ನಾನ ಸಂಕಲ್ಪವನ್ನು ಮಾಡಿ.

ನಮಃ ಕಮಲನಾಭಾಯ ನಮಸ್ತೇ ಜಲಶಾಯಿನೇ ।
ನಮಸ್ತೇಽಸ್ತು ಹೃಷೀಕೇಶ ಗೃಹಾಣಾರ್ಘ್ಯಂ ನಮೋಽಸ್ತು ತೇ

ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಟ್ಟು –

ಕಾರ್ತಿಕೇಽಹಂ ಕರಿಷ್ಯಾಮಿ ಪ್ರಾತಃಸ್ನಾನಂ ಜನಾರ್ದನ ।
ಪ್ರೀತ್ಯರ್ಥಂ ತವ ದೇವೇಶ ದಾಮೋದರ ಮಯಾ ಸಹ ॥
ಧ್ಯಾತ್ವಾಽಹಂ ತ್ವಾಂ ಚ ದೇವೇಶ ಜಲೇಽಸ್ಮಿನ್ ಸ್ನಾತುಮುದ್ಯತಃ ।
ತವ ಪ್ರಸಾದಾತ್ಪಾಪಂ ಮೇ ದಾಮೋದರ ವಿನಶ್ಯತು ॥

ಈ ಮಂತ್ರದಿಂದ ಸ್ನಾನ ಮಾಡಿ–

ನಿತ್ಯನೈಮಿತ್ತಿಕೇ ಕೃಷ್ಣ ಕಾರ್ತಿಕೇ ಪಾಪನಾಶನೇ ।
ಗೃಹಾಣಾರ್ಘ್ಯಂ ಮಯಾ ದತ್ತಂ ರಾಧಯಾ ಸಹಿತೋ ಹರೇ ॥
ವ್ರತಿನಃ ಕಾರ್ತಿಕೇ ಮಾಸಿ ಸ್ನಾತಸ್ಯ ವಿಧಿವನ್ಮಮ ।
ಗೃಹಾಣಾರ್ಘ್ಯಂ ಮಯಾ ದತ್ತಂ ರಾಧಯಾ ಸಹಿತೋ ಹರೇ ॥

ಎಂಬ ಮಂತ್ರಗಳಿಂದ ಎರಡು ಅರ್ಘ್ಯಗಳನ್ನೂ ಕೊಡಬೇಕು. ಈ ತಿಂಗಳಿನಲ್ಲಿ ಹವಿಷ್ಯಾನ್ನಭಕ್ಷಣ ಮಾಡುತ್ತಾ ಮಂತ್ರಗಳನ್ನು ಜಪಿಸುತ್ತಾ ಜಿತೇಂದ್ರಿಯನಾಗಿ ಸ್ನಾನವನ್ನು ಮಾಡಿದರೆ ಸಕಲಪಾಪಪರಿಹಾರವಾಗುತ್ತದೆ. ಕುರುಕ್ಷೇತ್ರ ಗಂಗಾ ಪುಷ್ಕರಾದಿ ವಿಶೇಷ ತೀರ್ಥಗಳಲ್ಲಿ ಸ್ನಾನಕ್ಕೆ ವಿಶೇಷ ಫಲವಿದೆ. ಸೂರ್ಯ ಶಿವ ಭಾಗೀರಥೀ, ವಿಷ್ಣು ಇವರನ್ನು ಸ್ಮರಿಸಿ ಹೊಕ್ಕಳಿಗೆ ಸಮವಾದ ನೀರಿನಲ್ಲಿಳಿದು ಸ್ನಾನ ಮಾಡಬೇಕು. ಸ್ನಾನ ಮತ್ತು ಪ್ರಾತಃಸಂಧ್ಯಾವಂದನಗಳನ್ನು ಮಾಡಿ ಅರುಣೋದಯಕಾಲದಲ್ಲಿ ಕಾರ್ತಿಕಸ್ನಾನವನ್ನು ಮಾಡಬೇಕೆಂದೂ ತತ್ಪೂರ್ವದಲ್ಲಿ ಮಾಡಲು ಅಧಿಕಾರವಿಲ್ಲವೆಂದೂ ನಿರ್ಣಯಸಿಂಧುವಿನಲ್ಲಿ ಹೇಳಿದೆ. ಇತರಕಾಲದಲ್ಲಿ ಸೂರ್ಯೋದಯಕ್ಕಿಂತ ಪೂರ್ವದಲ್ಲಿ ಸಂಧ್ಯಾವಂದನಸಮಾಪ್ತಿಯು ನಿಷಿದ್ಧವಾಗಿದೆ. ಆದರೆ ಕಾರ್ತಿಕಮಾಸದಲ್ಲಿ ಆ ನಿಷೇಧವಿಲ್ಲವೆಂದು ಅವರ ಅಭಿಪ್ರಾಯ. ಇತರ ಧರ್ಮಶಾಸ್ತ್ರಕರರು ಹಾಗೆ ಹೇಳಿಲ್ಲ.

ಒಂದು ತಿಂಗಳು ಸ್ನಾನಮಾಡಲು ಶಕ್ತಿಯಿಲ್ಲದವರು ಕೊನೆಯ 3 ದಿನಗಳಲ್ಲಿ ಮಾಡಬೇಕು. ಈ ತಿಂಗಳಿನಲ್ಲಿ ಲಕ್ಷತುಲಸೀಅರ್ಚನೆ, ತುಲಸೀಗಿಡಗಳನ್ನು ಬಿತ್ತಿ ಬೆಳೆಯಿಸುವುದು ಅಥವಾ ಸ್ಪರ್ಶಿಸುವುದು ಮತ್ತು ಅದರ ನೆರಳಿನಲ್ಲಿ ಶ್ರಾದ್ಧ ಮುಂತಾದವುಗಳಿಂದ ಪಿತೃತೃಪ್ತಿ, ಪಾಪಪರಿಹಾರ, ಮತ್ತು ಮುಕ್ತಿ ಏರ್ಪಡುತ್ತದೆ. ಅರುಣೋದಯದಲ್ಲಿ ದಾಮೋದರನ ಮುಂದೆ ಜಾಗರಣೆ ಮಾಡಿದರೆ

ಸಹಸ್ರಗೋದಾನ ಫಲ. ಶಿವ ಮತ್ತು ವಿಷ್ಣುಮಂದಿರಗಳು ಅವು ಇಲ್ಲದಿದ್ದರೆ ಇತರ ದೇವಾಲಯಗಳು ಅವೂ ಇಲ್ಲದಿದ್ದರೆ ಅಶ್ವತ್ಥದ ನೆರಳು ಅಥವಾ ತುಳಸೀವನಗಳಲ್ಲಿ ದೇವರನಾಮಗಳ ಗಾಯನ ನರ್ತನ ಅಥವಾ ವಾದ್ಯಘೋಷವನ್ನು ಮಾಡುವವರಿಗೆ ಸಹಸ್ರಗೋದಾನಫಲ ಮುಂತಾದ ಫಲವಿದೆ. ಅಥವಾ ಅವರಿಗೆ ದ್ರವ್ಯವನ್ನು ಕೊಡುವವರು ಗೌರವಿಸುವವರು ಮತ್ತು ನೋಡುವವರಿಗೆ 6ರಲ್ಲಿ ಒಂದು ಭಾಗ ಪುಣ್ಯ ಬರುತ್ತದೆ. ಇದು ಯಾವುದೂ ಇಲ್ಲದಿದ್ದರೆ ಬ್ರಾಹ್ಮಣರ ವಿಷ್ಣುಭಕ್ತರ ಅಶ್ವತ್ಥ ಮತ್ತು ಆಲದ ಮರಗಳ ಸೇವೆಯಿಂದ ಮೇಲ್ಕಂಡ ಫಲವು ಬರುತ್ತದೆ. ಈ ಮಾಸದಲ್ಲಿ ದೀಪದಾನವು ವಿಶೇಷಫಲಪ್ರದವಾಗಿದೆ. ಎಲ್ಲಾ ತಿಂಗಳುಗಳಲ್ಲಿ ಸಪ್ತಮಿಯಲ್ಲಿ ನೆಲ್ಲಿ ಮತ್ತು ಎಳ್ಳು, ಆದಿತ್ಯವಾರ ನೆಲ್ಲಿ, ಅಷ್ಟಮಿಯಲ್ಲಿ ತೆಂಗಿನಕಾಯಿಯನ್ನು ಬಿಡಬೇಕು. ದೇವರ ಮುಂದೆ ರಂಗವಲ್ಲಿಯಿಂದ ಅಲಂಕರಿಸುವ ಸ್ತ್ರೀಯರಿಗೆ ಏಳು ಜನ್ಮಗಳಲ್ಲಿ ವೈಧವ್ಯವಿಲ್ಲ.

ಆಕಾಶದೀಪ

ಈ ತಿಂಗಳಿನಲ್ಲಿ ಸೂರ್ಯಾಸ್ತವಾದ ಮೇಲೆ ಮನೆಯ ಸಮೀಪದಲ್ಲಿ ಪುರುಷ ಪ್ರಮಾಣ ಎತ್ತರವುಳ್ಳ ಯಜ್ಞೋಪಯುಕ್ತವಾದ ಮರದ ಮೇಲೆ ಮಧ್ಯದಲ್ಲಿ ದೊಡ್ಡ ಆಕಾಶದೀಪ ಮತ್ತು ಸುತ್ತಲೂ ಸಣ್ಣ ಆಕಾಶದೀಪಗಳನ್ನು

ದಾಮೋದರಾಯ ನಭಸಿ ತುಲಾಯಾಂ ದೋಲಯಾ ಸಹ ।
ಪ್ರದೀಪಂ ತೇ ಪ್ರಯಚ್ಛಾಮಿ ನಮೋಽನಂತಾಯ ವೇಧಸೇ ॥

ಎಂಬ ಮಂತ್ರದಿಂದ ಸಮರ್ಪಿಸಿದರೆ ಸಂಪತ್ಪ್ರಾಪ್ತಿಯಾಗುತ್ತದೆ.

ಕೋಜಾಗರವ್ರತಂ

ಈ ದಿನ ಸೂರ್ಯಾಸ್ತವಾದನಂತರದಲ್ಲಿ ಅಕ್ಕಿಯ ರಾಶಿಯಲ್ಲಿ ಪದ್ಮಾಸನದಲ್ಲಿ ಲಕ್ಷ್ಮೀದೇವಿಯನ್ನು ಧ್ಯಾನ ಮಾಡಿ 'ಓಂ ಲಕ್ಷ್ಮ್ಯೈ ನಮಃ' ಎಂಬ ಮಂತ್ರದಿಂದ ಷೋಡಶೋಪಚಾರ ಪೂಜೆಯನ್ನು ಮಾಡಬೇಕು.

ನಮಸ್ತೇ ಸರ್ವದೇವಾನಾಂ ವರದಾಽಸಿ ಹರಿಪ್ರಿಯೇ ।
ಯಾ ಗತಿಸ್ತ್ವತ್ಪ್ರಪನ್ನಾನಾಂ ಸಾ ಮೇ ಭೂಯಾತ್ತ್ವದರ್ಚನಾತ್ ॥

ಎಂಬ ಮಂತ್ರದಿಂದ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು.

ಚತುರ್ದಂತಸಮಾರೂಢೋ ವಜ್ರಪಾಣಿಃ ಪುರಂದರಃ ।
ಶಚೀಪತಿಶ್ಚ ಧ್ಯಾತವ್ಯೋ ನಾನಾಭರಣಭೂಷಿತಃ ॥

ಎಂದು ಇಂದ್ರನನ್ನು ಧ್ಯಾನಮಾಡಿ ಅಕ್ಕಿಯ ರಾಶಿಯಲ್ಲಿ 'ಇಂದ್ರಾಯ ನಮಃ' ಎಂಬ ಮಂತ್ರದಿಂದ ಷೋಡಶೋಪಚಾರಪೂಜೆಯನ್ನು ಮಾಡಿ.

ವಿಚಿತ್ರೈರಾವತಸ್ಥಾಯ ಭಾಸ್ವತ್ಕುಲಿಶಪಾಣಯೇ ।
ಪೌಲೋಮ್ಯಾಲಿಂಗಿತಾಂಗಾಯ ಸಹಸ್ರಾಕ್ಷಾಯ ತೇ ನಮಃ ॥

ಎಂಬ ಮಂತ್ರದಿಂದ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು.

ಹೀಗೆ ಮಹಾಲಕ್ಷ್ಮೀದೇವಿಯನ್ನೂ ದೇವೇಂದ್ರನನ್ನೂ ಪೂಜಿಸಿ ನಮಸ್ಕರಿಸಬೇಕು. ಎಳ್ನೀರು ಅವಲಕ್ಕಿ ಇವೆರಡನ್ನು ಲಕ್ಷ್ಮೀದೇವಿಯರಿಗೂ ಇಂದ್ರನಿಗೂ ಸಮರ್ಪಿಸಬೇಕು. ಅದನ್ನು ದೇವತೆಗಳಿಗೂ ಪಿತೃಗಳಿಗೂ ಸಮರ್ಪಿಸಿ ಬಂಧುಗಳೊಡನೆ ಯಜಮಾನನು ಭಕ್ಷಣ ಮಾಡಬೇಕು. ಆಮೇಲೆ ಚದುರಂಗ ಆಟವನ್ನು ಆಡುತ್ತಾ ಜಾಗರಣೆಯನ್ನು ಮಾಡಬೇಕು. ಈ ದಿನ ರಾತ್ರಿಯಲ್ಲಿ ಲಕ್ಷ್ಮೀದೇವಿಯು "ಯಾರು ಚದುರಂಗವನ್ನು ಆಡುತ್ತಾ ಎಚ್ಚರವಾಗಿದ್ದಾರೋ ಅವರಿಗೆ ಬೇಕಾದ ವರವನ್ನು ಕೊಡುತ್ತೇನೆ." ಎಂದು ಘೋಷಣೆ ಮಾಡುತ್ತಾ ಬರುತ್ತಿರುವಳು. ಹಿಂದೆ ಹೇಳಿದಂತೆ ನಡೆದುಕೊಳ್ಳುವವರಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುತ್ತಾಳೆ.

ಆಶ್ವಿನಕೃಷ್ಣದ್ವಾದಶೀ ಗೋವತ್ಸದ್ವಾದಶೀ

ಈ ದಿನದಲ್ಲಿ ಕರುವುಳ್ಳ ಕರುವಿನ ಬಣ್ಣವುಳ್ಳ ತುಂಬಾ ಹಾಲನ್ನು ಕರೆಯುವ ಗೋವನ್ನು ಪೂಜಿಸಿ ಗೋವಿನ ಕಾಲಿನಲ್ಲಿ ತಾಮ್ರಪಾತ್ರದಿಂದ–

ಕ್ಷೀರೋದಾರ್ಣವಸಂಭೂತೇ ಸುರಾಸುರನಮಸ್ಕೃತೇ ।
ಸರ್ವದೇವಮಯೇ ಮಾತರ್ಗೃಹಾಣಾರ್ಘ್ಯಂ ನಮೋऽಸ್ತು ತೇ ॥

ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು. ಆಮೇಲೆ ಉದ್ದು ಮುಂತಾದ ಬೇಳೆಗಳಿಂದ ಮಾಡಿದ ವಡೆಗಳನ್ನು ಗೋಗ್ರಾಸವಾಗಿ ಕೊಟ್ಟು,

ಸರ್ವದೇವಮಯೇ ದೇವಿ ಸರ್ವದೇವೈರಲಂಕೃತೇ ।
ಮಾತರ್ಮಮಾಭಿಲಷಿತಂ ಸಫಲಂ ಕುರು ನಂದಿನಿ ॥

ಎಂಬ ಮಂತ್ರದಿಂದ ಪ್ರಾರ್ಥಿಸಬೇಕು.

ಈ ದಿನದಲ್ಲಿ ಎಣ್ಣೆಯಲ್ಲಿ ಪಕ್ವವಾದದ್ದನ್ನೂ ಗೋವಿನ ಹಾಲು, ಮೊಸರು, ತುಪ್ಪ ಮತ್ತು ಮಜ್ಜಿಗೆಗಳನ್ನೂ ಭಕ್ಷಿಸಬಾರದು. ರಾತ್ರಿಯಲ್ಲಿ ಉದ್ದಿನಿಂದ ಮಿಶ್ರವಾದ ಅನ್ನವನ್ನು ತಿಂದು ಬ್ರಹ್ಮಚರ್ಯದಿಂದ ನೆಲದಲ್ಲಿ ಮಲಗಬೇಕು.

ನೀರಾಜನ

ಈ ದಿನದಿಂದ 5 ದಿನಗಳವರೆಗೆ ಸೂರ್ಯಾಸ್ತವಾದ ಮೇಲೆ ದೇವತೆಗಳು ಮತ್ತು ಬ್ರಾಹ್ಮಣರು ಮುಂತಾದ ಜ್ಞಾನವಯೋವೃದ್ಧರಿಗೂ ಪೂಜ್ಯ ಸುಮಂಗಲೆಯರಿಗೂ ಆರತಿಯನ್ನು ಮಾಡಬೇಕು.

ಜಲಪೂರಣ ತ್ರಯೋದಶೀ ಮತ್ತು ಯಮದೀಪದಾನ

ಈ ದಿನದಲ್ಲಿ ಸೂರ್ಯಾಸ್ತವಾದ ಕೂಡಲೇ ಅಪಮೃತ್ಯುಪರಿಹಾರಕ್ಕಾಗಿ ಯಮದೇವರ ಪ್ರೀತಿಗಾಗಿ ಮನೆಯ ಹೊರಗೆ ದೀಪವನ್ನಿಡಬೇಕು. ಈ ದಿನದಲ್ಲಿ ರಾತ್ರಿಯಲ್ಲಿ ಗಂಗಾಪೂಜೆಯನ್ನು ಮಾಡಿ ನೀರನ್ನು ತುಂಬಬೇಕು.

ನರಕಚತುರ್ದಶೀ

ಈ ದಿನದಲ್ಲಿ ಮಹಾಲಕ್ಷ್ಮಿಯು ಹಾಸಿಗೆಯಿಂದ ಏಳುತ್ತಾಳೆ. ಆದ್ದರಿಂದ ಅವಳನ್ನು ವಿಧಿಪೂರ್ವಕವಾಗಿ ಪೂಜಿಸಬೇಕು. ಹಾಗೆ ಪೂಜಿಸದವನಲ್ಲಿ ಲಕ್ಷ್ಮೀದೇವಿಯು ಕುಪಿತಳಾಗುತ್ತಾಳೆ. ಈ ದಿನದಲ್ಲಿಯೇ ನರಕಾಸುರನನ್ನು ಕೊಂದದ್ದರಿಂದ ಈ ಪರಮಪುಣ್ಯ ತಿಥಿಗೆ ನರಕಚತುರ್ದಶೀ ಎಂಬ ಹೆಸರು ಬಂತು. ಈ ದಿನದಲ್ಲಿ ಯತಿಗಳು ಕಾರ್ತಿಕವ್ರತವನ್ನು ಸ್ವೀಕರಿಸಿದವರು ಮತ್ತು ವಿಧವೆಯರು ಅಭ್ಯಂಗವನ್ನು ಮಾಡಲೇಬೇಕು. ಇದರಿಂದ ಅವರ ವ್ರತ ಮತ್ತು ನಿಯಮಗಳಿಗೆ ಲೋಪವಿಲ್ಲ. ಹೀಗೆಂದ ಮೇಲೆ ಸರ್ವರೂ ಅಭ್ಯಂಗವನ್ನು ಮಾಡಲೇಬೇಕೆಂದು ಸಿದ್ಧವಾಯಿತು. ಈ ದಿನದಲ್ಲಿ ಅಭ್ಯಂಗವನ್ನು ಮಾಡದಿರುವ ಪುರುಷನು ಏಳು ಜನ್ಮಗಳಲ್ಲಿ ಬಡವನೂ ಸ್ತ್ರೀಯು ವಿಧವೆಯೂ ಆಗುತ್ತಾರೆ. ಬ್ರಾಹ್ಮಣರಿಗೆ ಬಿಸಿನೀರಿನಿಂದ ತೈಲಾಭ್ಯಂಗವನ್ನು ಮಾಡಿಸುವವರ ಮನೆಯಲ್ಲಿ ಎಲ್ಲಾ ಜನ್ಮಗಳಲ್ಲಿಯೂ ಲಕ್ಷ್ಮೀದೇವಿಯು ಇರುತ್ತಾಳೆ. ತೈಲಾಭ್ಯಂಗದಿಂದ ತೃಪ್ತರಾದ ಪಿತೃಗಳು ಅನುಗ್ರಹಿಸುತ್ತಾರೆ. ಈ ಅಭ್ಯಂಗವನ್ನು ಚಂದ್ರೋದಯಕಾಲದಲ್ಲಿ ನರಕಚತುರ್ದಶೀ ತಿಥಿಯು ಯಾವ ದಿನದಲ್ಲಿ ಇದೆಯೋ ಆ ದಿನದಲ್ಲಿ ಚಂದ್ರೋದಯಕಾಲದಲ್ಲಿ ಮಾಡಬೇಕು. ಈ ವಿಷಯವನ್ನು–

ಆಶ್ವಿನಸ್ಯಾಸಿತೇ ಪಕ್ಷೇ ಚತುರ್ದಶ್ಯಾಂ ವಿಧೂದಯೇ ।
ಸ್ನಾತವ್ಯಂ ತಿಲತೈಲೇನ ನರೈರ್ನರಕಭೀರುಭಿಃ ॥

ಎಂದು ವರಾಹಪುರಾಣವಚನವು ತಿಳಿಸಿದೆ. ಈ ದಿನದಲ್ಲಿ ಅಭ್ಯಂಗವನ್ನು ಮಾಡಿಕೊಳ್ಳುವಾಗ ನೇಗಿಲಿನಿಂದ ತೆಗೆದ ಮಣ್ಣಿನೊಡನೆ ಉತ್ತರಾಣಿಕಡ್ಡಿಯನ್ನು ಸೇರಿಸಿ,

ಸಿತಾಲೋಷ್ಟಸಮಾಯುಕ್ತ ಸಕಂಟಕದಲಾನ್ವಿತ ।
ಹರ ಪಾಪಮಪಾಮಾರ್ಗ ಭ್ರಾಮ್ಯಮಾಣಃ ಪುನಃ ಪುನಃ ॥

ಎಂಬ ಮಂತ್ರದಿಂದ ಮೂರುಸುತ್ತು ತಿರುಗಿಸಬೇಕು.

ಅಭ್ಯಂಗಸ್ನಾನ ಮುಗಿದಕೂಡಲೇ ತಿಲಕಧಾರಣೆಯನ್ನು ಮಾಡಿಕೊಂಡು ಕಾರ್ತಿಕಸ್ನಾನವನ್ನು ಮಾಡಬೇಕು. ವಿಹಿತಕಾಲದಲ್ಲಿ ಅಭ್ಯಂಗವನ್ನು ಮಾಡುವುದಾಗದಿದ್ದರೆ ಸೂರ್ಯೋದಯಾನಂತರದಲ್ಲಾಗಲೀ ಸರ್ವರೂ ಅವಶ್ಯವಾಗಿ ಅಭ್ಯಂಗವನ್ನು ಮಾಡಿಕೊಳ್ಳಲೇಬೇಕು. ಕಾರ್ತಿಕಸ್ನಾನಾನಂತರದಲ್ಲಿ ಪಿತೃತರ್ಪಣ ಮಾಡುವ ಅಧಿಕಾರವುಳ್ಳವರು :–

ಯಮಾಯ ಧರ್ಮರಾಜಾಯ ಮೃತ್ಯವೇ ಚಾಂತಕಾಯ ಚ ।
ವೈವಸ್ವತಾಯ ಕಾಲಾಯ ಸರ್ವಭೂತಕ್ಷಯಾಯ ಚ ॥
ಔದುಂಬರಾಯ ದಧ್ನಾಯ ನೀಲಾಯ ಪರಮೇಷ್ಠಿನೇ ।
ವೃಕೋದರಾಯ ಚಿತ್ರಾಯ ಚಿತ್ರಗುಪ್ತಾಯ ವೈ ನಮಃ ॥

ಎಂಬ ಶ್ಲೋಕದಲ್ಲಿರುವ ಚತುರ್ಥ್ಯಂತವಾದ 14 ಮಂತ್ರಗಳೊಡನೆ ನಮಃಶಬ್ದವನ್ನು ಜೋಡಿಸಿ (ಯಮಾಯ ನಮಃ ಯಮಂ ತರ್ಪಯಾಮಿ ಎಂಬಂತೆ) ದಕ್ಷಿಣಾಭಿಮುಖವಾಗಿ ತಿಲತರ್ಪಣವನ್ನು ಕೊಡಬೇಕು. ಈ ತಿಲತರ್ಪಣವನ್ನು ಯಮನು ದೇವತೆಯಾದ್ದರಿಂದ ಬೆರಳಿನ ತುದಿಯಿಂದ (ದೇವತೀರ್ಥದಿಂದ) ಸವ್ಯದಿಂದ (ಯಜ್ಞೋಪವೀತವನ್ನು ಬಲಕ್ಕೆ ಹಾಕಿಕೊಂಡು) ಕೊಡಬೇಕು. ಈ ವಿಷಯವು ಸ್ಮೃತಿಮುಕ್ತಾವಳಿಯಲ್ಲಿ

ದಕ್ಷಿಣಾಭಿಮುಖೋ ಭೂತ್ವಾ ತಿಲೈಃ ಸವ್ಯಂ ಸಮಾಶ್ರಿತಃ ।
ದೇವತೀರ್ಥೇನ ದೇವತ್ವಾತ್ ತಿಲೈಃ ಪ್ರೇತಾಧಿಪೋ ಯತಃ ॥

ಎಂಬ ವಚನದಿಂದ ಸಮರ್ಥಿಸಲ್ಪಟ್ಟಿದೆ.

ಉಲ್ಕಾಪ್ರದರ್ಶನ

ಈ ದಿನದಿಂದ 3 ದಿನ ಸೂರ್ಯಾಸ್ತವಾದಮೇಲೆ ಪ್ರದೋಷಕಾಲದಲ್ಲಿ ನಮ್ಮ ಕುಲದಲ್ಲಿ ಹುಟ್ಟಿ ಬೆಂಕಿಯಲ್ಲಿ ಬಿದ್ದು ಸತ್ತವರು, ಸಿಡಿಲು ಮುಂತಾದ ಪ್ರಬಲಾಗ್ನಿಯಿಂದ ಸತ್ತವರೇ ಮೊದಲಾದವರಿಗೆ ಸದ್ಗತಿಯಾಗುವುದಕ್ಕಾಗಿಯೂ, ಮಹಾಲಯಕ್ಕಾಗಿ ಯಮಲೋಕದಿಂದ ಬಂದ ಪಿತೃಗಳಿಗೆ ಹಿಂದಿರುಗಿ ಹೋಗುವಾಗ ಹಾದಿ ತಿಳಿಯುವುದಕ್ಕಾಗಿಯೂ ದೇವಾಲಯ ಮಠ ಉದ್ಯಾನ ರಸ್ತೆ ಗೋಶಾಲೆ ಅಶ್ವಶಾಲೆ ಮುಂತಾದ ಸ್ಥಳಗಳಲ್ಲಿ ಸುಂದರವಾದ ದೀಪಗಳನ್ನು ಅಥವಾ ಕೊಳ್ಳಿಗಳನ್ನು ಹಚ್ಚಿ

ಅಗ್ನಿದಗ್ಧಾಶ್ಚ ಯೇ ಜೀವಾ ಯೇಽಪ್ಯದಗ್ಧಾಃ ಕುಲೇ ಮಮ ।
ಉಜ್ಜ್ವಲಜ್ಯೋತಿಷಾ ದಗ್ಧಾಸ್ತೇ ಯಾಂತು ಪರಮಾಂ ಗತಿಮ್ ॥
ಯಮಲೋಕಂ ಪರಿತ್ಯಜ್ಯ ಆಗತಾ ಯೇ ಮಹಾಲಯೇ ।
ಉಜ್ವಲಜ್ಯೋತಿಷಾ ವರ್ತ್ಮ ಪ್ರಪಶ್ಯಂತು ವ್ರಜಂತು ತೇ ॥

ಎಂಬ ಮಂತ್ರದಿಂದ ಇಡಬೇಕು.

ಈ ದಿನ ರಾತ್ರಿಯಲ್ಲಿ ಭೋಜನವನ್ನು ಅವಶ್ಯವಾಗಿ ಮಾಡಬೇಕು. ಅದರಿಂದ ಮಹಾಲಾಭವಿದೆ.

ಆಶ್ವಿನ ಅಮಾವಾಸ್ಯ (ದೀಪಾವಳೀ)

ಸಾಯಂಕಾಲಕ್ಕೆ ಅಮಾವಾಸ್ಯೆ ಇರುವ ದಿವಸ ಲಕ್ಷ್ಮೀಪೂಜೆಯನ್ನು ಮಾಡಿ ಊಟ ಮಾಡಬೇಕು. ಇದೇ ದಿನದಲ್ಲಿ ಅರ್ಧರಾತ್ರಾನಂತರದಲ್ಲಿ ಊರಿನ ಹೆಂಗಸರು ಅಂಗಳದಿಂದ ಅಲಕ್ಷ್ಮಿಯನ್ನು ಓಡಿಸಬೇಕು. ಅಂದರೆ ಅಂಗಳದಲ್ಲಿ ಕಸಗೂಡಿಸಿ ನೀರು ಚೆಲ್ಲಬೇಕು.

ಕಾರ್ತಿಕಮಾಸ ವಿಶೇಷ ಧರ್ಮಗಳು

ಬಲಿಪ್ರತಿಪತ್

ಈ ದಿನದಲ್ಲಿ ರಾಜನು ಪಂಚವರ್ಣರಂಗವಲ್ಲಿಯಿಂದಲೂ ಉಳಿದವರು ಬಿಳಿ ಅಕ್ಕಿಹಿಟ್ಟಿನಿಂದಲೂ ದ್ವಿಭುಜನಾದ ಬಲಿಯನ್ನು ಬರೆದು–

ಬಲಿರಾಜ ನಮಸ್ತುಭ್ಯಂ ವಿರೋಚನಸುತ ಪ್ರಭೋ ।
ಭವಿಷ್ಯೇಂದ್ರ ಸುರಾರಾತೇ ಪೂಜೇಯಂ ಪ್ರತಿಗೃಹ್ಯತಾಂ ॥

ಎಂಬ ಮಂತ್ರದಿಂದ ಪೂಜಿಸಿ ಬಲಿಪ್ರೀತ್ಯರ್ಥವಾಗಿ ಸ್ವಲ್ಪದಾನ ಮಾಡಿದರೂ ವಿಷ್ಣುಪ್ರೀತಿಯಾಗುತ್ತದೆ. ಈ ದಿನದಲ್ಲಿ ಅರುಣೋದಯಕಾಲದಲ್ಲಿ ದ್ಯೂತವನ್ನಾಡಬೇಕು. ಆ ಆಟದಲ್ಲಿ ಜಯಿಸಿದವನಿಗೆ ಇಡೀ ವರ್ಷದಲ್ಲಿ ಜಯವಾಗುತ್ತದೆ. ಶಿಷ್ಟಬ್ರಾಹ್ಮಣರೊಡನೆ ಉತ್ತಮಭೋಜನವನ್ನು ಮಾಡಬೇಕು. ಈ ದಿನದಲ್ಲಿ ದೀಪದಾನ ಮಾಡಿದರೆ ಲಕ್ಷ್ಮಿಯು ಸ್ಥಿರವಾಗಿ ನಿಲ್ಲುವಳು. ದೀಪಗಳಿಂದ ಆರತಿಯನ್ನು ಮಾಡುವುದರಿಂದ ನರಕಚತುರ್ದಶೀ ಅಮಾವಾಸ್ಯಾ ಮತ್ತು ಬಲಿ ದಿನಗಳಿಗೆ "ದೀಪಾವಳೀ" ಎಂದು ಹೆಸರು. ಆದ್ದರಿಂದ ಯಾರ ಮನೆಯಲ್ಲಿ ಈ ದಿನಗಳಲ್ಲಿ ದೀಪವು ಬೆಳಗುವುದಿಲ್ಲವೋ ಅವರ ಮನೆಯಲ್ಲಿ ಕುಲದೀಪವು ಬೆಳಗಲಾರದು.

ಲಕ್ಷ್ಮೀಪೂಜಾ–ಕುಬೇರಪೂಜಾ–ಗೋಪೂಜಾ

ಇದೇ ದಿನದಲ್ಲಿ ಲಕ್ಷ್ಮೀ ಮತ್ತು ಕುಬೇರನ ಪೂಜೆಯನ್ನು ಮಾಡಬೇಕು. ಗೋವುಗಳನ್ನೂ ಕರುಗಳನ್ನೂ ಎತ್ತುಗಳನ್ನೂ ಅಲಂಕರಿಸಿ

ಲಕ್ಷ್ಮೀರ್ಯಾ ಲೋಕಪಾಲಾನಾಂ ಧೇನುರೂಪೇಣ ಸಂಸ್ಥಿತಾ ।
ಘೃತಂ ವಹತಿ ಯಜ್ಞಾರ್ಥೇ ಮಮ ಪಾಪಂ ವ್ಯಪೋಹತು ॥
ಅಗ್ರತಃ ಸಂತು ಮೇ ಗಾವೋ ಗಾವೋ ಮೇ ಸಂತು ಪೃಷ್ಠತಃ ।
ಗಾವೋ ಮೇ ಹೃದಯೇ ಸಂತು ಗವಾಂ ಮಧ್ಯೇ ವಸಾಮ್ಯಹಂ ॥

ಎಂಬ ಮಂತ್ರಗಳಿಂದ ಪೂಜಿಸಿ ಆ ದಿನದಲ್ಲಿ ಅವುಗಳಿಂದ ಕೆಲಸವನ್ನು ಮಾಡಿಸಬಾರದು. ಹಾಲು ಕರಿಯಬಾರದು.

ಗೊವರ್ಧನಪೂಜಾ

ಗೋವರ್ಧನಪರ್ವತಕ್ಕೆ ಸಮೀಪದಲ್ಲಿದ್ದವರು ಪ್ರತ್ಯಕ್ಷಗೊವರ್ಧನ ಪರ್ವತವನ್ನೂ ದೂರದಲ್ಲಿದ್ದವರು ಗೋಮಯ ಅಥವಾ ಅನ್ನದಿಂದ ಗೋವರ್ಧನಪರ್ವತವನ್ನೂ ಮಾಡಿ ಪೂಜಿಸಬೇಕು.

ಬಲಿರಾಜ್ಞೋ ದ್ವಾರಪಾಲೋ ಭವಾನದ್ಯ ಭವ ಪ್ರಭೋ ।
ನಿಜವಾಕ್ಸಾಧನಾರ್ಥಾಯ ಸಗೋವರ್ಧನ ಗೋಪತೇ ॥

ಎಂಬ ಮಂತ್ರದಿಂದ ಗೋವರ್ಧನ ಸಹಿತನಾದ ಗೋವಿಂದನನ್ನು ಆವಾಹನೆ ಮಾಡಿ–

ಗೋಪಾಲಮೂರ್ತೇ ವಿಶ್ವೇಶ ಶಕ್ರೋತ್ಸವವಿಭೇದಕ ।
ಗೋವರ್ಧನಕೃತಛತ್ರ ಪೂಜಾಂ ಮೇ ಹರ ಗೋಪತೇ ॥
ಗೋವರ್ಧನಧರಾಪಾರಗೋಕುಲತ್ರಾಣಕಾರಕ ।
ವಿಷ್ಣುಬಾಹುಕೃತಛಾಯ ಗವಾಂ ಕೋಟಿಪ್ರದೋಭವ ॥

ಈ ಮಂತ್ರಗಳಿಂದ ಶ್ರೀಕೃಷ್ಣನನ್ನೂ ಗೋವರ್ಧನಪರ್ವತವನ್ನೂ ಷೋಡಶೋಪಚಾರಗಳಿಂದ ಪೂಜಿಸಿ ಯಥಾಶಕ್ತಿ ನೈವೇದ್ಯಸಮರ್ಪಣೆ ಮಾಡಬೇಕು. ಅದಕ್ಕೆ ಅಂಗವಾಗಿ ಪ್ರತ್ಯಕ್ಷ ಗೋವು ಅಥವಾ ಮಣ್ಣಿನ ಗೋವಿನಲ್ಲಿ ಹಿಂದೆ ಹೇಳಿದಂತೆ ಗೋವಿನ ಮಂತ್ರಗಳಿಂದ ಪೂಜೆಯನ್ನು ಮಾಡಿ ಹುಲ್ಲನ್ನು ನೈವೇದ್ಯ ಮಾಡಿ ಬ್ರಾಹ್ಮಣಭೋಜನವನ್ನು ಮಾಡಿಸಬೇಕು.

ಮಾರ್ಗಪಾಲೀಬಂಧನ

ಅದೇ ದಿನದಲ್ಲಿ ಸಾಯಂಕಾಲದಲ್ಲಿ ದರ್ಭೆಯ ಹಗ್ಗವನ್ನು ಎತ್ತರವಾದ ಕಂಬಗಳಿಗಾಗಲೀ ಮರಗಳಿಗಾಗಲೀ ಕಟ್ಟಿ

ಮಾರ್ಗಪಾಲಿ ನಮಸ್ತೇಽಸ್ತು ಸರ್ವಲೋಕಸುಖಪ್ರದೇ ।
ವಿಧೇಯೈಃ ಪುತ್ರದಾರಾದ್ಯೈಃ ಪುನರೇಹಿ ವ್ರತಸ್ಯ ಮೇ ॥

ಎಂಬ ಮಂತ್ರದಿಂದ ಪ್ರಾರ್ಥಿಸಿ ಅದರ ಅಡಿಯಲ್ಲಿ ಪರಿವಾರಸಹಿತರಾಗಿ ಸರ್ವರೂ ಹೋಗಬೇಕು. ಇದು ಮಾರ್ಗಪಾಲೀಬಂಧನ.

ವಷ್ಟಿಕಾಕರ್ಷಣ

ದರ್ಭೆ ಮುಂತಾದವುಗಳಿಂದ ದೃಢವಾದ ಹಗ್ಗವನ್ನು ಮಾಡಿ ಒಂದು ಕಡೆ ರಾಜಪುತ್ರರೂ ಇನ್ನೊಂದು ಕಡೆ ಹೀನಜಾತಿಯವರೂ ಎಳೆಯಬೇಕು. ಹೀನಜಾತಿಯವರು ಜಯಿಸಿದರೆ ರಾಜನಿಗೆ ಅಪಜಯವಾಗುತ್ತದೆ. ಇದೇ ವಷ್ಟಿಕಾಕರ್ಷಣ.

ಯಮದ್ವಿತೀಯಾ

ಈ ದಿವಸ ಯಮುನೆಯು ತನ್ನ ಅಣ್ಣನಾದ ಯಮನಿಗೆ ಔತಣವನ್ನು ಮಾಡಿಸಿದ್ದರಿಂದ ಯಮದ್ವಿತೀಯಾ ಎಂದು ಹೆಸರು ಬಂದಿದೆ. ಈ ದಿನದಲ್ಲಿ ಪ್ರಯತ್ನ ಮಾಡಿಯಾದರೂ ಸಹೋದರಿಯ ಮನೆಯಲ್ಲಿಯೇ ಊಟ ಮಾಡಬೇಕು. ಅದರಿಂದ ಧನಧಾನ್ಯ ಲಾಭವೂ ಸುಖವೂ ಆಗುತ್ತದೆ. ಸಹೋದರಿಯರಿಗೆ ವಸ್ತ್ರಾಲಂಕಾರಾದಿಗಳಿಂದ ಪೂಜಿಸಬೇಕು. ಸಹೋದರಿಯರು ಇಲ್ಲದಿದ್ದರೆ ತಂದೆಯ ಸಹೋದರಿಯನ್ನು ಪೂಜಿಸಬೇಕು. ಸಹೋದರಿಯರೂ ಸಹ ಸಹೋದರರನ್ನು ಪೂಜಿಸಬೇಕು. ಅದರಿಂದ ತನಗೆ ಅವೈಧವ್ಯವೂ ಸಹೋದರನಿಗೆ ದೀರ್ಘಾಯುಷ್ಯವೂ ಉಂಟಾಗುತ್ತದೆ. ಪೂಜಿಸದಿದ್ದರೆ ಏಳು ಜನ್ಮಗಳಲ್ಲಿ ಸಹೋದರನಾಶವಾಗುತ್ತದೆ.

ಗೋಪಾಷ್ಟಮೀ

ಈ ದಿನದಲ್ಲಿ ಯಮುನಾಸ್ನಾನ, ಸಾಯಂಕಾಲದಲ್ಲಿ ಚಿತ್ರಗುಪ್ತ ಯಮದೂತ ಸಹಿತ ಯಮದೇವರ ಪೂಜೆ, ಅರ್ಘ್ಯದಾನ, ಮುಂತಾದವುಗಳನ್ನು ಮಾಡಬೇಕು. ಮಥುರಾ ಪ್ರದಕ್ಷಿಣೆಯನ್ನು ಮಾಡಬೇಕು. ಈ ದಿನ ಗೋಪೂಜಾದಿಂದ ಇಷ್ಟಲಾಭ.

ಉತ್ಥಾನದ್ವಾದಶೀ

ಪ್ರಬೋಧೋತ್ಸವ

ಈ ದಿನದಲ್ಲಿ ಸೂರ್ಯಾಸ್ತವಾದಮೇಲೆ ತುಳಸಿಯೊಡನೆ ದಾಮೋದರನನ್ನು ಕೂಡಿಸಿ ಪುರುಷಸೂಕ್ತದಿಂದ ಷೋಡಶೋಪಚಾರಪೂಜೆಯನ್ನು ಮಾಡಿ ಘಂಟಾದಿವಾದ್ಯಘೋಷದಿಂದ–

ಬ್ರಹ್ಮೇಂದ್ರರುದ್ರಾಗ್ನಿಕುಬೇರಸೂರ್ಯ ಸೋಮಾದಿಭಿರ್ವಂದಿತ ವಂದನೀಯ ।
ಬುದ್ಧ್ಯಸ್ವ ದೇವೇಶ ಜಗನ್ನಿವಾಸ ಮಂತ್ರಪ್ರಭಾವೇಣ ಸುಖೇನ ದೇವ ॥
ಇಯಂಚ ದ್ವಾದಶೀ ದೇವ ಪ್ರಬೋಧಾರ್ಥಂ ತು ನಿರ್ಮಿತಾ ।
ತ್ವಯ್ಯೈವ ಲೋಕನಾಥಾನಾಂ ಹಿತಾರ್ಥಂ ಶೇಷಶಾಯಿನಾ ॥
ಉತ್ತಿಷ್ಠೋತ್ತಿಷ್ಠ ಗೋವಿಂದ ತ್ಯಜ ನಿದ್ರಾಂ ಜಗತ್ಪತೇ ।
ತ್ವಯಿ ಸುಪ್ತೇ ಜಗತ್ಸುಪ್ತಂ ಉತ್ಥಿತೇ ಚೋತ್ಥಿತಂ ಜಗತ್ ॥

ಎಂಬ ಮಂತ್ರದಿಂದ ದೇವರನ್ನು ಎಬ್ಬಿಸಬೇಕು.

ಗತಾ ಮೇಘಾ ವಿಯಚ್ಚೈವ ನಿರ್ಮಲಂ ನಿರ್ಮಲಾ ದಿಶಃ ।
ಶಾರದಾನಿ ಚ ಪುಷ್ಪಾಣಿ ಗೃಹಾಣ ಮಮ ಕೇಶವ ॥

ಎಂಬ ಮಂತ್ರದಿಂದ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು.

ತುಲಸೀವಿವಾಹ

ದೇವರನ್ನು ತುಳಸಿಯ ಅಭಿಮುಖವಾಗಿ ನಿಲ್ಲಿಸಿ ಪೂಜಿಸಿ ಅಂತಃಪಟವನ್ನು ಹಿಡಿದು ಮಂಗಳಾಷ್ಟಕವನ್ನು ಪಠಿಸಬೇಕು.

ದೇವೀಂ ಕನಕಸಂಪನ್ನಾಂ ಕನಕಾಭರಣೈರ್ಯುತಾಮ್ ।
ದಾಸ್ಯಾಮಿ ವಿಷ್ಣವೇ ತುಭ್ಯಂ ಬ್ರಹ್ಮಲೋಕಜಿಗೀಷಯಾ ॥

ಎಂಬ ಮಂತ್ರದಿಂದ ತುಳಸಿಯನ್ನು ದಾಮೋದರನ ಕೈಯಲ್ಲಿ ಕೊಟ್ಟು ಅಕ್ಷತೆ ಜಲವನ್ನು ಬಿಡಬೇಕು.

ವನಭೋಜನ

ಈ ಮಾಸದಲ್ಲಿ ನೆಲ್ಲಿಗಿಡದ ಕೆಳಗೆ ದಾಮೋದರನನ್ನು ಪೂಜಿಸಿ ವನಭೋಜನವನ್ನು ಸಪ್ತಮೀ ರವಿವಾರಗಳನ್ನು ಬಿಟ್ಟು ಬೇರೆ ದಿನಗಳಲ್ಲಿ

ಮಾಡಬೇಕು. ಮನುಷ್ಯರಿಂದ ತಿನ್ನಲ್ಪಡುವ ಎಲ್ಲಾ ವಸ್ತುಗಳಿಗೂ ಅನ್ನವೆಂದು ಹೆಸರು. ಉತ್ತರಾಯಣದಲ್ಲಿ ಹುಟ್ಟಿದ ಅನ್ನವು 'ಆಗ್ರಯಣೇಷ್ಟಿ' ಯಿಂದಲೂ, ದಕ್ಷಿಣಾಯನದಲ್ಲಿ ಹುಟ್ಟಿದ ಅನ್ನವು 'ವನಭೋಜನ'ದಿಂದಲೂ ಶುದ್ಧವಾಗುತ್ತದೆ. ಇವುಗಳಿಂದ ಒಂದು ವರ್ಷದವರೆಗೆ ಪರಾನ್ನಭೋಜನಾದಿಗಳಿಂದ ಬಂದ ದೋಷವು ಹೋಗುತ್ತದೆ. ನೆಲ್ಲಿಯಮರದ ಕೆಳಗೆ ಕಾರ್ತಿಕಶುಕ್ಲ ತ್ರಯೋದಶೀ ಚತುರ್ದಶೀ ಪೂರ್ಣಿಮಾ ಅಥವಾ ಕಾರ್ತೀಕ ಬಹುಳ ಪಂಚಮೀದಿನಗಳಲ್ಲಿ ದಾಮೋದರನನ್ನು ಸ್ಥಾಪಿಸಿ ಉತ್ತಮರೀತಿಯಿಂದ ಪೂಜಿಸಿ ಹೆಸರು ಬೇಳೆಯ ತೊವ್ವೆ ಬೆಲ್ಲ ತುಪ್ಪಗಳಿಂದ ಮಾಡಿದ ಅಪೂಪಗಳಿಂದ ಹೋಮವನ್ನು ಮಾಡಿ,

ದೇವಿ ಧಾತ್ರಿ ನಮಸ್ತುಭ್ಯಂ ಗೃಹಾಣ ಬಲಿಮುತ್ತಮಮ್ ।
ಮಿಶ್ರಿತಂ ಗುಡಸೂಪಾಭ್ಯಾಂ ಸರ್ವಮಂಗಳದಾಯಿನಿ ॥
ಪುತ್ರಾನ್ ದೇಹಿ ಮಹಾಪ್ರಾಜ್ಞಾನ್ ಯಶೋ ದೇಹಿ ನಿರಂತರಮ್ ।
ಪ್ರಜ್ಞಾಂ ಮೇಧಾಂ ಚ ಸೌಭಾಗ್ಯಂ ವಿಷ್ಣುಭಕ್ತಿಂ ಚ ದೇಹಿ ಮೇ ॥
ನೀರೋಗಂ ಕುರು ಮಾಂ ನಿತ್ಯಂ ನಿಷ್ಪಾಪಂ ಕುರು ಸರ್ವದಾ ।
ಸರ್ವಜ್ಞಂ ಕುರು ಮಾಂ ದೇವಿ ಧನವಂತಂ ತಥಾ ಕುರು ॥

ಎಂಬ ಮಂತ್ರದಿಂದ ನೆಲ್ಲಿಯ ಮರದ ಸುತ್ತಲೂ ಬಲಿಯನ್ನು ಹಾಕಬೇಕು.

ಬಲಿ ಹಾಕುವ ಕಾಲದಲ್ಲಿ ಪ್ರದಕ್ಷಿಣೆ ಮಾಡುವವರು ತಮ್ಮ ಪಿತೃಗಳೊಡನೆ ಮುಕ್ತಿಯನ್ನು ಪಡೆಯುವರು. ನೆಲ್ಲಿಯ ಮರದ ಕೆಳಗೆ ನಡೆಯುವ ಪೂಜೆಯನ್ನು ನೋಡುವವರಿಗೂ ಮುಕ್ತಿಯಾಗುತ್ತದೆ. ಆಮೇಲೆ ವೈಶ್ವದೇವ ವನದೇವತಾಪೂಜೆ ಬ್ರಾಹ್ಮಣಪೂಜೆ ಬ್ರಾಹ್ಮಣಭೋಜನವಾದಮೇಲೆ ಬಂಧುಸಹಿತರಾಗಿ ಊಟಮಾಡಬೇಕು. ಆಮೇಲೆ ಮನೆಗೆ ಹೋಗಿ ಆ ದಿನದಲ್ಲಿ ಬ್ರಹ್ಮಚರ್ಯದಿಂದ ಭೂಮಿಯಲ್ಲಿ ಮಲಗಬೇಕು. ಈ ವನಭೋಜನವನ್ನು ಊರಿನವರು ಒಟ್ಟಿಗೆ ಸೇರಿಯಾಗಲೀ ಒಬ್ಬನೇ ಆಗಲೀ ಮಾಡಬೇಕು. ಈ ವನಭೋಜನವನ್ನು ರವಿವಾರ ಮಂಗಳ, ಶುಕ್ರವಾರಗಳಲ್ಲಿ ಮಾಡಬಾರದು.

ಧನುರ್ಮಾಸದ ವಿಶೇಷ ಧರ್ಮಗಳು

ದೇವತೆಗಳಿಗೆ ಉತ್ತರಾಯಣ ಹಗಲು ಮತ್ತು ದಕ್ಷಿಣಾಯನ ರಾತ್ರಿಯೆನಿಸುತ್ತದೆ. ಈ ರಾತ್ರಿಯ ಆರಂಭವು ಆಷಾಢ ಶುಕ್ಲ ಏಕಾದಶಿಯಲ್ಲಿಯೇ ಆಗುತ್ತದೆ. ಒಮ್ಮೆ ರಾತ್ರಿಯು ಬರುವುದಕ್ಕೆ ಮುಂಚೆ ಎಲ್ಲಾ ದೇವತೆಗಳ ಪ್ರಾರ್ಥನೆಯಂತೆ ಶ್ರೀಉಪೇಂದ್ರನಾಮಕಮಹಾವಿಷ್ಣುವು ಮೇರುಪರ್ವತದ ಶಿಖರಕ್ಕೆ ಬಂದನು. ಆಗ ಎಲ್ಲಾ ದೇವತೆಗಳು ಉಪೇಂದ್ರನಲ್ಲಿ ಸ್ವಾಮಿನ್ ನಮ್ಮ ರಾತ್ರಿಯು ಸಮೀಪಿಸಿತು. ನಮ್ಮ ನಮ್ಮ ಸ್ಥಳಗಳಿಗೆ ಹೋಗುವುದಕ್ಕೆ ಅಪ್ಪಣೆಯಾಗಬೇಕು ಎಂದು ಹೇಳಿದರು.

ಆಗ ರಾತ್ರಿದೇವಿಯು ಸುಂದರರೂಪದಿಂದ ಬಂದು ಉಪೇಂದ್ರನಿಗೆ ನಮಸ್ಕರಿಸಿ, "ಸ್ವಾಮಿನ್ ದಕ್ಷಿಣಾಯನದಲ್ಲಿ ಯಾರೂ ಶುಭಕರ್ಮವನ್ನು ಮಾಡುವುದಿಲ್ಲ. ಆದ್ದರಿಂದ ಎಲ್ಲರಿಂದಲೂ ನಿಂದಿತಳಾದ ನಾನು ನಿನ್ನ ಅನುಗ್ರಹಕ್ಕಾಗಿ ತಪಸ್ಸನ್ನು ಮಾಡುತ್ತೇನೆ. ನಿನ್ನ ಅನುಗ್ರಹವಾಗದಿದ್ದರೆ ವ್ಯರ್ಥಜೀವನವುಳ್ಳ ನಾನು ಪ್ರಾಣವನ್ನು ತ್ಯಜಿಸುತ್ತೇನೆ" ಎಂದು ಪ್ರಾರ್ಥಿಸಿದರು. ದೇವತೆಗಳೂ ಅವಳಿಗಾಗಿ ಪ್ರಾರ್ಥಿಸಿದರು. ಪ್ರಸನ್ನನಾದ ಹರಿಯು "ರಾತ್ರಿಯೇ, ನಿನ್ನಲ್ಲಿ ಎರಡೆರಡು ತಿಂಗಳಿಗೆ ಒಂದೊಂದು ಯಾಮದಂತೆ ಇರುವ 3 ಯಾಮಗಳು ನನಗೆ ಪ್ರಿಯವಾಗಿವೆ. ಅವುಗಳಲ್ಲಿಯೂ ಮೊದಲಿನ ಎರಡು ಯಾಮಗಳು ಅತ್ಯಂತಪ್ರಿಯವಾಗಿವೆ ಅದರಲ್ಲಿಯೂ ಶ್ರಾವಣಕ್ಕಿಂತ ಭಾದ್ರಪದ ಅದಕ್ಕಿಂತ ಆಶ್ವಿನ ಅದಕ್ಕಿಂತ ಕಾರ್ತಿಕವು ಉತ್ತಮವಾಗಿದೆ. ಈ ನಾಲ್ಕು ತಿಂಗಳುಗಳಲ್ಲಿ ಮಾಡಿದ ಪುಣ್ಯಕಾರ್ಯಗಳು ಅನಂತಫಲವನ್ನು ಕೊಡುತ್ತವೆ. ಆದ್ದರಿಂದ ನೀನು ಸರ್ವರಿಂದಲೂ ಮಾನ್ಯಳಾಗುತ್ತೀ ಎಂದು ವರವನ್ನು ಕೊಟ್ಟನು.

ದೇವತೆಗಳೊಡನೆ ಆಷಾಢಶುಕ್ಲ ಏಕಾದಶೀದಿನದಲ್ಲಿ ತಾನು ಮಲಗಿದನು. 4 ತಿಂಗಳಾದಮೇಲೆ ದೇವತೆಗಳಿಗೆ ಎಚ್ಚರವಾಯಿತು. ಅವರು ಕಾರ್ತಿಕಶುಕ್ಲ ಏಕಾದಶೀದಿನದಲ್ಲಿ ಹರಿಯನ್ನು ಎಬ್ಬಿಸಿದರು. ಮಾರ್ಗಶಿರಶುಕ್ಲಏಕಾದಶೀ ಅಥವಾ ಧನುರ್ಮಾಸಾರಂಭಕಾಲದಲ್ಲಿ ದೇವತೆಗಳಿಗೆ ರಾತ್ರಿಯ ಕೊನೆಯ ಭಾಗವಾದ ಅರುಣೋದಯ ಕಾಲದ ಆರಂಭವಾಗಿದೆ. ಆಗ ದೇವತೆಗಳು ಹರಿಯನ್ನು ಪೂಜಿಸಿ ಹುಗ್ಗಿಯನ್ನು ಅರ್ಪಿಸಿದರು. ದೇವತೆಗಳು ತಮ್ಮ ಅರುಣೋದಯಕಾಲದಲ್ಲಿ ದೇವರನ್ನು ಪೂಜಿಸಿದುದರಿಂದ ಮನುಷ್ಯರು ದೇವತೆಗಳ ಅರುಣೋದಯ ಕಾಲವಾದ ಧನುರ್ಮಾಸದಲ್ಲಿ ತಮ್ಮ ಅರುಣೋದಯ ಕಾಲದಲ್ಲಿ ಪೂಜಿಸಬೇಕು. ಅರುಣೋದಯಕಾಲದಲ್ಲಿ ಪೂಜೆಯನ್ನು ಮಾಡದವನು ಏಳು ಜನ್ಮಗಳಲ್ಲಿ ದರಿದ್ರನೂ ಕುಷ್ಠರೋಗಿಯೂ ಆಗುತ್ತಾನೆ. ಪೂಜಿಸುವವನು ನಿರೋಗಿಯೂ ಪ್ರತಿಜನ್ಮದಲ್ಲಿ ವೈಷ್ಣವನೂ ಆಗುತ್ತಾನೆ.

ಈ ಪೂಜೆ ನಿತ್ಯವೆನಿಸುತ್ತದೆ. ಧನುರ್ಮಾಸದ ಪೂಜೆಯನ್ನು ಮೊದಲು ಮಾಡಿ, ಆಮೇಲೆ ಅರ್ಘ್ಯ ಗಾಯತ್ರೀಜಪ, ಮತ್ತು ಸೂರ್ಯೋಪಸ್ಥಾನವನ್ನು, ಮಾಡಬೇಕು. ಈ ಪೂಜೆಯಲ್ಲಿ ಅರುಣೋದಯಕಾಲ ಮುಖ್ಯ. ನಕ್ಷತ್ರಗಳು ಮರೆಯಾದ ಸಮಯ ಮಧ್ಯಮ. ಸೂರ್ಯೋದಯಾನಂತರಕಾಲ ಅಧಮ, ಮಧ್ಯಾಹ್ನಕಾಲ ನಿಷ್ಫಲವಾಗುತ್ತದೆ. ಮುದ್ಗಾನ್ನಕ್ಕೆ (ಹುಗ್ಗಿಗೆ) ಅಕ್ಕಿಗೆ ಹೆಸರುಬೇಳೆ ದ್ವಿಗುಣವಾಗಿದ್ದರೆ ಉತ್ತಮೋತ್ತಮ. ಸಮವಾಗಿದ್ದರೆ ಉತ್ತಮ. ಅರ್ಧವಾಗಿದ್ದರೆ ಮಧ್ಯಮ, ಕಾಲುಭಾಗವಾಗಿದ್ದರೆ ಅಧಮವೆನಿಸುತ್ತದೆ.

ಅಕ್ಕಿಯ ಪ್ರಮಾಣಕ್ಕಿಂತ ಅರ್ಧಕ್ಕೆ ಕಡಿಮೆಯಿಲ್ಲದೆ ಅವರವರು ತಮ್ಮ ಶಕ್ತಿಯನ್ನು ಅನುಸರಿಸಿ ಹೆಸರುಬೇಳೆಯನ್ನು ಸೇರಿಸಬೇಕು. ಶುಂಠಿಮಿಶ್ರಿತ ಹುಗ್ಗಿಯನ್ನು ಧನುರ್ಮಾಸದಲ್ಲಿ ನಾರಾಯಣನಿಗೆ ಅರ್ಪಿಸಿ ಶಚೀದೇವಿಯು ದುಃಖದಿಂದ

ಮುಕ್ತಳಾದಳು. ಮೊಸರು ಬೆಲ್ಲ ಮತ್ತು ಶುಂಠಿ ಮಿಶ್ರಿತವಾದ ತ್ರಿವಿಧ ಮುದ್ಗಾನ್ನವನ್ನು ದೇವರಿಗೆ ಅರ್ಪಿಸಿ ಪ್ರಾತಃಕಾಲದಲ್ಲಿ ಬ್ರಾಹ್ಮಣಭೋಜನ ಮಾಡಿಸಬೇಕು.

ಶ್ರೀದೇವೀ ಪ್ರಥಮಂ ನಾಮ ದ್ವಿತೀಯಮಮೃತೋದ್ಭವಾ ।
ತೃತೀಯಂ ಕಮಲಾ ಪ್ರೋಕ್ತಾ ಚತುರ್ಥಂ ಲೋಕಸುಂದರೀ ॥
ಪಂಚಮಂ ವಿಷ್ಣುಪತ್ನೀತಿ ಷಷ್ಠಂ ಶ್ರೀವೈಷ್ಣವೀತಿ ಚ ।
ಸಪ್ತಮಂ ತು ವರಾರೋಹಾ ಅಷ್ಟಮಂ ಹರಿವಲ್ಲಭಾ॥
ನವಮಂ ಶಾರ್ಙ್ಗಿಣೀ ಪ್ರೋಕ್ತಾ ದಶಮಂ ದೇವದೇವಿಕಾ ।
ಏಕಾದಶಂ ಮಹಾಲಕ್ಷ್ಮೀರ್ದ್ವಾದಶಂ ಲೋಕಸುಂದರೀ ॥
ಶ್ರೀಃ ಪದ್ಮಾ ಕಮಲಾ ಮುಕುಂದಮಹಿಷೀ ಲಕ್ಷ್ಮೀಸ್ತ್ರಿಲೋಕೇಶ್ವರೀ ।
ಮಾ ಕ್ಷೀರಾಬ್ಧಿಸುತಾಽರವಿಂದಜನನೀ ವಿದ್ಯಾ ಸರೋಜಾತ್ಮಿಕಾ ॥
ಸರ್ವಾಭೀಷ್ಟಫಲಪ್ರದೇತಿ ಸತತಂ ನಾಮಾನಿ ಯೇ ದ್ವಾದಶ ।
ಪ್ರಾತಃ ಶುದ್ಧತರಾಃ ಪಠಂತಿ ಸತತಂ ಸರ್ವಾಂಲ್ಲಭಂತೇ ಶುಭಾನ್ ॥
ಭದ್ರಲಕ್ಷ್ಮೀಸ್ತವಂ ನಿತ್ಯಂ ಪುಣ್ಯಮೇತಚ್ಛುಭಾವಹಮ್ ।
ಕಾಲೇ ಸ್ನಾತ್ವಾಽಪಿ ಕಾವೇರ್ಯಾಂ ಜಪ ಶ್ರೀವೃಕ್ಷಸನ್ನಿಧೌ ॥

ಎಂಬ ಭದ್ರಲಕ್ಷ್ಮೀಸ್ತುತಿಯನ್ನು ಪೂಜಾನಂತರದಲ್ಲಿ ಪಠಿಸಬೇಕು.

ಧನುರ್ಮಾಸದಲ್ಲಿ ವ್ಯತೀಪಾತಯೋಗದಲ್ಲಿ ಅರುಣೋದಯಕಾಲದಲ್ಲಿ ವಿಷ್ಣುವನ್ನು ಪೂಜಿಸಿ

ವ್ಯತೀಪಾತ ಮಹಾಸತ್ವ ಸರ್ವಪಾಪಪ್ರಣಾಶನ ।
ಸಹಸ್ರಾಬಾಹೋ ವಿಶ್ವಾತ್ಮನ್ ಗೃಹಾಣಾರ್ಘ್ಯಂ ನಮೋಽಸ್ತು ತೇ ॥
ವ್ಯತೀಪಾತ ನಮಸ್ತೇಽಸ್ತು ನಮಸ್ತೇ ವಿಶ್ವಮಂಗಲ ।
ವಿಷ್ಣುಚಕ್ರಸ್ವರೂಪಾಯ ನಮಸ್ತೇ ದಿವ್ಯತೇಜಸೇ ॥

ಎಂಬ ಮಂತ್ರದಿಂದ ವಿಷ್ಣುಚಕ್ರರೂಪಿಯಾದ ವ್ಯತೀಪಾತ ದೇವತೆಗೆ ಅರ್ಘ್ಯವನ್ನು ಕೊಡಬೇಕು. ಆಮೇಲೆ ದಕ್ಷಿಣಾಭಿಮುಖವಾಗಿ ವಂಶದ್ವಯಪಿತೃಗಳ ತೃಪ್ತಿಗಾಗಿ ಅವರನ್ನು ಸ್ಮರಿಸುತ್ತಾ

ವಿಷ್ಣುಪ್ರಿಯ ವ್ಯತೀಪಾತ ಪಿತೄಣಾಮನೃಣಪ್ರದ ।
ಪಿತೄಣಾಂ ಮಮ ವೈಕುಂಠಂ ಪ್ರಯಚ್ಛ ಭಗವನ್ ಹರೇ ॥
ತ್ವತ್ಪ್ರಸಾದೇನ ಮೇ ಭಕ್ತಿರಸ್ತ್ವೇವಮನಪಾಯಿನೀ ।
ಜ್ಞಾನವಿಜ್ಞಾನವೈರಾಗ್ಯಂ ಪ್ರಯಚ್ಛ ಭಗವನ್ಮಮ ॥

ಎಂಬ ಮಂತ್ರದಿಂದ ತರ್ಪಣವನ್ನು ಕೊಡಬೇಕು.

ಈ ವ್ಯತೀಪಾತದಿನದ ಪೂಜೆಯು ಅರ್ಧೋದಯಾದಿ ಮಹಾಪುಣ್ಯಕಾಲಕ್ಕಿಂತ ಸಹಸ್ರಪಾಲು ಅಧಿಕಪುಣ್ಯಪ್ರದವಾಗಿದೆ. ಸಾಧನದ್ವಾದಶೀದಿನದಲ್ಲಿ ಕರ್ಮಸಂಕೋಚ

ವನ್ನು ಮಾಡಿಕೊಂಡು ಹರಿಯನ್ನು ಪೂಜಿಸಿ ಪಾರಣೆಯನ್ನು ಮಾಡಿದಂತೆ ಧನುರ್ಮಾಸದಲ್ಲಿಯೂ ಮಾಡಬೇಕು. ಈ ವಿಷಯವು

ಯಥಾ ಸಂಕೋಚ್ಯ ಸತ್ಕರ್ಮ ಭುಂಕ್ತೇಽಲ್ಪದ್ವಾದಶೀದಿನೇ ।
ತಥಾ ಪ್ರಾತರ್ಧನುರ್ಮಾಸೇ ಕೃತ್ವಾ ಕರ್ಮಾರ್ಚಯೇಚ್ಚ ಮಾಮ್ ॥

ಇತ್ಯಾದಿ ಸ್ಮೃತಿಮುಕ್ತಾವಳಿಯಲ್ಲಿ ಉದಾಹೃತವಾದ ಪ್ರಮಾಣವಚನದಿಂದ ಸಿದ್ಧವಾಯಿತು. ಈ ಮಾಸದಲ್ಲಿ ಪೂಜೆಯು ಮುಖ್ಯವೇ ಹೊರತು ಭೋಜನವಲ್ಲ. ಆದ್ದರಿಂದ ಪೂಜೆಯನ್ನು ಮಾಡಿ ದೇವ, ಋಷಿ, ಪಿತೃತರ್ಪಣ ವೈಶ್ವದೇವಾದಿಕರ್ಮಗಳನ್ನು ಮುಗಿಸಿ ಬ್ರಾಹ್ಮಣಭೋಜನಾನಂತರದಲ್ಲಿ ತಾನೂ ಭೋಜನವನ್ನು ಪ್ರಾತಃಕಾಲದಲ್ಲಿಯೇ ಮಾಡಿದರೂ ಮಾಡಬಹುದು. ಅಥವಾ ಮಧ್ಯಾಹ್ನದಲ್ಲಿ ಪುನಃ ಪೂಜೆಯನ್ನು ಮಾಡಿ ಭೋಜನವನ್ನು ಮಾಡಿದರೂ ಮಾಡಬಹುದು. ಎರಡು ವಿಧವಾದ ಸಂಪ್ರದಾಯಗಳೂ ಲೋಕವ್ಯವಹಾರದಲ್ಲಿವೆ.

ಮಕರಸಂಕ್ರಾಂತಿಯ ವಿಷಯ

ಈ ದಿನದಲ್ಲಿ ತಿಲಸ್ನಾನ, ತಿಲತೈಲದಿಂದ ದೀಪವನ್ನು ಹಚ್ಚುವುದು, ತಿಲಧೇನುದಾನ, ತಿಲಹೋಮ, ತಿಲಭಕ್ಷಣ ಪಿತೃಗಳಿಗೆ ತಿಲತರ್ಪಣಗಳನ್ನು ಕೃಷ್ಣತಿಲದಿಂದಲೂ, ದೇವಋಷಿತರ್ಪಣಗಳನ್ನೂ ಶುಕ್ಲತಿಲದಿಂದಲೂ ಅವಶ್ಯವಾಗಿ ಮಾಡಬೇಕು. ಸುವರ್ಣತಿಲಯುಕ್ತ ತಾಮ್ರ ಪಾತ್ರದಾನ, ವಸ್ತ್ರದಾನಗಳು ವಿಶೇಷ ಫಲಪ್ರದವಾಗಿವೆ.

ಪುಷ್ಯಶುಕ್ಲಪೂರ್ಣಿಮಾ ವಿಷಯ

ಈ ದಿನದಿಂದ ಮಾಘಶುಕ್ಲಪೂರ್ಣಿಮಾದಿನದ ವರೆಗೆ ಮಾಸನಿಯಾಮಕನಾದ ಮಾಧವನ ಪ್ರೀತ್ಯರ್ಥವಾಗಿ ಪ್ರಾತಃಸ್ನಾನವನ್ನು ಮಾಡಬೇಕು ಅರುಣೋದಯಕಾಲದಲ್ಲಿ ನದೀ ಮುಂತಾದ ತೀರ್ಥಗಳಲ್ಲಿ, ಸ್ನಾನ ಮಾಡಬೇಕು. ಸ್ನಾನಕ್ಕೆ ನಕ್ಷತ್ರಗಳಿರುವ ಕಾಲವು ಉತ್ತಮ. ನಕ್ಷತ್ರಗಳೆಲ್ಲ ಮರೆಯಾದ ಮೇಲೆ ಮಧ್ಯಮ. ಸೂರ್ಯೋದಯಕಾಲವು ಅಧಮವೆನಿಸುತ್ತದೆ. ಈ ಸ್ನಾನವನ್ನು ಸರ್ವರೂ ಮಾಡಬೇಕು. ಮನೆಯಲ್ಲಿ ಬಿಸಿನೀರಿನಲ್ಲಿ ಮಾಡಿದ ಸ್ನಾನಕ್ಕೆ 6 ವರ್ಷಗಳಲ್ಲಿ ಮಾಡಿದ ಸ್ನಾನದ ಫಲ, ಬಾವಿನೀರಿನಲ್ಲಿ 12 ವರ್ಷಗಳ ಫಲ, ಕೆರೆಯಲ್ಲಿ 24ವರ್ಷಗಳ ಫಲ, ನದಿಯಲ್ಲಿ 96 ವರ್ಷಗಳ ಫಲ, ಮಹಾನದಿಯಲ್ಲಿ 9600 ವರ್ಷಗಳ ಫಲ, ಮಹಾನದಿಗಳ ಸಂಗಮದಲ್ಲಿ 38400 ವರ್ಷಗಳ ಫಲ, ಗಂಗೆಯಲ್ಲಿ 3840000000 ವರ್ಷಗಳ ಸ್ನಾನದ ಫಲ ಬರುತ್ತದೆ.

ಮಾಘಸ್ನಾನಮಿಮಂ ಪೂರ್ಣಂ ಸ್ನಾಸ್ಯೇಽಹಂ ದೇವ ಮಾಧವ ।
ತೀರ್ಥಸ್ಯಾಸ್ಯ ಜಲೇ ನಿತ್ಯಮಿತಿ ಸಂಕಲ್ಪ್ಯ ಚೇತಸಿ ॥

ಎಂದು ಯಾವುದಾದರೊಂದು ತೀರ್ಥದಲ್ಲಿ ಒಂದು ತಿಂಗಳವರೆಗೆ ಸ್ನಾನ ಮಾಡುವುದಾಗಿ ಸಂಕಲ್ಪಿಸಬೇಕು.

ದುಃಖದಾರಿದ್ರ್ಯನಾಶಾಯ ಶ್ರೀವಿಷ್ಣೋಸ್ತೋಷಣಾಯ ಚ ।
ಮಕರಸ್ಥೇ ರವೌ ಮಾಘೇ ಗೋವಿಂದಾಚ್ಯುತ ಮಾಧವ ॥
ಸ್ನಾನೇನಾನೇನ ಮೇ ದೇವ ಯಥೋಕ್ತಫಲದೋ ಭವ ।

ಎಂಬ ಮಂತ್ರಗಳಿಂದ ಮೌನದಿಂದ ಸ್ನಾನ ಮಾಡಬೇಕು. ಸ್ನಾನಾನಂತರದಲ್ಲಿ,

ಸವಿತ್ರೇ ಪ್ರಸವಿತ್ರೇ ಚ ಪರಂಧಾಮ ಜಲೇ ಮಮ ।
ತ್ವತ್ತೇಜಸಾ ಪರಿಭ್ರಷ್ಟಂ ಪಾಪಂ ಯಾತು ಸಹಸ್ರಧಾ ॥

ಎಂಬ ಮಂತ್ರದಿಂದ ಸೂರ್ಯಾರ್ಘ್ಯವನ್ನು ಕೊಟ್ಟು ಪಿತೃತರ್ಪಣಾದಿ ನಿತ್ಯಕಾರ್ಯವನ್ನು ಮುಗಿಸಿ ಮಾಧವನನ್ನು ಪೂಜಿಸಬೇಕು. ಈ ಮಾಸದಲ್ಲಿ ಹವಿಷ್ಯಾನ್ನ ಭಕ್ಷಣ, ಭೂಮಿಯಲ್ಲಿ ಶಯನ, ತಿಲಘೃತ ಹೋಮ, ಮತ್ತು ಬ್ರಹ್ಮಚರ್ಯವ್ರತವು ಮಹಾಫಲದಾಯಕವಾಗುತ್ತದೆ. ಕಟ್ಟಿಗೆ, ಕಂಬಳಿ, ವಸ್ತ್ರ, ಪಾದರಕ್ಷೆ, ಅನ್ನ ಮತ್ತು ಸುವರ್ಣ ದಾನಗಳು ಮಹಾಫಲವನ್ನು ಕೊಡುತ್ತವೆ. ಸ್ನಾನವನ್ನು ಮಾಡಿದ ಮೇಲೆಯೂ ಪೂರ್ವದಲ್ಲಿಯೂ ಛಳಿಗಾಗಿ ಬೆಂಕಿಯನ್ನು ಸೇವಿಸಬಾರದು. ಮುಕ್ಕಾಲು ಭಾಗ ಎಳ್ಳು, ಕಾಲುಭಾಗ ಸಕ್ಕರೆಯನ್ನು ಮಿಶ್ರಮಾಡಿ ಪ್ರತಿದಿನದಲ್ಲಿಯೂ ದಾನ ಮಾಡಬೇಕು. ಒಂದು ತಿಂಗಳು ಸ್ನಾನ ಮಾಡಲಿಕ್ಕೆ ಶಕ್ತಿ ಇಲ್ಲದಿದ್ದರೆ ಕೊನೆಯ ಮೂರು ದಿನಗಳಲ್ಲಿ ಮಾಡಬೇಕು.

ಮಹೋದಯಯೋಗ

ಅರ್ಧೋದಯ ಯೋಗದ ಲಕ್ಷಣವನ್ನು ಹಿಂದೆ ಕಪಿಲಷಷ್ಠೀ ನಿರ್ಣಯದಲ್ಲಿ ತಿಳಿಸಿದೆ. ಅರ್ಧೋದಯಕ್ಕೆ ಹೇಳಿರುವ ನಾಲ್ಕು ಲಕ್ಷಣಗಳ ಮಧ್ಯದಲ್ಲಿ ಯಾವುದಾದರೊಂದು ಲಕ್ಷಣವು ಕಡಿಮೆಯಾಗಿದ್ದು ಉಳಿದ ಮೂರು ಲಕ್ಷಣಗಳೂ ಅದರಂತೆಯೇ ಇದ್ದರೆ ಮಹೋದಯಯೋಗವೆನಿಸುತ್ತದೆ. ಆ ಕಾಲದಲ್ಲಿ ಸ್ನಾನ ದಾನ ಪಿತೃತರ್ಪಣ ಮುಂತಾದ ಪುಣ್ಯಕಾರ್ಯಗಳನ್ನು ಮಾಡಬೇಕು. ಗ್ರಹಣಾದಿಕಾಲಗಳಿಗಿಂತಲೂ ಈ ಮಹೋದಯಕಾಲವು ಅಧಿಕಪುಣ್ಯಪ್ರದವಾಗಿದೆ.

ಮಾಘಮಾಸದ ವಿಶೇಷ ಧರ್ಮಗಳು

ಈ ಮಾಘ ಮಾಸದಲ್ಲಿ ವೇಣೀದಾನ, ತಿಲಪಾತ್ರದಾನ, ಶಾಲಿಗ್ರಾಮದಾನ, ತ್ರಿವೇಣಿಯಲ್ಲಿ ದೇಹತ್ಯಾಗ, ತಿಲಮಿಶ್ರಜಲಸ್ನಾನ, ತಿಲಹೋಮ, ದೇವಪೂಜಾದಿಗಳು, ತಿಲಭಕ್ಷಣ ಮುಂತಾದವುಗಳು ಮಹಾಫಲವನ್ನು ಕೊಡುತ್ತವೆ.

ರಥಸಪ್ತಮೀ

ಈ ದಿನದಲ್ಲಿ 7 ಎಕ್ಕೆ ಎಲೆಗಳನ್ನು ತೆಗೆದುಕೊಂಡು ನದಿಯಲ್ಲಿ ಒಂದೊಂದು ಎಲೆಯನ್ನು ತಲೆಯ ಮೇಲೆ ಇಟ್ಟುಕೊಂಡು ಒಂದು ಎಲೆಗೆ ಒಂದು ಮುಳುಗಿನಂತೆ

ಯದಾ ಜನ್ಮಕೃತಂ ಪಾಪಂ ಮಯಾ ಜನ್ಮಸು ಜನ್ಮಸು ।
ತನ್ಮೇ ರೋಗಂ ಚ ಶೋಕಂ ಚ ಮಾಕರೀ ಹಂತು ಸಪ್ತಮೀ ॥
ಏತಜ್ಜನ್ಮಕೃತಂ ಪಾಪಂ ಯಚ್ಚ ಜನ್ಮಾಂತರಾರ್ಜಿತಮ್ ।
ಮನೋವಾಕ್ಕಾಯಜಂ ಯಚ್ಚ ಜ್ಞಾತಾಜ್ಞಾತೇ ಚ ಯೇ ಪುನಃ ॥
ಇತಿ ಸಪ್ತವಿಧಂ ಪಾಪಂ ಸ್ನಾನಾನ್ಮೇ ಸಪ್ತಸಪ್ತಿಕೇ ॥
ಸಪ್ತವ್ಯಾಧಿಸಮಾಯುಕ್ತಂ ಹರ ಮಾಕರಿ ಸಪ್ತಮಿ ॥

ಎಂಬ ಮಂತ್ರದಿಂದ ಸ್ನಾನ ಮಾಡಬೇಕು.

ಸಪ್ತಸಪ್ತಿವಹಪ್ರೀತ ಸಪ್ತಲೋಕಪ್ರದೀಪನ ।
ಸಪ್ತಮೀಸಹಿತೋ ದೇವ ಗೃಹಾಣಾರ್ಘ್ಯಂ ದಿವಾಕರ ॥

ಎಂಬ ಮಂತ್ರದಿಂದ ಸೂರ್ಯದೇವನಿಗೆ ಅರ್ಘ್ಯವನ್ನು ಕೊಡಬೇಕು.

ಭೀಷ್ಮಾಷ್ಟಮೀ

ಈ ದಿನದಲ್ಲಿ ಭೀಷ್ಮರಿಗೆ ತರ್ಪಣವನ್ನು ಸರ್ವರೂ ಕೊಡಬೇಕು. ಈ ತರ್ಪಣವು ನಿತ್ಯ.

ವೈಯಾಘ್ರಪಾದಗೋತ್ರಾಯ ಸಾಂಕೃತಿಪ್ರವರಾಯ ಚ ।
ಗಂಗಾಪುತ್ರಾಯ ಭೀಷ್ಮಾಯ ಆಜನ್ಮಬ್ರಹ್ಮಚಾರಿಣೇ ॥
ಅಪುತ್ರಾಯ ಜಲಂ ದದ್ಮಿ ನಮೋ ಭೀಷ್ಮಾಯ ವರ್ಮಣೇ ।
ಭೀಷ್ಮ: ಶಾಂತನವೋ ವೀರಃ ಸತ್ಯವಾದೀ ಜಿತೇಂದ್ರಿಯಃ ।
ಆಭಿರದ್ಭಿರವಾಪ್ನೋತು ಪುತ್ರಪೌತ್ರೋಚಿತಾಂ ಕ್ರಿಯಾಮ್ ॥

ಎಂಬ ಮಂತ್ರಗಳಿಂದ ಅಪಸವ್ಯದಿಂದ ತರ್ಪಣವನ್ನು ಕೊಟ್ಟು ಸವ್ಯದಿಂದ ಆಚಮನವನ್ನು ಮಾಡಿ

ವಸೂನಾಮವತಾರಾಯ ಶಂತನೋರಾತ್ಮಜಾಯ ಚ ।
ಅರ್ಘ್ಯಂ ದದಾಮಿ ಭೀಷ್ಮಾಯ ಆಬಾಲ್ಯಬ್ರಹ್ಮಚಾರಿಣೇ ॥

ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು.

ಮೇಲ್ಕಂಡ ತರ್ಪಣವನ್ನು ತಂದೆಯಿದ್ದವರು ಅಕ್ಕಿ ಕಾಳಿನಿಂದ ಸವ್ಯವಾಗಿಯೂ, ತಂದೆಯಿಲ್ಲದವರು ಎಳ್ಳಿನಿಂದ ಅಪಸವ್ಯವಾಗಿಯೂ ಕೊಡಬೇಕೆಂದು ಬಹುಮತವಾಗಿದೆ. ತಂದೆಯಿದ್ದವರು ಮಾಡಕೊಡದೆಂದು ಕೆಲವರು ಹೇಳುತ್ತಾರೆ. ದೇಶಾಚಾರದಂತೆ ಮಾಡಬೇಕು.

ಮಧ್ವನವಮೀ

ಈ ದಿನದಲ್ಲಿ ಶ್ರೀಮಧ್ವಾಚಾರ್ಯರು ಐತರೇಯೋಪನಿಷತ್ತಿನ ಉಪದೇಶವನ್ನು ಉತ್ತಮಶಿಷ್ಯರಿಗೆ ಉಡುಪಿಕ್ಷೇತ್ರದಲ್ಲಿ ಮಾಡುತ್ತಿದ್ದಾಗ

ರುದ್ರಾದಿದೇವತೆಗಳು ಆ ಉಪದೇಶವನ್ನು ಕೇಳಿ ಆನಂದದಿಂದ ಅವರ ತಲೆಯ ಮೇಲೆ ಸುರಿಸಿದ ಪಾರಿಜಾತ ಪುಷ್ಪಗಳ ರಾಶಿಯಲ್ಲಿ ಮುಳುಗಿದ ಆಚಾರ್ಯರು ಅಲ್ಲಿಯೇ ಅದೃಶ್ಯರಾದರು. ಈಗಲೂ ಹಿಮವತ್ಪರ್ವತದ ಉತ್ತರಭಾಗದಲ್ಲಿರುವ ದೊಡ್ಡಬದರಿಯಲ್ಲಿ ಶ್ರೀವೇದವ್ಯಾಸರ ಸನ್ನಿಧಿಯಲ್ಲಿ ಪ್ರತ್ಯಕ್ಷರೂಪದಿಂದಲೂ ಉಡುಪಿಯಲ್ಲಿ ಅದೃಶ್ಯರೂಪದಿಂದಲೂ ಸನ್ನಿಹಿತರಾಗಿರುತ್ತಾರೆ. ಅವರು ಅದೃಶ್ಯರಾದ ದಿನವೇ ಮಧ್ವನವಮಿಯೆನಿಸುತ್ತದೆ.

ಮಾಘ ಶು. ದ್ವಾದಶೀ

ಈ ದಿನದಲ್ಲಿ ತಿಲಸ್ನಾನ, ತಿಲಭಕ್ಷಣ, ತಿಲಹೋಮ, ತಿಲತೈಲದಿಂದ ದೀಪದಾನ, ತಿಲನೈವೇದ್ಯಗಳು ಮಹಾಫಲವನ್ನು ಕೊಡುತ್ತವೆ.

ಮಾಘಶುದ್ಧತ್ರಯೋದಶೀ

ಈ ದಿನದಲ್ಲಿ ಸುವಾಸಿನೀ ಸ್ತ್ರೀಯರು ಮರದ ಬಾಗಿಣವನ್ನು ಸುವಾಸಿನೀ ಸ್ತ್ರೀಯರಿಗೆ ಕೊಡಬೇಕು.

ಅಂತ್ಯಪುಷ್ಕರಿಣೀ

ಮಾಘಮಾಸದಲ್ಲಿ ಒಂದು ತಿಂಗಳಿನವರೆಗೆ ಸ್ನಾನವನ್ನು ಮಾಡಲು ಶಕ್ತಿಯಿಲ್ಲದವರು ತ್ರಯೋ, ಚತುರ್ದಶೀ, ಹುಣ್ಣಿಮೆ ದಿನಗಳಲ್ಲಿ ಸ್ನಾನವನ್ನು ಮಾಡಲೇಬೇಕು. ಈ ಮೂರು ದಿನಗಳು ಅಂತ್ಯಪುಷ್ಕರಿಣೀಯೆನಿಸುತ್ತವೆ.

ಶಿವರಾತ್ರಿ

ಈ ದಿನದ ಪ್ರದೋಷಕಾಲದಲ್ಲಿ ರುದ್ರದೇವರ ದರ್ಶನ ಮುಖ್ಯ.

ಮಾಘಕೃಷ್ಣ ಅಮಾವಾಸ್ಯಾ

ಈ ದಿನದಲ್ಲಿ ಅಮಾವಾಸ್ಯೆಗೆ ಶತಭಿಷಾನಕ್ಷತ್ರದ ಯೋಗವಿದ್ದರೆ ಅದು ಪರಮಪುಣ್ಯಕಾಲವಾಗುತ್ತದೆ. ಆ ಯೋಗವಿದ್ದಾಗ ಶ್ರಾದ್ಧವನ್ನು ಮಾಡಬೇಕು. ಅದರಿಂದ ಹತ್ತುಸಾವಿರ ವರ್ಷಗಳವರೆಗೆ ಪಿತೃಗಳಿಗೆ ತೃಪ್ತಿಯಾಗುತ್ತದೆ.

ಫಾಲ್ಗುಣ ಮಾಸ

ಈ ಮಾಸದಲ್ಲಿ ಮಾಸನಿಯಾಮಕ ಶ್ರೀಗೋವಿಂದನ ತೃಪ್ತಿಗಾಗಿ ಗೋವು ಮತ್ತು ಭತ್ತ ವಸ್ತ್ರದಾನ ಮಾಡಬೇಕು.

ಪ್ರಯೋವ್ರತ

ಶ್ರೀಭಾಗವತದಲ್ಲಿ ಹೇಳಿದ ಪ್ರಯೋವ್ರತವನ್ನು ಸಂತತಿ ಮುಂತಾದ ಫಲವನ್ನು ಅಪೇಕ್ಷಿಸುವವರು ಈ ದಿನದಿಂದ (ಫಾಲ್ಗುಣ ಶುಕ್ಲ ಪ್ರತಿಪದಾದಿಂದ) ದ್ವಾದಶೀವರೆಗೆ (12ದಿನಗಳು) ಮಾಡಬೇಕು.

ಹೋಳೀ ಹುಣ್ಣಿಮೆ

ಈ ದಿನದಲ್ಲಿ ಸೂರ್ಯಾಸ್ತಾನಂತರದಲ್ಲಿ,

ಅಸ್ಮಾಭಿರ್ಭಯಸಂತ್ರಸ್ತೈಃ ಕೃತಾ ತ್ವಂ ಹೋಲಿಕೇ ಯತಃ ।
ಅತಸ್ತ್ವಾಂ ಪೂಜಯಿಷ್ಯಾಮಿ ಭೂತೆ ಭೂತಿಪ್ರದಾ ಭವ ॥

ಎಂಬ ಮಂತ್ರದಿಂದ ಹೋಲಿಕೆಯನ್ನು ಪೂಜಿಸಿ ಸುಟ್ಟು ಬಾಯಿಗೆ ಬಂದಂತೆ ಭಂಡ ಮಾತಾಡಬೇಕು. ಅದರಿಂದ ಆ ರಾಕ್ಷಸಿಗೆ ತೃಪ್ತಿಯಾಗುತ್ತದೆ. ಮರುದಿನದಲ್ಲಿ

ವಂದಿತಾಽಸಿ ಸುರೇಂದ್ರೇಣ ಬ್ರಹ್ಮಣಾ ಶಂಕರೇಣ ಚ ।
ಅತಸ್ತ್ವಂ ಪಾಹಿ ನೋ ದೇವಿ ಭೂತೇ ಭೂತಿಪ್ರದಾ ಭವ ॥

ಎಂಬ ಮಂತ್ರದಿಂದ ಸುಟ್ಟ ಬೂದಿಯನ್ನು ನಮಸ್ಕರಿಸಬೇಕು. ಈ ದಿನವೂ ಹಿಂದಿನ ದಿನವೂ ಶುಭಕರ್ಮಗಳಿಗೆ ವರ್ಜ್ಯವಾಗಿದೆ.

ವಸಂತ ಪ್ರತಿಪತ್

ಫಾಲ್ಗುಣ ಕೃ. ಪ್ರತಿಪತ್ತಿಗೆ ವಸಂತಪ್ರತಿಪತ್ ಎಂದು ಹೆಸರು. ಈ ದಿನದಲ್ಲಿ ಗೋಮಯದಿಂದ ಸಾರಿಸಿದ ಅಂಗಳದಲ್ಲಿ ಶುಭ್ರವಸ್ತ್ರವನ್ನುಟ್ಟುಕೊಂಡು ಪೂರ್ವಾಭಿಮುಖವಾಗಿ ಕುಳಿತು ಸುವಾಸಿನಿಯರಿಂದ ಆರತಿಯನ್ನು ಮಾಡಿಸಿಕೊಂಡು ಗಂಧಯುಕ್ತವಾದ ಮಾವಿನ ಹೂವನ್ನು ಪ್ರಾಶನ ಮಾಡಬೇಕು. ಅದಕ್ಕೆ ಮಂತ್ರ–

ಚೂತಮಗ್ರ್ಯಂ ವಸಂತಸ್ಯ ಮಾಕಂದಕುಸುಮಂ ತವ ।
ಸಚಂದನಂ ಪಿಬಾಮ್ಯದ್ಯ ಸರ್ವಕಾಮಾರ್ಥಸಿದ್ಧಯೇ ॥

ಅಥ ಅಧಿಕಮಾಸ ನಿರ್ಣಯ

ಯಾವ ಚಾಂದ್ರಮಾಸದಲ್ಲಿ ಸೂರ್ಯಸಂಕ್ರಾಂತಿಯು ಏರ್ಪಡುವುದಿಲ್ಲವೋ ಆ ಚಾಂದ್ರಮಾಸವು ಅಧಿಕಮಾಸವೆನಿಸುತ್ತದೆ. ಆ ಅಧಿಕಮಾಸದ ಹಿಂದಿನ ಚಾಂದ್ರಮಾಸದ ಹೆಸರಿಗಿಂತ ಅನಂತರದಲ್ಲಿ ಬರುವ ಚಾಂದ್ರಮಾಸದ ಹೆಸರೇ ಆ ಅಧಿಕಮಾಸಕ್ಕೆ ಹೆಸರಾಗಿರುವುದು. ಅನನ್ಯಗತಿಕ ಅಂದರೆ ಅವಶ್ಯವಾಗಿ ಆ ಮಾಸದಲ್ಲಿಯೇ ಮಾಡಬೇಕಾದ ಕರ್ಮಗಳು ಮತ್ತು ಸಗತಿಕ ಅಂದರೆ ಆ ಮಾಸದಲ್ಲಿಯೇ ಮಾಡಬೇಕಾದಾವಶ್ಯಕತೆ ಯಿಲ್ಲದಿರುವ ಕರ್ಮಗಳು ಎಂದು ಕರ್ಮಗಳು ಎರಡು ವಿಧವಾಗಿರುತ್ತವೆ. ಇವುಗಳಲ್ಲಿ ಅನನ್ಯಗತಿಕವಾದ ಸಂಧ್ಯಾವಂದನೆ ಅಗ್ನಿಹೋತ್ರ ಮುಂತಾದ ನಿತ್ಯಕರ್ಮಗಳನ್ನೂ ಮಳೆಗಾಗಿ ಮಾಡುವ ಕಾರೀರಿ ಮುಂತಾದ ನೈಮಿತ್ತಿಕ ಕರ್ಮಗಳನ್ನೂ ರಾಕ್ಷಸ ಪೀಡಿತಜನರ ರಕ್ಷಣೆಗಾಗಿ ಮಾಡುವ ರಕ್ಷೋಘ್ನೇಷ್ಟಿ ಮುಂತಾದ ಕಾಮ್ಯಕರ್ಮಗಳನ್ನೂ ಅಧಿಕಮಾಸದಲ್ಲಿಯೇ ಮಾಡಬೇಕು.

ಸಗತಿಕಗಳಾದ ಜ್ಯೋತಿಷ್ಟೋಮಾದಿಕರ್ಮಗಳನ್ನೂ ಜಾತೇಷ್ಟಿ (ಮಗನು ಹುಟ್ಟಿದ್ದಕಾಗಿ ಮಾಡುವ ಇಷ್ಟಿ) ಮುಂತಾದ ನೈಮಿತ್ತಿಕಕರ್ಮಗಳನ್ನೂ ಪುತ್ರ ಕಾಮೇಷ್ಟಿ) ಮುಂತಾದ ಕಾಮ್ಯಕರ್ಮಗಳನ್ನೂ ಅಧಿಕ ಮಾಸದಲ್ಲಿ ಮಾಡಬಾರದು. ಶುದ್ಧಮಾಸದಲ್ಲಿಯೇ ಮಾಡಬೇಕು. ಅಧಿಕಮಾಸಕ್ಕಿಂತ ಪೂರ್ವದಲ್ಲಿ ಆರಂಭಿಸಿದ ಕಾಮ್ಯಕರ್ಮಗಳನ್ನು ಅಧಿಕಮಾಸದಲ್ಲಿಯೂ ಮಾಡಬಹುದು. ಮತ್ತು ಮುಗಿಸಲೂ ಬಹುದು. ಆ ಮಾಸದಲ್ಲಿ ಹೊಸದಾದ ಯಾವ ಕರ್ಮವನ್ನೂ ಆರಂಭಿಸಕೂಡದು. ದೇವಾಲಯದಲ್ಲಿ ಪೂಜಾಲೋಪಭಯದಿಂದ ಮಾಡಬೇಕಾದ ಪುನಃಪ್ರತಿಷ್ಠೆ, ಗರ್ಭಾಧಾನದಿ ಅನ್ನಪ್ರಾಶನಾಂತ ನವಸಂಸ್ಕಾರಗಳು ಜ್ವರಾದಿರೋಗಪರಿಹಾರಾರ್ಥ ವಾಗಿ ಮಾಡುವ ಶಾಂತಿಗಳು ಅಲಭ್ಯಯೋಗದಲ್ಲಿ ಮಾಡಬೇಕಾದ ಶ್ರಾದ್ಧ ವ್ರತ ಮುಂತಾದವುಗಳು, ನಿಮಿತ್ತ ವಿಶೇಷದಿಂದ ಮಾಡಬೇಕಾದ ಪ್ರಾಯಶ್ಚಿತ್ತಗಳು, ನಿತ್ಯಶ್ರಾದ್ಧ, ಊನಮಾಸಿಕಾದಿ ಶ್ರಾದ್ಧಗಳು, ದರ್ಶಶ್ರಾದ್ಧ ಇವುಗಳನ್ನು ಅಧಿಕಮಾಸ ದಲ್ಲಿಯೇ ಮಾಡಬೇಕು.

ಹಿಂದೆ ಅಧಿಕಮಾಸದಲ್ಲಿ ಮೃತಿ ಹೊಂದಿದವರ ಪ್ರತಿಸಾವಂತ್ಸರಿಕಶ್ರಾದ್ಧವನ್ನು ಅದೇ ಮಾಸವು ಪುನಃ ಅಧಿಕಮಾಸವಾಗಿ ಬಂದಾಗ ಆ ಅಧಿಕಮಾಸದಲ್ಲಿಯೇ ಮಾಡಬೇಕು. ಹಿಂದೆ ಶುದ್ಧಮಾಸದಲ್ಲಿ ಮೃತಿಹೊಂದಿದವರಿಗೆ ಅದೇ ಮಾಸವೇ ಅಧಿಕಮಾಸವಾಗಿ ಬಂದಾಗ ಪ್ರತಿಸಾವಂತ್ಸರಿಕಶ್ರಾದ್ಧವನ್ನು ಅಧಿಕಮಾಸದಲ್ಲಿ ಮಾಡಕೂಡದು. ಶುದ್ಧಮಾಸದಲ್ಲಿಯೇ ಮಾಡಬೇಕು. ಆದರೆ ಪ್ರಥಮಾಬ್ದಿಕವನ್ನು ಮಾತ್ರ ಅಧಿಕಮಾಸದಲ್ಲಿಯೇ ಮಾಡಬೇಕು. ಮರಣಹೊಂದಿದವರ ಹನ್ನೊಂದು ದಿನಗಳ ಕರ್ಮ ಮತ್ತು ಸಪಿಂಡೀಕರಣಗಳು ಅಧಿಕಮಾಸದಲ್ಲಿ ಬಂದರೆ ಅವುಗಳನ್ನು ಅಧಿಕಮಾಸದಲ್ಲಿಯೇ ಮಾಡಬೇಕು. ಎರಡನೆಯ ತಿಂಗಳಿನ ಮಾಸಿಕದಿಂದ ಹನ್ನೆರಡನೆಯ ತಿಂಗಳಿನ ಮಾಸಿಕದವರೆಗೆ ಮಧ್ಯದಲ್ಲಿ ಅಧಿಕಮಾಸ ಬಂದರೆ ಆ ತಿಂಗಳಿನ ಮಾಸಿಕವನ್ನು ಅಧಿಕಮಾಸದಲ್ಲಿಯೂ ಶುದ್ಧಮಾಸದಲ್ಲಿಯೂ ಎರಡುಸಲ ಮಾಡಬೇಕು. ಹನ್ನೆರಡನೇ ತಿಂಗಳು ಅಧಿಕಮಾಸವಾಗಿ ಬಂದರೆ ಆ ತಿಂಗಳಿನ ಮಾಸಿಕವನ್ನು ಹನ್ನೆರಡನೇ ತಿಂಗಳಾದ ಅಧಿಕಮಾಸದಲ್ಲಿಯೂ ಹದಿಮೂರನೇ ತಿಂಗಳಾದ ಶುದ್ಧಮಾಸದಲ್ಲಿಯೂ ಮಾಡಿ ಹದಿನಾಲ್ಕನೇ ತಿಂಗಳಾದ ಮರಣಮಾಸದಲ್ಲಿ ಪ್ರಥಮಾಬ್ದಿಕವನ್ನು ಮಾಡಬೇಕು. ಈ ಅಧಿಕಮಾಸದಲ್ಲಿ, ಅಷ್ಟಕಶ್ರಾದ್ಧ ಚೌಲ ಉಪನಯನ ವಿವಾಹ ತೀರ್ಥಯಾತ್ರೆ ಗೃಹನಿರ್ಮಾಣ ಗೃಹ ಪ್ರವೇಶ ದೇವತಾಪ್ರತಿಷ್ಠೆ ನೂತನ ವಸ್ತ್ರಾಭರಣಧಾರಣೆ ತುಲಾ ಪುರುಷದಾನಾದಿ ಮಹಾದಾನಗಳು ಯಾಗಗಳು ಅಪೂರ್ವದೇವದರ್ಶನ ಅಪೂರ್ವತೀರ್ಥಸ್ನಾನ ಸಂನ್ಯಾಸಸ್ವೀಕಾರ ಕಾಮ್ಯವೃಷೋತ್ಸರ್ಗ ರಾಜಾಭಿಷೇಕ ಸಮಾವರ್ತನ ಕಾಲಾತಿಕ್ರಮಣವಾದ ಜಾತಕರ್ಮಾದಿ ಸಂಸ್ಕಾರಗಳು ಪವಿತ್ರಾರೋಪಣ ದಮನಾರ್ಪಣ ಮುಂತಾದ ಕರ್ಮಗಳನ್ನು ಮಾಡಕೂಡದು. ನೈಮಿತ್ತಿಕ ಕರ್ಮಗಳನ್ನು (ರಜೋದರ್ಶನಾದಿ ಶಾಂತಿಗಳನ್ನು) ನಿಮಿತ್ತವೇರ್ಪಟ್ಟಕೂಡಲೇ ಮಾಡುವದಾಗಿದ್ದರೆ ಮಲಮಾಸದಲ್ಲಿಯೂ ಮಾಡಬಹುದು. ಹಾಗೆ ಮಾಡಲು

ಸಾಧ್ಯವಾಗದಿದ್ದರೆ ಶುದ್ಧಮಾಸದಲ್ಲಿಯೇ ಮಾಡಬೇಕು. ಯುಗಾದಿ ಮನ್ವಾದಿ ಶ್ರಾದ್ಧಗಳನ್ನು ಎರಡು ತಿಂಗಳಲ್ಲಿಯೂ ಮಾಡಬೇಕು. ಪ್ರಕೃತ ಮೇಲ್ಕಂಡ ನಿಯಮಾನುಸಾರವಾಗಿ ಹಿಂದೆ ಯವುದೇ ಅಧಿಕ ಮಾಸದಲ್ಲಿ ಮರಣ ಹೊಂದಿದವರ ಪ್ರತಿಸಾವಂತ್ಸರಿಕ ಶ್ರಾದ್ಧವನ್ನು ಅಧಿಕಮಾಸದಲ್ಲಿಯೇ ಮಾಡಬೇಕು.

ಅಧಿಕಮಾಸದ ದಾನದ ಸಂಕಲ್ಪ

ಅಧಿಕಮಾಸ ಪ್ರಾಪ್ತವಾದಾಗ ಉಪೋಷಣ, ಏಕಭುಕ್ತ, ನಕ್ತಭೋಜನ, ಅಯಾಚಿತ, ಧಾರಣೆಪಾರಣೆ ಈ ಪ್ರಕಾರ ಐದು ವಿಧವಾದ ವ್ರತಗ್ರಹಣವನ್ನು ತಿಂಗಳ ಪರ್ಯಂತವೂ ಮಾಡುವುದರಿಂದ ವಿಶೇಷಪುಣ್ಯವೆಂದು ಹೇಳಿದ್ದಾರೆ. ಮತ್ತು ತಿಂಗಳ ಪರ್ಯಂತ ತಾಂಬೂಲ ದಾನದಿಂದ ಸೌಭಾಗ್ಯಪ್ರಾಪ್ತಿ. ದೇವರ ಮುಂದೆ ಅಖಂಡದೀಪ ಪ್ರದಾನದಿಂದ ಲಕ್ಷ್ಮೀಪ್ರಾಪ್ತಿ. ಈ ಅಧಿಕಮಾಸದಲ್ಲಿ ಗಂಗಾ ಮೊದಲಾದ ಮಹಾನದಿಗಳ ಸ್ನಾನದಿಂದ ಪಾಪನಿವೃತ್ತಿ. ಈ ಮಾಸ ಮುಗಿಯುವ ಪರ್ಯಂತ ಪ್ರತಿದಿನದಲ್ಲಿಯೂ ಅಪೂಪದಾನ ಶ್ರೇಷ್ಠವಾದದ್ದು. ತಿಂಗಳು ದಾನ ಕೊಡಲು ಶಕ್ತಿಯಿಲ್ಲದವರು ಒಂದು ದಿನವಾದರೂ ಈ ದಾನವನ್ನು ಕೊಡಬೇಕೆಂದೂ ಅದಕ್ಕೆ ಶುಕ್ಲ ಕೃಷ್ಣ ದಾದಶೀ ದಿನಗಳು ಪೂರ್ಣಿಮಾ ಅಮಾವಾಸ್ಯೆ ಬಹುಳಾಷ್ಟಮೀ ನವಮೀ ಚತುರ್ದಶೀ ಮತ್ತು ವೈಧೃತಿ ವ್ಯತೀಪಾತ ದಿನಗಳು ಉತ್ತಮವಾದವುಗಳೆಂದೂ ಹೇಳಿದ್ದಾರೆ. ಮೂವತ್ತುಮೂರು ಅಪೂಪಗಳನ್ನು ಪಾತ್ರೆಸಹಿತವಾಗಿ ದಾನಮಾಡಬೇಕು.

ಇದಕ್ಕೆ ಸಂಕಲ್ಪ ಆಚಮ್ಯ, ಪ್ರಾಣಾನಾಯಮ್ಯ-ದೇಶಕಾಲೌ ಸಂಕೀರ್ತ್ಯ ಏವಂ........ ಶುಭತಿಥೌ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಸಹಸ್ರಾಂಶು ವಿಷ್ಣುರೂಪೀಶ್ರೀಪುರುಷೋತ್ತಮಪ್ರೀತಿದ್ವಾರಾಮಮ ನಿಖಿಲಪಾಪಶಮನಪೂರ್ವಕ ಪುತ್ರಪೌತ್ರಧನಧಾನ್ಯಕ್ಷೇಮಸಮೃದ್ಧಯೇ ಲೋಕದ್ವಯಸುಖಹೇತು ಭೂದಾನಫಲಪ್ರಾಪ್ತ್ಯೈ ಅಪೂಪ ಛಿದ್ರಸಮಸಂಖ್ಯವರ್ಷಸಹಸ್ರಾವಧಿಕಸ್ವರ್ಲೋಕ ನಿವಾಸಾದಿಕಲ್ಪೋಕ್ತಫಲಸಿದ್ಧ್ಯರ್ಥಂ

ಮಲಮಾಸಪ್ರಯುಕ್ತ ಅಪೂಪದಾನಮಹಂ ಕರಿಷ್ಯೇ ।
ತದಂಗ ಪುರುಷೋತಮಪೂಜಾಂ ಬ್ರಾಹ್ಮಣಪೂಜಾಂ ಚ ಕರಿಷ್ಯೇ ॥

ಪ್ರಾರ್ಥನಮಂತ್ರಃ-

ವಿಷ್ಣುರೂಪೀ ಸಹಸ್ರಾಂಶುಃ ಸರ್ವಪಾಪಪ್ರಣಾಶನಃ ।
ಅಪೂಪಾನ್ನಪ್ರದಾನೇನ ಮಮ ಪಾಪಂ ವ್ಯಪೋಹತು ॥
ನಾರಾಯಣ ಜಗದ್ಬೀಜ ಭಾಸ್ಕರಪ್ರತಿರೂಪಕ ।
ವ್ರತೇನಾನೇನ ಪುತ್ರಾಂಶ್ಚ ಸಂಪದಂ ಚಾಪಿ ವರ್ಧಯ ॥
ಯಸ್ಯ ಹಸ್ತೇ ಗದಾಚಕ್ರೇ ಗರುಡೋ ಯಸ್ಯ ವಾಹನಃ ।
ಶಂಖಂ ಕರತಲೇ ಯಸ್ಯ ಸ ಮೇ ವಿಷ್ಣುಃ ಪ್ರಸೀದತು ॥

ಕಲಾಕಾಷ್ಠಾದಿರೂಪೇಣ ನಿಮೇಷಘಟಿಕಾದಿನಾ ।
ಯೋ ವಂಚಯತಿ ಭೂತಾನಿ ತಸ್ಮೈ ಕಾಲಾತ್ಮನೇ ನಮಃ ॥
ಕುರುಕ್ಷೇತ್ರಮಯಂ ದೇಶಃ ಕಾಲಃ ಪರ್ವದ್ವಿಜೋ ಹರಿಃ ।
ಪೃಥ್ವೀಸಮಮಿದಂ ದಾನಂ ಗೃಹಾಣ ಪುರುಷೋತ್ತಮ ॥
ಮಲಾನಾಂ ಚ ವಿಶುದ್ಧ್ಯರ್ಥಂ ಪಾಪಪ್ರಶಮನಾಯ ಚ ।
ಪುತ್ರಪೌತ್ರಾಭಿವೃದ್ಧ್ಯರ್ಥಂ ತವ ದಾಸ್ಯಾಮಿ ಭಾಸ್ಕರ ॥

ಇಮಾನ್ ಸೋಪಸ್ಕರಾನ್ ತ್ರಯಸ್ತ್ರಿಂಶದಪೂಪಾನ್

ಸದಕ್ಷಿಣಾಕಾನ್ ಸತಾಂಬೂಲಾನ್ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀ ಪುರುಷೋತ್ತಮಪ್ರೇರಣಯಾ ತತ್ಪ್ರೀತ್ಯರ್ಥಂ ತುಭ್ಯಮಹಂ ಸಂಪ್ರದದೇ ನ ಮಮ ನಮಮ ಇತಿ ॥ ತ್ರಯಸ್ತ್ರಿಂಶದಪೂಪದಾನೇನ ಶ್ರೀಪುರುಷೋತ್ತಮಃ ಪ್ರೀಯತಾಂ ಸುಪ್ರೀತೋ ಭವತು. ಶ್ರೀಕೃಷ್ಣಾರ್ಪಣಮಸ್ತು ॥

ಧರ್ಮಶಾಸ್ತ್ರ ಸಾಮಾನ್ಯ ಮಾಹಿತಿ

ಆಶೌಚ ಪ್ರಾರಂಭ ನಿರ್ಣಯ

60.0 ಘಳಿಗೆಯಲ್ಲಿ ಆ ದಿನದ ಹಗಲಿನ ಪ್ರಮಾಣವನ್ನು ಕಳೆದು ಉಳಿಯುವುದೇ ರಾತ್ರಿ ಪ್ರಮಾಣ. ಇದನ್ನು 8 ಭಾಗ ಮಾಡಿದರೆ ಮೊದಲನೆಯ 5 ಭಾಗದೊಳಗೆ ಜನನ, ಮರಣ, ರಜೋದರ್ಶನ, ಇವುಗಳು ಸಂಭವಿಸಿದರೆ ಅದು ಮೊದಲ ದಿನಕ್ಕೆ ಸೇರಿದ್ದು 6,7,8 ಭಾಗಗಳಲ್ಲಿ ಆದರೆ ಮಾರನೇ ದಿನಕ್ಕೆ ಸೇರಿದ್ದು.

ಅಶೌಚ ನಿರ್ಣಯಃ

ಜನನ ಅಥವಾ ಮರಣದಿಂದ ಉಂಟಾಗುವ ಮೈಲಿಗೆಯು ಅಶೌಚವೆನಿಸುತ್ತದೆ.

1) ಜನನ ಅಥವಾ ಗರ್ಭಸ್ರಾವದಿಂದ ಉಂಟಾಗುವ ಮೈಲಿಗೆಯು ಜಾತಾಶೌಚ.

2) ಮರಣದಿಂದ ಉಂಟಾಗುವ ಮೈಲಿಗೆಯು ಮೃತಾಶೌಚ ಎಂದು ಅಶೌಚವು ಎರಡು ವಿಧವಾಗಿದೆ.

(ಜಾತಾಶೌಚ ವಿಭಾಗ)

ತನ್ನ ಮನೆಯಲ್ಲಿ ಮಗಳ ಪ್ರಸವ ಅಥವಾ ತನ್ನ ಪತ್ನಿಗೆ ಗರ್ಭಪಾತ ಏರ್ಪಟ್ಟಿದ್ದರಿಂದ ಉಂಟಾಗುವ ಅಶೌಚವು ಅಲ್ಪಜಾತಾಶೌಚವೆನಿಸುತ್ತದೆ. ಇದನ್ನು ಬಿಟ್ಟು ಉಳಿದ ಎಲ್ಲಾ ಜಾತಾಶೌಚವು ಅಧಿಕಜಾತಾಶೌಚವೆನಿಸುತ್ತದೆ. ಇದು ಬೇರೆ ಬೇರೆ ಜಾತಿಯವರಿಗೆ ಬೇರೆ ಬೇರೆ ವಿಧವಾಗಿದೆ.

(ಮೃತಾಶೌಚ ವಿಭಾಗ)

10 ದಿವಸವು ಮುಗಿದ ಮೇಲೆ ದಶರಾತ್ರಜ್ಞಾತಿಯ ಮರಣವು ತಿಳಿದರೆ ಏರ್ಪಡುವ ಮೃತಶೌಚ ಮತ್ತು ದಶರಾತ್ರಜ್ಞಾತಿಯಲ್ಲದ ಬಂಧುವಿನ ಮರಣದಿಂದ

ಬರುವ ಮೃತಾಶೌಚವು ಅಲ್ಪಮೃತಾಶೌಚವೆನಿಸುತ್ತದೆ. ಇದನ್ನು ಬಿಟ್ಟು ಉಳಿದ ಎಲ್ಲಾ ಮೃತಾಶೌಚವು ಅಧಿಕಮೃತಾಶೌಚವೆನಿಸುತ್ತದೆ.

(ಜಾತಾಶೌಚದಲ್ಲಿ ಅಸ್ಪೃಶ್ಯತ್ವ)

ಜಾತಾಶೌಚವು ಮುಗಿಯುವವರೆಗೂ ಪ್ರಸವಿಸಿದವಳು ಅಸ್ಪೃಶ್ಯಳು, ಅಂದರೆ ಅವಳನ್ನು ಮುಟ್ಟಬಾರದು. ಪ್ರಸವ ಸಮಾಚಾರವನ್ನು ಕೇಳಿದ ಕೂಸಿನ ತಂದೆಯು ಸ್ನಾನ ಮಾಡುವವರೆಗೆ ಅಸ್ಪೃಶ್ಯನು. ಉಳಿದ ದಶರಾತ್ರಜ್ಞಾತಿಗಳು ಅಸ್ಪೃಶ್ಯರಲ್ಲ.

(ಮೃತಾಶೌಚದಲ್ಲಿ ಅಸ್ಪೃಶ್ಯತ್ವ)

ತನಗೆ ಬಂದ ಮೃತಾಶೌಚ ಕಾಲವನ್ನು ಮೂರು ವಿಭಾಗಮಾಡಿ ಅದರಲ್ಲಿ ಮೊದಲನೆಯ ಭಾಗವು ಮುಗಿಯುವವರೆಗೆ ಅಶ್ಪೃಶ್ಯರಾಗುತ್ತಾರೆ.

(ತಂದೆಯ ಮನೆಯಲ್ಲಿ ಮಗಳು ಪ್ರಸವಿಸಿದರೆ ಜಾತಾಶೌಚ)

ತಂದೆಯ ಮನೆಯಲ್ಲಿ ಮಗಳು ಪ್ರಸವಿಸಿದರೆ ತಂದೆ ತಾಯಿ ಇಬ್ಬರಿಗೂ 3 ದಿನ ಜಾತಾಶೌಚವೆನಿಸುತ್ತದೆ

(ಗರ್ಭಸ್ರಾವ, ಗರ್ಭಪಾತ, ಪ್ರಸವ ಲಕ್ಷಣಗಳು)

ಗರ್ಭಧಾರಣೆಯಾಗಿ 1 ರಿಂದ 4 ತಿಂಗಳಿನವರೆಗೆ ಗರ್ಭವು ಹೋದರೆ ಗರ್ಭಸ್ರಾವ, 5 6 ತಿಂಗಳಿನಲ್ಲಿ ಹೋದರೆ ಗರ್ಭಪಾತ, 6ನೇ ತಿಂಗಳು ಮುಗಿದ ಮೇಲೆ ಗರ್ಭವು ಹೊರಗೆ ಬಂದರೆ ಪ್ರಸವ ಎಂದು ತಿಳಿಯಬೇಕು.

(ಗರ್ಭಪಾತದಲ್ಲಿ ಜಾತಾಶೌಚ)

ಗರ್ಭಪಾತವು 5ನೆಯ ತಿಂಗಳಿನಲ್ಲಿ ಏರ್ಪಟ್ಟರೆ ಗರ್ಭಪಾತ ದಿನದಿಂದ 5 ದಿನಗಳು 6 ನೆಯ ತಿಂಗಳಿನಲ್ಲಿ ಏರ್ಪಟ್ಟರೆ 6 ದಿನಗಳು ತಾಯಿಗೆ ಜಾತಾಶೌಚವಿದೆ. ಈ ಎರಡು ತಿಂಗಳಿನಲ್ಲಿ ಗರ್ಭಪಾತವಾದರೆ ತಂದೆಗೂ ದಶರಾತ್ರಜ್ಞಾತಿಗಳಿಗೂ ಆ ದಿನದಿಂದ 3 ದಿನಗಳವರೆಗೆ ಜಾತಾಶೌಚವೆಂದು ತಿಳಿಯಬೇಕು. ಮೃತಾಶೌಚವಿಲ್ಲ.

(ಗರ್ಭಸ್ರಾವದಲ್ಲಿ ಜಾತಾಶೌಚ)

ಗರ್ಭಸ್ರಾವವು 3ನೆಯ ತಿಂಗಳಲ್ಲಿ ಏರ್ಪಟ್ಟರೆ ಗರ್ಭಸ್ರಾವ ದಿನದಿಂದ 3 ದಿನಗಳು, 4ನೆಯ ತಿಂಗಳಿನಲ್ಲಿ ಏರ್ಪಟ್ಟರೆ 4 ದಿನಗಳು ತಾಯಿಗೆ ಜಾತಾಶೌಚವಿದೆ. ಗರ್ಭಸ್ರಾವದಲ್ಲಿ ತಂದೆ ಮತ್ತು ದಶರಾತ್ರಜ್ಞಾತಿಗಳಿಗೆ ಗರ್ಭಸ್ರಾವ ಅಶೌಚವಿಲ್ಲ.

ಬ್ರಾಹ್ಮಣಾದಿ ಜಾತಿಯವರಿಗೆ ಪೂರ್ಣಾಶೌಚಕಾಲ

ಬ್ರಾಹ್ಮಣರಿಗೆ 10 ದಿನ, ಕ್ಷತ್ರಿಯರಿಗೆ 12 ದಿನ, ವೈಶ್ಯರಿಗೆ 15 ದಿನ, ಶೂದ್ರರಿಗೆ 1 ತಿಂಗಳು ಪೂರ್ಣಾಶೌಚವೆಂದು ತಿಳಿಯಬೇಕು.

(ನಾಭಿಭೇದಕ್ಕಿಂತ ಪೂರ್ವದಲ್ಲಿ ಶಿಶು ಮೃತವಾದರೆ ಜಾತಾಶೌಚ)

ಹೊಕ್ಕಳನ್ನು ಬೇರ್ಪಡಿಸುವುದಕ್ಕೆ ಮುಂಚೆ ಶಿಶು ಸತ್ತರೆ ತಾಯಿಗೆ ಪೂರ್ಣವಾದ ಜಾತಾಶೌಚವಿದೆ.

(ನಾಭಿಭೇದವಾದ ಮೇಲೆ ಶಿಶು ಮೃತವಾದರೆ ಜಾತಾಶೌಚ)

ನಾಭಿಭೇದವಾದ ಮೇಲೆ ಶಿಶುವು ಮೃತವಾದರೆ ತಾಯಿ ತಂದೆ ದಶರಾತ್ರ ಜ್ಞಾತಿಗಳು ಇವರಿಗೆ ಪೂರ್ಣವಾದ ಜಾತಾಶೌಚವೆಂದು ತಿಳಿಯಬೇಕು. ಮೃತಾಶೌಚವಿಲ್ಲ.

(ಜಾತಾಶೌಚದ ಮಧ್ಯದಲ್ಲಿ ಮಗು ಸತ್ತರೆ)

ಕೂಸು ಹುಟ್ಟಿ ಜಾತಾಶೌಚವು ಮುಗಿಯುವುದರೊಳಗೆ ಸತ್ತು ಹೋದರೆ ಸತ್ತದಿನ ಹಗಲಿನಲ್ಲಿ ಮಾತ್ರ ಮೃತಾಶೌಚವಿರುತ್ತದೆ. ಆಮೇಲೆ ಇಲ್ಲ.

(ಮೃತಾಶೌಚದ ಮಧ್ಯದಲ್ಲಿ, ಜಾತಾಶೌಚವು ಬಂದರೆ)

ಮೃತಾಶೌಚದ ಮಧ್ಯದಲ್ಲಿ ಮೃತಾಶೌಚದ ದಿನ ಸಮಾನ ಅಥವಾ ಅದಕ್ಕಿಂತ ಕಡಿಮೆ ಜಾತಾಶೌಚವು ಬಂದರೆ ಮೃತಾಶೌಚವು ಮುಗಿಯುವಾಗ ಜಾತಾಶೌಚವು ಮುಗಿಯುತ್ತದೆ, ಕೂಸಿನ ತಾಯಿಗೆ ಮಾತ್ರ ಜಾತಾಶೌಚ ನಿವೃತ್ತಿಯಾಗುವುದಿಲ್ಲ.

'ಮೃತಶೌಚದ ಮಧ್ಯದಲ್ಲಿ ಮೃತಶೌಚದ ದಿನಸಂಖ್ಯೆಗಿಂತ ಜಾತಾಶೌಚದ ದಿನಸಂಖ್ಯೆಗಿಂತ ಅಧಿಕವಾದ ದಿನಸಂಖ್ಯೆಯುಳ್ಳ ಜಾತಶೌಚವು ಬಂದರೆ' ಮೃತಶೌಚವು ಮುಗಿಯುವಾಗ ಜಾತಾಶೌಚವು ಮುಗಿಯುವುದಿಲ್ಲ.

(ಜಾತಾಶೌಚದ ಮಧ್ಯದಲ್ಲಿ ಮೃತಾಶೌಚ ಬಂದರೆ)

ಹೆಚ್ಚು ದಿನ ಸಂಖ್ಯೆಯುಳ್ಳ ಜಾತಾಶೌಚದ ಮಧ್ಯದಲ್ಲಿ ಕಮ್ಮಿ ದಿನ ಸಂಖ್ಯೆಯುಳ್ಳ ಮೃತಾಶೌಚವು ಬಂದರೆ ಆ ಮೃತಾಶೌಚವು ಜಾತಾಶೌಚವು ಮುಗಿಯುವಾಗ ಮುಗಿಯುತ್ತದೆ.

ಉದಾ–10 ದಿನದ ಜಾತಾಶೌಚವು ಆರಂಭವಾಗಿ 10ನೆಯ ದಿನದಲ್ಲಿ 3 ದಿನದ ಮೃತಾಶೌಚವು ಬಂದರೆ ಮರುದಿನ ಜಾತಾಶೌಚ ಮುಗಿಯುವಾಗ ಮೃತಾಶೌಚವು ಮುಗಿಯುತ್ತದೆ. 10ನೆಯ ದಿನದಿಂದ ಪುನಃ 3 ದಿನಗಳವರೆಗೆ ಮೃತಾಶೌಚವನ್ನು ಅನುಷ್ಠಿಸಬೇಕಾಗಿಲ್ಲ.

ಜಾತಾಶೌಚದ ಮಧ್ಯದಲ್ಲಿ ಜಾತಾಶೌಚದ ದಿನ ಸಂಖ್ಯೆಗೆ ಸಮಾನ ಅಥವಾ ಅಧಿಕವುಳ್ಳ ಮೃತಾಶೌಚವು ಬಂದರೆ ಆ ಮೃತಾಶೌಚವು ಜಾತಾಶೌಚವು ಮುಗಿಯುವಾಗ ಮುಗಿಯುವುದಿಲ್ಲ.

ಉದಾ–3 ದಿನದ ಜಾತಾಶೌಚವು ಆರಂಭವಾಗಿ 3ನೆಯ ದಿನದಲ್ಲಿ 3 ದಿನದ ಮೃತಾಶೌಚ ಅಥವಾ 10 ದಿನದ ಮೃತಾಶೌಚವು ಬಂದರೆ ಮರುದಿನ ಬೆಳಿಗ್ಗೆ

ಜಾತಾಶೌಚವು ಮುಗಿಯುವಾಗ 3 ದಿನಗಳ ಮೃತಾಶೌಚವು ಮುಗಿಯಲಾರದು. ಮೃತಾಶೌಚವು ಆರಂಭವಾದ ದಿನದಿಂದ 3 ಅಥವಾ 10 ದಿನಗಳ ಮೃತಾಶೌಚಗಳನ್ನು ಅನುಷ್ಠಿಸಲೇಬೇಕು.

(ಜಾತಾಶೌಚದ ಮಧ್ಯದಲ್ಲಿ ಜಾತಾಶೌಚ ಬಂದರೆ)

ಜಾತಾಶೌಚದ ಮಧ್ಯದಲ್ಲಿ ಅದರ ದಿನಸಂಖ್ಯೆಗೆ ಸಮಾನ ಅಥವಾ ಕಡಿಮೆ ದಿನಗಳ ಸಂಖ್ಯೆಯುಳ್ಳ ಇನ್ನೊಂದು ಜಾತಾಶೌಚವು ಬಂದರೆ ಎರಡನೆಯ ಜಾತಾಶೌಚವು ಮೊದಲನೆಯ ಜಾತಾಶೌಚವು ಮುಗಿಯುವ ದಿನದಲ್ಲಿಯೇ ಮುಗಿಯುತ್ತದೆ. ಆದರೆ ತಾಯಿಗೆ ಮುಗಿಯುವುದಿಲ್ಲ.

ಉದಾ–10 ದಿನದ ಜಾತಾಶೌಚದ 9ನೆಯ ದಿನದಲ್ಲಿ 3 ದಿನ ಅಥವಾ 10 ದಿನದ ಇನ್ನೊಂದು ಜಾತಾಶೌಚವು ಬಂದರೆ ಮೊದಲನೆಯ ಜಾತಾಶೌಚವು ಮುಗಿಯುವಾಗ ಆಮೇಲೆ ಬಂದಿರುವ 3 ಅಥವಾ 10 ದಿನಗಳ ಜಾತಾಶೌಚವು ಮುಗಿಯುತ್ತದೆ. ಅದಕ್ಕಾಗಿ ಮೊದಲನೆಯ ಅಶೌಚದ 9ನೆಯ ದಿನದಿಂದ 3 ಅಥವಾ 10 ದಿನಗಳವರೆಗೆ ಜಾತಾಶೌಚವನ್ನು ಅನುಷ್ಠಿಸಬೇಕಾಗಿಲ್ಲ.

ಜಾತಾಶೌಚದ ಮಧ್ಯದಲ್ಲಿ ಅದರ ದಿನಸಂಖ್ಯೆಗಿಂತ ಅಧಿಕ ಸಂಖ್ಯೆಯುಳ್ಳ ಇನ್ನೊಂದು ಜಾತಾಶೌಚವು ಬಂದರೆ ಮೊದಲನೆಯ ಜಾತಾಶೌಚವು ಮುಗಿಯುವ ದಿನದಲ್ಲಿ ಎರಡನೆಯ ಜಾತಾಶೌಚವು ಮುಗಿಯುವುದಿಲ್ಲ.

ಉದಾ–3 ದಿನಗಳ ಜಾತಾಶೌಚವು ಆರಂಭವಾಗಿ 2ನೆಯ ದಿನದಲ್ಲಿ 10 ದಿನಗಳ ಇನ್ನೊಂದು ಜಾತಾಶೌಚವು ಬಂದರೆ ಮೊದಲನೆಯ ಜಾತಾಶೌಚವು ಮುಗಿಯುವ ಮರುದಿನದಲ್ಲಿ 2ನೆಯ ಜಾತಾಶೌಚವು ಮುಗಿಯುವುದಿಲ್ಲ. ಮೊದಲನೆಯ ಜಾತಾಶೌಚದ 2ನೆಯ ದಿನದಿಂದ 10 ದಿನಗಳವರೆಗೆ 2ನೆಯ ಜಾತಾಶೌಚವನ್ನು ಅನುಷ್ಠಿಸಲೇಬೇಕು.

(ಜಾತಾಶೌಚದ ಕೊನೆಯ ದಿನದಲ್ಲಿ ಜಾತಾಶೌಚವು ಬಂದರೆ)

1. ಜಾತಾಶೌಚದ ಕೊನೆಯ ದಿನದಲ್ಲಿ ಸೂರ್ಯಾಸ್ತಮಯಕ್ಕಿಂತ ಪೂರ್ವದಲ್ಲಿ ಜಾತಾಶೌಚ ದಿನಸಂಖ್ಯೆಗೆ ಸಮಾನ ಅಥವಾ ಕಡಿಮೆದಿನ ಸಂಖ್ಯೆಯುಳ್ಳ 2ನೆಯ ಜಾತಾಶೌಚವು ಬಂದರೆ ಮೊದಲನೆಯ ಜಾತಶೌಚವು ಮುಗಿದ ಮೇಲೆ ಎರಡು ದಿನಗಳು ಹೆಚ್ಚಾಗಿ ಜಾತಾಶೌಚವನ್ನು ಅನುಷ್ಠಿಸಬೇಕು. ತಾಯಿಗೆ ಪೂರ್ಣವಾದ ಜಾತಾಶೌಚವು ಇದ್ದೇ ಇದೆ.

ಉದಾ–10 ದಿನದ ಜಾತಾಶೌಚವು ಆರಂಭವಾಗಿ 10ನೆಯ ದಿನದಲ್ಲಿ ಸೂರ್ಯಾಸ್ತ ಸಮಯಕ್ಕಿಂತ ಪೂರ್ವದಲ್ಲಿ ಎರಡನೆಯ ಹತ್ತು ದಿನದ ಅಥವಾ ಮೂರು ದಿನದ ಜಾತಾಶೌಚವು ಬಂದರೆ 10 ದಿನದ ಜಾತಾಶೌಚವು ಮುಗಿದಮೇಲೆ ಪುನಃ 2 ದಿನಗಳವರೆಗೆ ಜಾತಾಶೌಚವನ್ನು ಅನುಷ್ಠಿಸಬೇಕು.

(ಜಾತಾಶೌಚದ ಕೊನೆಯ ದಿನದಲ್ಲಿ ಅರ್ಧರಾತ್ರಿ
ಮುಗಿದ ಮೇಲೆ ಜಾತಾಶೌಚವು ಬಂದರೆ)

2. ಜಾತಾಶೌಚದ ಕೊನೆಯ ದಿನದಲ್ಲಿ ಸೂರ್ಯಾಸ್ತಮಯವು ಮುಗಿದು ಅರ್ಧರಾತ್ರಿಯಾದ ಮೇಲೆ ಎರಡನೆಯ ಜಾತಾಶೌಚವು ಬಂದರೆ ಎರಡನೆಯ ಜಾತಾಶೌಚವನ್ನು ಪೂರ್ಣವಾಗಿ ಅನುಷ್ಠಿಸಬೇಕು.

(ಮೃತಾಶೌಚದಲ್ಲಿ ಮೃತಾಶೌಚವು ಬಂದರೆ)

1. ಮೃತಾಶೌಚದ ಮಧ್ಯದಲ್ಲಿ ಆ ಮೃತಾಶೌಚದ ದಿನಸಂಖ್ಯೆಗೆ ಸಮಾನ ಅಥವಾ ಕಡಿಮೆ ದಿನ ಸಂಖ್ಯೆಯುಳ್ಳ ಇನ್ನೊಂದು ಮೃತಾಶೌಚವು ಬಂದರೆ ಮೊದಲನೆಯ ಮೃತಾಶೌಚವು ಮುಗಿಯುವ ದಿನದಲ್ಲಿ ಎರಡನೆಯ ಮೃತಾಶೌಚವು ಮುಗಿಯುತ್ತದೆ. ಆದರೆ ಅಗ್ನಿಸಂಸ್ಕಾರ ಮಾಡಿದವನಿಗೂ ಸತ್ತವನ ಮಕ್ಕಳಿಗೂ ನಿವೃತ್ತಿಯಾಗುವುದಿಲ್ಲ.

ಉದಾ–10 ದಿನದ ಮೊದಲನೆಯ ಮೃತಾಶೌಚವು ಆರಂಭವಾಗಿ 9ನೆಯ ದಿನದಲ್ಲಿ 3 ದಿನದ ಅಥವಾ 10 ದಿನದ ಮೃತಾಶೌಚವು ಬಂದರೆ ಮೊದಲನೆಯ ಮೃತಾಶೌಚವು ಮುಗಿಯುವ ಮರುದಿನದಲ್ಲಿಯೇ ಎರಡನೆಯ ಮೃತಾಶೌಚವು ಮುಗಿಯುತ್ತದೆ. ಮೊದಲನೆಯ ಮೃತಾಶೌಚವು ಆರಂಭಿಸಿ 9 ದಿನಗಳ ಮೇಲೆ ಪುನಃ 3 ಅಥವಾ 10 ದಿನಗಳವರೆಗೆ 2ನೆಯ ಮೃತಾಶೌಚವನ್ನು ಅನುಷ್ಠಿಸಬೇಕಾಗಿಲ್ಲ.

2. (ಮೃತಾಶೌಚದ ಮಧ್ಯದಲ್ಲಿ ಆ ಮೃತಾಶೌಚದ ದಿನಸಂಖ್ಯೆಗೆ ಅಧಿಕವಾದ ದಿನಸಂಖ್ಯೆಯುಳ್ಳ ಇನ್ನೊಂದು ಮೃತಾಶೌಚವು ಬಂದರೆ)

ಮೊದಲನೆಯ ಮೃತಾಶೌಚವು ಮುಗಿಯುವಾಗ 2ನೆಯ ಮೃತಾಶೌಚವು ಮುಗಿಯುವುದಿಲ್ಲ.

ಉದಾ–3 ದಿನದ ಮೃತಾಶೌಚವು ಆರಂಭವಾಗಿ 3ನೆಯ ದಿನದಲ್ಲಿ 10 ದಿನದ ಇನ್ನೊಂದು ಮೃತಾಶೌಚವು ಬಂದರೆ ಎರಡನೆಯ ಅಶೌಚವು ಬಂದ ದಿನದಿಂದ 10 ದಿನಗಳವರೆಗೆ ಎರಡನೆಯ ಮೃತಾಶೌಚವನ್ನು ಅನುಷ್ಠಿಸಬೇಕು.

(ಮೃತಾಶೌಚದ ಕೊನೆಯ ದಿನ ಹಗಲಿನಲ್ಲಿ
ಇನ್ನೊಂದು ಮೃತಾಶೌಚವು ಬಂದರೆ)

1. ಮೃತಾಶೌಚದ ಕೊನೆಯ ದಿನದಲ್ಲಿ ಸೂರ್ಯಾಸ್ತಮನಕ್ಕಿಂತ ಪೂರ್ವದಲ್ಲಿ ಮೃತಾಶೌಚದ ದಿನ ಸಂಖ್ಯೆಗೆ ಸಮಾನ ಅಥವಾ ಕಡಿಮೆ ದಿನ ಸಂಖ್ಯೆಯುಳ್ಳ ಇನ್ನೊಂದು ಮೃತಾಶೌಚವು ಬಂದರೆ ಮೊದಲನೆಯ ಮೃತಾಶೌಚವು ಮುಗಿದು ಎರಡು ದಿನಗಳಾದ ಮೇಲೆ ಎರಡನೆಯ ಮೃತಾಶೌಚವು ಮುಗಿಯುತ್ತದೆ. ಕೊಳ್ಳಿಯನ್ನಿಟ್ಟವನಿಗೂ ಸತ್ತವನ ಮಗನಿಗೂ ಸತ್ತ ದಿನದಿಂದ 10 ದಿನಗಳವರೆಗೆ ಮೃತಾಶೌಚವು ಇದ್ದೇ ಇದೆ.

(ಮೃತಾಶೌಚದ ಕೊನೆಯ ದಿನ ಅರ್ಧರಾತ್ರಿಯ ಅನಂತರದಲ್ಲಿ ಇನ್ನೊಂದು ಮೃತಾಶೌಚವು ಬಂದರೆ)

2. ಮೃತಾಶೌಚದ ಕೊನೆಯ ದಿನದಲ್ಲಿ ಸೂರ್ಯಾಸ್ತವು ಮುಗಿದು ಅರ್ಧರಾತ್ರಿಯಾದ ಮೇಲೆ ಇನ್ನೊಂದು ಮೃತಾಶೌಚವು ಬಂದರೆ ಮೊದಲನೆಯ ಮೃತಾಶೌಚವು ಮುಗಿದು 3 ದಿನಗಳಾದ ಮೇಲೆ ಎರಡನೆಯ ಮೃತಾಶೌಚವು ಮುಗಿಯುತ್ತದೆ. ಕೊಳ್ಳಿಯನ್ನಿಟ್ಟವನಿಗೂ ಸತ್ತವನ ಮಗನಿಗೂ ಸತ್ತದಿನದಿಂದ 10ದಿನ ಮೃತಾಶೌಚವು ಇದ್ದೇ ಇದೆ.

(ತಾಯಿ ಸತ್ತು 10 ದಿನಗಳೊಳಗೆ ತಂದೆ ಸತ್ತರೆ)

ತಾಯಿಯು ಸತ್ತು 10 ದಿನಗಳೊಳಗೆ ತಂದೆಯು ಸತ್ತರೆ ತಂದೆ ಸತ್ತ ದಿನದಿಂದ 10 ದಿನಗಳವರೆಗೆ ಮಕ್ಕಳು ಮೃತಾಶೌಚವನ್ನು ಅನುಷ್ಠಿಸಲೇ ಬೇಕು.

(ತಂದೆ ಸತ್ತು ಹತ್ತು ದಿನಗಳೊಳಗೆ ತಾಯಿ ಸತ್ತರೆ)

ತಂದೆ ಸತ್ತು 10 ದಿನಗಳೊಳಗೆ ತಾಯಿಯು ಸತ್ತರೆ ತಂದೆಯು ಸತ್ತ 10 ದಿನ ಪೂರ್ತಿಯಾದ ಮೇಲೆ ಒಂದೂವರೆ ದಿನಗಳ ವರೆಗೆ ತಾಯಿಯ ಮೃತಾಶೌಚವನ್ನು ಮಕ್ಕಳು ಅನುಷ್ಠಿಸಲೇ ಬೇಕು.

(ತಾಯಿಯು ಸಹಗಮನವನ್ನು ಮಾಡಿದ್ದರೆ)

ತಂದೆಯ ದೇಹದೊಡನೆ ತಾಯಿಯು ಸಹಗಮನವನ್ನು ಮಾಡಿದ್ದರೆ ತಾಯಿಗಾಗಿ ಪ್ರತ್ಯೇಕ ಮೃತಾಶೌಚವನ್ನು ಅನುಷ್ಠಿಸಬೇಕಾಗಿಲ್ಲ. ತಂದೆಯು ಸತ್ತ 10 ದಿನ ಮುಗಿಯುವಾಗಲೇ ಎರಡು ಮೃತಾಶೌಚಗಳೂ ಮುಗಿಯುತ್ತವೆ. ಮಗನಿಗೆ ಎಷ್ಟು ದಿನ ಮೃತಾಶೌಚವಿದೆಯೋ ಅಷ್ಟೇ ದಿನ ಕೊಳ್ಳಿಯನ್ನಿಟ್ಟವನಿಗೂ ಇದೆ.

(ತಂದೆ ತಾಯಿಗಳ ಮರಣದಿನದಲ್ಲಿ ಅಸನ್ನಿಹಿತನಾದ ಮಗನಿಗೆ ಅಶೌಚ)

1. ತಂದೆ ಅಥವಾ ತಾಯಿಯ ಮರಣ ವಾರ್ತೆಯನ್ನು 10 ದಿನದೊಳಗೆ ಕೇಳಿದರೆ ಮಗನು ಸತ್ತ ದಿನದಿಂದ 10 ದಿನಗಳು ಪೂರ್ತಿಯಾಗುವಾಗಲೇ ಅವನಿಗೆ ಶುದ್ಧಿಯಾಗುತ್ತದೆ. ಕೇಳಿದ ದಿನದಿಂದ 10 ದಿನಗಳವರೆಗೆ ಮೃತಾಶೌಚವನ್ನು ಅವನು ಅನುಷ್ಠಿಸಬೇಕಾಗಿಲ್ಲ.

2. ಮಗನು ತಂದೆ ಅಥವಾ ತಾಯಿಯ ಮರಣ ವಾರ್ತೆಯನ್ನು ಮರಣದಿನದಿಂದ ಹತ್ತು ದಿನಗಳು ಕಳೆದ ಮೇಲೆ ಕೇಳಿದರೆ ಕೇಳಿದ ದಿನದಿಂದ ಹತ್ತು ದಿನಗಳವರೆಗೆ ಮೃತಾಶೌಚವನ್ನು ಅನುಷ್ಠಿಸಲೇ ಬೇಕು.

(ಹತ್ತು ದಿನದೊಳಗೆ ಮರಣವಾರ್ತೆಯನ್ನು ತಿಳಿಯದ ದಶರಾತ್ರಜ್ಞಾತಿಗಳ ವಿಷಯದಲ್ಲಿ)

ಮೃತನ ದಶರಾತ್ರಜ್ಞಾತಿಗಳು ಸತ್ತದಿನದಿಂದ 10 ದಿನಗಳು ಕಳೆದ ಮೇಲೆ 3 ತಿಂಗಳು ಪೂರ್ತಿಯಾಗುವುದರೊಳಗೆ ಮರಣವಾರ್ತೆಯನ್ನು ತಿಳಿದರೆ ತಿಳಿದ

ದಿನದಿಂದ 3 ದಿನ, ಮೂರು ತಿಂಗಳಿನ ಮೇಲೆ 6 ತಿಂಗಳು ಪೂರ್ತಿಯಾಗುವುದರೊಳಗೆ ತಿಳಿದರೆ 1 ದಿನ ಮೃತಾಶೌಚವಿರುತ್ತದೆ. 9 ತಿಂಗಳಿನ ಮೇಲೆ ತಿಳಿದರೆ ಸ್ನಾನದಿಂದ ಶುದ್ಧಿಯಾಗುತ್ತದೆ.

ದಶರಾತ್ರಜ್ಞಾತಿಗಳಿಗೆ ಹೇಳಿದ ಈ 3, 11/2 1 ದಿನವೆಂಬ ಅಶೌಚನಿಯಮವು ಒಂದೇ ದೇಶದಲ್ಲಿದ್ದು ಕಾಲಾಂತರದಲ್ಲಿ ಈ ಸಮಾಚಾರವನ್ನು ತಿಳಿದವರಿಗೆ ಮಾತ್ರವೆಂದು ತಿಳಿಯಬೇಕು. ದೇಶಾಂತರದಲ್ಲಿದ್ದು 3 ತಿಂಗಳು ಮುಂತಾದ ಕಾಲಗಳಲ್ಲಿ ಮರಣವಾರ್ತೆಯನ್ನು ತಿಳಿದವರಿಗೆ ಈ ನಿಯಮವಿಲ್ಲ. ಸಮಾಚಾರವನ್ನು ಕೇಳಿದ ಕೂಡಲೇ ಸ್ನಾನವನ್ನು ಮಾಡಿದರೆ ಶುದ್ಧಿಯಾಗುತ್ತದೆ.

(ದೇಶಭೇದ)

1. ಭಾಷಾಭೇದ, 2. ಮಹಾನದಿಯು ಮಧ್ಯದಲ್ಲಿ ಹರಿಯುವುದು, 3. ಮಹಾಪರ್ವತವು ನಡುವಿನಲ್ಲಿರುವುದು, 4. ಮುವತ್ತು ಯೋಜನ ಪರಿಮಿತವಾದ ದೂರ ಇವುಗಳು ದೇಶಭೇದಕ್ಕೆ ಕಾರಣವೆನಿಸುತ್ತವೆ.

(ತಂದೆಯ ಇತರ ಪತ್ನಿಯರ ಮರಣವಾರ್ತೆಯನ್ನು ಹತ್ತುದಿನಗಳ ಮೇಲೆ ತಿಳಿದಾಗ)

ತನ್ನ ತಂದೆಯ ಪತ್ನಿಯರಲ್ಲಿ ತನ್ನ ತಾಯಿಯನ್ನು ಬಿಟ್ಟು ಇತರ ಪತ್ನಿಯರ ಮರಣವಾರ್ತೆಯನ್ನು ಸತ್ತದಿನದಿಂದ 10 ದಿನಗಳ ಮೇಲೆ ಒಂದು ವರ್ಷದೊಳಗೆ ತಿಳಿದರೆ ಉಪನಯನವಾದವನಿಗೆ 3 ದಿನಗಳ ಮೃತಾಶೌಚವಿದೆ. ಉಪನಯನವಾಗದಿದ್ದಲ್ಲಿ ಸ್ನಾನದಿಂದ ಶುದ್ಧಿಯಾಗುತ್ತದೆ. 10 ದಿನದೊಳಗೆ ಸಮಾಚಾರವು ತಿಳಿದರೆ ಬಾಕಿ ಉಳಿದ ಮೃತಾಶೌಚ ದಿನಗಳವರೆಗೆ ಅಶೌಚವನ್ನು ಅನುಷ್ಠಾನ ಮಾಡಬೇಕು.

(ಪುತ್ರಮರಣವಿಷಯದಲ್ಲಿ)

ಉಪನಯನಕ್ಕಿಂತ ಪೂರ್ವದಲ್ಲಿ ಮಗನು ಮೃತನಾದರೆ ತಂದೆತಾಯಿಗಳಿಗೆ 3 ದಿನ ಮೃತಾಶೌಚವಿರುತ್ತದೆ.

(ಪುತ್ರಮರಣದಿಂದ ದಶರಾತ್ರಜ್ಞಾತಿಗಳಿಗೆ ಅಶೌಚ)

ಹಲ್ಲುಹುಟ್ಟುವುದಕ್ಕೆ ಪೂರ್ವದಲ್ಲಿ ಸತ್ತರೆ ದಶರಾತ್ರಜ್ಞಾತಿಗಳಿಗೆ ಸ್ನಾನದಿಂದ ಶುದ್ಧಿಯಾಗುತ್ತದೆ. ಹಲ್ಲು ಹುಟ್ಟಿದ ಮೇಲೆ ಚೌಲವಾಗುವುದಕ್ಕೆ ಪೂರ್ವದಲ್ಲಿ ಮೃತನಾದರೆ 1 ರಾತ್ರಿ ಮುಗಿಯುವವರೆಗೆ ಮೃತಾಶೌಚವಿದೆ.

ಚೌಲಕಾಲದಲ್ಲಿ ಮಗನಿಗೆ ಚೌಲವನ್ನು ಮಾಡದಿದ್ದರೆ 4ನೇ ವರ್ಷದ ಆರಂಭವಾದ ಮೇಲೆ ಉಪನಯನವಾಗುವವರೆಗೆ ದಶರಾತ್ರಜ್ಞಾತಿಗಳಿಗೆ 3 ದಿನ ಮೃತಾಶೌಚವು ಇರುತ್ತದೆ. ಪ್ರಥಮವರ್ಷ ಅಥವಾ 2ನೆಯ ವರ್ಷದಲ್ಲಿ ಚೌಲವನ್ನು ಮಾಡಿದ್ದರೆ ಚೌಲವನ್ನು ಮಾಡಿದ ಮೇಲೆ ಉಪನಯನದೊಳಗೆ ಮೃತನಾದ ಬಾಲಕನ ದಶರಾತ್ರಜ್ಞಾತಿಗಳಿಗೆ 3 ದಿನದ ಮೃತಾಶೌಚವು ಇರುತ್ತದೆ.

(ಮಗಳು ಸತ್ತರೆ ತಂದೆಗೂ ದಶರಾತ್ರಜ್ಞಾತಿಗಳಿಗೂ ಅಶೌಚ)

ಜನನ ಕಾಲಾನಂತರದಲ್ಲಿ ಮಗಳು ಯಾವಾಗ ಸತ್ತರೂ ತಂದೆತಾಯಿಗಳಿಗೆ 3 ದಿನ ಮೃತಾಶೌಚವಿದೆ. ಒಬ್ಬ ಮೂಲಪುರುಷನ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳು ಎಂಬ ಈ 3 ತಲೆಯಲ್ಲಿ ಬಂದವರಿಗೆ ಈ ಗುಂಪಿನಲ್ಲಿ ಸೇರಿದ ಕನ್ನೆಯು ಹುಟ್ಟಿದ ಮೇಲೆ 3 ವರ್ಷದೊಳಗೆ ಸತ್ತರೆ ಸ್ನಾನದಿಂದ ಶುದ್ಧಿಯಾಗುತ್ತದೆ. ಆಮೇಲೆ ವಿವಾಹದವರೆಗೆ 1 ದಿನ ಮೃತಾಶೌಚವಿದೆ. ವಿವಾಹಾನಂತರದಲ್ಲಿ ಅವರಿಗೆ ಮೃತಾಶೌಚವಿಲ್ಲ.

(ವಿವಾಹಿತಳಾದ ಮಗಳು ತಂದೆ ತಾಯಿಗಳ
ಮನೆಯಲ್ಲಿ ಮೃತಳಾದರೆ)

ವಿವಾಹಿತಳಾದ ಮಗಳು ತವರು ಮನೆಯಲ್ಲಿ ಮೃತಳಾದರೆ ತಂದೆತಾಯಿಗಳಿಗೆ 3 ದಿನ ಮತ್ತು ಉಳಿದ ದಶರಾತ್ರಜ್ಞಾತಿಗಳಿಗೆ 1 ದಿನ ಮೃತಾಶೌಚವಾಗುತ್ತದೆ.

(ಗಂಡನ ಮನೆಯಲ್ಲಿ ಮೃತಳಾದರೆ)

ವಿವಾಹಿತಳಾದ ಮಗಳು ಗಂಡನ ಮನೆಯಲ್ಲಿ ಮೃತಳಾದರೆ ತಂದೆತಾಯಿಗಳಿಗೆ 1 1/2 ದಿನ ಮೃತಾಶೌಚ. ಉಳಿದವರಿಗೆ ಯಾರಿಗೂ ಇಲ್ಲ.

(ಮಗಳ ಮನೆಯಲ್ಲಿ ತಂದೆತಾಯಿಗಳು ಸತ್ತರೆ)

ಮಗಳ ಮನೆಯಲ್ಲಿ ತಂದೆ ತಾಯಿಗಳು ಸತ್ತರೆ ಮಗಳಿಗೆ 3 ದಿನ ಮೃತಾಶೌಚವಿರುತ್ತದೆ.

(ಸಹೋದರಿಯ ಮನೆಯಲ್ಲಿ ಸಹೋದರನು ಮೃತನಾದರೆ)

ಸಹೋದರಿಯ ಮನೆಯಲ್ಲಿ ಸಹೋದರನು ಮೃತನಾದರೆ ಸಹೋದರಿಗೆ 3 ದಿನ ಮೃತಾಶೌಚವಾಗುತ್ತದೆ. ಸಹೋದರಿಯ ಗಂಡನಿಗೆ ಈ ಮೃತಾಶೌಚವಿಲ್ಲ.

(ಸಹೋದರನ ಮನೆಯಲ್ಲಿ ಸಹೋದರಿಯು ಮೃತಳಾದರೆ)

ಸಹೋದರನ ಮನೆಯಲ್ಲಿ ಸಹೋದರಿಯು ಮೃತಳಾದರೆ ಸಹೋದರನಿಗೆ 3 ದಿನ ಮೃತಾಶೌಚವಿರುತ್ತದೆ. ಸಹೋದರನ ಹೆಂಡತಿಗೆ ಅಶೌಚವಿಲ್ಲ.

(ಸಹೋದರ ಸಹೋದರಿಯರು ಬೇರೆ ಕಡೆ ಮೃತರಾದರೆ)

ಸಹೋದರನು ಸಹೋದರಿಯ ಮನೆಯನ್ನು ಬಿಟ್ಟು ಬೇರೆ ಕಡೆ ಮೃತನಾದರೆ ಅವನಿಗೂ ಒಂದೂವರೆ ದಿನ ಮೃತಾಶೌಚವಿರುತ್ತದೆ.

(ಇತರ ಬಂಧುಗಳು ಮೃತರಾದರೆ)

1. ತಂದೆಯ ಸೋದರ ಮಾವಂದಿರು 2. ಅವರ ಪತ್ನಿಯರು 3. ಅವರ ಮಕ್ಕಳು 4. ತನ್ನ ಸೋದರ ಮಾವಂದಿರು 5. ಅವರ ಪತ್ನಿಯರು 6. ಅವರ ಮಕ್ಕಳು 7. ತಾಯಿಯ ಸೋದರಮಾವ 8. ಅವರ ಪತ್ನಿಯರು 9. ಅವರ ಮಕ್ಕಳು

10. ತಂದೆಯ ಅಕ್ಕ ತಂಗಿಯರು 11. ಅವರ ಮಕ್ಕಳು 12. ತಾಯಿಯ ಅಕ್ಕ-ತಂಗಿಯರು 13. ಅವರ ಮಕ್ಕಳು 14. ತಂದೆಯ ತಂದೆ ಅಂದರೆ ಪಿತಾಮಹನ ಅಕ್ಕ-ತಂಗಿಯರು 15. ಅವರ ಮಕ್ಕಳು 16. ತಂದೆಯ ತಾಯಿ ಅಂದರೆ ಪಿತಾಮಹಿಯ ಅಕ್ಕತಂಗಿಯರು 17. ಅವರ ಮಕ್ಕಳು 18. ತಾಯಿಯ ತಂದೆಯ ಅಂದರೆ ಮಾತಾಮಹನ ಅಕ್ಕತಂಗಿಯರು 19. ಅವರ ಮಕ್ಕಳು 20. ತಾಯಿಯ ತಾಯಿ ಅಂದರೆ ಮಾತಾಮಹಿಯ ಅಕ್ಕತಂಗಿಯರು 21. ಅವರ ಮಕ್ಕಳು 22. ಹೆಣ್ಣು ಕೊಟ್ಟ ಮಾವ 23. ಹೆಣ್ಣು ಕೊಟ್ಟ ಅತ್ತೆ 24. ಅಳಿಯ 25. ಮಗಳ ಮಗ 26. ಮಾತಾಮಹ 27. ಮಾತಾಮಹಿ ಇಷ್ಟು ಜನರು ಸ್ವಗೃಹದಲ್ಲಿ ಮೃತರಾದರೆ 3 ದಿನ ಮತ್ತು ಬೇರೆ ಕಡೆ ಮೃತರಾದರೆ ಒಂದೂವರೆ ದಿನ ಮೃತಾಶೌಚವಾಗುತ್ತದೆ.

(ಮೃತಾಶೌಚಿಗಳ ಅನ್ನವನ್ನು ತಿಂದುಕೊಂಡು
ಅವರ ಮನೆಯಲ್ಲಿದ್ದರೆ)

ಮೃತಾಶೌಚದ ಮನೆಯಲ್ಲಿದ್ದು ಅವರ ಅನ್ನವನ್ನು ತಿನ್ನುವವನು ಮೃತಾಶೌಚಿಗಳ ಬಂಧುವಲ್ಲದಿದ್ದರೂ ಅವನಿಗೆ ಮೃತಾಶೌಚಿಗಳಿಗೆ ಇರುವಷ್ಟು ಮೃತಾಶೌಚವು ಇದೆ.

(ಅಗ್ನಿಸಂಸ್ಕಾರ ಮಾಡಿದವನಿಗೆ)

1) ತನ್ನ ಬಂಧುವಲ್ಲದವನಿಗೆ ಅಗ್ನಿಸಂಸ್ಕಾರ ಮಾಡಿದವನಿಗೆ ದಶರಾತ್ರಜ್ಞಾತಿಗಳಿಗೆ ಇರುವ ಮೃತಾಶೌಚವು ಇದೆ. 2) ಬಂಧುವಲ್ಲದವನು ಮರಣಾನಂತರದಲ್ಲಿ 10 ದಿನಗಳೊಳಗೆ ಮೃತದೇಹ ಅಥವ ಅದರ ಪ್ರತಿಕೃತಿಯ ದಹನವನ್ನು ಮಾಡಿದರೆ 10 ದಿನಗಳ ಮಧ್ಯದಲ್ಲಿ ಬಾಕಿ ಉಳಿದ ದಿನಗಳಲ್ಲಿ ಶುದ್ಧನಾಗುವನು. 3) ಸತ್ತು 10 ದಿವಸವಾದ ಮೇಲೆ ಸತ್ತ ಸಮಾಚಾರವು ತಿಳಿದು ಸತ್ತವನ ದೇಹದ ಪಾಲಾಶ ಪ್ರತಿಕೃತಿ ಮುಂತಾದ್ದನ್ನು ದಹನ ಮಾಡಿದರೆ ದಹನ ಮಾಡಿದವನಿಗೂ ಸತ್ತವನ ದಶರಾತ್ರಜ್ಞಾತಿಗಳಿಗೂ 3 ದಿನದ ಮೃತಾಶೌಚವಿರುತ್ತದೆ 4) ಸತ್ತು 10 ದಿನಕ್ಕಿಂತ ಪೂರ್ವದಲ್ಲಿಯೇ ಮರಣ ಸಮಾಚಾರವು ತಿಳಿದು 10 ದಿನದ ಮೇಲೆ ಮೇಲ್ಕಂಡ ದಹನವನ್ನು ಮಾಡಿದರೆ ದಶರಾತ್ರ ಜ್ಞಾತಿಗಳಿಗೆ ದಹನಾನಂತರದಲ್ಲಿ ಮೃತಾಶೌಚವಿಲ್ಲ. ಅಗ್ನಿಸಂಸ್ಕಾರ ಮಾಡಿದವನಿಗೆ ಮಾತ್ರ 3 ದಿನ ಮೃತಾಶೌಚವುಂಟು.

(ಅಶೌಚವುಳ್ಳವರಿಗೆ ಸಂಧ್ಯಾವಂದನಾದ್ಯಧಿಕಾರ)

ಮೃತಾಶೌಚವುಳ್ಳವರು ಅರ್ಘ್ಯವನ್ನು ಮಂತ್ರೋಚ್ಚಾರಣಪೂರ್ವಕವಾಗಿ ಮಾಡಬೇಕು. ಉಳಿದ ಸಂಧ್ಯಾವಂದನವನ್ನು ಮನಸ್ಸಿನಿಂದ ಮಾಡಬೇಕು. ವೇದಾಧ್ಯಯನವನ್ನೂ ಜಪ ಹೋಮ ಮುಂತಾದ ಕಾರ್ಯಗಳನ್ನೂ ಮಾಡಬಾರದು.

(ಮೃತಾಶೌಚವುಳ್ಳವರ ಮನೆಯು ವಸ್ತುಗಳು ಅಶುದ್ಧವಾಗಿರುತ್ತವೆ)

1. ಅಶೌಚವುಳ್ಳವರ ವಸ್ತುಗಳೂ ಸಹ ಅಶುಚಿಯಾಗುತ್ತವೆ. ಆದ್ದರಿಂದ ಅಶೌಚವಿಲ್ಲದವರು ಆ ವಸ್ತುಗಳನ್ನು ಸಹ ಬಿಡಬೇಕು. 2. ಅಶೌಚವುಳ್ಳವರ ಮನೆಯಲ್ಲಿರುವ ಹಾಲು ಮೊಸರು ತುಪ್ಪ ಮಜ್ಜಿಗೆ ನೀರು ಎಳ್ಳು ಪುಷ್ಪ ಬೆಲ್ಲ ಹಣ್ಣು ತರಕಾರಿ ಕಟ್ಟಿಗೆ ಔಷಧ ಗಡ್ಡೆ ಇವುಗಳನ್ನು ಮನೆಯ ಯಜಮಾನನ ಅನುಜ್ಞೆಯಿಂದ ತೆಗೆದುಕೊಳ್ಳಬಹುದು. 3. ಅಶೌಚವುಳ್ಳವರ ಮನೆಯಲ್ಲಿ ಭೋಜನ ಮುಂತಾದ್ದನ್ನು ಮಾಡುವ ನಿಮಿತ್ತದಿಂದ ಅಶೌಚವನ್ನು ಹೊಂದಿದವರ ವಸ್ತುಗಳಿಗೂ ಸತ್ತು ಹತ್ತು ದಿನವಾದ ಮೇಲೆ ಮರಣ ಸಮಾಚಾರವನ್ನು ತಿಳಿದದ್ದರಿಂದ ಏರ್ಪಟ್ಟ 3 ದಿನ ಮುಂತಾದ ಅಶೌಚವುಳ್ಳವರ ವಸ್ತುಗಳಿಗೂ ಅಶುದ್ಧಿಯಿಲ್ಲ.

(ಸಂನ್ಯಾಸಿ ವಾನಪ್ರಸ್ಥ ಗೃಹಸ್ಥ ಮತ್ತು ಬ್ರಹ್ಮಚಾರಿಗಳಿಗೆ ಅಶೌಚವಿಚಾರ)

1. ಸಂನ್ಯಾಸಿಗಳು ವಾನಪ್ರಸ್ಥರು ಮತ್ತು ಗುರುಕುಲದಲ್ಲಿದ್ದು ಗುರುಶುಶ್ರೂಷೆಯನ್ನು ಮಾಡುತ್ತಾ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಬ್ರಹ್ಮಚಾರಿಗಳಿಗೆ ಮೃತಾಶೌಚವಿಲ್ಲ. 2. ಗ್ರಹಸ್ಥರಿಗೂ ಸಹ ಯಾವುದಾದರೊಂದು ಯಜ್ಞಾದಿಕಾರ್ಯಗಳನ್ನು ಆರಂಭಿಸಿದ ಮೇಲೆ ಮುಗಿಯುವವರೆಗೆ ಜಾತಾಶೌಚ ಅಥವಾ ಮೃತಾಶೌಚವಿಲ್ಲ.

(ಜಾತಾಶೌಚ ಮೃತಾಶೌಚ ಆರಂಭಕ್ಕಿಂತ ಪೂರ್ವದಲ್ಲಿ ಆರಂಭಿಸಿದ ಕರ್ಮಗಳ ವಿಷಯ)

1. ಮೃತಶೌಚ ಅಥವಾ ಜಾತಾಶೌಚವು ಆರಂಭವಾಗುವುದಕ್ಕಿಂತ ಪೂರ್ವದಲ್ಲಿ ಆರಂಭಿಸಿದ ಅನೇಕದಿನಸಾಧ್ಯವಾದ ಯಜ್ಞಾದಿಕರ್ಮಗಳಲ್ಲಿ ತನ್ನ ಶರೀರದಿಂದ ಮಾತ್ರ ಮಾಡಲು ಸಾಧ್ಯವಾದ ಸ್ನಾನ ನಮಸ್ಕಾರಾದಿ ಕಾರ್ಯಗಳನ್ನು ಮಾತ್ರ ಮೃತಾಶೌಚವು ಮುಗಿಯುವವರೆಗೆ ಮಾಡಬೇಕು. ದಾನ ಪೂಜಾ ಮುಂತಾದ ಮಂತ್ರಸಾಧ್ಯವಾದ ಕಾರ್ಯಗಳನ್ನು ಮಾಡಬಾರದು ಈ ಆಶೌಚವು ಮುಗಿದ ಮೇಲೆ ಮಂತ್ರ ಸಾಧ್ಯವಾದ ದಾನ, ಪೂಜಾ, ಮುಂತಾದ ಅಶೌಚ ಕಾಲದಲ್ಲಿ ನಿಲ್ಲಿಸಿರುವ ಕಾರ್ಯಗಳನ್ನು ಮಾಡಬೇಕು.

2. ಅತ್ಯಂತಬಡವನು ಬಹು ಶ್ರಮಪಟ್ಟು ಗ್ರಹಶಾಂತಿ ಮುಂತಾದ ಕಾರ್ಯಗಳಿಗಾಗಿ ಅತ್ಯಲ್ಪದ್ರವ್ಯವನ್ನು ಸಂಗ್ರಹಿಸಿ ಶಾಂತಿಕಾರ್ಯವನ್ನು ಆರಂಭಿಸುವ ಸಮಯದಲ್ಲಿ ಅಶೌಚವು ಬಂದು ಶಾಂತಿಕಾರ್ಯವು ನಿಲ್ಲುವ ಸಂದರ್ಭ ಬಂದರೆ ಪ್ರಾಯಶ್ಚಿತ್ತವನ್ನು ಮಾಡಿ ಕಾರ್ಯವನ್ನು ಮುಂದುವರಿಸಬೇಕು.

ರಜಸ್ವಲಾಶುದ್ಧಿ

1) ಯಾವಾಗಲೂ ತಿಂಗಳಿಗೊಂದುಸಾರಿ ರಜೋದರ್ಶನವಾಗತಕ್ಕವರು ಒಮ್ಮೆ ರಜೋದರ್ಶನವಾದ ದಿನದಿಂದ 17 ದಿನಗಳೊಳಗೆ ಪುನಃ ರಜಸ್ವಲೆಯಾದರೆ

ಕೂಡಲೇ ಸ್ನಾನ ಮಾಡುವುದರಿಂದಲೂ, 18ನೇ ದಿನ ರಜಸ್ವಲೆಯಾದರೆ 1 ರಾತ್ರಿಯ ಅನಂತರವೂ 19ನೇ ದಿನ ರಜಸ್ವಲೆಯಾದರೆ 2 ರಾತ್ರಿಯ ಅನಂತರವೂ 20ನೇ ದಿನ ಅಥವಾ ಅದರ ಅನಂತರದಲ್ಲಿ ರಜಸ್ವಲೆಯಾದರೆ 3 ರಾತ್ರಿಗಳ ಅನಂತರದಲ್ಲಿಯೂ ಶುದ್ಧರಾಗುವರು. 2) ಯಾವಾಗಲೂ 20 ದಿನಗಳಿಗೊಮ್ಮೆ ರಜೋದರ್ಶನವಾಗತಕ್ಕವರು 14 ದಿನಗಳೊಳಗೆ ರಜಸ್ವಲೆಯಾದರೆ ಕೂಡಲೇ ಸ್ನಾನಮಾಡುವುದರಿಂದಲೂ 15ನೇ ದಿನ ರಜಸ್ವಲೆಯಾದರೆ ಒಂದು ರಾತ್ರಿಯ ಅನಂತರವೂ 16ನೇ ದಿನ ರಜಸ್ವಲೆಯಾದರೆ 2 ರಾತ್ರಿಯ ಅನಂತರವೂ 17ನೇ ದಿನ ಮೊದಲ್ಗೊಂಡು ರಜೋದರ್ಶನವಾದರೆ 3 ರಾತ್ರಿಯ ಅನಂತರವೂ ಶುದ್ಧರಾಗುವರು. 3) ಯಾವಾಗಲೂ 15 ದಿನಗಳಿಗೊಮ್ಮೆ ರಜೊದರ್ಯನವಾಗ ತಕ್ಕವರು 10 ದಿನಗಳೊಳಗೆ ರಜಸ್ವಲೆಯಾದರೆ ಕೂಡಲೇ ಸ್ನಾನ ಮಾಡುವುದ ರಿಂದಲೂ 11 ಮತ್ತು 12ನೆಯ ದಿನಗಳಲ್ಲು ರಜಸ್ವಲೆಯಾದರೆ ಕ್ರಮವಾಗಿ 1 ರಾತ್ರಿ ಮತ್ತು 2 ರಾತ್ರಿ ಕಳೆದು ಸ್ನಾನ ಮಾಡುವುದರಿಂದಲೂ 13ನೆಯ ದಿನದಲ್ಲಿ ರಜಸ್ವಲೆಯಾದರೆ 3 ರಾತ್ರಿ ಕಳೆದು ಸ್ನಾನ ಮಾಡುವುದರಿಂದಲೂ ಶುದ್ಧರಾಗುವರು, 4) ಗರ್ಭಿಣಿಯರು ಪ್ರಸವದ ಮೊದಲು ರಜಸ್ವಲೆಯಾದರೆ 3 ದಿನ ಕಳೆದು ಸ್ನಾನಮಾಡಿದಲ್ಲಿ ಶುದ್ಧರಾಗುವರು.

ಹರಿವಾಸರ ಮಾಡುವ ವಿಧಾನ

ದಶಮೀ	ಘಟೀ–ಪಳ
ಆರ್ಯದಶಮೀ ತಿಥಿ ಘಟೀ	52–05
ಆರ್ಯ ಏಕಾದಶೀ ತಿಥಿ ಘಟೀ	46–17
ಏಕಾದಶೀ ಆದ್ಯಂತ	60–00 (–) 52–05 (+) 46–17
ಏಕಾದಶೀ ಆದ್ಯಂತ ಮುಕ್ಕಾಲುಭಾಗ	40–39
ದಶಮಿಯದಿನ ಸಂದ ಏಕಾದಶೀ	7–55 ಕಳೆದಾಗ
ಸೂರ್ಯೋದಯಾದಿ ರಾತ್ರಿ ಹರಿವಾಸರ	32–44

ದ್ವಾದಶೀ	ಘಟೀ–ಪಳ
ಏಕಾದಶೀ ತಿಥಿ ಘಟೀ	46–17
ದ್ವಾದಶೀ ತಿಥಿ ಘಟೀ	52–05
ಏಕಾದಶೀ ಆದ್ಯಂತ	60–00 (–) 46–17 (+) 52–05
ದ್ವಾದಶೀ ಆದ್ಯಂತದ ಕಾಲುಭಾಗ	16–26.5
ದಶಮೀ ನಂತರದ ಏಕಾದಶೀ ಘಟೀ	13–43.5
ಸೂರ್ಯಾದಯಾನಂತರ ಪ್ರಾತಃ ಹರಿವಾಸರ	2.43–5

ಸಾಡೇಸಾತಿ ಪದಕವು (ಶನಿ ಗೋಚಾರ ಫಲ)

ಜನ್ಮ ರಾಶಿಯವರಿಗೆ		ಗೋಚಾರದ ಶನಿಯು ಈ ರಾಶಿಗಳಲ್ಲಿದ್ದಾಗ ಸಾಡೇಸಾತಿ ಎಂದು ತಿಳಿಯಬೇಕು	ಗೋಚಾರದ ಶನಿಯು ಈ ರಾಶಿಗಳಲ್ಲಿದ್ದಾಗ ಹೆಚ್ಚಿನ ಕಾಡಾಟವನ್ನು ಕೊಡುತ್ತಾನೆ
1	ಮೇಷ	ಮೀನ–ಮೇಷ–ವೃಷಭ	ಮೇಷ
2	ವೃಷಭ	ಮೇಷ–ವೃಷಭ–ಮಿಥುನ	ಮೇಷ
3	ಮಿಥುನ	ವೃಷಭ–ಮಿಥುನ–ಕರ್ಕ	ಕರ್ಕ
4	ಕರ್ಕ	ಮಿಥುನ–ಕರ್ಕ–ಸಿಂಹ	ಕರ್ಕ
5	ಸಿಂಹ	ಕರ್ಕ–ಸಿಂಹ–ಕನ್ಯಾ	ಕರ್ಕ
6	ಕನ್ಯಾ	ಸಿಂಹ–ಕನ್ಯಾ–ತುಲಾ	ಸಿಂಹ
7	ತುಲಾ	ಕನ್ಯಾ–ತುಲಾ–ವೃಶ್ಚಿಕ	ವೃಶ್ಚಿಕ
8	ವೃಶ್ಚಿಕ	ತುಲಾ–ವೃಶ್ಚಿಕ–ಧನು	ವೃಶ್ಚಿಕ–ಧನು
9	ಧನು	ವೃಶ್ಚಿಕ–ಧನು–ಮಕರ	ವೃಶ್ಚಿಕ–ಧನು
10	ಮಕರ	ಧನು–ಮಕರ–ಕುಂಭ	ಧನು
11	ಕುಂಭ	ಮಕರ–ಕುಂಭ–ಮೀನ	ಮೀನ
12	ಮೀನ	ಕುಂಭ–ಮೀನ–ಮೇಷ	ಮೀನ–ಮೇಷ

ಗ್ರಹಣ. ಅರ್ಧೋದಯ, ಮಹೋದಯ ಪುಣ್ಯಕಾಲ, ದಕ್ಷಿಣಾಯನ, ಉತ್ತರಾಯಣ ಪುಣ್ಯಕಾಲ. ಪಿತೃಪಕ್ಷ (ಮಹಾಲಯ ಪಕ್ಷ) ಮತ್ತು ತೀರ್ಥಕ್ಷೇತ್ರಗಳಲ್ಲಿ ಸರ್ವಕಾರುಣ್ಯ ಪಿತೃಗಳಿಗೂ ಕೊಡತಕ್ಕ ತರ್ಪಣಕ್ರಮ :

ಆಚಮನ ಮಾಡಿ, ಮೂರು (3) ದರ್ಭೆಯಿಂದ ಕಟ್ಟಿದ ಪವಿತ್ರ ಧರಿಸಿ, ಅನಂತರ ಪ್ರಾಣಾಯಾಮ ಮಾಡಿ ಈ ರೀತಿ ಸಂಕಲ್ಪ ಮಾಡಬೇಕು.

ಸಂಕಲ್ಪ: ದೇಶಕಾಲೌಸಂಕೀರ್ತ್ಯ. ಶ್ರೀ ಗೋವಿಂದ ಗೋವಿಂದ ಮಹಾವಿಷ್ಣು ರಾಜ್ಞಿಯಾ ಪ್ರವರ್ಧಮಾನಸ್ಯ ಆದ್ಯಬ್ರಹ್ಮಣಃ ದ್ವಿತೀಯ ಪರಾರ್ಧೇ ಶ್ವೇತವರಾಹಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮ ಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಅಸ್ಮಿನ್ ವರ್ತಮಾನೇ ಚಾಂದ್ರಮಾನೇನ .... ನಾಮ ಸಂವತ್ಸರೇ .... ಅಯನೇ .... ಋತೌ .... ಮಾಸೇ .... ಪಕ್ಷೇ .... ತಿಥೌ .... ವಾಸರೇ. ವಿಷ್ಣು ನಕ್ಷತ್ರ, ವಿಷ್ಣುಯೋಗ, ವಿಷ್ಣುಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಪುಣ್ಯತಿಥೌ ಪ್ರಾಚೀನಾವೀತಿ (ಜನಿವಾರವನ್ನು ಎಡಕ್ಕೆ ಹಾಕಿಕೊಳ್ಳಬೇಕು.)

ಅಸ್ಮತ್ ಸಮಸ್ತ ಪಿತೄಣಾಂ ಅಕ್ಷಯ ಪುಣ್ಯ ಲೋಕಾವಾಪ್ತ್ಯರ್ಥಂ ಸೂರ್ಯೋ/ಚಂದ್ರೋಪರಾಗ/ಅರ್ಧೋದಯ/ಮಹೋದಯ ಪುಣ್ಯಕಾಲೇ/ದಕ್ಷಿಣಾಯನ/ಉತ್ತರಾಯಣ ಪುಣ್ಯಕಾಲೇ/ಕನ್ಯಾಗತೇ ಸವಿತರಿ ಆಷಾಢ್ಯಾದಿ ಪಂಚಮಹಾಽಪರ ಪಕ್ಷೇಷು ಅಸ್ಮಿನ್ ಪಿತೃಪಕ್ಷೇ ಸಕೃನ್ಮಹಾಲಯೇ / ಗಂಗಾಕಾವೇರೀ ತೀರೇ ಶ್ರಾದ್ಧಾಂಗ ಸದ್ಯಃ ತಿಲತರ್ಪಣಂ ಕರಿಷ್ಯೆ.

ತಿಲೋದಕದಿಂದ ಈ ಕೆಳಗಿನವರುಗಳಿಗೆ ಅವರವರ ಹೆಸರು. ಗೋತ್ರ, ರೂಪಗಳನ್ನು ಹೇಳಿಕೊಂಡು ಮೂರು (3) ಸಲ ತರ್ಪಣ ಕೊಡಬೇಕು:

1. ಅಸ್ಮತ್ ಪಿತರಂ (ತಂದೆ) ....ಶರ್ಮಾಣಂ................ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

2. ಅಸ್ಮತ್ಪಿತಾಮಹಂ (ತಾತ) ....ಶರ್ಮಾಣಂ.............ಗೋತ್ರಂ ರುದ್ರರೂಪಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

3. ಅಸ್ಮತ್ ಪ್ರಪಿತಾಮಹಂ (ಮುತ್ತಾತ) .... ಶರ್ಮಾಣಂ .... ಗೋತ್ರಂ, ಆದಿತ್ಯರೂಪಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

4. ಅಸ್ಮನ್ಮಾತರಂ (ತಾಯಿ)............. ನಾಮದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3ಸಲ)

5. ಅಸ್ಮತ್ ಪಿತಾಮಹೀಂ (ತಂದೆಯ ತಾಯಿ) .... ನಾಮದಾಂ .... ಗೋತ್ರಾಂ ರುದ್ರರೂಪಾಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

6. ಅಸ್ಮತ್ ಪ್ರಪಿತಾಮಹೀಂ (ತಂದೆ ಅಜ್ಜಿ) .... ನಾಮದಾಂ .... ಗೋತ್ರಾಂ ಆದಿತ್ಯರೂಪಾಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

6. ಅ) ಮಲತಾಯಿ ವಿಚಾರದಲ್ಲಿ

ಅಸ್ಮತ್ ಸಪತ್ನಜನನೀಂ .... ನಾಮದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

7. ಅಸ್ಮನ್ಮಾತಾಮಹಂ (ತಾಯಿಯ ತಂದೆ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ).

8. ಅಸ್ಮನ್ಮಾತುಃ ಪಿತಾಮಹಂ (ತಾಯಿಯ ತಾತ) .... ಶರ್ಮಾಣಂ .... ಗೋತ್ರಂ ರುದ್ರರೂಪಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

9. ಅಸ್ಮನ್ಮಾತುಃ ಪ್ರಪಿತಾಮಹಂ (ತಾಯಿಯ ಮುತ್ತಾತ) .... ಶರ್ಮಾಣಂ .... ಗೋತ್ರಂ ಆದಿತ್ಯರೂಪಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ).

10. ಅಸ್ಮನ್ಮಾತಾಮಹೀಂ (ತಾಯಿಯ ತಾಯಿ) .... ನಾಮದಾಂ .... ಗೋತ್ರಾಂ ರುದ್ರರೂಪಾಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

11. ಅಸ್ಮನ್ಮಾತುಃ ಪಿತಾಮಹೀಂ (ತಾಯಿಯ ಅಜ್ಜಿ) .... ನಾಮದಾಂ ಗೋತ್ರಾಂ ರುದ್ರರೂಪಾಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

12. ಅಸ್ಮನ್ಮಾತುಃ ಪ್ರಪಿತಾಮಹೀಂ (ತಾಯಿಯ ಮುತ್ತಜ್ಜಿ) .... ನಾಮದಾಂ .... ಗೋತ್ರಾಂ ಆದಿತ್ಯರೂಪಾಂ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ (3 ಸಲ)

ಈ ಕೆಳಗಿನವರುಗಳಿಗೆ ಕೇವಲ ಒಂದಾವರ್ತಿ ಮಾತ್ರ ತರ್ಪಣ ಕೊಡಬೇಕು.

1. ಆತ್ಮಪತ್ನೀಂ (ಹೆಂಡತಿ) .... ನಾಮದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

2. ಅಸ್ಮತ್‌ಸುತಂ (ಮಗ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

3. ಅಸ್ಮತ್ ಜ್ಯೇಷ್ಠಭ್ರಾತರಂ (ಅಣ್ಣ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

4. ಅಸ್ಮತ್ ಕನಿಷ್ಠಭ್ರಾತರಂ (ತಮ್ಮ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಮಾಮಿ.

5. ಅಸ್ಮತ್ ಜ್ಯೇಷ್ಠಪಿತೃವ್ಯಂ (ದೊಡ್ಡಪ್ಪ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

6. ತತ್ಪತ್ನೀಂ (ದೊಡ್ಡಮ್ಮ) .... ನಾಮದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

7. ಅಸ್ಮತ್ ಕನಿಷ್ಠಪಿತೃವ್ಯಂ (ಚಿಕ್ಕಪ್ಪ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

8. ತತ್ಪತ್ನೀಂ (ಚಿಕ್ಕಮ್ಮ) .... ನಾಮದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

9. ಅಸ್ಮತ್ ಮಾತುಲಂ (ಸೋದರ ಮಾವ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

10. ತತ್ಪತ್ನೀಂ (ಸೋದರತ್ತೆ) .... ನಾಮದಾಂ .... ಗೋತ್ರಾಂ. ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

11. ಅಸ್ಮದ್ದುಹಿತರಂ (ಮಗಳು) .... ನಾಮದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

12. ಆತ್ಮಭಗಿನೀಂ (ಅಕ್ಕ ತಂಗಿ) .... ನಾಮದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

13. ಅಸ್ಮತ್ ದೌಹಿತ್ರಂ(ಮಗಳ ಮಗ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

14. ಅಸ್ಮತ್ ಭಾಗಿನೇಯಕಂ (ಅಕ್ಕ ತಂಗಿಯರ ಮಕ್ಕಳು) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

15. ಅಸ್ಮತ್ ಪಿತೃಭಗಿನೀಂ (ಸೋದರತ್ತೆ) .... ನಾಮದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

16. ತದ್ಭರ್ತಾರಂ (ಸೋದರ ಮಾವ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

17. ಅಸ್ಮತ್ ಮಾತೃಭಗಿನೀಂ (ತಾಯಿಯ ಅಕ್ಕ ತಂಗಿ) .... ನಾಮದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

18. ತದ್ಭರ್ತಾರಂ (ತಾಯಿಯ ಅಕ್ಕ ತಂಗಿಯರ ಗಂಡ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

19. ಅಸ್ಮತ್ ಜಾಮಾತರಂ

(ಅಳಿಯ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

20. ಅಸ್ಮತ್ ಭಾವುಕಂ (ಭಾವ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

21. ಅಸ್ಮತ್ ಸ್ನುಷಾಂ (ಸೊಸೆ) .... ದೇವಿದಾಂ/ಕವಿದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

22. ಅಸ್ಮತ್ ಶ್ವಶುರಂ (ಹೆಣ್ಣುಕೊಟ್ಟ ಮಾವ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

23. ಅಸ್ಮತ್ ಶ್ವಶ್ರೂಃ (ಹೆಣ್ಣು ಕೊಟ್ಟ ಅತ್ತೆ) .... ದೇವಿದಾಂ/ಕವಿದಾಂ .... ಗೋತ್ರಾಂ ವಸುರೂಪಾಂ ಸ್ವಧಾನಮಸ್ತರ್ಪಯಾಮಿ.

24. ಅಸ್ಮತ್ ಸ್ಯಾಲಕಂ (ಹೆಂಡತಿಯ ಸಹೋದರರು) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

25. ಅಸ್ಮತ್ ಸಖಾಯಂ (ಸ್ನೇಹಿತರು) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

26. ಅಸ್ಮದ್ಗುರುಂ (ಗುರು) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

27. ಅಸ್ಮದಾಚಾರ್ಯಂ (ಆಚಾರ್ಯ) .... ಶರ್ಮಾಣಂ .... ಗೋತ್ರಂ ವಸುರೂಪಂ ಸ್ವಧಾನಮಸ್ತರ್ಪಯಾಮಿ.

ಸೂಚನೆ: ಮೇಲೆ ತಿಳಿಸಿರುವ ಬಂಧು ವರ್ಗಾದಿಗಳಲ್ಲಿ ಸತ್ತವರಿಗೆ ಮಾತ್ರ ತರ್ಪಣ ಕೊಡಬೇಕು.

ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪೋಯಜ್ಞ ಕ್ರಿಯಾದಿಷು।ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಂ॥ ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ। ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ॥

ಅನೇನ ಮಯಾ ಸೂರ್ಯ / ಚಂದ್ರೋಪರಾಗ.ಅರ್ಧೋದಯ / ಮಹೋದಯ ಪುಣ್ಯಕಾಲೇ / ದಕ್ಷಿಣಾಯನ / ಉತ್ತರಾಯಣ ಪುಣ್ಯಕಾಲೇ / ಪಿತೃಪಕ್ಷೇ ಸಕೃನ್ಮಹಾಲಯೇ / ತೀರ್ಥಕ್ಷೇತ್ರೇ ಕೃತೇನ ತಿಲತರ್ಪಣೇನ ಶ್ರೀಮಜ್ಜನಾರ್ದನ ವಾಸುದೇವಃ ಪ್ರಿಯಾತಾಂ ಪ್ರೀತೋ ವರದೋ ಭವತು ॥ ಶ್ರೀಕೃಷ್ಣಾರ್ಪಣಮಸ್ತು ॥

ಮಧ್ಯೇ ಮಂತ್ರ ತಂತ್ರ ಸ್ವರ, ವರ್ಣ, ಪದ ಲೋಪದೋಷ ಪ್ರಾಯಶ್ಚಿತ್ತಾರ್ಥಂ ನಾಮತ್ರಯ ಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥ (ದ್ವಿರಾವರ್ತಿ) ಅಚ್ಯುತಾನಂತ ಗೋವಿಂದೇಭ್ಯೋ ನಮಃ।

ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ । ಕರೋಮಿ ಯದ್ಯತ್ ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಮೇಲೆ ತಿಳಿಸಿರುವಂತೆ ವಿಸ್ತಾರವಾಗಿ ತರ್ಪಣ ಮಾಡಲು ಕಾಲಾವಕಾಶವಿಲ್ಲದಿದ್ದರೆ ಈ ಕೆಳಗಿನ ಶ್ಲೋಕ ಹೇಳಿಕೊಂಡು ಮೂರು ಮೂರು ಸಲ ಅಂಜಲಿದಾನ ಮಾಡಬೇಕು.

ಆಬ್ರಹ್ಮಸ್ತಂಭಪರ್ಯನ್ತಂ ದೇವರ್ಷಿಪಿತೃಮಾನವಾಃ ।
ತೃಪ್ಯನ್ತು ಪಿತರಃ ಸರ್ವೇ ಮಾತೃ ಮಾತಾಮಹಾದಯಃ ।
ಅತೀತಕುಲಕೋಟೀನಾಂ ಸಪ್ತದ್ವೀಪನಿವಾಸಿನಾಮ್ ।
ಆಬ್ರಹ್ಮಭುವನಾಲ್ಲೋಕಾದಿದಮಸ್ತು ತಿಲೋದಕಮ್ ॥

ಸಂಬಂಧಿಗಳಿಗೆ ತರ್ಪಣ ಕೊಡುವಾಗ ಗೋತ್ರಾದಿಗಳು ತಿಳಿಯದೇ ಇದ್ದರೆ:

ಯೇ ಕೇ ಚಾಸ್ಮತ್ ಕುಲೇ ಜಾತಾಃ ಅಪುತ್ರಾ ಗೋತ್ರಿಣೋ ಮೃತಾಃ ।
ತೇ ಗೃಹ್ಣನ್ತು ಮಯಾ ದತ್ತಂ ವಸ್ತ್ರ (ಸೂತ್ರ) ನಿಷ್ಪೀಡನೋದಕಮ್ ॥

ಈ ಕೋಷ್ಟಕ ಎಡದಿಂದ ಬಲಕ್ಕೆ ವರನ ನಕ್ಷತ್ರ ಮತ್ತು ಆದರ ಪಾದ ಸಂಖ್ಯೆ ಕೊಟ್ಟಿದೆ. ವರನ ನಕ್ಷತ್ರದ ಕೆಳಗೆ ವಧೂ ನಕ್ಷತ್ರ, ಪಾದ ಸಂಖ್ಯೆ ಕೊಟ್ಟಿದೆ.

ವರನ ರಾಶಿ, ನಕ್ಷತ್ರ ಮತ್ತು ಚರಣ

ವಧುವಿನ	ರಾಶಿ, ನಕ್ಷತ್ರ	ಚರಣ	ಮೇಷ			ವೃಷಭ			ಮಿಥುನ			ಕರ್ಕಟ			ಸಿಂಹ			ಕನ್ಯಾ		
			ಅ,ಭ,ಕೃ			ಕೃ,ರೋ,ಮೃ			ಮೃ,ಆ,ಪು			ಪು,ಪು,ಆ			ಮ,ಹು,ಉ			ಉ,ಹ,ಚಿ		
			4	4	1	2	4	2	2	4	3	1	4	4	4	4	1	2	4	1
			28	33	27	17	23	22	25	17	17	22	30	27	20	24	14	9	10	12
ಮೇ	ಅ	4	33	28	28	18	27	14	27	25	25	30	22	24	19	17	24	19	18	3
ಷ	ಭ	4	27	28	28	18	10	16	19	19	19	24	27	22	15	19	20	15	14	17
	ಕೃ	1	19	19	19	28	18	26	17	17	17	21	23	19	19	21	22	20	18	23
ವೃ	ಕೃ	3	23	23	11	20	28	26	26	23	22	26	27	12	10	24	27	25	25	18
ಷ	ರೋ	4	27	17	21	27	25	28	18	23	22	26	19	21	19	15	24	23	25	11
ಭ	ಮೃ	2	26	27	21	19	26	19	28	33	31	18	11	13	22	19	27	32	34	20
ಮಿ	ಮೃ	2	18	26	21	19	24	25	34	28	35	12	20	12	21	27	20	24	24	27
ಥು	ಆರ್	4	18	25	21	19	22	23	31	24	28	14	21	15	21	25	19	23	24	26
ನ	ಪು	3	21	28	24	21	24	25	17	10	13	24	34	28	16	20	14	16	17	19
ಕ	ಪು	1	29	20	26	23	25	18	10	18	24	34	28	29	18	14	12	15	25	11
ರ್ಕ	ಪು	4	25	23	21	18	11	19	11	11	12	27	28	28	15	15	17	19	19	24
ಟ	ಆ	4	19	19	15	16	6	18	20	20	19	17	18	16	28	30	26	14	14	19
ಸಿ	ಮ	4	25	17	19	20	23	15	18	26	25	22	16	16	30	28	34	24	20	5
ಂ	ಹು	4	15	25	20	21	26	24	27	19	17	14	25	18	26	34	28	16	15	12
ಹ	ಉ	1	11	21	16	20	25	24	31	21	23	17	17	20	15	23	17	28	27	24
ಕ	ಉ	3	11	18	67	20	23	24	32	18	23	18	26	22	16	20	15	26	28	28
ನ್ಯಾ	ಹ	4	12	14	18	23	18	10	18	22	24	21	11	25	20	6	13	24	27	28

ವಧುವಿನ	ರಾಶಿ, ನಕ್ಷತ್ರ	ಚರಣ	ತುಲಾ			ವೃಶ್ಚಿಕ			ಧನು			ಮಕರ			ಕುಂಭ			ಮೀನ		
			ಚಿ,ಸ್ವಾ,ವಿ			ವಿ,ಆ,ಜ್ಯೇ			ಮೂ,ಪೂ,ಉ			ಉ,ಶ್ರ,ಧ			ಧ,ಶ,ಪೂ			ಪೂ,ಉ,ರೇ		
			2	4	3	1	4	4	4	4	1	2	4	2	2	4	2	1	4	4
			22	28	22	18	24	13	12	24	23	25	26	20	19	14	15	14	23	26
ಮೇ	ಅ	4	13	28	21	18	17	19	16	17	25	27	26	10	9	19	23	22	16	25
ಷ	ಭ	4	27	14	19	16	19	25	25	19	11	13	13	25	24	25	18	17	19	10
	ಕೃ	1	22	9	14	21	24	30	22	15	7	12	10	24	29	30	23	20	22	13
ವೃ	ಕೃ	3	17	24	17	14	29	23	13	19	11	16	18	19	24	24	29	26	27	19
ಷ	ರೋ	4	13	27	19	23	21	24	14	10	16	21	26	12	17	26	28	25	18	27
ಭ	ಮೃ	2	20	27	20	13	13	14	23	19	25	19	24	10	12	21	22	24	17	26
ಮಿ	ಮೃ	2	19	27	21	13	19	5	15	28	27	21	22	17	19	12	17	18	26	26
ಥು	ಆರ್	4	19	26	20	14	20	5	14	27	27	21	22	16	18	13	16	17	26	26
ನ	ಪು	3	11	25	20	19	25	10	7	20	20	26	27	21	12	5	9	15	25	24
ಕ	ಪು	1	24	11	16	19	17	20	12	12	20	26	27	13	4	13	17	26	18	26
ರ್ಕ	ಪು	4	23	10	15	14	19	25	22	15	7	13	13	26	17	18	11	17	20	12
ಟ	ಆ	4	9	24	17	24	24	32	24	16	8	3	4	17	23	24	17	17	18	12
ಸಿ	ಮ	4	16	25	16	23	22	24	20	12	24	19	18	5	9	19	23	23	16	24
ಂ	ಹು	4	16	25	16	22	30	16	9	25	25	20	20	11	17	10	15	15	26	24
ಹ	ಉ	1	20	26	18	18	26	12	14	29	29	24	24	15	16	9	14	17	28	26
ಕ	ಉ	3	19	19	25	20	26	13	15	27	28	23	24	18	19	10	13	16	26	26
ನ್ಯಾ	ಹ	4	28	27	33	27	11	25	27	13	21	15	17	15	16	24	16	19	10	19

ಈ ಕೋಷ್ಟಕ ಎಡದಿಂದ ಬಲಕ್ಕೆ ವರನ ನಕ್ಷತ್ರ ಮತ್ತು ಆದರ ಪಾದ ಸಂಖ್ಯೆ ಕೊಟ್ಟಿದೆ. ವರನ ನಕ್ಷತ್ರದ ಕೆಳಗೆ ವಧೂ ನಕ್ಷತ್ರ, ಪಾದ ಸಂಖ್ಯೆ ಕೊಟ್ಟಿದೆ.

ವರನ ರಾಶಿ, ನಕ್ಷತ್ರ ಮತ್ತು ಚರಣ

ವಧುವಿನ			ಮೇಷ			ವೃಷಭ			ಮಿಥುನ			ಕರ್ಕಟ			ಸಿಂಹ			ಕನ್ಯಾ			ತುಲಾ			ವೃಶ್ಚಿಕ			ಧನು			ಮಕರ			ಕುಂಭ			ಮೀನ		
ರಾಶಿ, ನಕ್ಷತ್ರ			ಅ,ಭ,ಕೃ			ಕೃ,ರೋ,ಮೃ			ಮೃ,ಆ,ಪು			ಪು,ಪು,ಆ			ಮ,ಹುಉಉ			ಉ,ಹ,ಚಿ			ಚಿ,ಸ್ವಾ,ವಿ			ವಿ,ಅ,ಜ್ಯೇ			ಮೂ,ಪೂ,ಉ			ಉ,ಶ್ರ,ಧ			ಧ,ಶ,ಪೂ			ಪೂ,ಉ,ರೇ		
ಚರಣ			4	4	1	2	4	2	2	4	3	1	4	4	4	4	1	2	4	1	2	4	3	1	4	4	4	4	1	2	4	2	2	4	2	1	4	4
ತು	ಚಿ	2	22	14	28	23	18	10	12	20	18	19	11	25	24	10	17	27	20	20	28	28	20	22	6	20	27	13	21	23	25	23	18	26	18	12	3	12
ಲಾ	ಸ್ವಾ	4	29	28	16	11	14	24	26	26	27	27	26	13	12	24	25	25	27	21	33	16	28	6	21	16	23	27	19	21	22	26	21	22	25	18	19	11
	ವಿ	3	21	22	20	15	9	17	18	20	20	20	20	17	16	19	17	17	18	26	21	7	15	16	16	21	27	21	13	15	15	29	24	26	20	13	12	4
ವೃ	ವಿ	1	16	16	14	19	12	21	11	12	12	18	18	14	24	22	21	17	18	26	6	20	16	28	27	31	21	15	7	11	11	25	24	25	19	17	18	9
ಶ್ಚಿ	ಅ	4	23	14	18	23	22	20	10	11	19	25	17	20	24	20	28	24	25	11	19	14	19	28	28	31	15	13	21	15	26	12	11	20	24	24	17	26
ಕ	ಜ್ಯೇ	4	10	17	23	28	22	29	12	2	4	9	1	25	31	23	15	11	11	24	26	21	26	31	30	28	14	16	16	20	20	25	24	17	10	9	20	20
ಧ	ಮೂ	4	11	19	25	19	12	12	20	14	12	7	17	23	24	28	9	13	13	26	12	27	20	22	16	16	28	28	15	13	14	19	28	21	14	16	24	26
ನು	ಪೂಷಾ	4	25	17	19	14	18	10	19	26	27	22	14	16	19	17	25	28	27	12	20	19	12	16	15	17	27	28	34	23	22	5	14	23	28	29	22	30
	ಉಷಾ	1	24	25	11	6	10	16	25	26	27	22	22	8	8	24	25	28	28	20	22	21	14	8	23	17	25	35	28	16	15	13	22	23	28	29	30	22
ಮ	ಉಷಾ	3	27	28	14	12	16	22	19	24	21	28	28	18	4	20	21	24	24	15	24	21	14	12	27	21	14	24	17	28	27	25	15	16	21	29	30	22
ಕ	ಶ್ರ	4	28	26	14	17	17	26	23	19	21	28	28	14	5	18	20	23	24	17	26	24	28	12	27	21	14	22	15	26	28	27	17	17	20	28	29	23
ರ	ಧ	2	20	11	26	23	16	11	4	16	14	21	13	27	18	4	10	15	17	15	18	20	24	26	12	26	20	6	14	25	27	28	17	33	17	24	15	22
ಕು	ಧ	2	16	10	25	30	25	17	11	18	17	12	4	18	24	10	18	17	19	17	26	21	26	25	11	25	29	15	23	16	18	18	28	33	27	16	6	13
ಂ	ಶ	4	14	20	26	31	21	27	20	12	12	6	13	19	24	19	11	10	10	25	18	26	20	26	20	18	22	24	24	17	17	24	33	28	29	8	24	15
ಭ	ಪೂಭಾ.	3	17	24	16	5	30	31	23	17	17	11	19	12	18	24	16	15	15	17	11	18	12	20	26	11	15	29	29	22	22	28	27	19	28	16	22	19
ಮೀ	ಪೂಭಾ.	1	14	21	16	19	23	25	23	17	17	17	25	17	16	22	14	16	16	18	2	19	11	19	25	9	14	28	28	28	28	24	15	7	15	28	33	30
ನ	ಉಭಾ	4	23	15	18	21	27	28	17	25	26	26	19	20	17	12	25	28	26	9	12	10	4	18	18	20	23	21	29	29	26	14	5	24	21	33	28	33
	ರೇ	4	25	23	10	13	17	26	25	24	25	24	27	13	12	12	22	24	25	19	12	10	4	10	26	21	27	28	20	23	21	22	13	15	17	29	33	28

ವಿವಿಧ ಮುಖ್ಯಪಟ್ಟಣಗಳ ಲಗ್ನಪ್ರಮಾಣಗಳು

	ಭದ್ರಾವತಿ	ಬೆಳಗಾಂ	ಬೀದರ್	ಚಿಕ್ಕಮಗಳೂರು	ದಾವಣಗೆರೆ	ಗುಲ್ಬರ್ಗಾ	ಹೊಸಪೇಟೆ	ಕಾರವಾರ	ಕೊಳ್ಳೆಗಾಲ	ಮಡಿಕೇರಿ	ರಾಯಚೂರು	ಶಿವಮೊಗ್ಗ	ತುಮಕೂರು
ಮೇಷ	4.49	4.42	4.36	4.5	4.47	4.38	4.44	4.46	4.54	4.53	4.41	4.48	4.51
ವೃಷಭ	5.07	5.04	5	5.08	5.06	5.02	5.05	5.06	5.1	5.09	5.03	5.07	5.08
ಮಿಥುನ	5.46	5.47	5.49	5.45	5.46	5.48	5.47	5.46	5.44	5.45	5.47	5.46	5.45
ಕರ್ಕ	5.4	5.45	5.51	5.39	5.42	5.49	5.44	5.43	5.36	5.36	5.46	5.4	5.38
ಸಿಂಹ	5.16	5.24	5.31	5.15	5.19	5.29	5.22	5.2	5.11	5.12	5.25	5.17	5.14
ಕನ್ಯಾ	5.11	5.19	5.27	5.09	5.14	5.24	5.17	5.15	5.05	5.06	5.2	5.12	5.09
ತುಲಾ	5.32	5.38	5.45	5.3	5.34	5.43	5.36	5.35	5.26	5.27	5.39	5.32	5.3
ವೃಶ್ಚಿಕ	5.49	5.52	5.56	5.48	5.5	5.55	5.51	5.51	5.46	5.47	5.53	5.49	5.48
ಧನು	5.26	5.25	5.23	5.27	5.26	5.24	5.25	5.26	5.28	5.27	5.25	5.26	5.27
ಮಕರ	4.7	4.65	4.59	4.72	4.68	4.61	4.66	4.68	4.75	4.74	4.64	4.7	4.72
ಕುಂಭ	4.23	4.16	4.08	4.25	4.2	4.1	4.18	4.19	4.29	4.28	4.14	4.22	4.25
ಮೀನ	4.14	4.06	3.99	4.16	4.11	4.01	4.09	4.1	4.2	4.19	4.05	4.14	4.16

	ಬೆಂಗಳೂರು	ಬಳ್ಳಾರಿ	ಬಿಜಾಪುರ	ಚಿತ್ರದುರ್ಗ	ದಾರವಾಡ	ಹಾಸನ	ಹುಬ್ಬಳ್ಳಿ	ಕೋಲಾರ	ಮಂಗಳೂರು	ಮೈಸೂರು	ಸಾಗರ	ಶ್ರೀರಂಗಪಟ್ಟಣ	ಉಡುಪಿ
ಮೇಷ	4.51	4.45	4.39	4.47	4.44	4.35	4.44	4.51	4.52	4.53	4.4	4.53	4.5
ವೃಷಭ	5.09	5.05	5.02	5.07	5.05	5	5.05	5.08	5.09	5.1	5.03	5.09	5.08
ಮಿಥುನ	5.45	5.47	5.48	5.46	5.47	5.49	5.47	5.45	5.45	5.45	5.48	5.45	5.45
ಕರ್ಕ	5.38	5.44	5.48	5.41	5.44	5.52	5.44	5.38	5.37	5.36	5.47	5.36	5.39
ಸಿಂಹ	5.13	5.21	5.27	5.18	5.22	5.32	5.22	5.14	5.13	5.11	5.26	5.12	5.15
ಕನ್ಯಾ	5.08	5.16	5.22	5.13	5.17	5.27	5.17	5.09	5.08	5.06	5.22	5.06	5.09
ತುಲಾ	5.29	5.36	5.41	5.33	5.37	5.46	5.36	5.3	5.29	5.27	5.41	5.27	5.3
ವೃಶ್ಚಿಕ	5.48	5.51	5.54	5.5	5.52	5.56	5.51	5.48	5.48	5.47	5.54	5.47	5.48
ಧನು	5.27	5.25	5.24	5.26	5.25	5.23	5.25	5.27	5.27	5.28	5.24	5.27	5.27
ಮಕರ	4.72	4.67	4.62	4.69	4.66	4.58	4.66	4.72	4.73	4.74	4.63	4.74	4.72
ಕುಂಭ	4.26	4.18	4.12	4.21	4.17	4.07	4.07	4.17	4.25	4.26	4.28	4.13	4.28
ಮೀನ	4.17	4.09	4.03	4.12	4.08	3.98	4.08	4.16	4.17	4.2	4.04	4.19	4.16

ವಿವಿಧ ಮುಖ್ಯಪಟ್ಟಣಗಳ ಲಗ್ನಪ್ರಮಾಣಗಳು ಆಂದ್ರಪ್ರದೇಶ

	ಆದಿಲಾಬಾದ್	ಆದೋನಿ	ಆಲೂರು	ಅನಕಾಪಲ್ಲಿ	ಅನಂತಪುರ	ಆತ್ಮಕೂರು	ಬಾಪಟ್ಲ	ಬೊಬ್ಬಿಲಿ	ಚಿರಾಲ	ಚಿತ್ತೂರು	ಕಡಪ	ಧರ್ಮಾವರ	ಏಲೂರು	ಪೂಗೋದಾವರಿ	ಪಗೋವರಿ	ಗೂಡೂರು
ಮೇಷ	4.18	4.43	4.46	4.46	4.46	4.46	4.42	4.34	4.42	4.51	4.47	4.53	4.4	4.4	4.4	4.48
ವೃಷಭ	4.59	5.04	5.06	5.01	5.06	5.06	5.04	4.99	5.04	5.08	5.06	5.09	5.03	5.03	5.03	5.07
ಮಿಥುನ	5.30	5.47	5.46	5.46	5.49	5.46	5.46	5.47	5.49	5.47	5.45	5.45	5.48	5.48	5.48	5.46
ಕರ್ಕ	5.39	5.45	5.42	5.5	5.42	5.42	5.46	5.53	5.45	5.38	5.42	5.36	5.48	5.47	5.47	5.41
ಸಿಂಹ	5.22	5.23	5.19	5.3	5.19	5.19	5.24	5.34	5.24	5.14	5.19	5.11	5.27	5.26	5.26	5.18
ಕನ್ಯಾ	5.19	5.18	5.14	5.26	5.14	5.14	5.19	5.29	5.19	5.09	5.14	5.06	5.22	5.21	5.21	5.12
ತುಲಾ	5.30	5.37	5.34	5.44	5.34	5.34	5.38	5.47	5.38	5.3	5.34	5.27	5.41	5.4	5.4	5.33
ವೃಶ್ಚಿಕ	5.35	5.52	5.5	5.55	5.5	5.5	5.52	5.57	5.52	5.48	5.5	5.47	5.54	5.53	5.53	5.5
ಧನು	5.13	5.25	5.26	5.24	5.26	5.26	5.25	5.23	5.25	5.27	5.26	5.27	5.24	5.24	5.25	5.26
ಮಕರ	4.32	4.65	4.68	4.6	4.68	4.68	4.65	4.57	4.65	4.72	4.69	4.74	4.62	4.63	4.63	4.69
ಕುಂಭ	4.01	4.16	4.2	4.09	4.2	4.2	4.15	4.06	4.16	4.25	4.21	4.28	4.12	4.13	4.14	4.22
ಮೀನ	3.55	4.07	4.11	4	4.11	4.11	4.06	3.96	4.07	4.16	4.12	4.19	4.03	4.04	4.04	4.13

ವಿವಿಧ ಮುಖ್ಯಪಟ್ಟಣಗಳ ಲಗ್ನಪ್ರಮಾಣಗಳು ಆಂದ್ರಪ್ರದೇಶ

	ಗುಂತಕಲ್ಲು	ಗುಂಟೂರು	ಹನುಮಗೊಂಡ	ಹಿಂದುಪುರ	ಹೈದ್ರಾಬಾದ	ಹೈದ್ರಾಬಾದ	ಕಾಳಹಸ್ತಿ	ಕರೀನಗರ
ಮೇಷ	4.44	4.41	4.35	4.49	4.37	4.39	4.49	4.34
ವೃಷಭ	5.05	5.03	5	5.07	5.01	5.02	5.07	5
ಮಿಥುನ	5.47	5.49	5.46	5.48	5.48	5.4	5.53	5.43
ಕರ್ಕ	5.44	5.47	5.51	5.4	5.5	5.48	5.4	5.53
ಸಿಂಹ	5.21	5.25	5.32	5.16	5.29	5.28	5.16	5.33
ಕನ್ಯಾ	5.16	5.2	5.27	5.11	5.25	5.23	5.11	5.29
ತುಲಾ	5.36	5.4	5.45	5.32	5.43	5.42	5.31	5.47
ವೃಶ್ಚಿಕ	5.51	5.53	5.56	5.49	5.55	5.54	5.49	5.57
ಧನು	5.25	5.25	5.23	5.26	5.24	5.24	5.26	5.23
ಮಕರ	4.67	4.64	4.59	4.7	4.6	4.62	4.7	4.58
ಕುಂಭ	4.18	4.14	4.08	4.23	4.1	4.12	4.23	4.06
ಮೀನ	4.09	4.05	3.98	4.14	4.01	4.02	4.14	3.97

	ತುನಿ	ಶ್ರೀಶೈಲ	ವಿಜಯವಾಡ	ವಿಶಾಖಪಟ್ಟಣ	ವೈಜಾಗ್	ವಾಲ್‌ಟೇರ್	ಓರಂಗಲ್
ಮೇಷ	4.37	4.42	4.4	4.36	4.35	4.36	4.35
ವೃಷಭ	5.01	5.04	5.03	5.01	5	5.01	5
ಮಿಥುನ	5.48	5.47	5.48	5.49	5.49	5.49	5.49
ಕರ್ಕ	5.49	5.46	5.47	5.5	5.52	5.51	5.51
ಸಿಂಹ	5.29	5.24	5.26	5.3	5.32	5.31	5.31
ಕನ್ಯಾ	5.24	5.19	5.21	5.26	5.27	5.26	5.27
ತುಲಾ	5.43	5.39	5.4	5.44	5.45	5.44	5.45
ವೃಶ್ಚಿಕ	5.55	5.53	5.53	5.55	5.56	5.56	5.56
ಧನು	5.24	5.25	5.24	5.23	5.23	5.23	5.23
ಮಕರ	4.61	4.64	4.63	4.6	4.59	4.6	4.59
ಕುಂಭ	4.1	4.15	4.13	4.09	4.07	4.09	4.08
ಮೀನ	4.01	4.06	4.04	3.99	3.98	3.99	3.99

ವಿವಿಧ ಮುಖ್ಯಪಟ್ಟಣಗಳ ಲಗ್ನಪ್ರಮಾಣಗಳು ಆಂದ್ರಪ್ರದೇಶ

	ಕಾವಲಿ	ಖಮ್ಮಂ	ಕರ್ನೂಲು	ಮಚಲೀಪಟ್ನ	ಮಹಬೂಬ್‌ನಗರ	ಮೆದಕ್	ನಲ್ಲಗೊಂಡ	ನೆಲ್ಲೂರು
ಮೇಷ	4.45	4.38	4.42	4.41	4.4	4.44	4.38	4.48
ವೃಷಭ	5.05	5.02	5.04	5.03	5.03	5.05	5.02	5.07
ಮಿಥುನ	5.46	5.48	5.47	5.47	5.48	5.44	5.49	5.4
ಕರ್ಕ	5.43	5.49	5.45	5.46	5.48	5.44	5.49	5.4
ಸಿಂಹ	5.2	5.29	5.24	5.25	5.27	5.22	5.28	5.17
ಕನ್ಯಾ	5.15	5.24	5.19	5.2	5.22	5.17	5.23	5.12
ತುಲಾ	5.35	5.43	5.38	5.39	5.41	5.37	5.42	5.32
ವೃಶ್ಚಿಕ	5.51	5.55	5.52	5.53	5.54	5.52	5.54	5.49
ಧನು	5.26	5.24	5.25	5.25	5.24	5.25	5.24	5.26
ಮಕರ	4.67	4.61	4.65	4.64	4.63	4.66	4.62	4.7
ಕುಂಭ	4.19	4.11	4.16	4.14	4.13	4.17	4.11	4.22
ಮೀನ	4.1	4.01	4.07	4.05	4.03	4.08	4.02	4.13

ಶ್ರೀರೂಪಸಹಿತ ಚತುರ್ವಿಂಶತಿ ಭಗವದ್ರೂಪಗಳು

1. ಶ್ರೀಕೇಶವ – ಶ್ರೀಶ್ರೀಃ
2. ಶ್ರೀನಾರಾಯಣ – ಶ್ರೀಲಕ್ಷ್ಮೀ
3. ಶ್ರೀಮಾಧವ – ಶ್ರೀಕಮಲಾ
4. ಶ್ರೀಗೋವಿಂದ – ಶ್ರೀಪದ್ಮಾ
5. ಶ್ರೀವಿಷ್ಣು – ಶ್ರೀಪದ್ಮಿನೀ
6. ಶ್ರೀಮಧುಸೂದನ – ಶ್ರೀಕಮಲಾ
7. ಶ್ರೀತ್ರಿವಿಕ್ರಮ – ಶ್ರೀರಮಾ
8. ಶ್ರೀವಾಮನ – ಶ್ರೀವೃಷಾಕಪೀ
9. ಶ್ರೀಶ್ರೀಧರ – ಶ್ರೀಧನ್ಯಾ
10. ಶ್ರೀಹೃಷಿಕೇಶ – ಶ್ರೀವೃದ್ಧಾ
11. ಶ್ರೀಪದ್ಮನಾಭ – ಶ್ರೀಯಜ್ಞಾ
12. ಶ್ರೀದಾಮೋದರ – ಶ್ರೀಇಂದಿರಾ
13. ಶ್ರೀಸಂಕರ್ಷಣ – ಶ್ರೀಹಿರಣ್ಯಾ
14. ಶ್ರೀವಾಸುದೇವ – ಶ್ರೀಹರಿಣೀ
15. ಶ್ರೀಪ್ರದ್ಯುಮ್ನ – ಶ್ರೀಸತ್ಯಾ
16. ಶ್ರೀಅನಿರುದ್ಧ – ಶ್ರೀನಿತ್ಯಾ
17. ಶ್ರೀಪುರುಷೋತ್ತಮ – ಶ್ರೀನಂದಾ
18. ಶ್ರೀಅಧೋಕ್ಷಜ – ಶ್ರೀತ್ರಯಾ
19. ಶ್ರೀನರಸಿಂಹ – ಶ್ರೀಸುಖಾ
20. ಶ್ರೀಅಚ್ಯುತ – ಶ್ರೀಸುಗಂಧಾ
21. ಶ್ರೀಜನಾರ್ದನ – ಶ್ರೀಸುಂದರೀ
22. ಶ್ರೀಉಪೇಂದ್ರ – ಶ್ರೀವಿದ್ಯಾ
23. ಶ್ರೀಹರಿ – ಶ್ರೀಸುಶೀಲಾ
24. ಶ್ರೀಕೃಷ್ಣ – ಶ್ರೀಸುಲಕ್ಷಣಾ

ನಕ್ಷತ್ರಾಭಿಮಾನಿ ದೇವತೆಗಳು

1. ಅಶ್ವಿನೀ – ಅಶ್ವಿನೀದೇವತೆಗಳು
2. ಭರಣೀ – ಯಮ
3. ಕೃತ್ತಿಕಾ – ಅಗ್ನಿ
4. ರೋಹಿಣೀ – ಪ್ರಜಾಪತಿ
5. ಮೃಗಶಿರಾ – ಸೋಮ
6. ಆರ್ದ್ರಾ – ರುದ್ರ
7. ಪುನರ್ವಸು – ಅದಿತಿ
8. ಪುಷ್ಯ – ಬೃಹಸ್ಪತಿ
9. ಆಶ್ಲೇಷಾ – ಸರ್ಪ
10. ಮಘಾ – ಪಿತೃ
11. ಪೂರ್ವಾ – ಅರ್ಯಮಾ
12. ಉತ್ತರಾ – ಭಗ
13. ಹಸ್ತ – ಸವಿತಾ
14. ಚಿತ್ರಾ – ತ್ವಷ್ಟೃ
15. ಸ್ವಾತಿ – ವಾಯು
16. ವಿಶಾಖಾ – ಇಂದ್ರಾಗ್ನಿಗಳು
17. ಅನುರಾಧಾ – ಮಿತ್ರ
18. ಜ್ಯೇಷ್ಠಾ – ಇಂದ್ರ
19. ಮೂಲ – ನಿರ್‌ಋತಿ
20. ಪೂರ್ವಾಷಾಢ – ಅಪ್ ದೇವತೆಗಳು
21. ಉತ್ತರಾಷಾಢ – ವಿಶ್ವೇದೇವತೆಗಳು
22. ಶ್ರವಣಾ – ವಿಷ್ಣು
23. ಧನಿಷ್ಠಾ – ವಸು
24. ಶತಭಿಷಾ – ವರುಣ
25. ಪೂರ್ವಾಭಾದ್ರ – ಅಜೈಕಪಾತ್
26. ಉತ್ತಾರಾಭಾದ್ರ – ಅಹಿರ್ಬುಧ್ನ್ಯ
27. ರೇವತೀ – ಪೂಷ

ಕರಣಾಭಿಮಾನಿ ದೇವತೆಗಳು

1. ಬವ - ಸದ್ಯೋಜಾತ
2. ಬಾಲವ - ವಾಮದೇವ
3. ಕೌಲವ - ಅಘೋರ
4. ತೈತಿಲ - ತತ್ಪುರುಷ
5. ಗರ - ಈಶಾನ
6. ವಣಿಕ್ - ಶಿವ
7. ಭದ್ರಾ - ಪಾರ್ವತೀಪತಿ
8. ಶಕುನಿ - ವಿರೂಪಾಕ್ಷ
9. ಚತುಷ್ಪಾತ್ - ನೀಲಕಂಠ
10. ನಾಗವಾನ್ - ಉಮಾಪತಿ
11. ಕಿಂಸ್ತುಘ್ನ - ಶೂಲಿ

ತಿಥ್ಯಭಿಮಾನಿ ದೇವತೆಗಳು

1. ಪ್ರತಿಪತ್ - ಅಗ್ನಿ
2. ದ್ವಿತೀಯಾ - ಬ್ರಹ್ಮಾ
3. ತೃತೀಯಾ - ಗೌರೀ
4. ಚತುರ್ಥೀ - ಗಣಪತಿ
5. ಪಂಚಮೀ- ಸರ್ಪಗಳು
6. ಷಷ್ಠೀ - ಸ್ಕಂದ
7. ಸಪ್ತಮೀ - ಸೂರ್ಯ
8. ಅಷ್ಟಮೀ - ಸದ್ಯೋಜಾತ
9. ನವಮೀ - ದುರ್ಗಾ
10. ದಶಮೀ - ಆದಿಶೇಷ
11. ಏಕಾದಶೀ - ಧರ್ಮ
12. ದ್ವಾದಶೀ - ಹರಿ
13. ತ್ರಯೋದಶೀ - ಕಾಮ
14. ಚತುರ್ದಶೀ - ಕಲಿ
15. ಪೂರ್ಣಿಮಾ - ಚಂದ್ರ
16. ಅಮಾವಾಸ್ಯೆ - ಪಿತೃಗಳು

ಯೋಗಾಭಿಮಾನಿ ದೇವತೆಗಳು

1. ವಿಷ್ಕಂಭ - ವಿಶ್ವೇದೇವತೆಗಳು
2. ಪ್ರೀತಿ - ಮರುತ್
3. ಆಯುಷ್ಮಾನ್ - ಹಿರಣ್ಯಗರ್ಭ
4. ಸೌಭಾಗ್ಯ - ದುರ್ಗಾ
5. ಶೋಭನ - ಪೃಥಿವೀ
6. ಅತಿಗಂಡ - ಅದಿತಿ
7. ಸುಕರ್ಮ - ಸೂರ್ಯ
8. ಧೃತಿ - ರಾಜ್ಞೀ
9. ಶೂಲ - ಇಂದ್ರ
10. ಗಂಡ - ಮರುತ್
11. ವೃದ್ಧಿ - ಮರುತ್
12. ಧ್ರುವ - ಪ್ರಾಜ್ಞೀ
13. ವ್ಯಾಘಾತ - ಅಗ್ನಿ
14. ಹರ್ಷಣ - ಹರಿ
15. ವಜ್ರ - ಇಂದ್ರ
16. ಸಿದ್ಧಿ - ಹಿರಣ್ಯ
17. ವ್ಯತೀಪಾತ - ವಿಶ್ವೇದೇವತೆಗಳು
18. ವರೀಯಾನ್ - ವಾಯು
19. ಪರಿಘ - ಪವಮಾನ ಸೋಮ
20. ಶಿವ - ಪೃಥಿವೀ
21. ಸಿದ್ಧ - ಇಂದ್ರ
22. ಸಾಧ್ಯ - ವಿಶ್ವೇದೇವತೆಗಳು
23. ಶುಭ - ಮರುತ್
24. ಶುಕ್ಲ - ಇಂದ್ರ
25. ಬ್ರಹ್ಮ - ಬ್ರಹ್ಮ
26. ಐಂದ್ರ - ಇಂದ್ರ
27. ವೈಧೃತೀ - ಅಗ್ನಿ

ವಿವಾಹೋಪಯುಕ್ತ ವಿಷಯಗಳು

ಗೋತ್ರಪ್ರವರ

ಗೋತ್ರ ಬಹಳ ಜನರ ತಿಳಿದಿದ್ದರೂ ಪ್ರವರ ತಿಳಿಯದವರಿದ್ದಾರೆ. ಅವರಿಗೋಸ್ಕರ ಈ ಗೋತ್ರಪ್ರವರ ಪಟ್ಟಿಯನ್ನು ಕೆಳಗೆ ಕೊಟ್ಟಿದೆ.

	ಗೋತ್ರ	ಪ್ರವರ
1.	ಅತ್ರಿ	ಆತ್ರೇಯ, ಅರ್ಚನಾಸನ, ಶ್ಯಾವಾಶ್ವೇತಿ, ತ್ರಯಾರ್ಷೇಯ ತ್ರಿಪ್ರವರಾನ್ವಿತ
2.	ಕಪಿ	1) ಆಂಗೀರಸ, ಮಹೀಯವೋ, ರುಕ್ಷವಯಸೇತಿ, 2) ಏಕಾರ್ಷೇಯ ಪ್ರವರಾನ್ವಿತ
3.	ಕಾಶ್ಯಪ	1) ಕಾಶ್ಯಪ, ಅವತ್ಸಾರ, ನೈಧ್ರುವ, 2) ಕಾಶ್ಯಪ, ಅವತ್ಸಾರ, ಅಸಿತೇತಿ 3) ಕಾಶ್ಯಪ, ಅವತ್ಸಾರ, ನೈಧ್ರುವ, ಶಾಂಡಿಲ್ಯ, ರೇಭ, ರೈಭ, ಸಪ್ತಾರ್ಷೇಯ ಪ್ರವರಾನ್ವಿತ (ಕಾಶ್ಯಪಗೋತ್ರ)
4.	ಕೌಂಡಿಣ್ಯ	ವಾಸಿಷ್ಠ, ಮೈತ್ರಾವರುಣ, ಕೌಂಡಿಣ್ಯೇತಿ
5.	ಕೌಶಿಕ	ವಿಶ್ವಾಮಿತ್ರ, ಅಘಮರ್ಷಣ, ಕೌಶಿಕೇತಿ
6.	ಗಾರ್ಗ್ಯ	ಆಂಗೀರಸ, ಶೈನ್ಯ, ಗಾರ್ಗ್ಯೇತಿ
7.	ಜಮದಗ್ನಿ	ಭಾರ್ಗವ, ಚ್ಯವನ, ಅಪ್ನವ, ಔರ್ವ, ಜಾಮದಗ್ನೇತಿ
8.	ನಿತ್ಯುಂದನ	ಆಂಗೀರಸ, ಪೌರಕುತ್ಸ, ತ್ರಾಪದಸ್ಯೇತಿ
9.	ಭಾಭ್ರವ್ಯ	ವಿಶ್ವಾಮಿತ್ರ, ದೇವರಾತ, ಔದಾಸೇತಿ ತ್ರಯಾರ್ಷೇಯ ತ್ರಿಪ್ರವರಾನ್ವಿತ
10.	ಭಾರದ್ವಾಜ	ಆಂಗೀರಸ, ಬಾರ್ಹಸ್ಪತ್ಯ, ಭಾರದ್ವಾಜೇತಿ
11.	ವಾಸಿಷ್ಠ	1) ವಾಸಿಷ್ಠ ಇಂದ್ರಪ್ರಮದ, ಭಾರದ್ವಾಜೇತಿ, 2) ವಾಸಿಷ್ಠ ಮೈತ್ರಾವರುಣ ಪೂತಿಮಾಷ
12.	ವಿಷ್ಣುವೃದ್ಧ	1) ಆಂಗೀರಸ, ಪೌರುಕುತ್ಸ್ಯ, ತ್ರಾಸದಸ್ಯೇತಿ, 2) ಬಾದರಾಯಣಸ್ಯಾಪಿ
13.	ಶಾಂಡಿಲ್ಯ	ಶಾಂಡಿಲ್ಯ, ಅಸಿತ, ದೈವಲೇತಿ
14.	ಅಂಗೀರಸ	ಆಂಗೀರಸ, ಅಂಬರೀಷ, ಯೌವನಾಶ್ವೇತಿ (ಹರೀತ ಸನ್ಯಾಪಿ)
15.	ಪಾರಾಶರ	ವಾಸಿಷ್ಠ ಶಾಕ್ತ್ಯ ಪಾರಾಶರ್ಯೇತಿ
16.	ಕುತ್ಸಲ	ಆಂಗೀರಸ, ಮಾಂಧಾತ್ರ, ಕೌತ್ಸೇತಿ
17.	ಮೌದ್ಗಲ	ಆಂಗೀರಸ, ಭಾರ್ಗ್ಯಾಶ್ವ, ಮೌದ್ಗಲ್ಯೇತಿ
18.	ಶೌನಕ	ಭಾರ್ಗವ, ಶೌನಹೋತ್ರ, ಗಾರ್ತ್ಸಮದೇತಿ
19.	ಉಪಮನ್ಯು	ವಾಸಿಷ್ಠ ಇಂದ್ರಪ್ರಮುದ, ಭರದ್ವಸು ಇತಿ
20.	ನೈದ್ರುವ	ಕಾಶ್ಯಪ, ಅವತ್ಸಾರ, ನೈಧ್ರುವೇತಿ (ಕಾಶ್ಯಪಸ್ಯಾಪಿ)
21.	ಶಾಲಾಕ್ಷ	ವಿಶ್ವಾಮಿತ್ರ, ಶಾಲಂಕಾಯನ, ಕೌಶಿಕೇತಿ
22.	ಗೌತಮ	ಆಂಗೀರಸ, ಆಯಾಸ್ಯ, ಗೌತಮ ಇತಿ

ಈ ಕೆಳಗೆ ನೀಡಿರುವ 24 ಗುಂಪುಗಳಲ್ಲಿನ ಗೋತ್ರಗಳು ಪರಸ್ಪರ ಕೊಡುವುದಿಲ್ಲ

1. ಅತ್ರಿ
2. ಅಂಗೀರಸ, ಕುತ್ಸ ಮುದ್ಗಲ
3. ಉಪಮನ್ಯು, ಕೌಂಡಿಣ್ಯ, ವಾಸಿಷ್ಠ
4. ಕಾಶ್ಯಪ, ವೈಧ್ರುವ, ಶಾಂಡಿಲ್ಯ
5. ಕುತ್ಸ ಕೇವಲಾಂಗೀರಸ
6. ಕೌಂಡಿಣ್ಯ, ಉಪಮನ್ಯು, ವಾಸಿಷ್ಠ
7. ಕೌಶಿಕ, ತ್ರಯೋದಶ, ಪಾರ್ಥಿವ, ಲೋಹಿತಾಕ್ಷ, ವಿಶ್ವಾಮಿತ್ರ, ಶಾಲಾಕ್ಷ
8. ಗರ್ಗ, ಭಾರದ್ವಾಜ
9. ಗೌತಮ, ದ್ವಾದಶಪಾರ್ಥಿವ
10. ಜಾಮದಗ್ನ್ಯ, ಗಾರ್ಗ್ಯ, ವತ್ಸ
11. ನೈಧ್ರುವ, ಕಾಶ್ಯಪ, ಶಾಂಡಿಲ್ಯ
12. ಗೌತಮ, ಪಾರ್ಥಿವ
13. ಪಾರ್ಥಿವ, ಕೌಶಿಕ, ವಿಶ್ವಾಮಿತ್ರ, ಶಾಲಾಕ್ಷ
14. ಬಾದರಾಯಣ ಎಲ್ಲಾ ಗೋತ್ರಗಳಿಗೂ ಬರುತ್ತದೆ.
15. ಭಾರ್ಗವ, ಜಾಮದಗ್ನ್ಯ, ವತ್ಸ
16. ಭಾರದ್ವಾಜ, ಗಾರ್ಗ್ಯ
17. ಮುದ್ಗಲ ಎಲ್ಲ ಗೋತ್ರಗಳೂ ಕಲೆಯುವುದು
18. ಲೋಹಿತಾಕ್ಷ, ಕೌಶಿಕ, ಪಾರ್ಥಿವ, ಕೌಶಿಕ, ವಿಶ್ವಾಮಿತ್ರ
19. ವತ್ಸ ಜಾಮದಗ್ನ್ಯ, ಭಾರ್ಗವ
20. ವಾಸಿಷ್ಠ ಉಪಮನ್ಯು, ಕೌಂಡಿಣ್ಯ
21. ವೈನ್ಯ ಎಲ್ಲ ಗೋತ್ರಗಳಿಗೂ ಬರುತ್ತದೆ
22. ವಿಶ್ವಾಮಿತ್ರ, ಕೌಶಿಕ, ತ್ರಯೋದಶಪಾರ್ಥಿವ, ಲೋಹಿತಾಕ್ಷ, ಶಾಲಾಕ್ಷ
23. ಶಾಂಡಿಲ್ಯ, ಕಾಶ್ಯಪ, ನೈಧ್ರುವ
24. ಶಾಲಾಕ್ಷ, ತ್ರಯೋದಶಪಾರ್ಥಿವ, ಶಾಲಾಕ್ಷ, ಲೋಹಿತಾಕ್ಷ, ವಿಶ್ವಾಮಿತ್ರ

